ಹಂಗಾಮ

ಜೂನ್ ೨೦೦೭ ರೂ. ೧೦

'ಆವರಣ'ದ ಅಫೀಮು

'ಬೆಹನ್‌ಜೀ' ಬರೆದ
ಇತಿಹಾಸ

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೮

ಜೂನ್ ೨೦೦೭

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಬಿ.ಯು.ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

✆ ೨೩೨೮೭೯೪೩/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

e-mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಈ ಮಧ್ಯೆ ವಿಧರ್ಭ ಪ್ರಾಂತ್ಯದಲ್ಲಿ ೦೬
  - ○ ಪಿ. ಸಾಯಿನಾಥ್
- ❑ ಆಪತ್ತಿನಲ್ಲಿ ದೇಶದ ಭವಿಷ್ಯ ೦೮
  - ○ ಶಾರದಾ ಗೋಪಾಲ
- ❑ ಖಾಸಗಿ ವಲಯ ಮತ್ತು ಸಾಮಾಜಿಕ (ಅ)ನ್ಯಾಯ ೧೦
  - ○ ಡಾ॥ ಕಾ.ವೆಂ. ಶ್ರೀನಿವಾಸ ಮೂರ್ತಿ

- ❑ 'ಬೆಹೆನ್‌ಜಿ' ಬರೆದ ಇತಿಹಾಸ ೧೨
  - ○ ವೈ. ಮರಿಸ್ವಾಮಿ
- ❑ ಒಂದು ಚಾರಿತ್ರಿ ಘಟನೆ ೧೨
  - ○ ಬಿ.ಯು. ಸುಮ
- ❑ 'ಆತ್ಮ ಸಂಗಾತಕ್ಕೆ ನೀನುಂಟು' ೧೮
  - ○ ಸುಜಾತ ಕುಮಟ
- ❑ ಜಾಗತೀಕರಣ ಮತ್ತು ವಿಕಾಸವಾದ ೨೦
  - ○ ಸದಾನಂದ ಸಿ. ಗಂಗನಬೀಡು
- ❑ ಕಾಲದ ಮರದಲ್ಲಿ ಕಲ್ಲು ಹಣ್ಣುಗಳು ೨೨
  - ○ ಕೃಷ್ಣಮೂರ್ತಿ ಬಿಳಿಗೆರೆ
- ❑ ಆವರಣ-ಕೋಮುವಾದಿಗಳ ಅಫೀಮು ೨೬
  - ○ ಜ.ಹೊ. ನಾರಾಯಣ ಸ್ವಾಮಿ
- ❑ 'ಖಚಿತಗೊಳ್ಳದ ಅನುಮಾನಿತ ಸತ್ಯ' ೨೯
  - ○ ಡಿ.ಎಸ್. ನಾಗಭೂಷಣ್
- ❑ ಲೈಂಗಿಕ ಶಿಕ್ಷಣ-ಮಡಿವಂತಿಕೆ ಸಲ್ಲದು ೩೧
  - ○ ನಾ. ದಿವಾಕರ
- ❑ ಆಧ್ಯಾತ್ಮಿಕ ದಂಗೆಯ ಸ್ವರೂಪ ೩೪
  - ○ ವಡ್ಡಗೆರೆ ನಾಗರಾಜಯ್ಯ
- ❑ ದಲಿತ್ ಡೈರಿ ೩೮
  - ○ ಚಂದ್ರಭಾನ್ ಪ್ರಸಾದ್
- ❑ ಬುದ್ಧಾಯಣ ೪೨
  - ○ ಸಿ. ಎಚ್. ರಾಜಶೇಖರ್

ಕವನಗಳು :
- ❑ ಉಮರ್ ಖಯ್ಯಾಮನ ಪದ್ಯಗಳು ೧೭
- ❑ ತೊಗಲಿಗೂ ಹೊಲೆಯೋ-ಬಿದಿರು ಮಳೆಯೇ ೨೫

ಮುಖಪುಟ ಕಲೆ-ವಿನ್ಯಾಸ: ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಚಿಂತನೆ ಪ್ರಚೋದಕ 'ಬುದ್ಧಾಯಣ'

ಪ್ರಿಯ ಸಂಪಾದಕರೇ.

'ಸಂವಾದ'ದಲ್ಲಿ ಪ್ರತಿ ತಿಂಗಳೂ ಪ್ರಕಟವಾಗುವ 'ಸಿ.ಎಚ್. ರಾಜಶೇಖರ' ರವರ 'ಬುದ್ಧಾಯಣ' ಕತೆಗಳು ಬಹಳ ಅರ್ಥಗರ್ಭಿತವೂ, ಚಿಂತನ ಪ್ರಚೋದಕ ರವೂ ಆಗಿ ಮೂಡಿಬರುತ್ತಿವೆ.

ಸುಮಾರು ೨೫೦೦ ವರ್ಷಗಳ ಹಿಂದೆ ನಮ್ಮ ನಡುವೆ ಬದುಕಿದ್ದ ಭಗವಾನ್ ಬುದ್ಧರ ಧರ್ಮೋಪದೇಶವು ಇಂದಿನ ಎಲ್ಲಾ ರೀತಿಯ ಸಾಮಾಜಿಕ ದುರಂತಕ್ಕೆ ಏಕೈಕ ಪರಿಹಾರದಂತಿದೆ. ಅವರು ಬೋಧಿಸುತ್ತಿದ್ದ ಸರಳ ಶೈಲಿಯ, ಮೌಲ್ಯಯುತವಾದ ಕಥೆಗಳು ಪ್ರಪಂಚದ ಎಲ್ಲಾ ಕಷ್ಟಗಳಿಗೂ ಬೆಳಕಾಗುತ್ತವೆ, ಬದುಕಾಗುತ್ತವೆ.

'ಏಷ್ಯಾದ ಬೆಳಕು' ಎಂದೇ ಗೌರವಿಸುವ ಭಗವಾನ್ ಬುದ್ಧರ ಧರ್ಮದ ಹಾದಿಯನ್ನು ಹಿಡಿದು ನಮ್ಮಗಳ ಬದುಕನ್ನು ಬೆಳಗಿಕೊಳ್ಳೋಣ.

ಬಿ.ಆರ್. ರಂಗಸ್ವಾಮಿ,
ಪಾಳ್ಯಾದಹಳ್ಳಿ,

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಕೊರಗರ ಕಥೆ-ವ್ಯಥೆ

ಪತ್ರಗಳು

ಮಾನ್ಯ ಸಂಪಾದಕರಿಗೆ,

ಪ್ರೀತಿಯ ಪತ್ರ–

ನಾನು ಅಣ್ಣಿ, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಥಮ ಬಿ.ಎ ವಿದ್ಯಾರ್ಥಿಯಾಗಿದ್ದೇನೆ.

ಸರ್, 'ಸಂವಾದ' ಪತ್ರಿಕೆಯಿಂದ ನಿಮ್ಮ ಪರಿಚಯವಾಗಿದೆ ಪ್ರತಿ ತಿಂಗಳು ಸಂವಾದ ಪತ್ರಿಕೆಯನ್ನು ಓದುತ್ತೇನೆ. ಪತ್ರಿಕೆಯು ನನ್ನ ಆಲೋಚನೆ, ವಿಚಾರವನ್ನು ಹೆಚ್ಚಿಸಿದೆ. ಅನೇಕ ಸತ್ಯ ಸಂಗತಿಯು ತಿಳಿಸಿದೆ.

ನಾನು ನನ್ನ ಗೆಳೆಯರು 'ಕೊರಗ ವಿದ್ಯಾರ್ಥಿ ವೇದಿಕೆ'ಯನ್ನು ರಚಿಸಿಕೊಂಡು ಆದಿವಾಸಿ ಕೊರಗ ವಿದ್ಯಾರ್ಥಿಗಳಲ್ಲಿ ಸಂವಾದದ ನಮ್ಮದೇ ಆದ ವಿಚಾರಗಳನ್ನು ಮುಟ್ಟಿಸುವ ಪ್ರಯತ್ನ ನಡೆಸುತ್ತಿದ್ದೇವೆ. ಅದರೊಂದಿಗೆ ಮಕ್ಕಳನ್ನು ಪಾಠ ಪುಸ್ತಕದ ಗಿಳಿಪಾಠದಿಂದ ಸ್ವಲ್ಪ ದೂರ ಆಲೋಚಿಸುವಂತೆ ಮಾಡಲು ಪ್ರಯತ್ನಿಸಿದ್ದೇವೆ. ಹಾಗೂ ನಮ್ಮ ಜನರ ನೋವು, ನಲಿವು, ಕಷ್ಟ, ಆಚಾರಗಳನ್ನು ಕುರಿತು, ಲೇಖನಗಳನ್ನು ಬರೆಯಲು ಪ್ರೇರೇಪಿಸುತ್ತಿದ್ದೇವೆ.

ಸರ್, ಸಂವಾದದ ಲೇಖನಗಳನ್ನು ಓದಿ ನಾನು ಬರೆಯುವ ಆಸೆಯಾಗಿದೆ. ಬರೆಯಲು ವಿಷಯವು ಇದೆ. ಆದರೆ ಹೇಗೆ ಪ್ರಾರಂಭಿಸುವುದು ಎಂಬುದು ತಿಳಿದಿಲ್ಲ. ಶೋಷಿತ ಸಮುದಾಯದಲ್ಲಿ ನಮ್ಮ ಸಮುದಾಯವು ಒಂದು ದಿನ ದಿನ ಸಾಯುವ ನನ್ನ ಜನ ದಿನಕ್ಕೊಂದು ಕಥೆ ಬಿಟ್ಟು ಹೋಗುತ್ತಿದ್ದಾರೆ. ಬುದ್ಧಿವಂತ ದಕ್ಷಿಣ, ಕನ್ನಡ ಜಿಲ್ಲೆಯಲ್ಲಿ. ಜಾತಿಯ ಅತಿ ಬುದ್ಧಿವಂತಿಕೆ ತೋರಿಸಿ ಕೊರಗರನ್ನು ಕೊಲ್ಲುತ್ತಿದ್ದಾರೆ.

ಸರ್ ನಾನು ಎಷ್ಟೋ ದಿನಗಳಿಂದ ಬರೆಯಬೇಕೆಂದು ಪೆನ್ನು ಹಿಡಿದು ಕುಳಿತಲ್ಲಿಯೇ ಬೆವರುತ್ತಿದ್ದೆ. ಆದರೆ ಈ ಬಾರಿ ನಿಮಗೆ ಪತ್ರ ಬರೆದೇ ಸರಿ ಎಂದು ನನ್ನ ಪ್ರೀತಿಯ ಪತ್ರದೊಂದಿಗೆ, ನನ್ನ ಕವನವನ್ನು ಪ್ರಕಟಣೆಗೆ ನೀಡಿದ್ದೇನೆ. ನನ್ನ ಈ ಕವನದಲ್ಲಿ ಕೊರಗರ. ಬದುಕಿನ ಕಥೆಯಿದೆ. ಕೊರಗರು ಎಲ್ಲಾ ಸೌಕರ್ಯದಿಂದ ವಂಚಿತರಾಗಿದ್ದಾರೆ. ಇತ್ತೀಚೆಗೆ ಸ್ವಲ್ಪ ಕಣ್ಣು ಬಿಡುತ್ತಿದ್ದಾರೆ. ಸರ್, ನನಗೆ ಕನ್ನಡದ ವ್ಯಾಕರಣ ತಿಳಿದಿಲ್ಲ. ಚಂದಸ್ಸು, ಲಯ, ಸಂಧಿ ಯಾವುದು ತಿಳಿದಿಲ್ಲ. ಆದ್ದರಿಂದ ನನ್ನ ಈ ಕವನದಲ್ಲಿ ಯಾವುದೇ ಕನ್ನಡದ ವ್ಯಾಕರಣ ಇಲ್ಲ. ಆದರೆ ಆದಿವಾಸಿ ಕೊರಗರು ಕೊರಗರಾದ ಸತ್ಯ ಕಥೆ ಈ ಕವನದಲ್ಲಿದೆ.

ಧನ್ಯವಾದಗಳು ಸರ್.

ಅಣ್ಣಿ C/o ಕೆ. ರಮೇಶ್
ಕುದ್ಮುಲ್ ರಂಗರಾವ್ ನಗರ
ಅಶೋಕ ನಗರ ಅಂಚೆ,
ಕೋಡಿಕಲ್ ರಸ್ತೆ, ಮಂಗಳೂರು.

ಆದಿವಾಸಿಗಳು...
ಕಾಡಿನೊಳಗಿರಲು...
ಮನದಲಿ ಮೂಡಿಪ ಮುಗ್ಧತೆಗೆ
ನೋವು ನಲಿವು ಸಾಕ್ಷಿಗಳು.
ಕಾಡೇ ನಮ್ಮ ನಾಡೆನುತಾ
ಇಬ್ಬನಿ, ನದಿ ಮಳೆ ಉಸಿರೆಂದು
ಗೆಡ್ಡೆ ಗೆಣಸು ಹೊಟ್ಟೆಯೊಳು
ಧೈರ್ಯವು ಎದೆಯಲಿ ಶಿಖರಗಳೂ.
ಹೊದಿಕೆ ಇಲ್ಲದ ತನು ಮನಕೆ
ಮಣಿಸರ ನೂತನ ರಕ್ಷಕರು ॥ಆದಿ॥
ಡೋಲೇ ಗೆಲುವಿನ ಸಂಕೇತ
ಕೊಳಲೇ ನೋವಿನ ಸ್ವರವೆನುತಾ
ನೋವಲಿ ನೊಂದಿಹ ಬಂಧುಗಳು
ಧೈರ್ಯವ ನೀಡುತ ಪೀಳಿಗೆಗೆ
ಕಾಡಲಿ ನಡೆಯುತ ಬೀಳು ಬಳ್ಳಿಗೆ
ಆಕಾರ ಕೊಡುವ ಕೈಯಿಗಳು ॥ಆದಿ॥
ಒಂದೇ ಎನ್ನುವ ಲೋಕದಲಿ
ನಾಡಿಗೆ ಬಂದೆವು ಕೆಲಸದಲಿ
ನಾಡ ಒಳಗಿನ ಮನದೊಳಗೆ
ಕೊರಗರು ಆದೆವು ಜಾತಿಯಲಿ
ಕಡಲ ತೀರದ ಮುಳ್ಳು ಗಿಡಮರ
ಪಾವನಗೊಳ್ಳುವ ಸತ್ಯ ಕಥೆ ॥ಆದಿ॥

○ ಅಣ್ಣಿ ಕೊರಗ
ಬಿ.ಎ. ಪ್ರಥಮ, ಮಂಗಳೂರು

ಹೊರಳು ನೋಟ

ಲೇ: ಪ್ರೊ॥ ಮಧು ದಂಡವತೆ
ಅನು: ಮಂಗಳೂರ ವಿಜಯ
ಬೆಲೆ: ರೂ. ೧೨೫/-

ದೇಶದ ಅಗ್ರಗಣ್ಯ ಸಮಾಜವಾದಿ ದುರೀಣರಾದ ದಂಡವತೆ ಅವರ ಆತ್ಮಕಥೆ ಈ ಕೃತಿ. ಇದು ಕೇವಲ ದಂಡವತೆ ಅವರ ಆತ್ಮ ಚರಿತ್ರೆ ಆಗಿರದೆ ೨೦ನೇ ಶತಮಾನದ ಭಾರತದ ರಾಜಕೀಯ ಚರಿತ್ರೆಯೂ ಆಗಿದೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಭಾರತದ ಅಂತ ರಂಗವನ್ನು ಸಮರ್ಥವಾಗಿ ಈ ಕೃತಿ ಅನಾ ವರಣಗೊಳಿಸಿದೆ. ದಂಡವತೆ ಕೇವಲ ಶುಷ್ಕ ಸಿದ್ಧಾಂತದ ಪ್ರತಿಪಾದಕರಾಗದೆ ಮಹಾ ಮಾನವತಾವಾದಿಯೂ ಆಗಿದ್ದರು.

ಪ್ರಕಾಶಕರು: ಸಂಬುದ್ಧ ಪ್ರಕಾಶನ
ವಿ. ನಾಗೇನಹಳ್ಳಿ, ಬೆಂಗಳೂರು





ಚಾಚಾ ನೆಹರು ಮತ್ತು ಈಚಲಮರ

ಲೇ: ಈರಪ್ಪ ಎಂ. ಕಂಬಳಿ
ಬೆಲೆ: ರೂ. ೭೫/-

ನಮ್ಮ ನಡುವಿನ ಅಪರೂಪದ ಬರಹಗಾರ ಈರಪ್ಪ ಎಂ. ಕಂಬಳಿ ಅವರ ಮೂರನೇ ಪ್ರಬಂಧ ಸಂಕಲನ ಇದು. ಬದುಕಿನ ಎಲ್ಲ ಮಗ್ಗುಲುಗಳನ್ನು ವಿಶೇಷ ಆತ್ಮೀಯತೆ ಮತ್ತು ಬೆರಗು ಗಣ್ಣಿನಿಂದ ನೋಡಿರುವ ಪರಿ ಹಾಗೂ ಅದಕ್ಕೆ ಅವರು ನೀಡಿರುವ ಅಕ್ಷರ ವಿನ್ಯಾಸ ಅಪರೂಪ ದ್ದಾಗಿದೆ. ಉತ್ತರ ಕರ್ನಾಟಕದ ಗ್ರಾಮೀಣ ಮೂಲದಿಂದ ಬಂದು ಬೆಂಗಳೂರಿನ ಬೆಡಗಿಗೆ ಈರಪ್ಪ ಅವರು ಬೆರಗಾಗಿರು ವುದು ಇಲ್ಲಿ ಜೀವಂತವಾಗಿ ಮೂಡಿ ಬಂದಿದೆ.

ಪ್ರಕಾಶಕರು: ಚಾರ್ವಾಕ ಪ್ರಕಾಶನ
ಜೀವನ್‌ಭೀಮಾ ನಗರ, ಬೆಂಗಳೂರು.

ಹೊಸ ಪುಸ್ತಕ



ಸಿಂಗಾರಿತ್ಲು (ನಾಟಕ)

ಲೇ: ಕೆ. ಕರಿಸ್ವಾಮಿ
ಬೆಲೆ: ರೂ. ೪೦/-

ವೃತ್ತಿಯಲ್ಲಿ ಪತ್ರಕರ್ತರಾಗಿರುವ ಕರಿಸ್ವಾಮಿ ಅವರ ಮೊದಲ ನಾಟಕ ಕೃತಿ ಇದು. 'ಸಿಂಗಾರಿತ್ಲು' ನಾಟಕದ ಕಥಾವಸ್ತು ತೀರಾ ಸಾಮಾನ್ಯವಾದುದಾದರೂ ನಾಟಕ ಕಾರರು ಅದನ್ನು ಅಸಾಮಾನ್ಯ ರೀತಿಯಲ್ಲಿ ಸಕಾಲಿಕ ರಂಗಕೃತಿಯನ್ನಾಗಿಸಿದ್ದಾರೆ ರಾಜ ಕಾರಣ, ದೇವರು, ಧರ್ಮ, ಸ್ತ್ರೀ ಶೋಷಣೆ ಮುಂತಾದವುಗಳನ್ನು ರಂಗ ಮಾಧ್ಯಮಕ್ಕೆ ಒಗ್ಗಿಸಿರುವ ರೀತಿ ಅಪರೂಪ ದ್ದಾಗಿದೆ. ಸಂಭಷಣೆಗಳು ಹಿರಿಯೂರು ಪ್ರಾಂತ್ಯದ ಸೊಗಡನ್ನು ತುಂಬಿಕೊಂಡಿವೆ. ರಂಗ ಕೃತಿಗಳ ತೀವ್ರ ಕೊರತೆಯಲ್ಲಿ 'ಸಿಂಗಾರಿತ್ಲು' ಉತ್ತಮ ಪ್ರಯತ್ನವಾಗಿದೆ.

ಪ್ರಕಾಶಕರು: ಸುಮುಖ ಪ್ರಕಾಶನ
ನವಿದ್ಯಾರಣ್ಯನಗರ,

ವೀರಶೈವಾಂಧ್ರ ವಾಙ್ಮಯ

ಲೇ: ಶಿಷ್ಟಾರಾಮಕೃಷ್ಣಶಾಸ್ತ್ರೀ
ಅನು: ಕಾರುಪಲ್ಲಿ ಜಾನಕಿರಾಮಯ್ಯ
ಬೆಲೆ: ರೂ. ೨೦೦/-

ತೆಲಗಿನ ಸುಪ್ರಸಿದ್ಧ ವಿಮರ್ಶಾ ಗ್ರಂಥದ ಅನುವಾದ ಈ ಕೃತಿ. ಮೂಲ ಲೇಖಕರಾದ ಶಿಷ್ಟಾ ರಾಮಕೃಷ್ಣ ಶಾಸ್ತ್ರಿ ಅವರು ಸಂಸ್ಕೃತ ಮತ್ತು ತೆಲುಗಿನಲ್ಲಿ ಪಾಂಡಿತ್ಯಗಳಿಸಿರುವವರು ಅನೇಕ ವೀರ ಶೈವ ಗ್ರಂಥಗಳನ್ನು ಅಧ್ಯಯನ ಮಾಡಿ ಈ ಕೃತಿಯನ್ನು ರಚಿಸಿದ್ದಾರೆ. ದಕ್ಷಿಣ ಭಾರತದ ಆಂಧ್ರ ಪ್ರದೇಶದಲ್ಲಿ ಬಸವಣ್ಣನವರ ಪ್ರಭಾವ ವಿಶೇಷವಾಗಿ ಹಬ್ಬಿರುವುದು ಈ ಕೃತಿಯಿಂದ ವೇದ್ಯವಾಗುತ್ತದೆ. ವೀರಶೈವ ಧರ್ಮ ಕುರಿತು ಅಧ್ಯಯನ ಕೈಗೊಳ್ಳುವವ ರಿಗೆ ಇದು ಉತ್ತಮ ಆಕರ ಗ್ರಂಥವಾಗ ಬಲ್ಲದು.

ಪ್ರಕಾಶಕರು: ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಎಡೆಯೂರ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಹುಸಿ ಇಲ್ಲದ ಗೂಡಿನೊಳಗೆ

ಸಂ: ಡಾ॥ ಅರ್ಜುನಗೊಳಸಂಗಿ
ಬೆಲೆ: ರೂ. ೧೦೦/-

ಕವಿ ಸತ್ಯಾನಂದ ಪಾತ್ರೋಟ ಅವರ ಸಮಗ್ರ ಸಾಹಿತ್ಯ ವಿಮರ್ಶೆಯ ವಿವಿಧ ಲೇಖನಗಳನ್ನೊಳಗೊಂಡ ಕೃತಿ ಇದು. ಕಾವ್ಯ ಮತ್ತು ನಾಟಕ ಪ್ರಕಾರ ಗಳೆರಡರಲ್ಲೂ ಪಳಗಿರುವ ಪಾತ್ರೋಟ ಅವರ ಕೃತಿಗಳನ್ನು ಕುರಿತು ರಾಜ್ಯ ದಲಿತ ಸಾಹಿತ್ಯ ಪರಿಷತ್ತು ಗದುಗಿನಲ್ಲಿ ಏರ್ಪಡಿ ಸಿದ್ದ ವಿಚಾರ ಸಂಕಿರಣದಲ್ಲಿ ಇಲ್ಲಿನ ಲೇಖನಗಳನ್ನು ಮಂಡಿಸಲಾಗಿತ್ತು. ೮೦ರ ದಶಕದ ದಲಿತ ಬಂಡಾಯ ಕಾವ್ಯ ಪರಂಪರೆಯ ಪಾತ್ರೋಟ ಅವರ ಕೃತಿ ಗಳನ್ನು ಕುರಿತು ಅಧ್ಯಯನ ಮಾಡುವವ ರಿಗೆ ಈ ಕೃತಿ ಸಹಕಾರಿಯಾಗಿದೆ.

ಪ್ರಕಾಶಕರು: ದಲಿತ ಸಾಹಿತ್ಯ ಪರಿಷತ್ತು
ಗದಗ.



ವರ್ತಮಾನ

ಲೇ: ಅಲ್ಲಮಪ್ರಭು ಬೆಟ್ಟದೂರ
ಬೆಲೆ: ರೂ. ೧೫೦/-

ಸಾಹಿತ್ಯ ಮತ್ತು ಹೋರಾಟಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿ ಕೊಂಡಿರುವ ಅಲ್ಲಮಪ್ರಭು ಬೆಟ್ಟದೂರ ಅವರು ಪತ್ರಿಕೆಯೊಂದಕ್ಕೆ ಬರೆದ ಅಂಕಣ ಗಳ ಸಂಗ್ರಹ ಇದು. ಪತ್ರಿಕೆಯ ಅಂಕಣ ಬರಹಗಳಿಗೆ ತನ್ನದೇ ಆದ ಮಿತಿಗಳಿರು ತ್ತವೆ. ಆ ಮಿತಿಗಳ ನಡುವೆ ಕೂಡ ಸಾರ್ವತ್ರಿಕ ಆಶಯಗಳು ಬಿಂಬಿತವಾಗಿರು ವುದು ಈ ಬರಹಗಳ ವಿಶೇಷ. ವರ್ತ ಮಾನವನ್ನು ಎದುರಿಗಿಟ್ಟುಕೊಂಡು ಸಾರ್ವ ಕಾಲಿಕ ಸತ್ಯಗಳನ್ನು ಚರ್ಚಿಸುವುದು ಬಹಳ ಕಠಿಣವಾದ ಕೆಲಸ. ಬೆಟ್ಟದೂರರ ಬರಹಗ ಳಲ್ಲಿ ಇಂಥ ಪ್ರಯತ್ನ ಎದ್ದು ಕಾಣುತ್ತದೆ.

ಪ್ರಕಾಶಕರು: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ
ಸರಸ್ವತಿ ಗೋದಾಮು, ಗುಲ್ಬರ್ಗಾ.

ಸಂಪಾದಕೀಯ



ಅಂತರಂಗ

ದೆಹಲಿ ಗದ್ದುಗೆಯತ್ತ ಮಾಯಾವತಿ

ಮಾಯಾವತಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಅದು ಭಾರತ ಕಂಡು ಕೇಳರಿಯದ ಇತಿಹಾಸ. ಸಾವಿರಾರು ವರ್ಷಗಳ ನಿರಂತರ ದೌರ್ಜನ್ಯದಿಂದ ನಲುಗಿ ಹೋಗಿದ್ದ ದಲಿತ ಶಕ್ತಿಗೆ ರಾಜಕೀಯ ಚೈತನ್ಯ ನೀಡುವ ಮೂಲಕ ಮೊಟ್ಟಮೊದಲ ಬಾರಿಗೆ ಪರಂಪರಾಗತ ಶೋಷಕ ವರ್ಗಕ್ಕೆ ಎಚ್ಚರಿಕೆ ನೀಡಿದ ಮಹಾ ಇತಿಹಾಸ.

೧೯೮೪ ರಲ್ಲಿ ಕಾನ್ಸಿರಾಂ ಅವರು ಬಹುಜನ ಸಮಾಜ ಪಕ್ಷವನ್ನು ಸ್ಥಾಪಿಸಿದಾಗ ನಕ್ಕವರು ಬಹಳ. ದಲಿತರಿಗಾಗಿಯೇ ಪಕ್ಷವೊಂದನ್ನು ಕಟ್ಟಿ ಬೆಳೆಸುವುದು ಸಾಧ್ಯವೇ ಇಲ್ಲ ಎಂದು ಮೂಗು ಮುರಿದವರೂ ಅಪಾರ. ಅವರು 'ಬ್ರಾಹ್ಮಣ, ವೈಶ್ಯ, ಕ್ಷತ್ರಿಯರಿಗೆ ಚಪ್ಪಲಿಯಲ್ಲಿ ಹೊಡೆಯಿರಿ' ಎಂದಾಗ ಇವರ ಕಥೆ ಮುಗಿಯಿತು ಅಂದುಕೊಂಡವರು, ದಲಿತರ ಮತಗಳು ಕ್ರೋಢೀಕರಣಗೊಂಡಾಗ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ದಲಿತರ ಮತಗಳನ್ನು ಒಟ್ಟುಗೂಡಿಸುವುದರೊಂದಿಗೆ ಮುಸ್ಲಿಮರು ಮತ್ತು ಇತರೆ ಹಿಂದುಳಿದ ವರ್ಗಗಳ ಮತ ಬ್ಯಾಂಕಿಗೆ ಬಿ.ಎಸ್.ಪಿ ಲಗ್ಗೆ ಹಾಕಿದ ನಂತರ ಭಾರತದ ರಾಜಕೀಯ ಚಿತ್ರಣವೇ ಬದಲಾಗತೊಡಗಿತು. 'ಗೋ ಪ್ರದೇಶ' ಎಂದೇ ಕರೆಸಿಕೊಳ್ಳುವ ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ ಇಲ್ಲದೆ ರಾಜಕೀಯ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣಗೊಂಡಿತು. ಕಾಂಗ್ರೆಸ್ ಸಾಮ್ರಾಜ್ಯವಾಗಿದ್ದ ಉತ್ತರ ಪ್ರದೇಶ ಬಹುಜನರ ತೆಕ್ಕೆಗೆ ಒಡ್ಡಿಕೊಂಡಿತು.

ಕಾನ್ಸಿರಾಂ ಬಹುಜನರನ್ನು ಸಂಘಟಿಸುವಲ್ಲಿ ಹಿಡಿದ ದಾರಿಯೇ ಹಾಗಿತ್ತು. ಅವರಿಗೆ ದಾರಿಗಿಂತ ಗುರಿಯೇ ಮುಖ್ಯವಾಗಿತ್ತು. ಆ ಗುರಿ ಸಾಧಿಸಲು ಹೂಡಬೇಕಾದ ತಂತ್ರಗಾರಿಕೆ ಅವರಿಗೆ ಗೊತ್ತಿತ್ತು. ಹಾಗಾಗಿಯೇ ಅವರು ಅದಕ್ಕೆ ಬೇಕಾದ ತಂತ್ರಗಳನ್ನೇ ಬಳಸಿದರು. ಸೈದ್ಧಾಂತಿಕ ತಂತ್ರಗಾರಿಕೆ ಮೂಲಕ ದಲಿತರನ್ನು ಒಗ್ಗೂಡಿಸಿದ ನಂತರ, ಅದಷ್ಟೇ ಸಾಲದೆಂಬ ಅರಿವು ಅವರಿಗೆ ಮೂಡಿತು. ಅದಕ್ಕಾಗಿ ಹೊಸ ತಂತ್ರಗಳನ್ನು ಹೂಡಿದರು. ತಮ್ಮ ಕಡು ವೈರಿಯಾಗಿದ್ದ ಸಮಾಜವಾದಿ ಪಕ್ಷದ ಮುಲಾಯಂ ಸಿಂಗ್ ರೊಂದಿಗೆ ಸೇರಿ ಸರ್ಕಾರ ರಚಿಸಿ, ಮಾಯಾವತಿ ಅವರನ್ನು ಮುಖ್ಯ ಮಂತ್ರಿ ಮಾಡಿದರು. ಕೆಲವೇ ತಿಂಗಳಲ್ಲಿ ಮೈತ್ರಿ ಮುರಿದು ಬಿದ್ದಾಗ ತಮ್ಮ ಸೈದ್ಧಾಂತಿಕ ಕಡು ವೈರಿ ಬಿಜೆಪಿ ಜತೆ ಸೇರಿ ಮತ್ತೆ ಸರ್ಕಾರ ರಚಿಸಿ ಮಾಯಾವತಿಯವರನ್ನು ಮುಂದುವರೆಸಿದರು.

ಕಾನ್ಸಿರಾಂ ಅವರಿಗೆ ನಮ್ಮೆಲ್ಲರಿಗೆ ಗೊತ್ತಿಲ್ಲದ ಸತ್ಯವೊಂದು ಗೊತ್ತಿತ್ತು. ಅದು ದಲಿತರು ಆಳುವ ವರ್ಗವೆಂದು ಗುರುತಿಸಿಕೊಂಡರೆ ಮತ ಬ್ಯಾಂಕ್ ಅಭಿವೃದ್ಧಿ ಪಡಿಸಬಹುದೆಂಬ ಸತ್ಯವಾಗಿತ್ತು. ಮಾಯಾವತಿ ಮುಖ್ಯಮಂತ್ರಿಯಾಗಿದ್ದೇ ಉತ್ತರ ಪ್ರದೇಶದ ಎಲ್ಲ ದಲಿತರ ಮತಗಳು ಧೃವೀಕರಣಗೊಂಡವು. ಬಿಎಸ್‌ಪಿ ಭಾರತೀಯ ಜನತಾ ಪಕ್ಷದೊಂದಿಗೆ ಸೇರಿ ಸರ್ಕಾರ ಮಾಡಿದ್ದು ಅನೈತಿಕ-ಅಪಾರಾಧವಾಗಿ ನಮಗೆಲ್ಲ ಕಂಡರೆ, ಅದು ಕಾನ್ಸಿರಾಂ ಅವರಿಗೆ ಕೇವಲ ಒಂದು ತಂತ್ರವಾಗಿ ಮಾತ್ರ ಕಂಡಿತ್ತು! ಆ ತಂತ್ರ ಕೇವಲ ಅಧಿಕಾರದ ತಂತ್ರ ಮಾತ್ರವಾಗಿರದೆ ತಮ್ಮ ವೈರಿಯನ್ನು ಸದೆ ಬಡಿಯುವ ತಂತ್ರ ಕೂಡ ಆಗಿತ್ತು. ಇದು ಸಾಬೀತಾಗಲು ೨೦೦೭ರ ಚುನಾವಣೆವರೆಗೆ ಕಾಯಬೇಕಾಯಿತು!

ಕಾನ್ಸಿರಾಂ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಯಾವತಿ ಯವರನ್ನು ಗುರುತಿಸಿದ್ದು ಕೂಡ ಬಹು ದೊಡ್ಡ ಸಾಧನೆ. ಮಾಯಾವತಿ ಎಲ್ಲರ 'ಬೆಹೆನ್‌ಜಿ'ಯಾಗಿ ಬೆಳೆಯುವಂತೆ ಮಾಡುವಲ್ಲಿ ಅವರ ಶ್ರಮ ಅಪಾರ. ಕಾನ್ಸಿರಾಂ ನಿಧನದ ನಂತರ ಬಿಎಸ್‌ಪಿ ಗತಿ ಏನೋ ಎಂದು ಆತಂಕಗೊಂಡವರಿಗೆ ಮಾಯಾವತಿ ಬಹು ದೊಡ್ಡ ಆಶ್ಚರ್ಯವಾದರು. ಕಾಲದ ಅಗತ್ಯವನ್ನು ಮನಗಂಡ 'ಬೆಹೆನ್‌ಜಿ' ಬಹುಜನ ಸಮಾಜ ಪಕ್ಷವನ್ನು ಸರ್ವಜನ ಪಕ್ಷವಾಗಿಸುವ ಪ್ರಯತ್ನಕ್ಕೆ ಕೈಹಾಕಿದರು. ಬ್ರಾಹ್ಮಣರಿಗೆ ಶಂಖ ಊದಲು ಬಿಟ್ಟು ತಮ್ಮ ಆನೆಯನ್ನು ಮುನ್ನಡೆಸಿದರು. ಆನೆಯ ಮೂಲಕ ಗಣೇಶನನ್ನು, ಗಣೇಶನ ಮೂಲಕ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕಾಣಿಸಿದರು. ವೈಶ್ಯ, ಕ್ಷತ್ರಿಯರಿಗೆ ಆದ್ಯತೆ ನೀಡುವ ಮೂಲಕ ಕಾಂಗ್ರೆಸ್, ಬಿಜೆಪಿ ಮತ್ತು ಸಮಾಜವಾದಿ ಪಕ್ಷಗಳಿಗೆ 'ಪಂಗನಾಮ' ಹಾಕಿದರು. ಪ್ರಚಂಡ ಜಯಭೇರಿಯೊಂದಿಗೆ ಅಧಿಕಾರದ ಗದ್ದುಗೆ ಏರಿ ಇತಿಹಾಸ ಸೃಷ್ಟಿಸಿದರು.

ಉತ್ತರ ಪ್ರದೇಶದ ಫಲಿತಾಂಶದ ನಂತರ ಇಡೀ ದೇಶದಲ್ಲಿ ರಾಜಕೀಯ ಲೆಕ್ಕಾಚಾರ ಬುಡಮೇಲಾಗಿದೆ. ಮಾಯಾವತಿಯವರ ಚುನಾವಣಾ ವೈಶಿಷ್ಟ್ಯಗಳ ಬಗೆಗೆ ವ್ಯಾಪಕ ಚರ್ಚೆಯಾಗುತ್ತಿದೆ. ಸಾಮಾನ್ಯವಾಗಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಅನುಸರಿಸುವ ಸಾಂಪ್ರದಾಯಕ ಮಾರ್ಗಗಳ್ಯಾವುವನ್ನೂ ಮಾಯಾವತಿ ಅನುಸರಿಸಿಲ್ಲ. ಹಣ ಹಂಚಲಿಲ್ಲ. ಹೆಂಡ ಹಂಚಲಿಲ್ಲ. ಸೈಟು-ಸಾಲಗಳ ಆಮಿಷವನ್ನು ಒಡ್ಡಲಿಲ್ಲ. ಮೀಸಲಾತಿ ವಿಚಾರ ಪ್ರಸ್ತಾಪಿಸಲಿಲ್ಲ. ಅಭಿವೃದ್ಧಿಯ ಮಂತ್ರ ಜಪಿಸಲಿಲ್ಲ. ಕನಿಷ್ಟ ಪಕ್ಷದ ಪ್ರಣಾಳಿಕೆಯನ್ನೂ ಬಿಡುಗಡೆ ಮಾಡಲಿಲ್ಲ. ಮುಲಾಯಂ ಸಿಂಗ್‌ರ ಗೂಂಡಾ ಆಡಳಿತದಿಂದ ಉತ್ತರ ಪ್ರದೇಶವನ್ನು ರಕ್ಷಿಸುವ ಆಶ್ವಾಸನೆ ಬಿಟ್ಟರೆ ಅವರು ಪ್ರತಿ ಸಭೆಯಲ್ಲೂ ಹೇಳುತ್ತಿದ್ದದು, ಬಿಎಸ್.ಪಿಯಿಂದ ಯಾವ ಯಾವ ಜಾತಿಯವರಿಗೆ ಎಷ್ಟೆಷ್ಟು ಸೀಟು ಕೊಟ್ಟಿದ್ದೇನೆ ಎಂಬ ಲೆಕ್ಕ ಮಾತ್ರ! ಉತ್ತರ ಪ್ರದೇಶದ ಬ್ರಾಹ್ಮಣ-ದಲಿತ ಮೈತ್ರಿಯಿಂದಾಗಿ ಮಾಯಾವತಿ ಅಧಿಕಾರಕ್ಕೆ ಬಂದಿರುವುದರಿಂದ ದೇಶದ ಇತರೆ ಭಾಗಗಳಲ್ಲೂ ಇದೇ ಪ್ರಯೋಗ ಮಾಡುವ ಚಿಂತನೆ ಈಗ ವಿವಿಧ ಪಕ್ಷಗಳಲ್ಲಿ ನಡೆಯುತ್ತಿದೆ. ಹಿಂದುಳಿದ ವರ್ಗಗಳನ್ನು ಓಲೈಸುತ್ತಿದ್ದ ಬಹುತೇಕ ಪಕ್ಷಗಳು ತಮ್ಮ ಚಿಂತನೆಗಳನ್ನು ಈಗ ಒರೆಗೆ ಹಚ್ಚುತ್ತಿವೆ. ೬೦-೭೦ರ ದಶಕದಲ್ಲಿ ಕಾಂಗ್ರೆಸ್ ಅನುಸರಿಸುತ್ತಿದ್ದ ಬ್ರಾಹ್ಮಣ-ದಲಿತ-ಮುಸ್ಲಿಂ ಸೂತ್ರ ಮತ್ತೆ ಚಾಲ್ತಿಗೆ ಬರುವ ಸೂಚನೆಗಳಿವೆ. ಅದಕ್ಕಾಗಿಯೇ ಬಹಳಷ್ಟು ಜನ ಈಗ ಮಾಯಾವತಿಯವರಲ್ಲಿ ಇಂದಿರಾ ಗಾಂಧಿ ಅವರನ್ನು ಕಾಣುತ್ತಿದ್ದಾರೆ!

ಅದೇನೇ ಇದ್ದರೂ ಸಿದ್ಧಾಂತಕ್ಕೆ ಬದ್ಧರಾದವರು ಬಿಎಸ್‌ಪಿ ಅಧಿಕಾರಕ್ಕಾಗಿ ತನ್ನ ಸಿದ್ಧಾಂತದಿಂದ ದೂರ ಸರಿದಿರುವುದಾಗಿ ಹೇಳುತ್ತಿದ್ದಾರೆ. 'ಅಂಬೇಡ್ಕರ್ ಬಯಸಿದ ರಾಜ್ಯಾಧಿಕಾರ ಇದಲ್ಲ' ಎಂದು ವಾದಿಸುತ್ತಿದ್ದಾರೆ. ಇವೆಲ್ಲ 'ದಾರಿಗಿಂತ ಗುರಿ ಮುಖ್ಯ' ಎಂಬ ಕಾನ್ಸಿರಾಂರ ವಾದದ ಎದುರು ನಿಲ್ಲಲಾರದೆ ಒದ್ದಾಡುತ್ತಿವೆ. ಎಲ್ಲಕ್ಕಿಂತ ಹೆಚ್ಚಾಗಿ ನಾವೆಲ್ಲಾ ನಿರಂತರವಾಗಿ ವಿರೋಧಿಸುತ್ತಿದ್ದ ಕಾಂಗ್ರೆಸ್, ಬಿಜೆಪಿಗಳು ನೆಲ ಕಚ್ಚಿರುವುದನ್ನು ನೋಡಿದರೆ 'ಗುರಿ ಮತ್ತು ದಾರಿ' ಬಗೆಗಿನ ನಮ್ಮ ಚಿಂತನೆಗಳೇ ಅಲುಗಾಡತೊಡಗಿವೆ. ಆದರೂ ಬ್ರಾಹ್ಮಣರ ಸಹವಾಸದ ಬಗ್ಗೆ ಸಹಜವಾದ ಆತಂಕ ಬಹಳಷ್ಟು ಜನರನ್ನು ಕಾಡಿಸುತ್ತಿದೆ. ಬುದ್ಧ-ಬಸವರನ್ನೇ ನುಂಗಿ ನೀರು ಕುಡಿದವರು ಮಾಯಾವತಿಯವರನ್ನು ಬಿಟ್ಟಾರೆಯೇ ಎಂಬ ಭಯ ಹಲವರದಾಗಿದೆ. ಅದನ್ನು ಜಯಿಸುವ ಶಕ್ತಿ ಮಾಯಾವತಿಯವರಿಗೆ ಒದಗಿಬರಲೆಂಬುದೇ ನಮ್ಮ ಆಕಾಂಕ್ಷೆ.

ಈ ಎಲ್ಲಾ ವಿಶ್ಲೇಷಣೆ-ಲೆಕ್ಕಾಚಾರಗಳನ್ನು ದಾಟಿ ಮಾಯಾವತಿ ಅವರು ದೆಹಲಿ ಗದ್ದುಗೆಯತ್ತ ಮುಖ ಮಾಡಿದ್ದಾರೆ. ಅವರಿಗೆ ಯಶಸ್ಸು ಸಿಗಲಿ ಎಂದು 'ಸಂವಾದ' ಹಾರೈಸುತ್ತದೆ.

○ ಇಂದೂಧರ ಹೊನ್ನಾಪುರ

ರಾಷ್ಟ್ರೀಯ ಅಪರಾಧ ದಾಖಲೆಗಳ ಸಂಸ್ಥೆ (ಎನ್‌ಸಿಆರ್‌ಬಿ)ಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೋಡಿದರೆ ೧೯೯೫ರಿಂದ ೨೦೦೩ರವರೆಗೆ ಮಹಾರಾಷ್ಟ್ರದಲ್ಲಿ ರೈತರ ಆತ್ಮಹತ್ಯೆ ಶೇ. ೩೫೪೪ರಷ್ಟು ಏರಿಕೆ ಕಂಡಿದೆ. ಸ್ಪಷ್ಟವಾಗಿ ಹೇಳುವುದಾದರೆ ಇದು ಸರ್ಕಾರಿ ಅಂಕಿ ಅಂಶಗಳಾಗಿರುವುದರಿಂದ ಸತ್ಯಕ್ಕೆ ಸ್ವಲ್ಪ ದೂರ ಎಂದೇ ಹೇಳಬಹುದು. ಸ್ಥಳೀಯ ಅಧಿಕಾರಿಗಳು ವಿವಿಧ ಪ್ರಾಂತ್ಯಗಳಲ್ಲಿ ಜರುಗಿರುವ ಸಾವಿರಾರು ಆತ್ಮಹತ್ಯೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದಿರುವುದು ಹೊಸದೇನಲ್ಲ.

ಇಂತಹ ನಂಬಲನರ್ಹವಾದ ಸರ್ಕಾರಿ ಅಂಕಿ-ಅಂಶಗಳೇ ಒಂದು ವಿಷಾದನೀಯ ಮಾದರಿಯನ್ನು ಕಟ್ಟಿಕೊಡುತ್ತಿದೆ. ಸಾಕಷ್ಟು ತಿರುಚಲ್ಪಟ್ಟಿರುವ ಈ ಅಂಕಿ-ಅಂಶಗಳ ಪ್ರಕಾರ '೧೯೯೫ರಲ್ಲಿ ೧,೦೮೩ ರೈತರ ಆತ್ಮಹತ್ಯೆಗಳ ಪ್ರಮಾಣ ೨೦೦೩ರಲ್ಲಿ ೩,೮೩೬ಕ್ಕೆ ಏರಿಕೆ ಕಂಡಿದೆ. ಇದು ಇಡೀ ಮಹಾರಾಷ್ಟ್ರ ರಾಜ್ಯದ ಅಂಕಿ-ಅಂಶ. ಬರಿಯ ವಿಧರ್ಭ ಅಥವಾ ಮರಾಠವಾಡ ಪ್ರಾಂತ್ಯಗಳನ್ನು ಗಮನಿಸಿದರೆ ಏರಿಕೆಯ ಪ್ರಮಾಣ ಇನ್ನೂ ಗಂಭೀರ ಸ್ವರೂಪ ಪಡೆದುಕೊಳ್ಳುತ್ತದೆ. ಎನ್‌ಸಿಆರ್‌ಬಿ ದಾಖಲೆಗಳು ೨೦೦೩ರವರೆಗೆ ಮಾತ್ರ ಇದೆ. ಆದರೆ ೨೦೦೩ರ ನಂತರ ಈ ಪ್ರಾಂತ್ಯಗಳಲ್ಲಿ ಆತ್ಮಹತ್ಯೆ ಪ್ರಮಾಣ ವಿಪರೀತಕ್ಕೆ ತಿರುಗಿದೆ. ೨೦೦೬ನೇ ಸಾಲಿನಲ್ಲಿ ೧,೪೪೭ ಆತ್ಮಹತ್ಯೆಗಳು ನಡೆದಿವೆ ಎಂದು ಮಹಾರಾಷ್ಟ್ರ ಸರ್ಕಾರವೇ ಒಪ್ಪಿಕೊಳ್ಳುತ್ತದೆ. ಇಡೀ ಮಹಾರಾಷ್ಟ್ರದಲ್ಲಿ ೧೯೯೫ರಲ್ಲಿ ದಾಖಲಾಗಿರುವ ಆತ್ಮಹತ್ಯೆಗಳ ಪ್ರಮಾಣಕ್ಕಿಂತ ಹೆಚ್ಚು ಆತ್ಮಹತ್ಯೆಗಳು ೨೦೦೬ರಲ್ಲಿ ಈ ಆರು ಜಿಲ್ಲೆಗಳಲ್ಲಿ ಮಾತ್ರ ನಡೆದಿದೆ. ಇದಕ್ಕೂ ಕೂಡ ನಂಬಲನರ್ಹವಾದ ಸರ್ಕಾರಿ ಅಂಕಿ ಅಂಶಗಳೇ ಆಧಾರ.

ಲಭ್ಯವಿರುವ ಅಂಕಿ ಅಂಶಗಳು ನಿಖರವಾಗಿಲ್ಲದಿದ್ದರೂ ಕಣ್ಮುಂದೆ ನಡೆಯುತ್ತಿರುವ ಘಟನೆಗಳು ಈ ವಿಷಾದನೀಯ ಮಾದರಿಯನ್ನು ಸ್ಪಷ್ಟಪಡಿಸುತ್ತದೆ. ಮಾರ್ಚ್ ೮ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನ ವಿಧರ್ಭದಲ್ಲಿ ಒಂಭತ್ತು ಮಂದಿ ಹೆಂಗಸರು ವಿಧವೆಯರಾಗಿದ್ದಾರೆ. ಈ ಪ್ರಾಂತ್ಯದ ಇತ್ತೀಚಿನ ಇತಿಹಾಸವನ್ನು ಪರಿಗಣಿಸುವುದಾದರೆ, ಒಂದೇ ದಿನದಲ್ಲಿ ನಡೆದ ಅತಿ ಹೆಚ್ಚು ಆತ್ಮಹತ್ಯೆಗಳಿವು. ಎರಡು ವಾರಗಳ ಬಳಿಕ ಮತ್ತೆ ಇದೇ ಘಟನೆ ಪುನರಾವರ್ತನೆಯಾಗಿದೆ. ಈ ವರ್ಷದ ಮೊದಲ ಮೂರು ತಿಂಗಳುಗಳಷ್ಟು ಕಡಿಮೆ ಅವಧಿಯೊಳಗೆ ಸುಮಾರು ೨೫೦ ಕೃಷಿ ಸಂಬಂಧಿ ಆತ್ಮಹತ್ಯೆಗಳು ನಡೆದಿವೆ. ಎಂದಿನಂತೆ ರೈತರ ಆತ್ಮಹತ್ಯೆ ಸಮಸ್ಯೆಯ ಗುಣಲಕ್ಷಣವೇ ಹೊರತು ಅದರ ಕಾರಣವಲ್ಲ. ಆತ್ಮಹತ್ಯೆಗಳು ಸಮಸ್ಯೆಯ ಪರಿಣಾಮವೇ ಹೊರತು ಅದರ ಮೂಲವಲ್ಲ.

ಇನ್ನು ಕೆಲವೇ ತಿಂಗಳುಗಳಲ್ಲಿ ವಿಧರ್ಭ ಪ್ರಾಂತ್ಯದಲ್ಲಿ ಮೊಟ್ಟಮೊದಲ ಬಾರಿಗೆ ಪ್ರತಿಶತ ೧೦೦ರಷ್ಟು ಬಿ. ಟಿ. ಕಾಟನ್ ಸುಗ್ಗಿಯಾಗಲಿದೆ. ಆದರೆ ಕಳೆದ ವರ್ಷ ಬಿ. ಟಿ. ಕಾಟನ್ ಎಕರೆಗೆ ಶೇ. ೬೦ರಷ್ಟು ಮಾತ್ರ ಇಳುವರಿ ನೀಡಿತ್ತು. ರೈತರ ಭೂಮಿಗಳನ್ನು ಬಿ. ಟಿ. ಕಾಟನ್ ವ್ಯಾಪಿಸುತ್ತಾ ಹೋದಂತೆ ರೈತರು ಎದುರಿಸಬೇಕಾದ ಅಪಾಯದ ಮಟ್ಟ ಕೂಡ ಹೆಚ್ಚುತ್ತಾ ಹೋಗುತ್ತದೆ. ಮಳೆ ನೀರು ಅವಲಂಬಿತ ಪ್ರದೇಶಗಳಲ್ಲಿ ಬಿ. ಟಿ. ಕಾಟನ್ ತೀರ ಕಡಿಮೆ ಇಳುವರಿ ನೀಡಿದೆ ಎಂಬ ಅಂಶವನ್ನು ಮಹಾರಾಷ್ಟ್ರ ಸರ್ಕಾರವೇ ಒಪ್ಪಿಕೊಳ್ಳುತ್ತದೆ. ಮುಂಬರುವ ಋತುಮಾನಗಳಲ್ಲಿ ಬೀಜ ಸಂಸ್ಥೆಗಳು ಇನ್ನೂ ಕಡಿಮೆ ಹೈಬ್ರಿಡ್ ತಳಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂಬುದು ಈಗ ಸ್ಪಷ್ಟವಾಗಿದೆ.

ಬಿ. ಟಿ. ಕಾಟನ್ ವಹಿವಾಟಿನಿಂದ ಲಾಭವೇ ಇಲ್ಲದ ಮೇಲೆ ಹೈಬ್ರಿಡ್ ಬೀಜಗಳನ್ನು ಮಾರಾಟ ಮಾಡಿ ಏನು ಪ್ರಯೋಜನ? ರಾಷ್ಟ್ರೀಯ ರೈತರ ಆಯೋಗವನ್ನು ಒಳಗೊಂಡಂತೆ ಬಹಳಷ್ಟು ಕಡೆಗಳಿಂದ ವಿಧರ್ಭ ಪ್ರಾಂತ್ಯವನ್ನು "ಜೈವಿಕ ಕೃಷಿ ವಲಯ"ವನ್ನಾಗಿ ಪರಿ

ಈ ಮಧ್ಯೆ ವಿಧರ್ಭ ಪ್ರಾಂತ್ಯದಲ್ಲಿ...

ಮಾಯವಾದ 'ಬಂಪರ್ ಬೆಳೆ'ಗೆ ಸಂಬಂಧಿಸಿದ ಮತ್ತೊಂದು ವ್ಯಂಗ್ಯವಿದೆ. ಹತ್ತಿ, ಕ್ವಿಂಟಾಲ್‌ಗೆ ಇತ್ತೀಚಿನ ವರ್ಷಗಳಲ್ಲಿನ ಅತಿ ಹೆಚ್ಚು ಬೆಲೆಗೆ ಮಾರಾಟವಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಹತ್ತಿಯ ಬೆಲೆ ಕ್ವಿಂಟಾಲ್‌ಗೆ ೨,೪೦೦ ರೂ.ಗಳಷ್ಟು ಹೆಚ್ಚಿದೆ. ಸೋಯಾಬೀನ್‌ಗೆ ಕೂಡ ಹಿಂದಿಗಿಂತ ಹೆಚ್ಚಿನ ಬೆಲೆ. ಅಂದರೆ ಕ್ವಿಂಟಾಲ್‌ಗೆ ೧,೪೦೦ ರೂ. ದೊರಕುತ್ತಿದೆ. ಇದರರ್ಥ, ಬಹಳಷ್ಟು ರೈತರು ಮತ್ತೆ ಹಳೆಯ ಬೆಳೆಗಳ ಕಡೆ ಮುಖ ಮಾಡಲಿದ್ದಾರೆ. ಹತ್ತಿಗೆ ದೊರಕುತ್ತಿರುವ ಈಗಿನ ಬೆಲೆ ಹೆಚ್ಚಿನದಲ್ಲದಿದ್ದರೂ, ಸ್ವಲ್ಪ ಆಕರ್ಷಕವಾಗಿಯಂತೂ ಇದೆ. ಕೆಲವು ರೈತರಂತೂ ಇತರ ಬೆಳೆಗಳನ್ನು ಮತ್ತೆ ಬೆಳೆಯಲಾರಂಭಿಸಿದ್ದಾರೆ. ಹತ್ತಿಯ ಬೆಳೆಗಾರರು ಕೂಡ ಇನ್ನು ಮುಂದೆ ತಮ್ಮ ಭೂಮಿಯಲ್ಲಿ ಒಂದು ಎಕರೆ ಪ್ರದೇಶವನ್ನು ಜೋಳಕ್ಕೆ ಮೀಸಲಿಡುವುದು ಸೂಕ್ತ ಎನಿಸುತ್ತದೆ.

ಮೂಲ: ಪಿ ಸಾಯಿನಾಥ್
ಅನು: ಸತ್ಯಪ್ರಕಾಶ್ ಎಂ ಆರ್

ವರ್ತಿಸಬೇಕೆಂಬ ಸಲಹೆ ಕೇಳಿಬರುತ್ತಿದ್ದರೆ, ಇದಕ್ಕೆ ತದ್ವಿರುದ್ಧವಾದ ಪ್ರಕ್ರಿಯೆ ಇಲ್ಲಿ ನಡೆಯುತ್ತಿದೆ. ವರದಿಯನ್ನು ಪ್ರಸ್ತುತಪಡಿಸಿದ್ದಷ್ಟೇ ಅಲ್ಲದೆ ರಾಷ್ಟ್ರೀಯ ರೈತರ ಆಯೋಗದ ಮುಖ್ಯಸ್ಥರಾದ ಡಾ. ಎಂ.ಎಸ್. ಸ್ವಾಮಿನಾಥನ್, ಜೈವಿಕ ಕೃಷಿ ವಲಯ ನಿರ್ಮಿಸುವ ನಿಟ್ಟಿನಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ ಒತ್ತಡ ಹೇರಿದರೂ ಪ್ರಯೋಜನಕ್ಕೆ ಬರಲಿಲ್ಲ. ಏಕೆಂದರೆ ರಾಜ್ಯ ಸರ್ಕಾರದ ಬೀಜ ಆಯೋಗವೇ ಬಿ. ಟಿ. ಕಾಟನ್‌ನ ಪ್ರಮುಖ ವಿತರಕನಾಗಿದೆ. ಕಳೆದ ಕೆಲವು ವರ್ಷಗಳ ಪರಿಸ್ಥಿತಿಯನ್ನು ಅವಲೋಕಿಸಿದರೆ ಇನ್ನೂ ಹೆಚ್ಚು ಆತಂಕವುಂಟಾಗುತ್ತದೆ. 'ದಾಖಲೆಯ' ೩೫೦ ಲಕ್ಷ ಕ್ವಿಂಟಾಲ್ 'ಬಂಪರ್ ಬೆಳೆ'ಯೊಂದಿಗೆ ಕಳೆದ ವರ್ಷದ ಸುಗ್ಗಿಯನ್ನು ಸರ್ಕಾರ ಆರಂಭಿಸಿತ್ತು ಎಂದು ರಾಜ್ಯದ ಕೃಷಿ ಮಾರಾಟ ಸಚಿವ ಹರ್ಷವರ್ಧನ ಪಾಟೀಲ್ ಹೇಳಿದ್ದಾರೆ.

ಈ ಅಭೂತಪೂರ್ವ ಯಶಸ್ಸು ಬಿ. ಟಿ. ಕಾಟನ್‌ನಿಂದ ದೊರಕಿದ್ದು ಎಂಬುದಾಗಿ ಮಾಧ್ಯಮಗಳು ಕೂಡ ಪ್ರಚಾರ ಕೊಡಲಾರಂಭಿಸಿತು. ಆದರೆ ದಿನಕಳೆದಂತೆ ಈ ತೋರಿಕೆಯ ಅಂಕಿ ಅಂಶಗಳಲ್ಲಿ ಹುರುಳಿಲ್ಲವೆಂದು ಸಾಬೀತಾಗುತ್ತಾ ಬಂತು. ೩೫೦ ಲಕ್ಷ ಕ್ವಿಂಟಾಲ್ ಬಂಪರ್ ಬೆಳೆಯ ಪ್ರಮಾಣ ಕಡಿಮೆಯಾಗುತ್ತಲೇ ಬಂತು. ಹತ್ತಿ ಸಂಗ್ರಹಿಸುವ ಅಧಿಕೃತ ಏಜೆನ್ಸಿಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಹತ್ತಿ ಸಂಗ್ರಹಣೆಯಾಗಿದ್ದು ಈ ಅಂಶವನ್ನು ಮತ್ತಷ್ಟು ಬಲಪಡಿಸಿತು. ಕಡೆಗೆ ಎಲ್ಲಾ ಅಧಿಕೃತ ಮೂಲಗಳಿಂದ ಸಂಗ್ರಹಣೆಯಾದ ಹತ್ತಿಯ ಪ್ರಮಾಣ ೭೦ ಲಕ್ಷ ಕ್ವಿಂಟಾಲ್ ಕೂಡ ದಾಟಲಿಲ್ಲ. ಇನ್ನು ಖಾಸಗಿ ಮೂಲಗಳಿಂದ ಸುಮಾರು ೧೧೦ ಲಕ್ಷ ಕ್ವಿಂಟಾಲ್ ಹತ್ತಿ ಸಂಗ್ರಹಿಸಬಹುದೆಂದು ನಂಬಲಾಗಿದೆ ಸ್ಪಷ್ಟವಾಗಿ ಹೇಳುವುದಾದರೆ, ಬಂಪರ್ ಬೆಳೆಯ ವರ್ಷದಲ್ಲಿ ೧೮೦ ಲಕ್ಷ ಕ್ವಿಂಟಾಲ್‌ಗಿಂತ ಕಡಿಮೆ ಹತ್ತಿ ಸಂಗ್ರಹಣೆ ಯಾಗಿದೆ. ಒತ್ತಡದ ಸಂದರ್ಭದಲ್ಲಿಯೇ ಇಷ್ಟು ಕಡಿಮೆ ಹತ್ತಿ ಸಂಗ್ರಹಣೆಯಾಗಿರುವುದಂತೂ ಆಶ್ಚರ್ಯಕರ. ವಾಸ್ತ ವವಾಗಿ ಮಾರಾಟ ಮಾಡಲು ರೈತರು ತುದಿಗಾಲಲ್ಲಿ ನಿಲ್ಲುವ ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಸಂಗ್ರಹಣೆಯಾಗಿರಬೇಕಿತ್ತು. ಇದರರ್ಥ, ಒಟ್ಟು ಇಳುವರಿ ೨೨೦ ಲಕ್ಷ ಕ್ವಿಂಟಾಲ್ ಕೂಡ ದಾಟುವುದಿಲ್ಲ. ಅದೇ ಬಿ. ಟಿ. ಕಾಟನ್ ಬಳಕೆ ಮಾಡದ ೨೦೦೩ರಲ್ಲಿ ಸಂಗ್ರಹಣೆಯ ಪ್ರಮಾಣವೇ ೨೧೦ ಲಕ್ಷ ಕ್ವಿಂಟಾಲ್‌ನಷ್ಟು. ಇನ್ನು ಇಳುವರಿಯ ಪ್ರಮಾಣ ಸರಿಸುಮಾರು ೨೫೦ ಲಕ್ಷ ಕ್ವಿಂಟಾಲ್ ಇದ್ದೇ ಇತ್ತು.

ಈಗಿನ ಪರಿಸ್ಥಿತಿ ಮುಂಬರುವ ದಿನಗಳಲ್ಲಿ ಎದುರಿಸಬೇಕಾದ ಒತ್ತಡವನ್ನು ಇನ್ನೂ ಸ್ಪಷ್ಟಪಡಿಸುತ್ತದೆ. ವಿಧರ್ಭದಲ್ಲಿ ಬಿ. ಟಿ. ಕಾಟನ್ ಬಳಸದ ವರ್ಷದಲ್ಲಿಯೇ ಹೆಚ್ಚಿನ ಇಳುವರಿ ಕಂಡುಬಂದಿದ್ದು, ಶೇ. ೬೦ಕ್ಕಿಂತ ಹೆಚ್ಚು ಭೂಮಿ 'ಬಿ. ಟಿ. ಕಾಟನ್' ಬಳಸಿದ ವರ್ಷದಲ್ಲಿ ಇಳುವರಿ ಕಡಿಮೆಯಾಗಿದೆ. "ಮಳೆ ನೀರು ಅವಲಂಬಿತ ಪ್ರದೇಶಗಳಲ್ಲಿ ಈ ಹಿಂದಿನ ವರ್ಷಗಳಲ್ಲಿ ಬಿ. ಟಿ. ಕಾಟನ್ ಉತ್ತಮ ಇಳುವರಿ ನೀಡಿಲ್ಲ" ಎಂದು ರಾಜ್ಯ ಸರ್ಕಾರವೇ ವರದಿ ಮಂಡಿಸಿದೆ. ಮಹಾರಾಷ್ಟ್ರದಲ್ಲಿ ಹತ್ತಿ ಬೆಳೆಯುವ ಶೇ ೯೭ರಷ್ಟು ಭಾಗ ನೀರಾವರಿಗೆ ಒಳಪಟ್ಟಿಲ್ಲ. ಇದರರ್ಥ ಇಷ್ಟೆ: ಈ ಬಾರಿ ಮಾನ್ಸೂನ್ ಕೈಕೊಟ್ಟ ಪಕ್ಷದಲ್ಲಿ, ಈ ಹಿಂದಿನ 'ಒತ್ತಡದ' ವರ್ಷಗಳು ಈಗಿನದಕ್ಕಿಂತ ಉತ್ತಮ ಎಂದೆನಿಸಿರುವುದಿಲ್ಲ

ಮಾಯವಾದ 'ಬಂಪರ್ ಬೆಳೆ'ಗೆ ಸಂಬಂಧಿಸಿದ

ಗಂಭೀರ ಸಂದರ್ಭದಲ್ಲಿ ಸರ್ಕಾರ ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸಬೇಕೆಂದು ನಿರೀಕ್ಷಿಸುವುದು ಸಹಜ. ಕೆಲವು ಬೆರಳೆಣಿಕೆಯ ಅಧಿಕಾರಿಗಳು ಯಾವುದೇ ಸರ್ಕಾರಿ ಆದೇಶಗಳಿಗೆ ಗಂಟು ಬೀಳದೆ ತಾವೇ ಖುದ್ದಾಗಿ ಸಮಸ್ಯೆಯ ಬಗ್ಗೆ ಅಧ್ಯಯನ ನಡೆಸಿರುವುದು ನಿಜ. ಆದರೆ ಸರ್ಕಾರ ಗಣನೀಯವಾದ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರಧಾನ ಮಂತ್ರಿಗಳ ಪ್ಯಾಕೇಜ್ ಹರಿದು ಹಂಚಿಹೋಗಿದೆ. ಇನ್ನು ಮುಖ್ಯಮಂತ್ರಿಗಳು ವಿಧರ್ಭ ರೈತರಿಗೆ ಮೋಕ್ಷ ಕಲ್ಪಿಸಲು ಬಾಬಾಗಳು ಮತ್ತು ಅಮ್ಮಂದಿರನ್ನು ಅರಸಿ ಹೊರಟಿದ್ದಾರೆ. ಆದರೆ ಈ ಮೋಕ್ಷ ಪ್ರಾಪ್ತಿಯೇನು ಉಚಿವಲ್ಲ. ಮೋಕ್ಷಕ್ಕೂ ಬೆಲೆ ತೆರಬೇಕಾಗಿದೆ. ಅದು ಪ್ರಮುಖ ಸ್ಥಳಗಳಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ನಿವೇಶನಗಳನ್ನು ಈ ದೇವಮಾನವರಿಗೆ ಧಾರೆ ಎರೆಯುವುದಾಗಿರಬಹುದು. ನಿವೇಶನ ದೊರಕಿದ ಕೂಡಲೆ ಸರ್ಕಾರದ ಮುಂದೆ ದುಂಬಾಲು ಬೀಳಲಿದ್ದಾರೆ. ಆಧ್ಯಾತ್ಮದ ಹಸಿ ಸುಳ್ಳಿನ ಹಿಂದೆ ವ್ಯವಹಾರ ಯಾವಾಗಲೂ ಇದ್ದೇ ಇರುತ್ತದೆ.

ಮತ್ತೊಂದು ವ್ಯಂಗ್ಯವಿದೆ. ಹತ್ತಿ, ಕ್ವಿಂಟಾಲ್‌ಗೆ ಇತ್ತೀಚೆಗಿನ ವರ್ಷಗಳಲ್ಲಿನ ಅತಿ ಹೆಚ್ಚು ಬೆಲೆಗೆ ಮಾರಾಟವಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಹತ್ತಿಯ ಬೆಲೆ ಕ್ವಿಂಟಾಲ್‌ಗೆ ೨,೪೦೦ ರೂ.ಗಳಷ್ಟು ಹೆಚ್ಚಿದೆ. ಸೋಯಾಬೀನ್‌ಗೆ ಕೂಡ ಹಿಂದಿಗಿಂತ ಹೆಚ್ಚಿನ ಬೆಲೆ ಅಂದರೆ ಕ್ವಿಂಟಾಲ್‌ಗೆ ೧,೪೦೦ ರೂ. ದೊರಕುತ್ತಿದೆ. ಇದರರ್ಥ, ಬಹಳಷ್ಟು ರೈತರು ಮತ್ತೆ ಹಳೆಯ ಬೆಳೆಗಳ ಕಡೆ ಮುಖ ಮಾಡಲಿದ್ದಾರೆ. ಹತ್ತಿಗೆ ದೊರಕುತ್ತಿರುವ ಈಗಿನ ಬೆಲೆ ಹೆಚ್ಚಿನದಲ್ಲದಿದ್ದರೂ, ಸ್ವಲ್ಪ ಆಕರ್ಷಕವಾಗಿಯಂತೂ ಇದೆ. ಕೆಲವು ರೈತರಂತೂ ಇತರ ಬೆಳೆಗಳನ್ನು ಮತ್ತೆ ಬೆಳೆಯಲಾರಂಭಿಸಿದ್ದಾರೆ. ಹತ್ತಿಯ ಬೆಳೆಗಾರರು ಕೂಡ ಇನ್ನು ಮುಂದೆ ತಮ್ಮ ಭೂಮಿಯಲ್ಲಿ ಒಂದು ಎಕರೆ ಪ್ರದೇಶವನ್ನು ಜೋಳಕ್ಕೆ ಮೀಸಲಿಡುವುದು ಸೂಕ್ತ ಎನಿಸುತ್ತದೆ. ಇದು ರೈತರ ಕುಟುಂಬಗಳಿಗೆ ಸ್ವಲ್ಪ ಸುರಕ್ಷತೆಯನ್ನಾದರೂ ಒದಗಿಸುತ್ತದೆ. ಆದರೆ ಈ ಪ್ರಕ್ರಿಯೆ ಕೂಡ ಸಮಗ್ರವಾಗಿ ನಡೆಯುತ್ತಿಲ್ಲ.

ಈಗ ರೈತರು ಹತ್ತಿಯ ತಿಂಗಳುಗಳಿಗೆ ಮರಳಿದರೆ ಅದು 'ಬಿ. ಟಿ. ಕಾಟನ್ ಕ್ಷಯ' ಋತುವಾಗಿರುತ್ತದೆ. ಆದ್ದರಿಂದ ಆರಂಭಿಕ ಪದಾರ್ಥಗಳ ಬೆಲೆ ಅಧಿಕವಾಗಿರುತ್ತದೆ. ಹೌದು, ರೈತರು ಹೆಚ್ಚಿನ ರಾಸಾಯನಿಕ ಪದಾರ್ಥಗಳನ್ನು ಬಳಸಲಿದ್ದಾರೆ. ಆದ್ದರಿಂದ ಸಾಲದ ಹೊರೆ ಕೂಡ ಅಪಾಯಕಾರಿ ಮಟ್ಟ ತಲುಪಲಿದೆ. ಕಡಿಮೆ ಬಡ್ಡಿ ಸಾಲದ ಅಧಿಕ ಹೊರೆಯ ವಾಸ್ತವವನ್ನು ರೈತರು ಈಗಾಗಲೇ ಅರ್ಥೈಸಿಕೊಳ್ಳಲಾರಂಭಿಸಿದ್ದಾರೆ. ಮೊದಲನೆಯದಾಗಿ, ಶೇ. ೬ರ ಬಡ್ಡಿ ಸಾಲದ ಲಾಭ ಪಡೆದ ರೈತರ ಪ್ರಮಾಣ ಅತ್ಯಂತ ಕಡಿಮೆ. ಮಾರ್ಚ್ ೩೧ರ ಒಳಗೆ ಸಾಲ ಪಾವತಿಸದ ರೈತರು ಸುರಕ್ಷತಾ ವಲಯದಿಂದ ಹೊರಬರಲಿದ್ದಾರೆ. ಶೇ. ೨೦ಕ್ಕಿಂತ ಹೆಚ್ಚು ಮಂದಿ ಸಾಲ ಮರುಪಾವತಿಸುವ ಲಕ್ಷಣ ಇಲ್ಲದಿರುವುದರಿಂದ, ಇವರೆಲ್ಲರೂ ಅತಿ ಶೀಘ್ರವಾಗಿ ಹಳೆಯ ಬಡ್ಡಿ ದರದಲ್ಲಿ ಸಾಲ ಮರುಪಾವತಿಸುವ ಕರಾರಿಗೆ ಒಳಪಡಲಿದ್ದಾರೆ.

ಸಾಲ ಮನ್ನಾ ಕೂಡ ರೈತರ ಪಾಲಿಗೆ ಇಲ್ಲದಿರುವುದರಿಂದ, ಬಹಳಷ್ಟು ಮಂದಿ ರೈತರು ಬ್ಯಾಂಕ್‌ಗಳಿಂದ ಸಾಲ ಪಡೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಮತ್ತೆ ಸಾಲದ ಷಾರ್ಕ್‌ಗಳ ಹತ್ತಿರ– ಆರಂಭಿಕ ಪದಾರ್ಥಗಳ ದಲ್ಲಾಳಿಗಳು, ಬೀಜ ಮಾರಾಟಗಾರರು, ಖೋಟಾ ಹಣಕಾಸು ಸಂಸ್ಥೆಗಳು– ಮರಳಿ ಬರಬೇಕಾಗುತ್ತದೆ. ಇಂತಹ ಪರಿಸ್ಥಿತಿ ನಿರ್ಮಾಣವಾದಾಗ ದಲ್ಲಾಳಿಗಳು ನೀಡಿದ ಪದಾರ್ಥಗಳನ್ನೇ ರೈತರು ಬಳಸಬೇಕಾಗುತ್ತದೆ. ಅಧಿಕೃತ ವರದಿಯೇ ಹೇಳುವಂತೆ ಬಿ. ಟಿ. ಕಾಟನ್ "ಇಳುವರಿ ಸಮರ್ಪಕವಾಗಿಲ್ಲ." "ಬೀಜ ಮತ್ತಿತರ ರಸಾಯನಿಕ ಪದಾರ್ಥಗಳನ್ನು ಕೊಳ್ಳಲು ರೈತರು ಹೆಚ್ಚಿನ ಬಂಡವಾಳ ಹೂಡಿದರೆ, ಇದರ ಸಮಗ್ರ ಪರಿಣಾಮ ಸಾಮಾನ್ಯವಾಗಿ ನಕಾರಾತ್ಮಕವಾಗಿರುತ್ತದೆ."

ಈಗಿರುವ ಹತ್ತಿಯ ಬೆಲೆ ಮುಂದಿನ ವರ್ಷ ಕೂಡ ಮುಂದುವರೆಯುತ್ತದೆ ಎನ್ನುವುದಕ್ಕೆ ಯಾವುದೇ ಗ್ಯಾರಂಟಿ ಇಲ್ಲ. ಬೆಲೆ ನಿಧಿಯನ್ನು ಸಮರ್ಪಕವಾಗಿ ಗಮನಿಸಿದ್ದರೆ ಸ್ವಲ್ಪಮಟ್ಟಿಗೆ ಪರಿಸ್ಥಿತಿಯನ್ನು ಸುಧಾರಿಸುವ ಸಾಧ್ಯತೆ ಇತ್ತು. ಆದರೆ ರ್‍ಹಾಯ ರೈತರ ಆಯೋಗದ ಈ ಶಿಫಾರಸ್ಸು ಕೂಡ, ಅದರ ಇತರ ಶಿಫಾರಸ್ಸುಗಳಂತೆ ಮಣ್ಣುಪಾಲಾಗಿದೆ.

ಇಂತಹ ಗಂಭೀರ ಸಂದರ್ಭದಲ್ಲಿ ಸರ್ಕಾರ ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸಬೇಕೆಂದು ನಿರೀಕ್ಷಿಸುವುದು ಸಹಜ. ಕೆಲವು ಬೆರಳೆಣಿಕೆಯ ಅಧಿಕಾರಿಗಳು ಯಾವುದೇ ಸರ್ಕಾರಿ ಆದೇಶಗಳಿಗೆ ಗಂಟು ಬೀಳದೆ ತಾವೇ ಖುದ್ದಾಗಿ ಸಮಸ್ಯೆಯ ಬಗ್ಗೆ ಅಧ್ಯಯನ ನಡೆಸಿರುವುದು ನಿಜ. ಆದರೆ ಸರ್ಕಾರ ಗಣನೀಯವಾದ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರಧಾನ ಮಂತ್ರಿಗಳ ಪ್ಯಾಕೇಜ್ ಹರಿದು ಹಂಚಿಹೋಗಿದೆ. ಇನ್ನು ಮುಖ್ಯಮಂತ್ರಿಗಳು ವಿಧರ್ಭ ರೈತರಿಗೆ ಮೋಕ್ಷ ಕಲ್ಪಿಸಲು ಬಾಬಾಗಳು ಮತ್ತು ಅಮ್ಮಂದಿರನ್ನು ಅರಸಿ ಹೊರಟಿದ್ದಾರೆ. ಆದರೆ ಈ ಮೋಕ್ಷ ಪ್ರಾಪ್ತಿಯೇನು ಉಚಿವಲ್ಲ. ಮೋಕ್ಷಕ್ಕೂ ಬೆಲೆ ತೆರಬೇಕಾಗಿದೆ. ಅದು ಪ್ರಮುಖ ಸ್ಥಳಗಳಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ನಿವೇಶನಗಳನ್ನು ಈ ದೇವಮಾನವರಿಗೆ ಧಾರೆ ಎರೆಯುವುದಾಗಿರಬಹುದು. ದೇವಮಾನವರ ಏಜೆಂಟುರುಗಳು ಈಗಾಗಲೇ ಪ್ರಮುಖ ನಿವೇಶನಗಳನ್ನು ಶೋಧಿಸುವುದರಲ್ಲಿ ನಿರತರಾಗಿದ್ದಾರೆ. ನಿವೇಶನ ದೊರಕಿದ ಕೂಡಲೆ ಸರ್ಕಾರದ ಮುಂದೆ ದುಂಬಾಲು ಬೀಳಲಿದ್ದಾರೆ. ಆಧ್ಯಾತ್ಮದ ಹಸಿ ಸುಳ್ಳಿನ ಹಿಂದೆ ವ್ಯವಹಾರ ಯಾವಾಗಲೂ ಇದ್ದೇ ಇರುತ್ತದೆ.

ಈ ರಾಡಿಯ ನಡುವೆ ಸರ್ಕಾರದ ಕಣ್ಣಿಗೆ ಕಾಣಿ

(೧೬ನೇ ಪುಟಕ್ಕೆ)

ಆಪತ್ತಿನಲ್ಲಿ ದೇಶದ ಭವಿಷ್ಯ

ವಲಸೆ ಎಂಬುದು ಇಂದು ಜಾಗತಿಕ ಫಿನಾಮಿನ. ಕೂಲಿಕಾರರಿಂದ ಹಿಡಿದು ಐಟಿ ಎಂಜಿನಿಯರುಗಳವರೆಗೆ ಎಲ್ಲರೂ ಮನೆಯ, ಊರಿನ ದೇಶದ ಸುರಕ್ಷಿತ ತಾಣಗಳನ್ನು ಬಿಟ್ಟು ದೂರ ಹಾರುತ್ತಾರೆ. ಹೊರ ಪ್ರಪಂಚದ ಕಠಿಣ ಪರಿಸರಕ್ಕೆ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಾರೆ. ಸಾರಿಗೆ ಸಂಪರ್ಕವೂ ಹೆಚ್ಚಿರುವುದರಿಂದ ಎಲ್ಲಿಂದ ಬೇಕಾದರೂ ಎಲ್ಲಿಗೂ ಹೋಗಿ ದುಡಿದು, ಗಳಿಸಿ ಬರಬಹುದು. ಆಕಾಶ ವಿಶಾಲವಾಗಿದೆ, ಅವಕಾಶ ವಿಫಲವಾಗಿದೆ. ಬಿಜಾಪುರಿಂದ ಬೆಂಗಳೂರಿಗೆ, ಮುಂಬೈಗೆ, ಬೆಳಗಾವಿಯಿಂದ ಗೋವಾಕ್ಕೆ... ಹೀಗೆ.

ಹಳ್ಳಿಗರನ್ನು ಊರಿಂದ ಎಳೆಯುವ ಎರಡು ಅತಿ ಮುಖ್ಯ ಕಸುಬುಗಳೆಂದರೆ ಹಳ್ಳಿಯಲ್ಲಿ ಇಟ್ಟಿಗೆ ಭಟ್ಟಿ ಮತ್ತು ಪೇಟೆಯಲ್ಲಿ ಕಟ್ಟಡ ಕಾಮಗಾರಿ. ಈ ಎರಡೂ ಉದ್ಯೋಗಗಳು ಶಹರಗಳಲ್ಲಿ ಹೆಚ್ಚೆಚ್ಚು ಕಟ್ಟಡಗಳನ್ನೇಳಿಸುವ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟಿಗೇ ಸಂಬಂಧಪಟ್ಟಿದ್ದು ಕಾಕತಾಳೀಯವೇ? ಹಳ್ಳಿಗಳಲ್ಲಿ ಭತ್ತ ಕೊಯ್ಯುವ, ಕಬ್ಬು ಮುರಿಯುವ, ಹತ್ತಿ ಬಿಡಿಸುವ ಶ್ರಾಯವಿನ್ನೂ ನಡೆಯುತ್ತಿರುವಾಗಲೇ ಅತ್ತ ಇಟ್ಟಂಗಿ ಭಟ್ಟಿಗಳಿಂದ ಪಿಪಿ ಫೋನು ರಿಂಗುಣಿಸುತ್ತದೆ. ಹಿಂದೆ ಕೊಟ್ಟ ಸಾಲವನ್ನು ನೆನಪಿಸುತ್ತದೆ. ಬೇಗನೆ ಬರಲು ಕರೆ ಬರುತ್ತದೆ. ಸ್ವತಹ ತಮ್ಮ ಹಳ್ಳಿಯಲ್ಲೇ ಇನ್ನೂ ಉದ್ಯೋಗವಿರುವಾಗಲೇ ಕೂಲಿಕಾರ ಪೊಟ್ಟಣ ಕಟ್ಟಿಕೊಂಡು ಬಸ್ ಹತ್ತಿ ಹೋಗಿಯಾಗಿರುತ್ತದೆ.

ಇಟ್ಟಿಗೆ ಭಟ್ಟಿ ಸಾಹುಕಾರನು ಹಿಂದಿನ ವರ್ಷವೇ ಸಾಲದ ಕೊಕ್ಕೆ ಹಾಕಿ ಸಿಗಿಸಿರುತ್ತಾನೆ. ಈ ಕಾರಣಕ್ಕೆ ಅವರು ಫೋನು ಬರುತ್ತಲೇ ಊರಲ್ಲಿ ಕೆಲಸವಿದ್ದರೂ ಓಡುವುದು. ಮಳೆಗಾಲ ಮುಗಿಯಿತೆಂದರೆ ಕಟ್ಟಡ ಕಾಮಗಾರಿಯಲ್ಲಿ ಕೆಲಸ ಹುಡುಕಿಕೊಂಡು ಗಂಡಸರೆಲ್ಲ ಅಳ್ನಾವರ, ಖಾನಾಪುರ, ಲೋಂಡಾ ಗೋವಾ, ಬೆಳಗಾವಿ ಎಂದು ಹೊರಡುತ್ತಾರೆ. ಎಲ್ಲಿ ಕೆಲಸ ಸಿಗುತ್ತೋ ಅಲ್ಲಿಗೆ. ಹತ್ತಿರದ ಊರುಗಳಿಗೆ ಹೋಗಿದ್ದಾರೆ ಆಗಾಗ್ಗೆ ಮನೆ ಭೇಟಿ. ಇಲ್ಲವೆಂದರೆ ತಿಂಗಳಿಗೋ, ಎರಡು ತಿಂಗಳಿಗೋ ಒಮ್ಮೆ ಮಾತ್ರ. ಹೆಂಡತಿ ಮಕ್ಕಳೆಲ್ಲ ಇಲ್ಲಿ ಊರಲ್ಲಿ. ಗಂಡಸರು ಕೂಲಿ ಮಾಡುತ್ತ ದೂರದೂರುಗಳಲ್ಲಿ. ಒಡೆದ ಕುಟುಂಬ, ಛಿದ್ರ ಸಂಸಾರ. ವಲಸೆಯಿಂದ ಗಳಿಸಿದ್ದನ್ನು ಗಂಡ ತರುವವರೆಗೆ ಕೂಲಿ ನಾಲಿ ಮಾಡಿ ಹೆಂಗಸರು ಹೊಟ್ಟೆ ಹೊರೆದುಕೊಳ್ಳಬೇಕು. ಗಂಡ ಹಿಂದಿರುಗುವವರೆಗೆ ಹೆಂಡತಿಯೇ ಮನೆಯ ಸ್ಥಿತಿಗತಿಗಳನ್ನು ಸುಧಾರಿಸಬೇಕು.

ಅತ್ತ ಆ ಕೂಲಿಯದ್ದು ಗುತ್ತಿಗೆಯ ಲೆಕ್ಕ. ಮಣ್ಣು ಕಲೆಸುವುದು, ನೀರು ಹೊರುವುದು, ಇಟ್ಟಿಗೆ ಬಡಿಯುವುದು ಎಂದು ರಾತ್ರಿಯಿಡೀ ಲೈಟು ಹಾಕಿಕೊಂಡು ದುಡಿತ, ಬೆಳಗಿನ ಜಾವ ಮತ್ತೆ ದುಡಿತ. ಮೂಗಿಗೆ ಕವಡೆ ಕಟ್ಟಿಕೊಂಡು ದುಡಿತ. ನಾಲ್ಕಾರು ಬಾರಿ ಇಟ್ಟಿಗೆ ಭಟ್ಟಿಗೆ ಹೋಗಿದ್ದವ ಎದೆನೋವೆಂದು ಮಲಗುವುದು ಸಾಮಾನ್ಯ. ಹಗಲು ರಾತ್ರಿ ಒಂದು ಮಾಡಿ ದುಡಿದಾಗಲೇ ಕೈಗೊಂದಿಷ್ಟು ದುಡ್ಡು. ಬೆವರಿನ ಆ ದುಡ್ಡು ಕೈಗೆ ಬಂದಾಗ ದುಡಿತದ ನೋವೆಲ್ಲ ಮರೆಯುತ್ತದೆ.

ವಲಸೆ ಹೋದವರು ಹಿಂತಿರುಗಿ ಬರುವಾಗ ಅವರ ಕೈಯಲ್ಲಿ ಟೇಪ್ ರೆಕಾರ್ಡರ್, ಟಿವಿ. ಸಿಡಿಪ್ಲೇಯರ್, ಮೊಬೈಲ್ ಜೊತೆಗೆ ಹೆಂಡತಿಗೆ ಝಗಮಗಿಸುವ ಸೀರೆ, ಗಿಲೀಟು ಬಂಗಾರ, ಬಳೆಗಳು. ಇನ್ನೂ ಹೆಚ್ಚು ಹಣ ಸಂಗ್ರಹವಾಗಿತ್ತೆಂದರೆ ಆ ವರ್ಷ ಮನೆ ನೆಲಕ್ಕೆ ಪಾಟಿ ಕಲ್ಲು, ಸೂರಿಗೆ ಕೆಂಪು ಹೆಂಚುಗಳೂ ಆಗುತ್ತವೆ. ಮೊಬೈಲು ಹಿಡಿದು ಗಂಡ ವಲಸೆಯಿಂದ ಹಿಂತಿರುಗಿದನೆಂದರೆ ಹೆಂಡತಿಗೆ ತಾನು ಒಂಟಿಯಾಗಿ ಸಂಸಾರ ಸಾಗಿಸಲು ಪರದಾಡಿದ್ದು ಮರೆತು ಹೋಗುತ್ತದೆ.

ಬೆವರಿನ ಗಳಿಕೆ ಚೈನಿ ಸಾಮಗ್ರಿಗಳಿಗೇಕೆ ಹೋಗುತ್ತದೆ? ಅದಕ್ಕೆ ಕಾರಣ ಈಗಿನ ಜಾಹೀರಾತುಗಳು. ಮಾಧ್ಯಮವನ್ನು ಆಳುತ್ತಿರುವ

ಹಳ್ಳಿಗರನ್ನು ಊರಿಂದ ಎಳೆಯುವ ಎರಡು ಅತಿ ಮುಖ್ಯ ಕಸುಬುಗಳೆಂದರೆ ಹಳ್ಳಿಯಲ್ಲಿ ಇಟ್ಟಿಗೆ ಭಟ್ಟಿ ಮತ್ತು ಪೇಟೆಯಲ್ಲಿ ಕಟ್ಟಡ ಕಾಮಗಾರಿ. ಈ ಎರಡೂ ಉದ್ಯೋಗಗಳು ಶಹರಗಳಲ್ಲಿ ಹೆಚ್ಚೆಚ್ಚು ಕಟ್ಟಡಗಳನ್ನೇಳಿಸುವ ರಿಯಲ್ ಎಸ್ಟೇಟ್ ಡೆವಲಪ್ ಮೆಂಟಿಗೇ ಸಂಬಂಧಪಟ್ಟಿದ್ದು ಕಾತಾಳೀಯವೇ? ಹಳ್ಳಿಗಳಲ್ಲಿ ಭತ್ತ ಕೊಯ್ಯುವ, ಕಬ್ಬು ಮುರಿಯುವ, ಹತ್ತಿ ಬಿಡಿಸುವ ಶ್ರಾಯವಿನ್ನೂ ನಡೆಯುತ್ತಿರುವಾಗಲೇ ಅತ್ತ ಇಟ್ಟಂಗಿ ಭಟ್ಟಿಗಳಿಂದ ಪಿಪಿ ಫೋನು ರಿಂಗುಣಿಸುತ್ತದೆ. ಹಿಂದೆ ಕೊಟ್ಟ ಸಾಲವನ್ನು ನೆನಪಿಸುತ್ತದೆ. ಬೇಗನೆ ಬರಲು ಕರೆ ಬರುತ್ತದೆ. ಸ್ವತಹ ತಮ್ಮ ಹಳ್ಳಿಯಲ್ಲೇ ಇನ್ನೂ ಉದ್ಯೋಗವಿರುವಾಗಲೇ ಕೂಲಿಕಾರ ಪೊಟ್ಟಣ ಕಟ್ಟಿಕೊಂಡು ಬಸ್ ಹತ್ತಿ ಹೋಗಿಯಾಗಿ ರುತ್ತದೆ.

ಶಾರದಾ ಗೋಪಾಲ

ಜಾಹೀರಾತುಗಳು ಕೂಲಿಕಾರನ ಆದ್ಯತೆಗಳನ್ನು ರೂಪಿಸುತ್ತವೆ. ಸಾಹುಕಾರನ ಮನೆಯ ಟಿವಿಯಲ್ಲಿ ವೈವಿಧ್ಯಮಯ ಜಾಹೀರಾತುಗಳನ್ನು ನೋಡಿ ಮರುಳಾಗುವ ಕೂಲಿಕಾರ ಕೈಗೆ ಹಣ ಸಿಕ್ಕ ಕೂಡಲೆ ಮೊದಲು ಟಿವಿಯನ್ನು, ಅದರ ಹಿಂದೆ ಟಿವಿಯಲ್ಲಿ ನೋಡಿದ ವಿವಿಧ ವಸ್ತುಗಳನ್ನು ಕೊಳ್ಳಲು ಧಾವಿಸುತ್ತಾನೆ. ಹೊಟ್ಟೆ ತುಂಬ ಅನ್ನ, ಬೆಳೆಯುವ ಮಕ್ಕಳಿಗೆ ಪ್ರೊಟೀನ್ ಯುಕ್ತ ಬೇಳೆ, ರಕ್ತಹೀನತೆ ತಡೆಯಲು ಸೊಪ್ಪು, ತರಕಾರಿಗಳನ್ನು ತಿನ್ನಿರೆಂದು ಯಾವ ಜಾಹೀರಾತೂ ಹೇಳುವುದಿಲ್ಲ. ಬದಲಿಗೆ ಆಲೂ ಚಿಪ್ಸ್, ಕಾರ್ಬನ್ ಯುಕ್ತ ತಂಪು ಪಾನೀಯಗಳು, ಚರ್ಮವನ್ನು ಬೆಳ್ಳಗೆ ಮಾಡುವ ಕ್ರೀಮುಗಳು ಇವೇ ಜೀವನದ ಗುರಿಗಳಾಗಬೇಕೆಂದು ಬೋಧಿಸುತ್ತವೆ. ಶುದ್ಧ ನೀರು, ವಸತಿ, ಒಳ್ಳೆಯ ಆಹಾರ ಜೀವನಾವಶ್ಯಕವೆಂದು ಜಾಹೀರಾತುಗಳು ಹೇಳುವುದಿಲ್ಲ. ಮೊಬೈಲ್ ಇಟ್ಟುಕೊಂಡರೆ ಮಾತ್ರ ಜೀವನ ಸಾರ್ಥಕವೆಂದು ಸಾರುತ್ತವೆ. ಸೀದಾ ಸುಪ್ತ ಮನಸ್ಸಿಗೆ ತಟ್ಟುವ ಸಂದೇಶಗಳು ಬರುತ್ತಿರುತ್ತವೆ, ಆದರೆ ತಪ್ಪು ಸಂದೇಶಗಳು, ಭ್ರಮಾಲೋಕ ಸೃಷ್ಟಿಸಿ ತೋರಿಸುವ ಸಂದೇಶಗಳು. ಉಪಭೋಗತ್ವವನ್ನು ಮೈಗೂಡಿಸುವ ಸಂದೇಶಗಳು. ಆ ಸಂದೇಶಗಳೇ ವ್ಯಕ್ತಿಯ ಅವಶ್ಯಕತೆಗಳನ್ನು, ಜೀವನದ ಆದ್ಯತೆಗಳನ್ನು ರೂಪಿಸುತ್ತ ಹೋಗುತ್ತವೆ. ಅದಕ್ಕೆ ತಕ್ಕಂತೆ ಸಾಮಾನುಗಳು ಮನೆದುಂಬುತ್ತ ಹೋಗುತ್ತವೆ.

ಬಿಪಿಎಲ್ ಕಾರ್ಡ್ ಕೊಡಲು ಸರಕಾರವು ಹಾಕಿರುವ ನಿಯಮಗಳೇನೇನಿವೆ ನೋಡಿ. ಕೆಂಪು ಹಂಚಿನ ಮನೆ ಇರಬಾರದು, ಮನೆಯಲ್ಲಿ ನೆಲಕ್ಕೆ ಪಾಟಿ ಕಲ್ಲು ಹಾಕಿರಬಾರದು. ಗ್ಯಾಸ್ ಇರಬಾರದು, ಟಿವಿ, ಸೈಕಲ್, ಟೇಪ್, ಫ್ಯಾನ್, ಸೈಕಲ್, ದ್ವಿಚಕ್ರವಾಹನ, ಟೆಲಿಫೋನ್‌ಗಳಿರಬಾರದು... ಹೀಗೆ. ವಲಸೆ ಹೋಗುವ ವ್ಯಕ್ತಿ ಹಿಂತಿರುಗುವಾಗ ತರುವ ಸಾಮಾನುಗಳಾವವೂ ಇರಬಾರದು. ಬಡತನ ರೇಖೆಗಿಂತ ಕೆಳಗಿರುವ ಕಾರಣಕ್ಕಾಗಿಯೇ ಮನೆಯಿಂದ ದೂರ ಹೋಗಿ ನಾಲ್ಕು ತಿಂಗಳೂ ನಿದ್ದೆಗೆಟ್ಟು, ಹೊಟ್ಟೆ ಬತ್ತಿಸಿ ಬಿ.ಪಿ.ಎಲ್‌ಗೆ ನಿಷಿದ್ಧವಾದ ಎಲ್ಲಾ ವಸ್ತುಗಳನ್ನೂ ಅವರು ಹೊತ್ತು ತರುತ್ತಾರೆ. ಬಿ.ಪಿ.ಎಲ್. ಅಂತ್ಯೋದಯ ಕಾರ್ಡ್‌ಗಳಿಂದ ಹೊರತಾಗುತ್ತಾರೆ.

ವಲಸೆಯು ಒಂದು ಕುಟುಂಬದ ಆರೋಗ್ಯದ ಮೇಲೆ, ಚಿಕ್ಕ ಮಕ್ಕಳ ಹಕ್ಕುಗಳ ಮೇಲೆ ಎಂಥ ಪೆಟ್ಟು ಕೊಡುತ್ತಿದೆ ಎನ್ನುವುದರ ಮೇಲೆ ಅಧ್ಯಯನಗಳಾಗಿವೆ. ವಲಸೆಯು ಒಂದು ಕುಟುಂಬವನ್ನು ಹೇಗೆ ಛಿದ್ರ ಛಿದ್ರ ಮಾಡುತ್ತದೆ ಎಂಬುದನ್ನು ಆಕ್ಷನ್ ಏಡ್ ಮಾಡಿರುವ ಒಂದು ಅಧ್ಯಯನವು ತೋರಿಸಿಕೊಟ್ಟಿದ್ದರೆ, ಅಮೆರಿಕನ್ ಇಂಡಿಯಾ ಫೌಂಡೇಶನ್ ಮಾಡಿರುವ ಇನ್ನೊಂದು ಅಧ್ಯಯನವು ಸರಕಾರದ ಯಾವುದೇ ಸೌಲಭ್ಯಗಳಿಂದ ವಲಸಿಗರು ಹೇಗೆ ವಂಚಿತರಾಗುತ್ತಾರೆಂಬುದನ್ನು ತೋರಿಸಿಕೊಟ್ಟಿದೆ. ಒಂದು ಮಗುವಿಗೆ ಕೌಟುಂಬಿಕ ಸುರಕ್ಷೆ, ಪೌಷ್ಟಿಕ ಆಹಾರ, ಶಿಕ್ಷಣ ಇವೆಲ್ಲವನ್ನೂ ವಲಸೆಯು ಕಸಿಯುತ್ತದೆ. ತಂದೆ ವಲಸೆ ಹೋದರೆ ತಾಯಿಯ ಅತ್ಯಲ್ಪ ಆದಾಯದಲ್ಲಿ ಅರೆಹೊಟ್ಟೆ ಊಟ, ಎಲ್ಲರೂ ವಲಸೆ ಹೋದರೆ ಟೆಂಟ್ ವಾಸ. ಲೆಕ್ಕಕ್ಕೆ ಸಿಗದ ಚಿಕ್ಕ ಪುಟ್ಟ ಕೆಲಸಗಳಿಗೆ ಮಕ್ಕಳೇ ಜವಾಬ್ದಾರರಾಗಬೇಕು. ಶಿಕ್ಷಣವೆಂಬುದು ಕನಸಾಗುತ್ತದೆ. ವಲಸೆ ಹೋದ ಮಕ್ಕಳಿಗೆ ಸನಿಹದ ಶಾಲೆಯಲ್ಲಿ ಅವಕಾಶ ಕಲ್ಪಿಸಬೇಕೆಂದು ಸರಕಾರದ ನಿಯಮವಿದ್ದರೂ ಅದು ಪಾಲನೆಯಾಗದ ಸಂದರ್ಭಗಳೇ ಹೆಚ್ಚು.

ಮಗು ಹುಟ್ಟಿದ ೨೧ ದಿನದೊಳಗಾಗಿ ಜನನ ನೋಂದಣಿ ಮಾಡಿಸಿ ಜನನ ಪ್ರಮಾಣ ಪತ್ರ ಪಡೆಯ ಬೇಕು. ಅದು ಪೌಷ್ಟಿಕವಾಗಿ ಬೆಳೆಯಲೆಂದು ಅದಕ್ಕೆ ಪೌಷ್ಟಿಕ ಆಹಾರ ಪೂರೈಕೆ. ಅಂಗನವಾಡಿಯಲ್ಲಿ ಹಾಡು ಆಟಗಳ ಮೂಲಕ ಶಿಕ್ಷಣಕ್ಕೆ ಪಾದಾರ್ಪಣೆ ಮಾಡುವ ಮಗು ಆರು ವರ್ಷಕ್ಕೆ ಶಾಲೆಗೆ ಹೋಗಬೇಕು. ಅಲ್ಲಿ ಹಸಿವಿನ ಕಾರಣದಿಂದ ಶಾಲೆ ಬಿಡಬಾರದೆಂದು ಮಧ್ಯಾಹ್ನದ ಬಿಸಿಯೂಟ. ವಲಸೆಯೆಂಬುದು ಈ ಮೂರೂ ಕಾರ್ಯಕ್ರಮಗಳಿಂದ ಮಕ್ಕಳನ್ನು ವಂಚಿತರನ್ನಾಗಿ ಮಾಡುತ್ತದೆ. ಸಂವಿಧಾನವು ನೀಡಿದ ಹಕ್ಕುಗಳಿಂದ, ಸರಕಾರ ನೀಡುವ ಯಾವುದೇ ಸೌಲಭ್ಯಗಳಿಂದ ಸ್ವಂತ ಊರು ನೀಡುವ ರಕ್ಷಣೆಯಿಂದ ಆ ಮಕ್ಕಳು ವಂಚಿತರಾಗುವಂತೆ ವ್ಯವಸ್ಥೆ ನೋಡಿಕೊಳ್ಳುತ್ತದೆ.

ವಲಸೆ ಹೋದವರ ಮಕ್ಕಳಿಗೂ ಶಾಲಾವಕಾಶ ಕಲ್ಪಿಸುವುದಕ್ಕಿಂತ ವಲಸೆ ಹೋಗುವುದನ್ನೇ ತಡೆಯಬೇಕಾದದ್ದು ಸರಕಾರದ ಆದ್ಯ ಕರ್ತವ್ಯ. ಆದರೆ ಆಗುತ್ತಿರುವುದೇನು? ಮಾರುಕಟ್ಟೆಯ ಬಿರುಗಾಳಿಯು ಸರಕಾರದ ಕೆಲವು ಪ್ರಯತ್ನಗಳನ್ನೂ ಧೂಳೀಪಟ ಮಾಡುತ್ತಿದೆ. ಸರಕಾರ ನಿಯಮಗಳನ್ನು ಮಾಡುತ್ತದೆ, ಮಾರುಕಟ್ಟೆಯ ಬೇಡಿಕೆ ಆ ನಿಯಮಗಳನ್ನು ಗಾಳಿಯಲ್ಲಿ ತೂರುತ್ತದೆ. ಅದು ಜನರನ್ನು ವಲಸೆ ಹೋಗುವಂತೆಯೂ ಮಾಡುತ್ತದೆ, ಜನರ ಜೀವನದ ಆದ್ಯತೆಗಳನ್ನು ಬೇರೆ ಮಾಡುತ್ತದೆ.

ಜಾಗತಿಕ ಆರ್ಥಿಕ ನಕಾಶೆಯಲ್ಲಿ ಭಾರತವು ಪ್ರಧಾನ ಸ್ಥಾನ ಪಡೆಯುತ್ತಿರುವ ಈ ದಿನಗಳಲ್ಲಿ ಭಾರತದ ಮಕ್ಕಳ ಆರೋಗ್ಯದ ಸೂಚ್ಯಂಕ ಮಾತ್ರ ದಿನದಿಂದ ದಿನಕ್ಕೆ ಕೆಳಗಿಳಿಯುತ್ತಿರುವುದು ಕಳವಳಕಾರಿ ವಿಷಯ. ರಾಷ್ಟ್ರೀಯ

ಕುಟುಂಬ ಸರ್ವೆ-೩ರ ಪ್ರಕಾರ ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆಯಿಂದ ತೀವ್ರ ಬಳಲುತ್ತಿರುವ ಮಕ್ಕಳ ಸಂಖ್ಯೆ ಒಂದಕ್ಕೆರಡಾಗಿದೆ. ಕಡಿಮೆ ತೂಕದ ಮಕ್ಕಳ ಸಂಖ್ಯೆ ೯% ರಿಂದ ೧೩% ಗೇರಿದೆ. ಮಕ್ಕಳಲ್ಲಿ ರಕ್ತಹೀನತೆ ೭೨-೭೯% ನಷ್ಟು, ಗುಜರಾತ್, ಪಶ್ಚಿಮ ಬಂಗಾಳ, ಪಂಜಾಬು... ಹೀಗೆ ಯಾವ ರಾಜ್ಯ ತೆಗೆದುಕೊಂಡರೂ ಮಕ್ಕಳ ಆರೋಗ್ಯದ ವಿಷಯ ಕಳವಳಕಾರಿಯೇ.

ಎಷ್ಟೊಂದು ಯೋಜನೆಗಳು ಮಕ್ಕಳ ಸಲುವಾಗಿ. ಮಕ್ಕಳು ಅಪೌಷ್ಟಿಕತೆಯಿಂದ ಬಳಲಬಾರದು ಎಂದು ಎಷ್ಟೆಲ್ಲ ಪ್ರಯತ್ನ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಹದಿಹರಯದ ಹೆಣ್ಣು ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆಲ್ಲ ಪೌಷ್ಟಿಕ ಆಹಾರ ಒದಗಿಸುವುದು, ೪,೭೬೧ ಕೋಟಿ ರೂಪಾಯಿಗಳನ್ನು ಸುರಿದು ಹಳ್ಳಿಹಳ್ಳಿಗಳಲ್ಲಿ ಅಂಗನವಾಡಿಗಳನ್ನು ತೆರೆದು ಮಕ್ಕಳಿಗಾಗಿ ಆಹಾರ ಸರಬರಾಜು. ಮಧ್ಯಾಹ್ನದ ಊಟ. ಪಡಿತರ ಹಂಚಿಕೆಗೆ ಇನ್ನೂ ಕೋಟ್ಯಂತರ ರೂಪಾಯಿಗಳು. ಇಷ್ಟಾಗಿಯೂ ದೇಶದ ಮಕ್ಕಳು ಅಪೌಷ್ಟಿಕತೆಯಿಂದ ಬಳಲುವುದು ಜಾಸ್ತಿ ಆಗುತ್ತಿದೆಯೆಂದರೆ?

ಮಗು ಹುಟ್ಟಿದ ೨೧ ದಿನದೊಳಗಾಗಿ ಜನನ ನೋಂದಣಿ ಮಾಡಿಸಿ ಜನನ ಪ್ರಮಾಣ ಪತ್ರ ಪಡೆಯ ಬೇಕು. ಅದು ಪೌಷ್ಟಿಕವಾಗಿ ಬೆಳೆಯಲೆಂದು ಅದಕ್ಕೆ ಪೌಷ್ಟಿಕ ಆಹಾರ ಪೂರೈಕೆ. ಅಂಗನವಾಡಿಯಲ್ಲಿ ಹಾಡು ಆಟಗಳ ಮೂಲಕ ಶಿಕ್ಷಣಕ್ಕೆ ಪಾದಾರ್ಪಣೆ ಮಾಡುವ ಮಗು ಆರು ವರ್ಷಕ್ಕೆ ಶಾಲೆಗೆ ಹೋಗಬೇಕು. ಅಲ್ಲಿ ಹಸಿವಿನ ಕಾರಣದಿಂದ ಶಾಲೆ ಬಿಡಬಾರದೆಂದು ಮಧ್ಯಾಹ್ನದ ಬಿಸಿಯೂಟ. ವಲಸೆಯೆಂಬುದು ಈ ಮೂರೂ ಕಾರ್ಯಕ್ರಮಗಳಿಂದ ಮಕ್ಕಳನ್ನು ವಂಚಿತರನ್ನಾಗಿ ಮಾಡುತ್ತದೆ. ಸಂವಿಧಾನವು ನೀಡಿದ ಹಕ್ಕುಗಳಿಂದ, ಸರಕಾರ ನೀಡುವ ಯಾವುದೇ ಸೌಲಭ್ಯಗಳಿಂದ ಸ್ವಂತ ಊರು ನೀಡುವ ರಕ್ಷಣೆಯಿಂದ ಆ ಮಕ್ಕಳು ವಂಚಿತರಾಗುವಂತೆ ವ್ಯವಸ್ಥೆ ನೋಡಿಕೊಳ್ಳುತ್ತದೆ.

ಬೆಳೆಯುವ ಪೈರಿಗೆ ಮೊಳಕೆಯಲ್ಲಿ ಉತ್ತಮ ಪೋಷಕಾಂಶ ಸಿಗಲಿಲ್ಲವೆಂದರೆ ಅದು ಎಂಥ ಮರವಾಗಿ ಬೆಳೆದೀತು? ಒಳ್ಳೆಯ ಆಹಾರವಿಲ್ಲದೇ ಹುಟ್ಟಿದೂರಿನ ವಾತಾವರಣದ ರಕ್ಷಣೆಯೂ ಇಲ್ಲದೆ ಬೆಳೆಯುವ ಮಗು ಅದೆಷ್ಟು ಗಟ್ಟಿಮುಟ್ಟಾಗಿ ಬೆಳೆದೀತು? ಅದೆಂಥ ನಾಗರಿಕನಾದೀತು? ಆ ಮಗುವಿನಲ್ಲಿ ತುಂಬಿಕೊಳ್ಳುವ ಮೌಲ್ಯಗಳೇನು? ಈ ಬಗ್ಗೆ ಇಡೀ ಸಮಾಜವೇ ಗಂಭೀರವಾಗಿ ಯೋಚಿಸಬೇಕಿದೆ. ಮಗುವನ್ನು ಉತ್ತಮ ನಾಗರಿಕನನ್ನಾಗಿ ಮಾಡುವ ಜವಾಬ್ದಾರಿ ಕೇವಲ ತಾಯ್ತಂದೆ, ಅಂಗನವಾಡಿ ಮತ್ತು ಶಾಲೆಗಳದ್ದು ಮಾತ್ರವೆಂದು ನಾವು ತಿಳಿದಿದ್ದರೆ ನಮ್ಮ ವಿಚಾರದಲ್ಲೇ ಗಂಭೀರ ದೋಷವಿದೆ. ಹಾಗೆ ಯೋಚಿಸಿ ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದೇವೆ. ಇಡೀ ಸಮಾಜ, ಇಡೀ ವಾತಾವರಣವೇ ನಮ್ಮ ಮುಂದಿನ ನಾಗರಿಕರನ್ನು ರೂಪಿಸುತ್ತಿರುತ್ತದೆ. ನಾಳಿನ ಸಮಾಜದ ಕೆಲಭಾಗ ಅಕ್ಷರ ಜ್ಞಾನವಿಲ್ಲದೆ, ಗುಟ್ಕಾ, ಶೆರೆ, ಮಾದಕ ವಸ್ತುಗಳ ದಾಸರಾಗಿ, ನಿರ್ವೀರ್ಯರಾದರೆಂದರೆ ಅದಕ್ಕೆ ಇಂದಿನ ಸಮಾಜವೇ ಹೊಣೆ. ಆರೋಗ್ಯಕರ ಸಮಾಜದ ನಿರ್ಮಾಣ ಮಾಡಬೇಕೆಂದು ಪ್ರತಿಪಾದಿಸುವವರೆಲ್ಲರೂ ಇಂದಿನ ಸಮಾಜದ ಸ್ವಾಸ್ಥ್ಯದ ಬಗ್ಗೆ ತಲೆಕೆಡಿಸಿಕೊಳ್ಳಲೇಬೇಕು. ವಲಸೆ ಹೋಗುವವರ ಮಕ್ಕಳ ಹಕ್ಕುಗಳ ಕಡೆಗೆ ಗಮನ ಕೊಡಲೇಬೇಕು. □

ಖಾಸಗಿ ವಲಯ ಮತ್ತು ಸಾಮಾಜಿಕ (ಅ)ನ್ಯಾಯ

ಡಾ|| ಕಾ.ವೆಂ. ಶ್ರೀನಿವಾಸ ಮೂರ್ತಿ

ಮನುವಾದಿ ಭಾರತವು ಸಾಮಾಜಿಕ ನ್ಯಾಯಕ್ಕೆ ಎಂದೂ ವಿರೋಧವೇ. ಆದ್ದರಿಂದಲೇ ಕ್ರಿಸ್ತಪೂರ್ವದಿಂದ ಕ್ರಿಸ್ತಶಕ ಹತ್ತೊಂಭತ್ತನೇ ಶತಮಾನದ ಕೊನೆಯವರೆಗೂ ಅದನ್ನು ನಿರಾಕರಿಸುತ್ತಲೇ ಬರಲಾಯಿತು. ಅದೃಷ್ಟವಶಾತ್, ಕಳೆದ ಶತಮಾನದ ರಾಜಕೀಯ ಧುರೀಣರು, ಚಿಂತಕ-ಹೋರಾಟಗಾರರೂ ಆದ ಸಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ಪೆರಿಯಾರ್, ಅಂಬೇಡ್ಕರ್, ದೇವರಾಜ ಅರಸು, ವಿ.ಪಿ. ಸಿಂಗ್ ಮೊದಲಾದವರ ಪರಿಶ್ರಮದ ಫಲವಾಗಿ ಸಾರ್ವಜನಿಕ ರಂಗದಲ್ಲಿ ಸಾಮಾಜಿಕ ನ್ಯಾಯವು ಅನುಷ್ಠಾನಕ್ಕೆ ಬಂದಿತ್ತು. ಇದು ಮನುವಾದೀ ಭಾರತಕ್ಕೆ ಸಹಿಸಲಸಾಧ್ಯವಾಗಿ, ಅದನ್ನು ಮೂಲೋತ್ಪಾಟನೆ ಮಾಡುವ ಯೋಚನೆ ಮಾಡಿ ಹುನ್ನಾರವನ್ನು ಹೂಡಿತು.

ದೇಶವು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ ಅನಂತರದಲ್ಲಿ ಸಾಮಾಜಿಕ ನ್ಯಾಯದ ಮಾತು ಮತ್ತು ಅದನ್ನು ಕುರಿತ ಒತ್ತಾಯ-ಹೋರಾಟಗಳಲು ಹೆಚ್ಚು ಹೆಚ್ಚು ಕಾಣುತ್ತಿವೆ. ಇದರರ್ಥ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಅಥವಾ ಬ್ರಿಟನ್‌ನಿಂದ ಸ್ವತಂತ್ರಗೊಂಡ ಭಾರತವು ತನ್ನ ಪ್ರಜಾಪ್ರಭುತ್ವದ ಆಶಯಕ್ಕನುಸಾರವಾಗಿ ರಾಷ್ಟ್ರೀಕರಣದ ಹಾದಿಯಲ್ಲಿ ಸಾಗುತ್ತಾ ಬಂದದ್ದು, ಅನಂತರದಲ್ಲಿ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ರಾಷ್ಟ್ರೀಕರಣಕ್ಕೆ ವಿರುದ್ಧ ದಿಕ್ಕಿನಲ್ಲಿರುವ ಖಾಸಗೀಕಣರದತ್ತ ಸಾಗುತ್ತಿರುವುದೇ ಆಗಿದೆ. ಹೀಗೆ ಖಾಸಗೀಕರಣಗೊಳ್ಳುತ್ತಿರುವ ಭಾರತದಲ್ಲಿ ಬಂಡವಾಳಶಾಹಿಗಳ ಸಾರ್ವಭೌಮತ್ವವಿರುವುದರಿಂದ ಅಲ್ಲಿ ಸಂವಿಧಾನಾತ್ಮಕ ಸರ್ಕಾರದ ಸಾರ್ವಭೌಮತ್ವವು ತಮಾಷೆಯ ವಸ್ತುವಾಗಿ ಪರಿಣಮಿಸಿಬಿಟ್ಟಿದೆ. ಇದರ ಪರಿಣಾಮವಾಗಿ ಖಾಸಗೀಕರಣದ ಭಾರತದಲ್ಲಿ ಸಾಮಾಜಿಕ ನ್ಯಾಯಕ್ಕೆ ಸ್ಥಾನವಿಲ್ಲವಾಗಿದೆ. ಈ ಮಾತಿಗೆ ಸಮರ್ಥನೆ ಎನ್ನುವ ಹಾಗೆ ಟಾಟಾ, ಬಿರ್ಲಾ ಆದಿಯಾಗಿ ಇಂದಿನ ರಿಲೆಯನ್ಸ್, ಇನ್ಫೋಸಿಸ್, ವಿಪ್ರೋ ಮೊದಲಾದ ನೂರಾರು ದೊಡ್ಡ ಸಂಸ್ಥೆಗಳು ನಮ್ಮ ಕಣ್ಣೆದುರಿಗಿವೆ. ನಮ್ಮ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಶೇ. ೬೦ಕ್ಕೂ ಮಿಗಿಲು ಈ ಸಂಸ್ಥೆಗಳದ್ದೇ ಪಾತ್ರವಿದೆ. ಅವುಗಳಲ್ಲಿ ರಿಲೆಯನ್ಸ್ ಸಂಸ್ಥೆಯದೊಂದೇ ಶೇ. ೩.೫ರ ಪಾಲಿದೆ.

ಹೀಗೆ ಕಳೆದ ಹದಿನಾಲ್ಕು ವರ್ಷಗಳಲ್ಲಿ ಖಾಸಗೀಕರಣದ ಪರಿಣಾಮವಾಗಿ ಮಾರುತಿ ಸುಜುಕಿ ಮೊದಲಾದ ಸಂಸ್ಥೆಗಳನ್ನು ಸರ್ಕಾರವು ಖಾಸಗಿಯವರಿಗೆ ಮಾರಾಟ ಮಾಡಿರುವುದಲ್ಲದೇ ನಷ್ಟದಲ್ಲಿವೆ ಎಂಬ ನೆಪವೊಡ್ಡಿ ಕೆಇಬಿ, ಟೆಲಿಕಾಂ ಮೊದಲಾದ ಹತ್ತಾರು ಸಂಸ್ಥೆಗಳ ಷೇರುಗಳನ್ನು ಸಹ ಬಹುಪ್ರಮಾಣದಲ್ಲಿ ಮಾರಾಟ ಮಾಡಿದೆ. ಹೀಗೆ ಸಾರ್ವಜನಿಕ ಆಸ್ತಿಯನ್ನು ಜನರಿಂದ ಆರಿಸಲ್ಪಟ್ಟ ಸರ್ಕಾರವು ಉಳಿಸಿ ಬೆಳೆಸಬೇಕಿತ್ತಲ್ಲದೇ ಬೇಜವಾಬ್ದಾರಿಯಿಂದ ಹೀಗೆ ಖಾಸಗಿಯವರಿಗೆ ಮಾರಾಟ ಮಾಡಬಹುದಿತ್ತೆ? ಹೀಗೆ ಮಾರಾಟ ಮಾಡುತ್ತಾ ಹೋದರೆ ಸರ್ಕಾರಕ್ಕೇನು ಕೆಲಸ? ಎಲ್ಲಾ ರಂಗಗಳನ್ನು ಆವರಿಸಿಬಿಡುವ ಖಾಸಗಿ ಉದ್ಯಮಗಳನ್ನು ಮೇನೇಜ್ ಮಾಡುವ ವ್ಯವಸ್ಥಾಪಕರ ಕೆಲಸವೇ? ಅಥವಾ ಜನರ ಆಶೋತ್ತರಗಳಿಗೆ ಅನುಗುಣವಾಗಿ ದೇಶದ ಸ್ವಾವಲಂಬನೆ, ಸಮಾಜವಾದೀ ವ್ಯವಸ್ಥೆಯ ಸ್ಥಾಪನೆ ಇತ್ಯಾದಿಗಳನ್ನು ಅನುಷ್ಠಾನಗೊಳಿಸುವ ಕಾಯಕವೇ?



ಇವೆಲ್ಲವನ್ನೂ ಇತ್ತೀಚಿನ ವರ್ಷಗಳಲ್ಲಿ ನಾವು ಹೆಚ್ಚು ಹೆಚ್ಚು ಕೇಳುತ್ತಿದ್ದೇವೆ. ಆದರೆ ಸರ್ಕಾರಗಳು ಮಾತ್ರ ಇವುಗಳಿಗೆ ಕಿವುಡಾಗುತ್ತಾ ವರ್ಷವರ್ಷವೂ ಖಾಸಗಿ ವಲಯವನ್ನು ವಿಸ್ತಾರಗೊಳಿಸುತ್ತಿವೆಯೇ ವಿನಃ ರಾಷ್ಟ್ರೀಕರಣದ ಹೆಜ್ಜೆಗಳನ್ನು ಮುಂದುವರೆಸುತ್ತಿಲ್ಲ. ಇದರ ಪರಿಣಾಮವಾಗಿ ಜಾತಿಗಳ ಹೆಸರಿನಲ್ಲಿ ಸಾವಿರಾರು ಹೋಳುಗಳಾಗಿ ಒಡೆದು ಹೋಗಿದ್ದ ಭಾರತವು ಐದು ಸಾವಿರ ವರ್ಷಗಳ ಅವಧಿಯಲ್ಲಿ ಪಡೆಯಲು ಸಾಧ್ಯವಾಗದಿದ್ದ ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಎಂಬ ಕಲ್ಪನೆಯನ್ನು ಕಳೆದ ಶತಮಾನದಲ್ಲಿ ಪಡೆದು, ಅದೇ ಶತಮಾನದ ಕಡೆಯ ಹೊತ್ತಿಗೆ ಅದನ್ನು ಕಳೆದುಕೊಳ್ಳುತ್ತಿರುವ ಪ್ರಕ್ರಿಯೆಗೆ ಇಳಿದಿರುವುದು ಗೋಚರವಾಗುತ್ತಿದೆ.

ಮನುವಾದಿ ಭಾರತವು ಸಾಮಾಜಿಕ ನ್ಯಾಯಕ್ಕೆ ಎಂದೂ ವಿರೋಧವೇ. ಆದ್ದರಿಂದಲೇ ಕ್ರಿಸ್ತಪೂರ್ವದಿಂದ ಕ್ರಿಸ್ತಶಕ ಹತ್ತೊಂಭತ್ತನೇ ಶತಮಾನದ ಕೊನೆಯವರೆಗೂ ಅದನ್ನು ನಿರಾಕರಿಸುತ್ತಲೇ ಬರಲಾದದ್ದು. ಅದೃಷ್ಟವಶಾತ್, ಕಳೆದ ಶತಮಾನದ ರಾಜಕೀಯ ಧುರೀಣರು, ಚಿಂತಕ-ಹೋರಾಟಗಾರರೂ ಆದ ಸಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ಪೆರಿಯಾರ್, ಅಂಬೇಡ್ಕರ್, ದೇವರಾಜ ಅರಸು, ವಿ.ಪಿ. ಸಿಂಗ್ ಮೊದಲಾದವರ ಪರಿಶ್ರಮದ ಫಲವಾಗಿ ಸಾರ್ವಜನಿಕ ರಂಗದಲ್ಲಿ ಸಾಮಾಜಿಕ ನ್ಯಾಯವು ಅನುಷ್ಠಾನಕ್ಕೆ ಬಂದಿತ್ತು. ಇದು ಮನುವಾದೀ ಭಾರತಕ್ಕೆ ಸಹಿಸಲಸಾಧ್ಯವಾಗಿ, ಅದನ್ನು ಮೂಲೋತ್ಪಾಟನೆ ಮಾಡುವ ಯೋಚನೆ ಮಾಡಿ ಹುನ್ನಾರವನ್ನು ಹೂಡಿತು. ಹುನ್ನಾರವು ಯಾಕೆಂದರೆ, ಸಂವಿಧಾನಾತ್ಮಕ ಭಾರತದಲ್ಲಿ ಸಾಮಾಜಿಕ ನ್ಯಾಯವನ್ನು ನೇರವಾಗಿ ಪ್ರಶ್ನಿಸಲಾಗಲೀ ಅಪ್ರಸ್ತುತಗೊಳಿಸಲಾಗಲೀ ಸಾಧ್ಯವಿಲ್ಲ. ಅದರ ಬದಲಾಗಿ ಬೆನ್ನಿನ ದಿಕ್ಕಿನಿಂದ ಅದಕ್ಕೆ ಚೂರಿ ಹಾಕುವ ಕ್ರಮದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಒಪ್ಪಿದ್ದ ಭಾರತದಲ್ಲಿ ಮುಕ್ತ ಆರ್ಥಿಕ ವ್ಯವಸ್ಥೆಯನ್ನು ಜಾರಿ ಮಾಡಿತು. ಮಿಶ್ರ ಆರ್ಥಿಕ ವ್ಯವಸ್ಥೆಯ ಯಾವುದೇ ಉದ್ಯಮ-ಉದ್ದಿಮೆಗಳಲ್ಲಿ ಸಾಮಾಜಿಕ ನ್ಯಾಯ ಅನುಷ್ಠಾನಗೊಂಡಿಲ್ಲ. ಸರ್ಕಾರದ ಹಿಡಿತವೇ ಹೆಚ್ಚಾಗಿರುವ ಈ ಆರ್ಥಿಕ ವ್ಯವಸ್ಥೆಯ ಸಾಮಾಜಿಕ ನ್ಯಾಯಕ್ಕೆ ಈ ಗತಿಯಾದರೆ ಇನ್ನು ಖಾಸಗಿಯವರ ಹಿಡಿತವೇ ಹೆಚ್ಚಾಗಿರುವ ಮುಕ್ತ ಆರ್ಥಿಕ ವ್ಯವಸ್ಥೆಯಲ್ಲಿ ಇದರ ಪಾಡೇನು! ಈ ದಿಸೆಯಲ್ಲಿ ಚಿಂತಿಸಿದ ಮನುವಾದಿ ಮನಸ್ಸುಗಳ ಒಕ್ಕೂಟವು ಭಾರತವನ್ನು ಗ್ಯಾಟ್ ಒಪ್ಪಂದದ ಮೂಲಕವಾಗಿ ಉದಾರೀಕರಣ ಎಂಬ ಮುಕ್ತ ಆರ್ಥಿಕ ವ್ಯವಸ್ಥೆಗೆ ದೂಡಿತು. ಇದರ ಪರಿಣಾಮವಾಗಿ, ರಾಷ್ಟ್ರೀಕರಣದ ಮುಖ್ಯ ನೆಲೆಗಳಾಗಿದ್ದ ಸಾಮಾಜಿಕ ನ್ಯಾಯ, ಸ್ವಾವಲಂಬನೆ, ಸಾರ್ವಭೌಮತ್ವಗಳನ್ನು ಎತ್ತಿಹಿಡಿಯುತ್ತಾ ಸಾಗಬೇಕಿದ್ದ ದೇಶವು ಖಾಸಗೀಕರಣದ ಜಾಡಿನಲ್ಲಿ ಸಾಂವಿಧಾನಿಕ ಭಾರತವನ್ನು ಬೇಲಿಯಿಲ್ಲದ ಹೊಲವನ್ನಾಗಿ ಮಾಡಿಬಿಟ್ಟಿತು. ಈ ಪ್ರಕ್ರಿಯೆಯಲ್ಲಿ ಸಂವಿಧಾನವಿಲ್ಲ. ಅದು ಹೇಳುವ ಪ್ರಜಾಪ್ರಭುತ್ವದ ಪಾಠಗಳಿಲ್ಲ. ಅವುಗಳನ್ನು ಬರೆದ ಅಂಬೇಡ್ಕರ್, ಗಾಂಧಿ, ಮಾರ್ಕ್ಸ್ ಮೊದಲಾದವರ ನೆನಪುಗಳೂ ಇಲ್ಲ.

ಒಟ್ಟಾರೆ, ಸಾಮಾಜಿಕ ನ್ಯಾಯ ಕಲ್ಪನೆಯನ್ನು ಅಪ್ರಸ್ತುತಗೊಳಿಸುವ ಹುನ್ನಾರವೇ ಖಾಸಗೀಕರಣ, ಭಾರತೀಯ ಜನ

ತಂತ್ರದ ಸಾರ್ವಭೌಮತ್ವವನ್ನು ನಾಶಗೊಳಿಸುವುದೇ ಜಾಗತೀಕರಣ. ಭಾರತವನ್ನು ಜಾಗತಿಕ ಲೂಟಿಗೊಳಪಡಿಸಿ, ದಿವಾಳಿಯೆಬ್ಬಿಸುವುದೇ ಉದಾರೀಕರಣ. ಆದ್ದರಿಂದ ಸಾಮಾಜಿಕ ನ್ಯಾಯದ ಸಕ್ರಿಯಾತ್ಮಕ ಪ್ರತಿಪಾದನೆಯೆಂದರೆ, ಈ ಮೂರೂ ಕಾರಣಗಳ ದೂರೀಕರಣವೇ ಆಗಿದೆ.

ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯ ಸಾಧ್ಯವೇ? ಇದುವರೆಗಿನ ಯಾವುದೇ ಖಾಸಗಿ ಉದ್ಯಮದಲ್ಲಿ ಸಾಮಾಜಿಕ ನ್ಯಾಯ ಕಲ್ಪನೆಯು ಸಾಕಾರಗೊಂಡ ಉದಾಹರಣೆಗಳಿಲ್ಲ. ವೋಲ್ವೋ ಮೊದಲಾದ ಮೂರ್‍ನಾಲ್ಕು ಕಂಪೆನಿಗಳು ಮಾತ್ರ ಇದಕ್ಕೆ ವ್ಯತಿರಿಕ್ತವಾಗಿ ಸ್ವಯಂಘೋಷಣೆ ನೀಡಿದ್ದರೂ ಇತರೆ ಅಧಿಕೃತ ದಾಖಲೆಗಳು ಈ ಕುರಿತು ಇದುವರೆಗೆ ಕಂಡಿಲ್ಲ. ಹಾಗೊಮ್ಮೆ ಇದನ್ನು ಹೊರತುಪಡಿಸಿದರೂ ಉಳಿದಂತಹ ಶೇ. ೯೯ಕ್ಕೂ ಮಿಗಿಲಾದ ಖಾಸಗಿ ಸಂಸ್ಥೆಗಳು ಲಾಭ-ನಷ್ಟಗಳನ್ನು ಆದ್ಯತೆಯ ವಿಚಾರಗಳನ್ನಾಗಿ ಇಟ್ಟುಕೊಂಡಿವೆಯೇ ವಿನಃ ಪ್ರಾದೇಶಿಕ ನ್ಯಾಯ, ಮೀಸಲಾತಿ ಮೊದಲಾದ ಯಾವುದೇ ಹಂತದ ಸಾಮಾಜಿಕ ನ್ಯಾಯ ಕಲ್ಪನೆಗಳನ್ನು ಇಟ್ಟುಕೊಂಡಿಲ್ಲ. ಆದ್ದರಿಂದ ವಿಸ್ತರವಾಗುತ್ತಿರುವ ಖಾಸಗಿವಲಯದಲ್ಲಿ ಸಾಮಾಜಿಕ ನ್ಯಾಯವನ್ನು ಕುರಿತ ಒತ್ತಾಯವಾಗಲೀ ಸರ್ಕಾರವು ಈ ನಿಟ್ಟಿನಲ್ಲಿ ತೆಗೆದುಕೊಳ್ಳುವ ಕ್ರಮವಾಗಲೀ ಮೂಗಿಗೆ ತುಪ್ಪವನ್ನು ಸವರುವ ಚೇಷ್ಟೆ ಎಂಬುದು ವಿವೇಕವು ಹೇಳುವ ಪಾಠವಾಗುತ್ತದೆ. ಆದ್ದರಿಂದಲ ಖಾಸಗಿ ಆಸ್ತಿ ಕಲ್ಪನೆಯು ಇರುವವರೆಗೂ ಶೋಷಣೆಯು ತಪ್ಪಿದ್ದಲ್ಲ ಎಂಬ ಮಾರ್ಕ್ಸ್‌ನ ಮಾತಾಗಲೀ ಕರಡು ಸಂವಿಧಾನದಲ್ಲಿ ಕುಡಿಯೊಡೆದು ಒಪ್ಪಿತ ಸಂವಿಧಾನದಲ್ಲಿ ನೆಲಕಚ್ಚಿದ ಅಂಬೇಡ್ಕರ್‌ವರ ಭೂರಾಷ್ಟ್ರೀಕರಣದ ಕಲ್ಪನೆಯಾಗಲೀ ಇಲ್ಲಿ ನೆನಪಿಗೆ ಬರುವುದು.

ಆದ್ದರಿಂದ ಲೋಕಸಭೆಯಿಂದ ಗ್ರಾಮಸಭೆಯವರೆಗೂ ರಾಜಕೀಯಾತ್ಮಕ ಸಾಮಾಜಿಕ ನ್ಯಾಯವನ್ನು ಪಡೆದಿರುವ ಭಾರತೀಯ ಜನತೆ ಮುಖ್ಯವಾಗಿ ಆರ್ಥಿಕ ಸಮಾನತೆಯನ್ನು ಪಡೆಯಬೇಕು. ಅದಕ್ಕಾಗಿ ಖಾಸಗಿ ವಲಯದ ರಾಷ್ಟ್ರೀಕರಣದ ಪ್ರಕ್ರಿಯೆಯು ಹಂತಹಂತವಾಗಿ ನಡೆಯಬೇಕು. ಆಗ ಮಾತ್ರ ನಿಜದ ಸಮಾನತೆ ನೆಲೆಯಾಗಿ ಪರಿಪೂರ್ಣದ ಸಾಮಾಜಿಕ ನ್ಯಾಯ ಕಲ್ಪನೆಯು ಸಾಕಾರಗೊಳ್ಳುವುದು.

ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯದ ಒತ್ತಾಯ ಸೂಕ್ತವೇ? ದೇಶದಲ್ಲಿರುವ ಸ್ವದೇಶಿ ಕಂಪೆನಿಯಾಗಲೀ ವಿದೇಶೀ ಕಂಪೆನಿಯಾಗಲೀ ತನ್ನ ಉದ್ಯಮಕ್ಕಾಗಿ ಬಳಸುತ್ತಿರುವ ನಿವೇಶನ, ನೀರು, ವಿದ್ಯುತ್, ಷೇರು ವಿಕ್ರಯದ ಮೂಲಕ ಸಂಗ್ರಹಿಸಿದ ಬಂಡವಾಳ ಎಲ್ಲವೂ ದೇಶೀಯವಲ್ಲವೇ? ಇದು ಇನ್ನೊಂದರ್ಥದಲ್ಲಿ ಸಾರ್ವಜನಿಕರ ಆಸ್ತಿಯಲ್ಲವೇ? ಹಾಗಾದರೆ, ಈ ಉದ್ಯಮಪತಿಯ ಪಾತ್ರವೇನು ಇಲ್ಲಿ? ಇವನು ಈ ಎಲ್ಲಾ ಸಂಪನ್ಮೂಲಗಳನ್ನು ತನ್ನ ಬುದ್ಧಿಯ ಬಲದಿಂದ ಸಂಘಟಿಸಿದ್ದಾನೆ, ಅಷ್ಟೇ. ಆದರೆ ಈ ಸಂಘಟನಾ ಕ್ರಿಯೆ ಕೂಡ ಮೂಲತಃ ಶ್ರಮವೇ ಆಗಿರುವುದರಿಂದ ಮತ್ತು ಈ ಶ್ರಮದ ಕಾರಣಕ್ಕಾಗಿ ಮೂಲತಃ ಇವನೂ ಒಬ್ಬ ಕಾರ್ಮಿಕನೇ ಆಗಿರುವುದರಿಂದ ಇವನಿಗೂ ಕೂಲಿ ದಕ್ಕ ಬೇಕು. ಇಷ್ಟಲ್ಲದೇ ಅಧಿಕ ಕೂಲಿಯಾಗಲೀ ಅಥವಾ ಅದರ ಇನ್ನೊಂದು ಪರಿಭಾಷೆಯಾದ ಲಾಭ ಇವನಿಗೇ ಪೂರ್ಣವಾಗಿ ದಕ್ಕುವುದು ಅನ್ಯಾಯ. ಅದು ಕಾರ್ಮಿಕರಿಗೆ ಅಥವಾ ಆ ದೇಶಕ್ಕೆ ದಕ್ಕಬೇಕು. ಇದು ನಿಜದ ಸಮಾಜವಾದೀ ರಾಷ್ಟ್ರಗಳಲ್ಲಿರುವ ವ್ಯವಸ್ಥೆ. ಆದರೆ ಹೆಸರಿಗೆ ಮಾತ್ರ ಸಮಾಜವಾದಿ ಎಂದು ಕರೆಸಿಕೊಂಡು, ವಾಸ್ತವದಲ್ಲಿ ಬಂಡವಾಳಶಾಹೀ ವ್ಯವಸ್ಥೆಯಿರುವ ಭಾರತದಂತಹ ರಾಷ್ಟ್ರಗಳಲ್ಲಿ ಇಂತಹ ಗುಣಾತ್ಮಕ ಪ್ರವೃತ್ತಿಗಳು ಅಸಾಧ್ಯ.

ಈ ಸಾತ್ವಿಕ ನೆಲೆಯಲ್ಲಿ ಖಾಸಗೀ ವಲಯದಲ್ಲಿ ಎಲ್ಲಾ ಸಂಪನ್ಮೂಲಗಳು ದೇಶೀಯವೇ ಆಗಿದ್ದು, ಅವುಗಳ ಸಂಘಟನೆಗೆ ಸಂವಿಧಾನಾತ್ಮಕ ಒಪ್ಪಿಗೆ ಇರುವುದರಿಂದ ಖಾಸಗಿ ಸಂಸ್ಥೆಗಳು ಸಂವಿಧಾನ ಹೇಳುವ ಸಾಮಾಜಿಕ ನ್ಯಾಯಕ್ಕೂ ಬದ್ಧವಾಗಿರಬೇಕು. ಇದನ್ನು ಕೈಗಾರಿಕೋದ್ಯಮಗಳೇ ಅಲ್ಲದೇ ಶಿಕ್ಷಣ ಸಂಸ್ಥೆಗಳು ಸಹ ವೃತ್ತಿ ಶಿಕ್ಷಣದ ಪ್ರವೇಶಾವಕಾಶದಲ್ಲಿಯೂ ತೋರಬೇಕು. ಹಾಗಿಲ್ಲವಾದರೆ ಇದನ್ನು ಸಂವಿಧಾನ ವಿರೋಧೀ ಕ್ರಮವೆಂದು ಭಾವಿಸಿ ಆ ಸಂಸ್ಥೆಗಳ ವಿರುದ್ಧ ಕ್ರಮವನ್ನು ಜರುಗಿಸಿ, ಜರೂರಾಗಿ ಅವುಗಲನ್ನು ರಾಷ್ಟ್ರೀಕರಣಕ್ಕೆ ಒಳಪಡಿಸಬೇಕು. ಆಗ ಮಾತ್ರ ಅಲ್ಲಿ ಸಾಮಾಜಿಕ ನ್ಯಾಯಕ್ಕೆ ನೆಲೆಯೊದಗುತ್ತದೆ. ಇದಕ್ಕೆ ರಾಷ್ಟ್ರೀಕರಣಗೊಂಡ ಬ್ಯಾಂಕುಗಳು ಈಗಾಗಲೇ ಚರಿತ್ರೆಯ ಪಾಠವಾಗಿ ನಮ್ಮ ಮುಂದಿವೆ.

> **ಖಾಸಗೀ ವಲಯದಲ್ಲಿ ಎಲ್ಲಾ ಸಂಪನ್ಮೂಲಗಳು ದೇಶೀಯವೇ ಆಗಿದ್ದು, ಅವುಗಳ ಸಂಘಟನೆಗೆ ಸಂವಿಧಾನಾತ್ಮಕ ಒಪ್ಪಿಗೆ ಇರುವುದರಿಂದ ಖಾಸಗಿ ಸಂಸ್ಥೆಗಳು ಸಂವಿಧಾನ ಹೇಳುವ ಸಾಮಾಜಿಕ ನ್ಯಾಯಕ್ಕೂ ಬದ್ಧವಾಗಿರಬೇಕು. ಇದನ್ನು ಕೈಗಾರಿಕೋದ್ಯಮಗಳೇ ಅಲ್ಲದೇ ಶಿಕ್ಷಣ ಸಂಸ್ಥೆಗಳು ಸಹ ವೃತ್ತಿ ಶಿಕ್ಷಣದ ಪ್ರವೇಶಾವಕಾಶದಲ್ಲಿಯೂ ತೋರಬೇಕು.**

ಸಾಮಾಜಿಕ ಅನ್ಯಾಯ-ಸಾಮಾಜಿಕ ನ್ಯಾಯ-ಸಾಮಾಜಿಕ ಅನ್ಯಾಯ: ಭಾರತವು ಜಾತಿಗಳಿಂದ ವಿಭಜಿಸಲ್ಪಟ್ಟ ದೇಶವಾಗಿದೆ. ಇದು ಭವ್ಯ ಎಂದು ಹೇಳಲ್ಪಡುವ ಸನಾತನ ಭಾರತದ ಗಟ್ಟಿ ನೆಲೆಯೂ ಹೌದು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಅಯೋಗ್ಯನೂ ಪೌರೋಹಿತ್ಯಕ್ಕೆ ಸೂಕ್ತ. ಅಂತೆಯೇ ಶೂದ್ರ ಜಾತಿಯಲ್ಲಿ ಹುಟ್ಟಿದ ಜ್ಞಾನಿಯು ಯೋಗ್ಯನಾಗಿದ್ದಾಗಲೂ ಅಧ್ಯಾಪನಕ್ಕೆ ನಿಷಿದ್ಧ. ಅಂದರೆ ತುಪ್ಪವನ್ನು ತಿನ್ನುತ್ತಾ ಬಂದವರು ತುಪ್ಪವನ್ನೇ ತಿನ್ನುತ್ತಿರಬೇಕು. ಎಕ್ಕಡವನ್ನು ಹೊಲಿಯುತ್ತಿರುವವರು ಎಕ್ಕಡವನ್ನೇ ಹೊಲಿಯುತ್ತಿರಬೇಕು. ಇದು ಸಾಮಾಜಿಕ ನ್ಯಾಯ. ಹಿಂದೂ ಧರ್ಮ. ಇದಕ್ಕೆ ಕರ್ಮಸಿದ್ಧಾಂತದ ಠಸ್ಸೆ ಬೇರೆ.

ವಾಸ್ತವವಾಗಿ ಎಕ್ಕಡ ಹೊಲಿಯುತ್ತಿರುವವನಿಗೆ ತನ್ನ ಸ್ಥಾನ ಭದ್ರತೆಯ ಬಗೆಗೆ ತುಪ್ಪ ತಿನ್ನುವವನ ಭಯವಿಲ್ಲ. ಆದರೆ ತುಪ್ಪ ತಿನ್ನುವವನಿಗೆ ಎಕ್ಕಡ ಹೊಲಿಯುವವನದೇ ಭಯ. ಯಾಕೆಂದರೆ, ತನ್ನ ಪುಷ್ಕಳ ಭೋಜನ, ಆರಾಮು ಜೀವನಗಳು ಎಲ್ಲಿ ಅನ್ಯಾಕ್ರಮಣದಿಂದ ದೂರವಾಗುತ್ತದೋ ಎಂಬುದು ಇದರ ಮೂಲ. ಆದ್ದರಿಂದ ಯಾವ್ಯಾವ ಕಸುಬನ್ನು ಯಾರ್‍ಯಾರು ಮಾಡುತ್ತಿರುವರೋ ಅವರು ಅವುಗಳನ್ನು ಉಲ್ಲಂಘಿಸಿ ನಡೆಯಬಾರದು ಎಂಬ ಲಿಖಿತ ಮತ್ತು ಅಲಿಖಿತ ಸಂವಿಧಾನವನ್ನು ಮನುವಾದೀ ಮನಸ್ಸು ರಚನೆ ಮಾಡಿಬಿಟ್ಟಿತು. ಅದಕ್ಕೆ ಧರ್ಮವೆಂದು ಹೆಸರಿಟ್ಟು, ಅದನ್ನು ಕಾಯುವ ಕೆಲಸವನ್ನು ರಾಜನಿಗೆ ವಹಿಸಿತು. ಇಲ್ಲಿಯ ಸಾಮಾಜಿಕ ಹುನ್ನಾರವನ್ನು ಅರಿಯದ ಮಿದುಳು ರಹಿತ ಕಿರೀಟಧಾರಿ ತಲೆಯಲ್ಲ ಅದನ್ನು ಶಿರಸಾವಹಿಸಿ ಖಡ್ಗ ಹಿಡಿದು ರಕ್ಷಿಸುತ್ತಾ ಬಂದಿತು. ಇದು ಐದು ಸಾವಿರ ವರ್ಷಗಳ ಭಾರತದ ಕತೆ. ಇದನ್ನು ಸಮಗ್ರವಾಗಿ ಪ್ರತಿನಿಧಿಸುವ ಒಂದು ಕಥನ ಪ್ರತಿಮೆಯೆಂದರೆ ಶಂಭೂಕನ ಕತೆ. ಇದು ಬ್ರಾಹ್ಮಣನ ಕೂಗಿಗೆ ಮಣಿದ, ನಾರದನ ಕುತಂತ್ರಕ್ಕೆ ಒಳಗಾದ ಶೂದ್ರ ಮೂಲದ ಕಠಿಣ ಅಧ್ಯಯನಶೀಲ ಶಂಭೂಕನು ರಾಜ ಶ್ರೀರಾಮಚಂದ್ರನಿಂದ ಅನ್ಯಾಯವಾಗಿ ವಧೆಯಾದ ಕತೆ.

ಹೀಗೆ ಸಾಮಾಜಿಕ ನ್ಯಾಯದ ಜಾಗದಲ್ಲಿ ಭದ್ರವಾಗಿ ನೆಲೆಯಾಗಿದ್ದ ಸಾಮಾಜಿಕ ಅನ್ಯಾಯದ ಬಂಡೆಗಲ್ಲನ್ನು ಸರಿಸಲು ನಡೆದ ಹೋರಟವೆಷ್ಟೋ! ಅದು ಸಾವಿರಾರು ವರ್ಷಗಳಿಂದ ಕಿರುತೊರೆಯಾಗಿ ಹರಿದುಬಂದು, ಕಳೆದ ಶತಮಾನದಲ್ಲಿಯೇ ನದಿಯಾಗಿ ಪ್ರವಾಹವಾಗಿ ಮೊರೆದಿದೆ. ಇದರ ಪರಿಣಾಮವಾಗಿ ನಿಜದ ಸಾಮಾಜಿಕ ನ್ಯಾಯ ಗುರುತಿಸುವಷ್ಟಾದರೂ ಅನುಷ್ಠಾನಗೊಂಡಿದೆ. ದಲಿತರು, ಮಹಿಳೆಯರು, ಹಿಂದುಳಿದವರು, ಅಲ್ಪಸಂಖ್ಯಾತರು ಇನ್ನೂ ಪೂರ್ಣ ಸಾಮಾಜಿಕ ನ್ಯಾಯವನ್ನು ಪಡೆಯಲು ಹೆಣಗುತ್ತಿರುವಾಗಲೇ 'ಜಾಗತಿಕ ಹಳ್ಳಿ'ಯ ಏಟು ಬಿದ್ದದ್ದು ಪುರೋಗಾಮಿ ಚರಿತ್ರೆಯ ಹಿನ್ನಡೆಯಂತಾಗಿದೆ.

ಹೀಗೆ ಭಾರತದ ಚರಿತ್ರೆಯು ಸಾಮಾಜಿಕ ಅನ್ಯಾಯ-ಸಾಮಾಜಿಕ ನ್ಯಾಯ-ಸಾಮಾಜಿಕ ಅನ್ಯಾಯ ಎಂಬ ಮೂರು ಘಟ್ಟಗಳಲ್ಲಿ ಹಾದುಬಂದಿದೆ.

ಸಾಮಾಜಿಕ ನ್ಯಾಯವು ಉನ್ನತ ಸ್ಥಾನಗಳಲ್ಲಿ ಯಾವ ಸ್ವರೂಪದಲ್ಲಿರಬೇಕು? ಭಾರತವು ಜಾತಿಯಾಧಾರಿತ ಮತ್ತು ಜಾತಿ ವಿಭಜಿತ ದೇಶವಾಗಿರುವುದರಿಂದ ಎಲ್ಲ ಜಾತಿಗಳಿಗೂ ಎಲ್ಲ ರಂಗಗಳಲ್ಲಿಯೂ ಪ್ರಾತಿನಿಧ್ಯವಿರುವುದು ಸಾಮಾಜಿಕ ನ್ಯಾಯವೆನ್ನಿಸುತ್ತದೆ. ಇಲ್ಲಿ ಲಭ್ಯ ಇರುವ ಅವಕಾಶಗಳ ಸಮಾನ ವರ್ಗೀಕರಣವಿದೆಯೇ ಹೊರತು ಹೆಚ್ಚುವರಿ ಅವಕಾಶಗಳ ನಿರ್ಮಾಣವಿಲ್ಲ. ಇದು ಉದ್ಯೋಗಾವಕಾಶಗಳಲ್ಲಿರಬಹುದು; ಶಿಕ್ಷಣದ ಪ್ರವೇಶಾವಕಾಶಗಳಲ್ಲಿರಬಹುದು ಅಥವಾ ಯಾವುದೇ ಸ್ಥಾನದ ಹಂಚಿಕೆಯಲ್ಲಿರಬಹುದು. ಇದನ್ನು ಮರೆಯುವಂತಿಲ್ಲ. ಇದು ಪ್ರಾಥಮಿಕ ಶಿಕ್ಷಣದ ಹಂತದಿಂದ ಐಎಎಸ್ ಹಂತದವರೆಗೂ ಸಾಧ್ಯವಾಗುತ್ತಾ ಬಂದಿದೆ. ಇದು ಸೂಕ್ತ. ಆದರೆ ಸರ್ಕಾರವನ್ನು ರಚಿಸುವ ಮತ್ತು ದೇಶಕ್ಕೆ ನೀತಿ-ನಿರೂಪಗಳನ್ನು ರೂಪಿಸುವ ನಾಯಕರ ಮತ್ತು ಹಿರಿಯ ಅಧಿಕಾರಿಗಳ ಆಯ್ಕೆಯ ವಿಚಾರ ಬಂದಾಗ ಅಲ್ಲಿ ಎಲ್ಲಾ ಜಾತಿಗಳಿಗೂ ಪ್ರಾತಿನಿಧ್ಯವಿರಬೇಕು ಎಂಬ ಸಾಮಾನ್ಯ ತತ್ವ ಮುಖ್ಯವಾಗಬೇಕೋ ಅಥವಾ ಎಲ್ಲಾ ಜಾತಿಗಳಿಗೂ ಕಡ್ಡಾಯ ಪ್ರಾತಿನಿಧ್ಯವನ್ನು ಕೊಡುತ್ತಲೇ ಅಲ್ಲಿ ಸೈದ್ಧಾಂತಿಕ ವ್ಯಕ್ತಿತ್ವವನ್ನು ಪಡೆದ ವ್ಯಕ್ತಿಗಳಿಗೆ ಮಾತ್ರ ಪ್ರಾತಿನಿಧ್ಯ ಕೊಡಬೇಕೋ ಎಂಬ ಪ್ರಶ್ನೆ ಪ್ರಸ್ತುತವಾಗಬೇಕೋ ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಈ ಪ್ರಶ್ನೆಯನ್ನು ಹಾಕಿಕೊಳ್ಳದೆ ಹೆಜ್ಜೆಯನ್ನು ಇಡಬೇಕು. ಇಲ್ಲವಾದಲ್ಲಿ ಶೋಷಿತ ಸಮುದಾಯವಾದ ಮಹಿಳೆ ಎಂಬ ಹೆಸರಿನಲ್ಲಿ ಉಮಾಭಾರತಿಯ ಆಯ್ಕೆಯಾಗಿಬಿಡುತ್ತದೆ. ಅಂತೆಯೇ ದಲಿತ ಎಂಬ ಕೋಟಾದಲ್ಲಿ ಬಂಗಾರು ಲಕ್ಷ್ಮಣ್, ದೇವರಾಜ ಅರಸು ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಹಿಂದುಳಿದವರು ಎಂಬ ಕೋಟಾದಲ್ಲಿ ಸಿಇಟಿ ವಿರೋಧಿ ಕಾಮೆಡ್ ಕೆ. ನಾಯಕರು ಆಯ್ಕೆಯಾಗಿಬಿಡುತ್ತಾರೆ.

ಒಟ್ಟಾರೆ 'ಖಾಸಗಿ ವಲಯ ಮತ್ತು ಸಾಮಾಜಿಕ ನ್ಯಾಯ' ಎಂಬ ಇಲ್ಲಿಯ ಪರಿಕಲ್ಪನೆಯೂ ಆಗುತ್ತದೆ. ಇದು ಇಂದಿಗೂ ಎಂದಿಗೂ ನಿರಂತರವಾಗಿ ಉಳಿಯುವ ಸತ್ಯ. ಆದ್ದರಿಂದ 'ಖಾಸಗಿ ವಲಯ' ಮತ್ತು 'ಸಾಮಾಜಿಕ ನ್ಯಾಯ' ಎಂಬ ಪರಸ್ಪರ ವಿರೋಧಾತ್ಮಕ ಸಂಬಂಧದ ಎರಡು ನೆಲೆಗಳಲ್ಲಿ ರಾಷ್ಟ್ರೀಕರಣ ಮತ್ತು ಸಾಮಾಜಿಕ ನ್ಯಾಯ ಎಂಬ ಸಕಾರಾತ್ಮಕ ಪರಿಕಲ್ಪನೆಗಳನ್ನು ನೆಲೆಗೊಳಿಸಬೇಕಾಗಿದೆ. ಇದಕ್ಕೆ ಒತ್ತಾಸೆಯಾಗಿ ಮಾರ್ಕ್ಸ್, ಲೆನಿನ್, ಅಂಬೇಡ್ಕರ್, ಮಾವೋ, ನೆರೂಡ-ಎಲ್ಲರೂ ಇದ್ದಾರೆ. ಈ ನಿಟ್ಟಿನಲ್ಲಿ ಚಳುವಳಿ ಮತ್ತು ಬೌದ್ಧಿಕ ವಲಯವು ಒಂದು ಗೂಡಬೇಕಾಗಿದೆ. ಇದರ ಮೂಲಕವಾಗಿ ಕಳೆದು ಹೋಗುತ್ತಿರುವ ಸ್ವಾತಂತ್ರ್ಯದ ನಿಜದ ಆಶಯಗಳನ್ನು ಉಳಿಸಿಕೊಳ್ಳಬೇಕಾಗಿದೆ. □

'ಬೆಹನ್‌ಜಿ' ಬರೆದ ಇತಿಹಾಸ

ಬಿಎಸ್‌ಪಿಯ ಸಂಸ್ಥಾಪಕ ಕಾನ್ಶಿರಾಮ್‌ರವರ ಕೃಪೆಯಿಂದ ೧೯೯೩ರಲ್ಲಿ ಮುಖ್ಯಮಂತ್ರಿ ಗದ್ದುಗೆಗೇರಿದ ಮುಲಾಯಂ, ೧೯೯೫ ರಲ್ಲಿ ಮುಖ್ಯ ಮಂತ್ರಿಯಾಗಿದ್ದ ಮಾಯಾವತಿಯವರನ್ನೇ ಮುಗಿಸುವ ಕೀಳು ಮಟ್ಟಕ್ಕೆ ಇಳಿದಿದ್ದರು. ಅಂದಿನಿಂದ ಹಾವು ಮುಂಗುಸಿಯಂತಾದ ಎಸ್‌ಪಿ ಮತ್ತು ಬಿಎಸ್‌ಪಿ ಪಕ್ಷಗಳ ನಡುವಿನ ಕದನ ಈ ಸಲದ ಚುನಾವಣೆಯಲ್ಲಿ ತಾರಕಕ್ಕೇರಿತ್ತು. ಮದಗಜದಂತೆ ನುಗ್ಗಿದ ಬಿಎಸ್‌ಪಿಯ ಆನೆ ಮುಲಾಯಂರಂಥ ಮಾಜಿ ಪೈಲ್ವಾನ್‌ನನ್ನು ಅಖಾಡದಲ್ಲಿ ಮಕಾಡೆ ಮಲಗಿಸಿ ಬಿಟ್ಟಿದೆ. ಅಮರ್‌ಸಿಂಗ್ ಎನ್ನುವ ಮುಲಾಯಮ್ ಬಂಟ ಹುಚ್ಚು ಶೋಕಿಲಾಲ, ಪರಮ ಮುಂಗೋಪಿ, ಬಂಡವಾಳಶಾಹಿಗಳ ಗುಲಾಮ ಮತ್ತು ಸಿನೇಮಾ ತಾರೆಯರ ಕ್ರೇಜ್ ಇರುವ ಹೈಫೈ ಆಸಾಮಿ. ಸದಾಕಾಲ ಅಮಿತಾಬ್ ಬಚ್ಚನ್, ಅಂಬಾನಿಯ ಏಜೆಂಟ್‌ನಂತೆ ವರ್ತಿಸುತ್ತಿದ್ದ ಈ ವ್ಯಕ್ತಿ ಜನಸಾಮಾನ್ಯರ ಮೈ ಉರಿಸುತ್ತಿದ್ದ.

ವೈ. ಮರಿಸ್ವಾಮಿ

ರಾಷ್ಟ್ರದ ಅತಿ ದೊಡ್ಡ ಹಾಗೂ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಮಾಯಾವತಿಯವರ ಮುಖಂಡತ್ವದ ಬಿಎಸ್‌ಪಿ ದಿಗ್ವಿಜಯ ಸಾಧಿಸಿದೆ. ದೇಶದ ರಾಜಕೀಯದ ಹೆಬ್ಬಾಗಿಲೆಂದೇ ವ್ಯಾಖ್ಯಾನಿಸಲಾಗುವ ಉತ್ತರ ಪ್ರದೇಶದ ೪೦೩, ವಿಧಾನ ಸಭಾ ಕ್ಷೇತ್ರಗಳಲ್ಲಿ ೨೦೬ ಕ್ಷೇತ್ರಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುವುದರ ಮೂಲಕ ಇಡೀ ರಾಷ್ಟ್ರದಲ್ಲಿ ಬಿರುಗಾಳಿಯನ್ನು ಎಬ್ಬಿಸಿದೆ. ೧೯೭೭ರಿಂದ ೮೪ರವರೆಗೆ ದಿಲ್ಲಿಯ ಬಡಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ ಸಾಮಾನ್ಯ ಶಾಲಾ ಶಿಕ್ಷಕಿಯಾಗಿದ್ದ ಮಾಯಾವತಿ, ಕಳೆದ ೨೩ ವರ್ಷಗಳ ಅವಧಿಯಲ್ಲಿ ಉಕ್ಕಿನ ಮಹಿಳೆಯಾಗಿ ಪರಿವರ್ತನೆಗೊಂಡು ದೇಶದ ಪ್ರಮುಖ ರಾಜಕೀಯ ಪಕ್ಷಗಳ ಧುರೀಣರಿಗೆ ಪಾಠ ಕಲಿಸುವ ಗುರುವಾಗಿ ಹೊರಹೊಮ್ಮಿದ್ದಾರೆ. ರಾಷ್ಟ್ರದ ರಾಜಕೀಯದ ದಿಕ್ಸೂಚಿಯಾಗಿರುವ ಈ ಬೃಹತ್ ರಾಜ್ಯಕ್ಕೆ ನಾಲ್ಕನೇ ಬಾರಿಗೆ ದಲಿತ ಹಾಗೂ ಮಹಿಳಾ ಮುಖ್ಯಮಂತ್ರಿಯಾಗಿ ಅಧಿಕಾರದ ಗದ್ದುಗೆ ಹಿಡಿಯುವುದರ ಮೂಲಕ ಇತಿಹಾಸ ನಿರ್ಮಾಣ ಮಾಡಿದ್ದಾರೆ. ಈ ಮೊದಲು ಎನ್.ಡಿ ತಿವಾರಿಯವರು ೪ ಸಲ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು.

ಬಿಎಸ್‌ಪಿಯ ಚಿನ್ಹೆಯಾಗಿರುವ ಆನೆಯ ರಭಸದ ಮುಂದೆ ಬಿಜೆಪಿಯ ಕಮಲ ಮುಂದೆಂದೂ ಚಿಗುರದಂತೆ ಕಮರಿ ಹೋಗಿದೆ. ಕಾಂಗ್ರೆಸ್‌ನ 'ಕೈ' ನಾಪತ್ತೆಯಾಗಿದೆ. ಎಸ್‌ಪಿಯ ಸೈಕಲ್ ನುಜ್ಜುಗುಜ್ಜಾಗಿದೆ. ಸಣ್ಣ ಪುಟ್ಟ ಪಕ್ಷಗಳು, ಪಕ್ಷೇತರ ಅಭ್ಯರ್ಥಿಗಳು ಹೇಳ ಹೆಸರಿಲ್ಲದಂತೆ ಉದುರಿ ಹೋಗಿದ್ದಾರೆ. ಇದೇ ಮೇ ೧೩ರ ಭಾನುವಾರ ಮಧ್ಯಾಹ್ನದ ಸುಡು ಬಿಸಿಲಿನ ವಾತಾವರಣದಲ್ಲಿ ರಾಜ್ಯದ ೩೨ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಮಾಯಾವತಿಯವರು, ತಮ್ಮ ಎದುರಾಳಿಗಳಿಗೆ ಬೆಂಕಿಕೆಂಡವಾಗಿ ಕಾಣುತ್ತಿದ್ದಾರೆ. ವಿಧಾನ ಸಭಾ ಚುನಾವಣೆಯ ಜೊತೆಗೆ ನಡೆದ ಮಿರ್ಜಾಪುರ, ಆಬರ್ಟ್ಸ್‌ಗಂಜ್ ಮತ್ತು ಬಿಲ್ಹೌರ್ ಲೋಕಸಭಾ ಕ್ಷೇತ್ರಗಳಲ್ಲೂ ಆನೆ ಇತರ ಪಕ್ಷಗಳನ್ನು ತುಳಿದು ಹಾಕಿದೆ.

೧೯೯೧ರಲ್ಲಿ ಹಿಂದು ಅಜೆಂಡದಡಿಯಲ್ಲಿ ರಾಮಜನ್ಮಭೂಮಿ ವಿವಾದವನ್ನೇ ಪ್ರಧಾನವಾಗಿಟ್ಟುಕೊಂಡು ರಾಜಕೀಯ ಪ್ರವರ್ಧಮಾನಕ್ಕೆ ಬಂದ ಬಿಜೆಪಿ ಆನೆಯ ಹೊಡೆತದಿಂದ ತನ್ನ ನೆಲೆಯನ್ನೇ ಕಳೆದುಕೊಂಡಿದೆ. ಇತ್ತೀಚೆಗೆ ನಡೆದ ಉತ್ತರಖಂಡ, ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಮತ್ತು ಮುಂಬೈ ಹಾಗೂ ದೆಹಲಿ ಪಾಲಿಕೆ ಚುನಾವಣೆಗಳಲ್ಲಿ ಜಯಬೇರಿ ಬಾರಿಸಿ ಅಪರಿಮಿತ ಉತ್ಸಾಹ ಉನ್ಮಾದದಿಂದ ಮುಂಬರಲಿರುವ ಗೋವಾ-ಗುಜರಾತ್ ವಿಧಾನಸಭಾ ಚುನಾವಣೆಗಾಗಿ ಸಜ್ಜುಗೊಳ್ಳುತ್ತಿದ್ದ ಬಿಜೆಪಿಗೆ ಯು.ಪಿ.ಯ ಫಲಿತಾಂಶ ಭೂಕಂಪನವನ್ನೇ ಸೃಷ್ಟಿಸಿದೆ. ಸ್ವತಹ ಬಿಜೆಪಿ ರಾಜ್ಯಾಧ್ಯಕ್ಷ ಕೇಸರಿನಾಥ್ ತ್ರಿಪಾಟಿಯವರೇ ಮಣ್ಣು ಮುಕ್ಕಿದ್ದಾರೆ. ಇದರಿಂದಾಗಿ ಇಲ್ಲಿಯವರೇ ಆದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ರಾಜನಾಥ್‌ಸಿಂಗ್ ಮುಖ ಮುಚ್ಚಿಕೊಂಡು ಓಡಾಡುವಂತಾಗಿದೆ. ಹಿಂದುತ್ವದ ಹುಲಿ ಏರುವ ಮೊದಲು ೧೯೮೯ರ ಚುನಾವಣೆಯಲ್ಲಿ ೫೭ ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಈಗ ಕೇವಲ ೫೦ ಸ್ಥಾನಗಳನ್ನು ಗೆದ್ದು ಅದಕ್ಕಿಂತಲೂ ಹಿಂದೆ ಬಿದ್ದಿದೆ. ವಿವಾದಾತ್ಮಕ ಸಿಡಿ ಪ್ರಕರಣದಿಂದ ಚುನಾವಣಾ ಆಯೋಗದಿಂದ ಮಂಗಳಾರತಿ ಮಾಡಿಸಿಕೊಂಡು ಬಿಜೆಪಿಯನ್ನು ಈ ಸಲ ಮತದಾರರು ಗಂಭೀರವಾಗಿ ಪರಿಗಣಿಸಲಿಲ್ಲ. ಚುನಾವಣೆಯ ಹಣಾಹಣೆಯಲ್ಲಿ ಜನರ ಚರ್ಚೆ ಅಭಿಪ್ರಾಯದಲ್ಲಿ ಅದಕ್ಕೆ ಜಾಗವೇ ಇರಲಿಲ್ಲ.

ಕಾಂಗ್ರೆಸ್ ಡ್ರೀಮ್ ಬಾಯ್ ಭವಿಷ್ಯದ ಪ್ರಧಾನಿ ಮೆಟೀರಿಯಲ್ ಎಂದೇ ಬಿಂಬಿಸಲಾಗುತ್ತಿರುವ ರಾಹುಲ್ ಗಾಂಧಿಯ ರೋಡ್ ಶೋ ಮೂಲಕ ಉಸಿರಾಡುವ ಹೆಣದಂತಿರುವ ಯು.ಪಿ. ಕಾಂಗ್ರೆಸ್‌ಗೆ ನವಚೈತನ್ಯವನ್ನು ತುಂಬುವ ಆ ಪಕ್ಷದ ಪ್ರಯತ್ನ ಸಂಪೂರ್ಣವಾಗಿ ವಿಫಲವಾಗಿದೆ. ಅದರ ಪರಿಣಾಮವಾಗಿ ಉಸಿರಾಡುವ ಜೀವಂತ ಹೆಣದಂತಿದ್ದ ಕಾಂಗ್ರೆಸ್ ಸತ್ತೇ ಹೋಗಿದೆ. ತಮ್ಮನ ಜೊತೆಗೆ ಅಕ್ಕ ಪ್ರಿಯಾಂಕ ಕೈ ಜೋಡಿಸಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ಕೇವಲ ಒಂದು ತಿಂಗಳಿನಲ್ಲಿ ೧೫೦ ಕಡೆ ರಸ್ತೆ ಬದಿ ಪ್ರಚಾರಾಂಧೋಲನ ನಡೆಸಿ, ಸಾಕಷ್ಟು ಬೆವರಿಳಿಸಿದರೂ ಧೂಳಿನ ಹೊರತು ಮತ್ತಿನ್ನೇನೂ ರಾಹುಲ್‌ಗೆ ದಕ್ಕಲಿಲ್ಲ. ಈ ಹಿಂದೆ ೨೫ ವಿಧಾನಸಭಾ ಕ್ಷೇತ್ರಗಳಲ್ಲಿದ್ದ ಕಾಂಗ್ರೆಸ್ ಈ ಸಲ ೨೨ ಕ್ಷೇತ್ರಗಳಿಗೆ ಕುಸಿದಿದೆ. ಸಧ್ಯಕ್ಕೆ ರಾಹುಲ್ ಭವಿಷ್ಯ ಮಂಕಾಗಿ ಹೋಗಿದೆ. ಇತ್ತೀಚೆಗೆ ನಡೆದ ದೆಹಲಿ ಮುನಿಸಿಪಲ್ ಎಲೆಕ್ಷನ್‌ನಲ್ಲಿ ಹತ್ತರಿಂದ ಹದಿನೈದು ಸ್ಥಾನ ಗೆಲ್ಲುವುದರ ಜೊತೆಗೆ ಶೇ. ೨೦ ರಷ್ಟು ಮತ ಪಡೆದು ಕಾಂಗ್ರೆಸ್‌ಗೆ ದುಸ್ವಪ್ನವಾದ ಬಿಎಸ್‌ಪಿ ಭವಿಷ್ಯದಲ್ಲೂ ಬೆಂಬಿಡದ ಬೇತಾಳವಾಗಿ ಕಾಡಲಿದೆ.

ಬಿಎಸ್‌ಪಿಯ ಸಂಸ್ಥಾಪಕ ಕಾನ್ಶಿರಾಮ್‌ರವರ ಕೃಪೆಯಿಂದ ೧೯೯೩ರಲ್ಲಿ ಮುಖ್ಯಮಂತ್ರಿ ಗದ್ದುಗೆಗೇರಿದ ಮುಲಾಯಂ, ೧೯೯೫ರಲ್ಲಿ ಮುಖ್ಯಮಂತ್ರಿಯಾಗಿದ್ದ ಮಾಯಾವತಿಯವರನ್ನೇ ಮುಗಿಸುವ ಕೀಳು ಮಟ್ಟಕ್ಕೆ ಇಳಿದಿದ್ದರು. ಅಂದಿನಿಂದ ಹಾವು ಮುಂಗುಸಿಯಂತಾದ ಎಸ್‌ಪಿ ಮತ್ತು ಬಿಎಸ್‌ಪಿ ಪಕ್ಷಗಳ ನಡುವಿನ ಕದನ ಈ ಸಲದ ಚುನಾವಣೆಯಲ್ಲಿ ತಾರಕಕ್ಕೇರಿತ್ತು. ಮದಗಜದಂತೆ ನುಗ್ಗಿದ ಬಿಎಸ್‌ಪಿಯ ಆನೆ ಮುಲಾಯಂರಂಥ ಮಾಜಿ ಪೈಲ್ವಾನ್‌ನನ್ನು ಅಖಾಡದಲ್ಲಿ ಮಕಾಡೆ ಮಲಗಿಸಿ ಬಿಟ್ಟಿದೆ. ಅಮರ್‌ಸಿಂಗ್ ಎನ್ನುವ ಮುಲಾಯಮ್ ಬಂಟ ಹುಚ್ಚು ಶೋಕಿಲಾಲ, ಪರಮ ಮುಂಗೋಪಿ, ಬಂಡವಾಳಶಾಹಿಗಳ ಗುಲಾಮ ಮತ್ತು ಸಿನೇಮಾ ತಾರೆಯರ ಕ್ರೇಜ್ ಇರುವ ಹೈಫೈ ಆಸಾಮಿ. ಸದಾಕಾಲ ಅಮಿತಾಬ್ ಬಚ್ಚನ್, ಸಹರಾ ಕಂಪನಿಯ ಸುಬ್ರತೋರಾಯ್, ರಿಲಯನ್ಸ್‌ನ ಅಂಬಾನಿಯ ಗುಮಾಸ್ತ ಕಮ್ ಬಾಡಿಗಾರ್ಡ್‌ನಂತೆ ವರ್ತಿಸುತ್ತಿದ್ದ ಈ ವ್ಯಕ್ತಿಯ ತಿಕ್ಕಲುತನ ಜನಸಾಮಾನ್ಯರ ಮೈ ಉರಿಸುತ್ತಿತ್ತು. ಅವರು ಕೊಟ್ಟ ತೀರ್ಪಿನಿಂದ ಕಾಣೆಯಾಗಿರುವ ಅಮರ್ ತಾನು ಸೃಷ್ಟಿಸಿಕೊಂಡ ಹಗರಣಗಳಿಂದ, ತಿಕ್ಕಲುತನದಿಂದ ಎಲ್ಲಿ ಶ್ರೀಕೃಷ್ಣನ ಜನ್ಮಸ್ಥಾನ ಸೇರಬೇಕಾಗುತ್ತದೋ ಎಂದು ಬೆವರು ಬರೆಸಿಕೊಳ್ಳುವಂತಾಗಿದೆ.

ಚಿತ್ರ ಕೃಪೆ: ಔಟ್‌ಲುಕ್ ಇಂಡಿಯಾ

ಮುಲಾಯಂ-ಅಮರ್ ಎನ್ನುವ ಈ ಇಬ್ಬರು ಸಿಂಗ್‌ದ್ವಯರ ಕಿಲಾಡಿಜೋಡಿಯ ಬೇಜವಾಬ್ದಾರಿ ದುರಾಂಕಾರದ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆಯನ್ನು ದುರ್ಬೀನು ಹಾಕಿಕೊಂಡು ಹುಡುಕಬೇಕಾಗಿತ್ತು. ಭೂಗತ ಕ್ರಿಮಿನಲ್‌ಗಳು-ಡಾನ್‌ಗಳು ಸರಕಾರವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಇದರಿಂದ ಸಾಮಾನ್ಯ ಜನತೆಗೆ ನೆಮ್ಮದಿ ಇಲ್ಲದಂತಾಗಿತ್ತು. ಮಿತಿಮೀರಿದ ಭ್ರಷ್ಟಾಚಾರ, ಹದಗೆಟ್ಟ ಆಡಳಿತ ವ್ಯವಸ್ಥೆ, ಆಡಳಿತ ವಿರೋಧಿ ಅತಿ ಮತ್ತು ಹಗರಣಗಳು ಎಸ್‌ಪಿ ಸರ್ಕಾರವನ್ನು ಕಿತ್ತೊಗೆಯುವಷ್ಟು ಪ್ರಬಲವಾಗಿದ್ದವು. ರಾಜ್ಯದ ಜನತೆ ಸಮರ್ಪಕ ಕುಡಿಯುವ ನೀರು, ವಿದ್ಯುತ್, ರಸ್ತೆಯಂಥ ಮೂಲಭೂತ ಸೌಲಭ್ಯಗಳಿಲ್ಲದೆ ನರಳುತ್ತಿದ್ದರೆ, ಈ ಹೊಣೆಗೇಡಿ ಸಿಂಗ್‌ದ್ವಯರು ಸಮಾಜವಾದಕ್ಕೆ ಸಮಾಧಿ ತೋಡಿ ಸೋಷಿಯಲಿಸ್ಟ್ ಬದಲು ಸೋಷಿಯಲೈಟ್ ಆಗಿ ಬದಲಾಗಿ ಹೋಗಿದ್ದರು. ಅಮಿತಾಬ್ ಸೇರಿದಂತೆ ಸುಲಭವಾಗಿ ಸಿಗುವ ಚಿತ್ರರಂಗದ ಬಣ್ಣದ ಚಿಟ್ಟೆಗಳ ಪ್ರಚಾರದಿಂದ ಜನರನ್ನು ಮರಳು ಮಾಡಬಹುದೆನ್ನುವ ಮೂರ್ಖರಿವರು. ಸಾಲದಕ್ಕೆ ಇದುವರೆಗೆ ಕೈ ಹಿಡಿದುಕೊಂಡು ಬಂದಿರುವ ಯಾದವ ಮತ್ತು ಮುಸ್ಲಿಮ್ ಮತದಾರರು ಯಾವತ್ತೂ ತಮ್ಮ ಪಾರ್ಟಿಯ ಪೇಟೆಂಟ್ ಆಸ್ತಿ ಇದ್ದಂತೆ ಎಂಬ ಹುಂಬುತನ. ಈ ಸಲ ಇವರ ಬರಿಗೈ ಮೋಡಿಗೆ ಮರುಳಾಗದ ಈ ಸಮುದಾಯಗಳ ಬಹುತೇಕರು ಬಿಎಸ್‌ಪಿ ಕಡೆ ವಾಲಿ ತಕ್ಕ ಪಾಠ ಕಲಿಸಿದ್ದಾರೆ.

ಹದಿನಾಲ್ಕು ವರ್ಷಗಳ ಸುಧೀರ್ಘ ಅವಧಿಯ ನಂತರ ಏಕೈಕ ದೊಡ್ಡ ಪಕ್ಷವಾಗಿ ಅಸ್ಥಿರ ಸರಕಾರದ ಜಾಗದಲ್ಲಿ ೧೫ ವರ್ಷಗಳ ಸ್ಥಿರ ಸರ್ಕಾರವನ್ನು ರಚಿಸಲು ಬೇಕಾದ ಮ್ಯಾಜಿಕ್ ನಂಬರ್ ಪಡೆಯಲು ಬಿಎಸ್‌ಪಿ ನಡೆಸಿದ ಹೋರಾಟ ಬಹಳ ರೋಚಕವಾದದ್ದು. "ರಾಜಕೀಯ ಶಕ್ತಿ ಎನ್ನುವುದು ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಬೀಗದ ಕೈ ಇದ್ದಂತೆ. (political power is the master key to solve all the problems). ಈ ದೇಶದ ಬಹುಜನರು ದೇಶವನ್ನಾಳುವುದನ್ನು ನಾನು ನೋಡಬೇಕು" ಎಂಬ ಡಾ॥ ಬಿ.ಆರ್. ಅಂಬೇಡ್ಕರರ ಅಂತಿಮ ಬಯಕೆಯನ್ನು ನನಸಾಗಿಲು ಪಣ ತೊಟ್ಟವರು ಕಾನ್ಶಿರಾಮ್. ಅದಾಗಲೇ ಒಡೆದು ಛಿದ್ರವಾಗಿ ಮಹಾರಾಷ್ಟ್ರದ ಕೆಲವು ಕಡೆಗಳಲ್ಲಿ ಮಾತ್ರ ಐಡೆಂಟಿಯನ್ನು ಉಳಿಸಿಕೊಂಡಿದ್ದ ಆರ್‌ಪಿಐ ಬದಲು ಬಿಎಸ್‌ಪಿಯನ್ನು ಸ್ಥಾಪಿಸಿದ ಕಾನ್ಶಿರಾಮ್, ವೋಟ್ ಹಮಾರ-ರಾಜ್ ತುಮ್ಹಾರ, ಯೇ ನಹೀ ಚಲೇಗಾ-ನಹೀ ಚಲೇಗಾ ಎಂಬ ಘೋಷಣೆಯೊಂದಿಗೆ, ನಾನು ಭಿಕ್ಷುಕರನ್ನು ಆಳುವ ದೊರೆಗಳನ್ನಾಗಿ ಮಾಡುತ್ತೇನೆ ಎಂಬ ಆತ್ಮ ವಿಶ್ವಾಸದೊಂದಿಗೆ ೧೯೮೪ರಲ್ಲಿ ಬಿಎಸ್‌ಪಿಗೆ ತಳಪಾಯ ಹಾಕಿದರು. ಇದಕ್ಕೆ ಪೂರ್ವಭಾವಿಯಾಗಿ ೧೯೭೮ ರಲ್ಲಿ BAMCF ಎನ್ನುವ ಸುಶಿಕ್ಷಿತ ನೌಕರರ ಸಂಘವನ್ನು DS4 (ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ) ಎಂಬ ವಿಚಾರವಾದಿಗಳ-ಚಿಂತಕರ ವೇದಿಕೆಯನ್ನು ರೂಪಿಸಿದ್ದರು.

ಆರಂಭದಲ್ಲಿ-ತಿಲಕ್, ತರಾಜ್ ಔರ್ ತಲ್ವಾರ್-

ಇನ್ ತೀನೋಂಕೋ ಜೂತೇ ಮಾರೋ (ಬ್ರಾಹ್ಮಣರು, ವೈಶ್ಯರು ಮತ್ತು ಕ್ಷತ್ರಿಯರನ್ನು ಚಪ್ಪಲಿಯಿಂದ ಹೊಡೆಯಿರಿ) ಎಂಬ ಕರೆಯಿಂದ ದಲಿತ ಮತ್ತು ಇತರೆ ತಳಸಮುದಾಯಗಳಲ್ಲಿ ಆತ್ಮಸ್ಥೈರ್ಯ ಸ್ವಾಭಿಮಾನವನ್ನು ಮೂಡಿಸಿ ಬಿಎಸ್‌ಪಿಯತ್ತ ಸೆಳೆದುಕೊಂಡರು. ಯು.ಪಿ.ಯಲ್ಲಿರುವ ಬಹುತೇಕ ಚರ್ಮ ಕೈಗಾರಿಕೆ ನಡೆಸುವ ಮುಸಲ್ಮಾನರು ದಲಿತ ಮೂಲದವರಾಗಿದ್ದು, ಅವರೂ ಬಿಎಸ್‌ಪಿಯೆಡೆಗೆ ಆಕರ್ಷಿತರಾದರು. ಹೀಗೆ ಹೆಚ್ಚೂ ಕಡಿಮೆ ಕಾಂಗ್ರೆಸ್ ಪಕ್ಷದ ಸಾಂಪ್ರದಾಯಿಕ ವೋಟ್‌ಬ್ಯಾಂಕನ್ನು ಅದು ಆಕ್ರಮಿಸಿಕೊಂಡಿತು. ಎಸ್‌ಪಿ ಮತ್ತು ಬಿಜೆಪಿ ಪಕ್ಷಗಳು ಬಲಾಢ್ಯ ಭೂಮಾಲೀಕ ಯಾದವ ಠಾಗೂರ್‌ರಂಥ ಜಾತಿಗಳನ್ನು ಹಾಗೂ ಬ್ರಾಹ್ಮಣ, ಲೋಧಿ, ಜಾಟ್ ಇತ್ಯಾದಿ ಮೇಲ್ಜಾತಿ ಮತಗಳನ್ನು ತಮ್ಮೆಡೆ ಸೆಳೆದುಕೊಂಡವು. ಮತಗಳ ವಿಭಜನೆಯಿಂದ ಯಾವುದೇ ಪಕ್ಷಕ್ಕೆ ಬಹುಮತ ದೊರೆಯದಿದ್ದಾಗ, ಭಾರತ ಜಾತಿ ರಾಜಕಾರಣದ ಚಾಣಕ್ಯ ಕಾನ್ಷಿರಾಮ್ ಅಧಿಕಾರ ಹಂಚಿಕೆ ಸೂತ್ರದಡಿ (power bargain) ೧೯೯೫, ೧೯೯೭ ಹಾಗೂ ೨೦೦೨ರಲ್ಲಿ ಮಾಯಾವತಿಯವರನ್ನು ಯು.ಪಿ.ಯ ಮುಖ್ಯಮಂತ್ರಿಯನ್ನಾಗಿಸಿದರು. ನೀನು ಮಾತನಾಡಬಾರದು–ನಿನ್ನ ಕೆಲಸ ಮಾತಾಡಬೇಕು (you should not speak, your work should speak) ಎಂದು ಮಾಯಾವತಿಯವರಿಗೆ ಆದೇಶಿಸಿದ್ದರು.

ಈ ಆದೇಶವನ್ನು ಶಿರಸಾವಹಿಸಿ ಅನುಷ್ಠಾನಗೊಳಿಸಿದ ಮಾಯಾವತಿಯವರು, ತಾವು ೩ ಸಾಲ ಮುಖ್ಯಮಂತ್ರಿಯಾದ ಒಟ್ಟಾರೆ ೧೮ ತಿಂಗಳು ಅವಧಿಯಲ್ಲಿ ಹಗಲಿರುಳು ಸರ್ಕಾರಿ ಯಂತ್ರವನ್ನು ಜನರ ಒಳತಿಗೆ ಬಳಸಿಕೊಂಡರು. ಭೂರಹಿತರಿಗೆ ೧೦ಲಕ್ಷ ಭೂಮಿ ಹಂಚಿ, ಭೂಮಾಲೀಕರ ದೌರ್ಜನ್ಯದಿಂದ ವಿಮುಕ್ತಿಗೊಳಿಸಿದರು. ೫೦,೦೦೦ ಬ್ಯಾಕ್‌ಲಾಗ್ ಹುದ್ದೆ ತುಂಬಿದರು. ಅವಕಾಶ ವಂಚಿತ ಲಕ್ಷಾಂತರ ಜನರಿಗೆ ಅವಕಾಶಗಳನ್ನು ಸೃಷ್ಟಿಸಿದರು. ಕಾನೂನು ಸುವ್ಯವಸ್ಥೆಗೆ ಛಾಲೆಂಜ್ ಆಗಿದ್ದ ೧ಲಕ್ಷ ೪೦,೦೦೦ ಕ್ರಿಮಿನಲ್‌ಗಳನನ್ನು ಅಟ್ರಾಸಿಟಿ ಕೇಸಿನಡಿ ಜೈಲಿಗಟ್ಟಿದರು. ರಾಜಾಭೈಯ್ಯಾನಂಥ ಕೊಲೆಗಡುಕ ರೌಡಿ ಶಾಸಕನನ್ನು ಬಂಧಿಸಿ, ಬಹುಜನರ ಮನಸ್ಸಿನಲ್ಲಿ ನಿಜಜೀವನದ ನಾಯಕಿಯಾಗಿ ಉಳಿದರು. ಕ್ರಿಮಿನಲ್–ಫ್ಯೂಡಲ್ ಹಿನ್ನಲೆಯ ರೌಡಿಗಳನ್ನು ಎದುರು ಹಾಕಿಕೊಳ್ಳದೆ ಬಿಜೆಪಿ, ಎಸ್.ಪಿ, ಕಾಂಗ್ರೆಸ್ ಮತ್ತಿತರ ಪಕ್ಷಗಳು ಅನುಕೂಲ ಸಿಂಧು ರಾಜಕಾರಣಕ್ಕೆ ಶರಣಾದದ್ದು ಜನಸಾಮಾನ್ಯರಲ್ಲಿ ಅಸಹನೆಯನ್ನುಂಟು ಮಾಡಿತು. ಮಾಯಾವತಿಯವರ ಆಡಳಿತದ ಗಮನಾರ್ಹ ಸಂಗತಿ ಎಂದರೆ ಕೋಮುವಾದ ಹೆಡೆ ಎತ್ತದಂತೆ ಹೆಡೆಮುರಿಗೆ ಕಟ್ಟಿದ್ದು.

ಮನಿ, ಮೀಡಿಯಾ, ಮಸ್ಕಲ್ ಪವರ್ ಇಲ್ಲದೆ ಅತ್ಯಂತ ಕಡಿಮೆ ಅವಧಿಯಲ್ಲಿ ತನ್ನ ವಿಶಿಷ್ಟ ಶೈಲಿ ಮತ್ತು ಸಾಧನೆಯೊಂದಿಗೆ ಕಾನ್ಷಿರಾಮ್ ಮತ್ತು ಮಾಯಾವತಿಯವರ ದಲಿತ ರಾಜಕಾರಣ ರಾಷ್ಟ್ರದಾದ್ಯಂತ ತ್ವರಿತ ಗತಿಯಲ್ಲಿ ಹರಡಿ ಬಿಜೆಪಿ–ಕಾಂಗ್ರೆಸ್ ನಂತರದ ೩ನೇ ಅತಿ ದೊಡ್ಡ ರಾಷ್ಟ್ರೀಯ ಪಕ್ಷವಾಗಿ ಬೆಳೆಯಿತು. ಇದರಿಂದ ಕನಲಿದ ಬಿಜೆಪಿ, ೨೦೦೩ರಲ್ಲಿ ತಾಜ್ ಕಾರಿಡಾರ್ ಪ್ರಕಾರಣ ಸೃಷ್ಟಿಸಿತು. ಅದರ ಬಗ್ಗೆ ಸುಪ್ರೀಂಕೋರ್ಟ್ ತನಿಖೆಗೆ ಆದೇಶಿಸಿದಾಗ ಮಾಯಾವತಿಯವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು. ಪಕ್ಷದ ಸಂಘಟನೆಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡು ಆರೋಗ್ಯ ಹದಗೆಡಿಸಿಕೊಂಡು ಇಡೀ ದೇಶವನ್ನೇ ಸುತ್ತಾಕುತ್ತಿದ್ದ ಕಾನ್ಷಿರಾಮ್‌ರವರು ೨೦೧ರಲ್ಲಿ ಲಕ್ನೋದಲ್ಲಿ ಮಾಯಾವತಿಯವರನ್ನು

ಮಾಯಾವತಿ ಗೆಲುವು – ಒಂದು ಚಾರಿತ್ರಿಕ ಘಟನೆ

ಉತ್ತರ ಪ್ರದೇಶದಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ ನಿಚ್ಚಳ ಬಹುಮತ ಪಡೆದು, ಅಧಿಕಾರದ ಸೂತ್ರವನ್ನು ಹಿಡಿಯುತ್ತಿರುವುದು ಹಲವು ಕಾರಣಗಳಿಗಾಗಿ ಒಂದು ಚಾರಿತ್ರಿಕವಾದ ಘಟನೆಯಾಗಿದೆ.

೧. ಆಧುನಿಕೋತ್ತರ ಕಾಲಘಟ್ಟದಲ್ಲಿದ್ದರೂ, ಸನಾತನೀಯವಾದ ಸಮಾಜೋ–ಸಾಂಸ್ಕೃತಿಕ ಮನಃಸ್ಥಿತಿಗಳನ್ನೇ ಉಸಿರಾಡುತ್ತಿರುವ ಭಾರತೀಯ ಮನಸ್ಸುಗಳಿಗೆ, ಸಂವಿಧಾನ ಬದ್ಧವಾದ ಜಾತ್ಯಾತೀತತೆಯನ್ನಾಗಲೀ, ಲಿಂಗೀಯ ಸಮಾನತೆಯನ್ನಾ ಗಲೀ ಸಾಧಿಸುವುದು ಇನ್ನೂ ಸಾಧ್ಯವಾಗಿಲ್ಲ. ತಳಸ್ತರದ ಮೇಲೆ ಮೇಲುಜಾತಿಯ ಅಮಾನವೀಯ, ಅನಾಗರೀಕವಾದ ಕ್ರೌರ್ಯಕ್ಕೆ ದಿನನಿತ್ಯ ಹಲವು ಘಟನೆಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ಇಂಥ ಸಂಧರ್ಭದಲ್ಲಿ ದಲಿತ ಸಮುದಾಯವೊಂದರಿಂದ (ಚಮ್ಮಾರ) ಬಂದ ಮಾಯಾವತಿ, ಹಿಂದೂ ಎಂದು ವ್ಯಾಖ್ಯಾನಿಸಲ್ಪಡುವ ಮೇಲು ಜಾತಿಗಳ ಹಿಡಿತದಲ್ಲಿರುವ ಉತ್ತರ ಪ್ರದೇಶದ ಅತ್ಯುನ್ನತ ಅಧಿಕಾರದ ಸೂತ್ರವನ್ನು ಹಿಡಿದಿರುವುದು ದಲಿತರ ರಾಜಕೀಯ ಅಧಿಕಾರದ ಪ್ರಾಪ್ತಿಯ ಕನಸಿಗೆ ಹಾರಿದ ಒಂದು ಭದ್ರವಾದ ಬುನಾದಿಯಾಗಿದೆ.

೨. ಭಾರತದ ಅಧಿಕಾರ ರಾಜಕಾರಣದಲ್ಲಿ ಸದಾ ಬದಿಗೆ ತಳ್ಳಲ್ಪಡುತ್ತಿರುವ, ಒಂದು ವಿಚಿತ್ರ ರೀತಿಯಾದ ಇಕ್ಕಟ್ಟಿನಲ್ಲೇ ಕೆಲಸ ಮಾಡುವ ದಲಿತ ರಾಜಕಾರಣಿಗಳ ಇತಿಹಾಸದ ಹಿನ್ನೆಲೆಯಲ್ಲಿ, ಈ ಬೆಳವಣಿಗೆ ಗಮನಾರ್ಹವಾದುದು. ಬಹಳಷ್ಟು ನಿರೀಕ್ಷೆ ಹುಟ್ಟಿಸಿದ್ದ, ಒಳ್ಳೆಯ ಮುತ್ಸದ್ಧಿ ಎಂಬ ಹೆಸರು ಮಾಡಿದ್ದ, ಅಪಾರವಾದ ಜನಪ್ರಿಯತೆಯನ್ನೂ ಪಡೆದಿದ್ದ ರಾಮ್‌ವಿಲಾಸ್ ಪಾಸ್ವಾನ್‌ನಂಥ ಘಟಾನುಘಟಿಗಳೇ ಪರಿಧಿಗೆ ಸರಿದಿರುವ ಈ ಸಂದರ್ಭದಲ್ಲಿ, ಈ ಘಟನೆ, ಒಂದು ದಾಖಲಾರ್ಹವಾದ ಸಂಗತಿಯಾಗಿದೆ.

೩. ಭಾರತದ ರಾಜಕೀಯ ವಲಯದಲ್ಲಿ ಮಹಿಳೆಯರ ಸಾಧ್ಯಾಸಾಧ್ಯತೆಗಳ ಬಗ್ಗೆ ತೀವ್ರವಾದ ಅನುಮಾನಗಳಿವೆ. ಈ ದೇಶದ ರಾಜಕೀಯದಲ್ಲಿ ಅತ್ಯುನ್ನತ ಪದವಿಗೇರಿದ ಇಂದಿರಾಗಾಂಧಿ ಬೆಳದದ್ದೆ ಸಕ್ರಿಯವಾದ ರಾಜಕೀಯ ವಾತಾವರಣದಲ್ಲಿ ತಂದೆಯ ಪ್ರಭಾವ, ಕಾಂಗ್ರೆಸ್‌ನ ವರ್ಚಸ್ಸು ಆಕೆಗಿತ್ತು. ಅನುವಂಶೀಯ ಆಳ್ವಿಕೆಗೆ ಪ್ರಾಧಾನ್ಯತೆಯನ್ನು ನೀಡುವ ಈ ಸಂಸ್ಕೃತಿಯ Psychi ಆಕೆಯನ್ನು ಪ್ರಧಾನಿಯಾಗಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ದಲಿತಳಷ್ಟೇ ಅಲ್ಲದೆ, ಮಹಿಳೆಯೂ ಆಗಿದ್ದು, ಈ ರೀತಿಯ ಯಾವುದೇ ಹಿನ್ನೆಲೆಯಿಲ್ಲದೆಯೇ, ೧೯೮೪ರಲ್ಲಿ ಕಾನ್ಷಿರಾಮ್ ಅವರನ್ನು ಬೇಟಿ ಯಾಗಿದ್ದೆ, ಆಕೆಯ ಮೊದಲ ರಾಜಕೀಯ Stint ಆಗಿತ್ತು. ಮತ್ತೆ ಹಿಂದಿರುಗಿ ನೋಡದೆ, ಕೇವಲ ೨೨ ವರ್ಷದಲ್ಲಿ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗುತ್ತಿರುವುದು ತಮಾಷೆಯ ಮಾತಲ್ಲ. ಆರಂಭದಲ್ಲಿ ಕಾನ್ಷಿರಾಂರ ಛತ್ರಛಾಯೆ ಮಾಯಾವತಿಗಿದ್ದರೂ, ನಂತರ, ಆಕೆ ಬೆಳೆದದ್ದು ತನ್ನ ವೈಯಕ್ತಿಕ ವರ್ಚಸ್ಸಿನಿಂದ. ಆದ್ದರಿಂದ, ಈ ಗೆಲುವು ಅತ್ಯಂತ ಶಕ್ತಿಯುತವಾದ, ಪ್ರಭಾವಶಾಲಿಯಾಗಿದ್ದ, ರಾಜಕೀಯ ಹಿನ್ನೆಲೆಯಿಂದ ಬಂದ ಪುರುಷ ರಾಜಕಾರಣಿಗಳ ಹುಬ್ಬನ್ನೇರಿಸಿದ್ದರೆ ಆಶ್ಚರ್ಯವೇನಿಲ್ಲ. ಈ ಕಾರಣದಿಂದ ಇಲ್ಲಿ ಕೆಲಸ ಮಾಡುತ್ತಿರುವ equation (ಇಕ್ವೆಷನ್) – ದಲಿತ+ಮಹಿಳೆ ಮುಖ್ಯವಾದುದು. ಇದು ಪರಿಧಿಯಲ್ಲಿರುವ ಎರಡು ಅಂಶಗಳನ್ನು (ದಲಿತ+ಮಹಿಳೆ) ಕೇಂದ್ರಕ್ಕೆ ತಂದಿದೆ. ಅದರಲ್ಲೂ ಮಾಯಾವತಿ, ಕೇಂದ್ರ ಸರ್ಕಾರದ ಮೇಲೆ ತೀವ್ರವಾದ ಪ್ರಭಾವವನ್ನು ಬೀರುವ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿರುವುದು ಸರಳವಾದ ಮಾತಲ್ಲ.

೩. ಬಹಳ ಮುಖ್ಯವಾದ ಇನ್ನೊಂದು ಸಂಗತಿ ಎಂದರೆ, ಈ ಬಾರಿಯ ಚುನಾವಣೆಗೆ ಮಾಯಾವತಿ ಮೇಲು–ವರ್ಗದ ಮೈತ್ರಿಯನ್ನು ಪಡೆದುಕೊಂಡು ಯಶಸ್ವಿಯಾಗಿರುವುದು. ಸತೀಶ್ ಮಿಶ್ರಾ ಎನ್ನುವ ಲಖನೌನ ಬ್ರಾಹ್ಮಣ ಜಾತಿಯ ನ್ಯಾಯವಾದಿ, ಮಾಯಾವತಿಯ ಮುಖ್ಯ ಸಲಹೆಗಾರನಾಗಿದ್ದಾನೆ. ಇದು, ದಲಿತ ಮತ್ತು ಬ್ರಾಹ್ಮಣರನ್ನು ದ್ವಿಮಾನ ವೈರುಧ್ಯಗಳ ಬಿಂದುವಾಗಿಯೇ ನೋಡುವ ಭಾರತೀಯ ರಾಜಕಾರಣಕ್ಕೆ ಹೊಸ ಸಂಕಥನದ ನಾಂದಿಯಾಗಿ ಕಾಣುತ್ತಿದೆ. Isolationist ಆದ ನಿಲುವನ್ನು ಪ್ರತಿಪಾದಿಸುವ ದಲಿತರೆಲ್ಲಾ, ಈ ವಿಷಯದ ಬಗ್ಗೆ ಮರುಚಿಂತನೆಯನ್ನು ನಡೆಸಬೇಕಾದ ಅಗತ್ಯವಿದೆ.

ಬಿಎಸ್‌ಪಿಯ ವಿಸ್ತೃತ ರಾಜನೀತಿಯ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು.

ಈಗಾಗಲೇ ೩ಬಾರಿ ಮುಖ್ಯಮಂತ್ರಿಯಾಗಿ ದಕ್ಷ ಆಡಳಿತ ನೀಡಿದ್ದ ಮಾಯಾವತಿಯವರ ಸಾಧನೆಗಳನ್ನು ಗುರುತಿಸುವ ಹೃದಯವಂತಿಕೆ ಇಲ್ಲಿನ ಮೇಲ್ಜಾತಿ ನಿಯಂತ್ರಣದಲ್ಲಿರುವ ಮೀಡಿಯಾಗಳಿಗೆ ಹಾಗೂ ರಾಜಕೀಯ ಪಕ್ಷಗಳಿಗೆ ಇರಲಿಲ್ಲ. ಬಿಎಸ್‌ಪಿಗೆ ಯಾವುದೇ ಸಿದ್ಧಾಂತವಿಲ್ಲ. ಅದೊಂದು ಅವಕಾಶವಾದಿ ಪಕ್ಷ. ಅಧಿಕಾರದ ದಾಹಕ್ಕಾಗಿ ಬಿಜೆಪಿಯೊಂದಿಗೆ ಕೈ ಜೋಡಿಸಿದ ಮಾಯಾವತಿಯವರಿಗೂ ನರೇಂದ್ರಮೋದಿಗೂ ಯಾವುದೇ ವ್ಯತ್ಯಾಸವಿಲ್ಲ ಎಂಬ ಧಾಟಿಯಲ್ಲಿ ಗುಲ್ಲೆಬ್ಬಿಸಿದವು. ರಾಮಕೃಷ್ಣ ಹೆಗಡೆ, ವಿ.ಪಿ. ಸಿಂಗ್, ಶರದ್‌ಯಾದವ್, ಕರುಣಾನಿಧಿ, ಜಯಲಲಿತಾ, ಚಂದ್ರಬಾಬುನಾಯ್ಡು, ದೇವೇಗೌಡ ಮುಂತಾದ ಮೇಲ್ಜಾತಿ ನಾಯಕರು ಅಧಿಕಾರಕ್ಕಾಗಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡರೂ ಸೆಕ್ಯುಲರ್ ಲೀಡರ್‌ಗಳಾಗುವರು, ಮಾಯಾವತಿಯವರು ಮಾತ್ರ ಕಮ್ಯುನಲ್ ಆಗಿ ಕಾಣುವುದು ವಿಪರ್ಯಾಸವಾಗಿದೆ.

ಮನುವಾದಿಗಳ ಈ ರೀತಿಯ ನಿರಂತರ ಪ್ರಯತ್ನದ ನಡುವೆಯೂ ಮುಸ್ಲಿಮರನ್ನು ಕೇವಲ ಓಟಿನ ರಾಜಕಾರಣಕ್ಕಾಗಿ ಓಲೈಸುವ ರಾಜಕಾರಣವನ್ನು ಬಿಎಸ್‌ಪಿ ಮಾಡಲಿಲ್ಲ. ಕಳೆದ ಅಕ್ಟೋಬರ್ ತಿಂಗಳ ೮ನೇ ತಾರೀಖಿನಂದು ಬ್ರೈನ್‌ಸ್ಟ್ರೋಕ್‌ನಿಂದ ಮೃತರಾದ ಕಾನ್ಷಿರಾಮ್‌ರವರ ಅಗಲಿಕೆ ಬಿಎಸ್‌ಪಿಗೆ ಒಂದು ದೊಡ್ಡ ಹಿನ್ನಡೆಯಾಗದಂತೆ ಮುನ್ನಡೆಸಿದ ಖ್ಯಾತಿ ಮಾಯಾವತಿಯವರದು. ಭಾರತದ ಜಾತಿರಾಜಕಾರಣದ ಚಾಣಕ್ಯ ದಿವಂಗತ ಕಾನ್ಷಿರಾಮ್‌ರವರ ಗರಡಿಯಲ್ಲಿ ರಾಜಕೀಯ ದಾಳದ ಪಟ್ಟುಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ಅವರು ಈ ಸಲ BMW ಫ್ಯಾಕ್ಟರ್ ರೂಪಿಸಿ ಬ್ರಾಹ್ಮಣ, ಮುಸ್ಲಿಂ ಹಾಗೂ ಇತರೆ ಹಿಂದುಳಿದ ವರ್ಗಗಳನ್ನು ಬಿಎಸ್‌ಪಿ ತೆಕ್ಕೆಯೊಳಗೆ ಎಳೆದುಕೊಳ್ಳುವ ಯೋಜನೆ ರೂಪಿಸಿ ಯಶಸ್ವಿಯಾದರು. (BMW Brahmin, muslim & weaker sections) ಈ ರಣ ನೀತಿಗೆ ಬ್ರಾಹ್ಮಣ ಜನಾಂಗದ ಸತೀಶ್ ಚಂದ್ರ ಮಿಶ್ರಾ ಹಾಗೂ ಮುಸ್ಲಿಂ ಸಮುದಾಯದ ನಾಸೀ ಮುದ್ದೀನ್ ಸಿದ್ಧಿಕಿ ಸಾಥ್ ನೀಡಿದರು.

ಬಿಎಸ್‌ಪಿಯ ರಾಷ್ಟ್ರೀಯ ಮಹಾಕಾರ್ಯದರ್ಶಿಯಾಗಿರುವ ಎಸ್.ಪಿ. ಮಿಶ್ರಾ ರಾಜ್ಯದ ೨೦ ಜಿಲ್ಲೆಗಳಲ್ಲಿ 'ಬ್ರಾಹ್ಮಣ-ದಲಿತ ಸ್ನೇಹ ಸಮಿತಿ' ರಚಿಸಿದರು. ರಾಜ್ಯದೆಲ್ಲೆಡೆ ಈ ಸಮಿತಿಯ ಸಭೆ, ರ‍್ಯಾಲಿ, ಸಮಾವೇಶಗಳು ನಡೆದವು. ೯೮ ಬ್ರಾಹ್ಮಣ ಸಮಾವೇಶವನ್ನು ಮಿಶ್ರಾ ಸಂಘಟಿಸಿದ್ದರು. ಈ ಕೆಲಸಕ್ಕಾಗಿಯೇ ಅವರಿಗೆ ಹೆಲಿಕ್ಯಾಪ್ಟರ್ ಒಂದನ್ನು ವ್ಯವಸ್ಥೆ ಮಾಡಲಾಗಿತ್ತು. ಕೆಲವರ ಪ್ರಕಾರ, ದಲಿತ ಪಕ್ಷದಲ್ಲಿನ ಬ್ರಾಹ್ಮಣ ಮೆದುಳು ಎಂದೇ ಫೇಮಸ್ ಆಗಿರುವ ಮಿಶ್ರಾ ಯು.ಪಿ. ಯಲ್ಲಿ ಬಹುಸಂಖ್ಯಾತ ಸಮುದಾಯವಾಗಿದ್ದು ರಾಜಕೀಯವಾಗಿ ನಿರ್ಲಕ್ಷ್ಯಕ್ಕೊಳಗಾಗಿದ್ದ ಬ್ರಾಹ್ಮಣ ಜಾತಿಯ ಮತಗಳನ್ನು ಬಿಎಸ್‌ಪಿಯೆಡೆಗೆ ತಿರುಗಿಸಲು ಸಫಲರಾದರು. ಠಾಗೂರ್, ಯಾದವ್, ಲೋಧಿ ಇತ್ಯಾದಿ ಫ್ಯೂಡಲ್ ಜಾತಿಗಳೇ ದಲಿತರ ಶೋಷಕರೆಂಬುದನ್ನು ಬಿಎಸ್‌ಪಿ ಶೋಷಿತ ಸಮುದಾಯಗಳಿಗೆ ಮನವರಿಗೆ ಮಾಡಿಕೊಟ್ಟಿತ್ತು.

ಸತೀಶ್ ಚಂದ್ರ ಮಿಶ್ರಾ ಬಿಎಸ್‌ಪಿಯ ಬ್ರಾಹ್ಮಣ ಮುಖವಾದರೆ, ನಾಸಿಮುದ್ದೀನ್ ಸಿದ್ದಿಕಿ ಬಿಎಸ್‌ಪಿಯ ಮುಸ್ಲಿಮ್ ಮುಖ. ಪಕ್ಷದ ಯುವಘಟಕದ ಅಧ್ಯಕ್ಷ ಮತ್ತು ಫಂಡ್‌ರೈಸರ್ (ಸಂಪನ್ಮೂಲ ಕ್ರೋಢೀಕರಣ) ಆಗಿರುವ ಸಿದ್ದಿಕಿ ಸತತ ೩ನೇ ಬಾರಿ ಗೆದ್ದುದಲ್ಲದೇ, ಮುಸ್ಲಿಮ್ ಮತ

ಈ ದೇಶದ ರಾಜಕೀಯದಲ್ಲಿ ಅತ್ಯುನ್ನತ ಪದವಿಗೇರಿದ ಇಂದಿರಾ ಗಾಂಧಿ ಬೆಳೆದದ್ದೆ ಸಕ್ರಿಯವಾದ ರಾಜಕೀಯ ವಾತಾವರಣದಲ್ಲಿ. ತಂದೆಯ ಪ್ರಭಾವ, ಕಾಂಗ್ರೆಸ್‌ನ ವರ್ಚಸ್ಸು ಆಕೆಗಿತ್ತು. ಅನುವಂಶೀಯ ಆಳ್ವಿಕೆಗೆ ಪ್ರಾಧಾನ್ಯತೆಯನ್ನು ನೀಡುವ ಈ ಸಂಸ್ಕೃತಿಯ Psychi ಆಕೆಯನ್ನು ಪ್ರಧಾನಿ ಯಾಗಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ದಲಿತರಷ್ಟೇ ಅಲ್ಲದೆ, ಮಹಿಳೆಯೂ ಆಗಿದ್ದು, ಈ ರೀತಿಯ ಯಾವುದೇ ಹಿನ್ನೆಲೆಯಿಲ್ಲದೆಯೇ, ೧೯೮೪ರಲ್ಲಿ ಕಾನ್ಷಿರಾಮ್ ಅವರನ್ನು ಬೇಟಿಯಾಗಿದ್ದೆ, ಮಾಯಾವತಿಯವರ ಮೊದಲ ರಾಜಕೀಯ Stint ಆಗಿತ್ತು. ಮತ್ತೆ ಹಿಂದಿರುಗಿ ನೋಡದೆ, ಕೇವಲ ೨೨ ವರ್ಷದಲ್ಲಿ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗುತ್ತಿರುವುದು ತಮಾಷೆಯ ಮಾತಲ್ಲ.

ಬಿ.ಯು. ಸುಮಾ



ಚಿತ್ರ ಕೃಪೆ: ಪ್ರಜಾವಾಣಿ

ಬ್ರಾಹ್ಮಣರ ಮತ್ತು ಮೇಲುಜಾತಿಯವರ ಒಲವು ಮಾಯಾವತಿಯ ಪರ ಇದೆ ಎಂದಾದ ಮೇಲೆ, ಅವರನ್ನು ದಲಿತರ ಶತ್ರುಗಳೆಂದು ನೋಡಬೇಕಾದ ಅಗತ್ಯವಿದೆಯೇ? ಈ ಮೈತ್ರಿಯ ಬಗ್ಗೆ ಅನೇಕ ರೀತಿಯ ಆತಂಕ, ಭಯ, ಗುಮಾನಿಗಳಿರುವುದನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಆದರೆ, ಭಾರತೀಯ ರಾಜಕೀಯದಲ್ಲಿ ಕೇವಲ ಅಧಿಕಾರಕ್ಕಾಗಿ ಎಂತೆಂಥ ಅಪವಿತ್ರ, ಅಸಿಂಧುವಾದ ಸಹಯೋಗಗಳು, ಅನೈತಿಕವಾದ ಐಡಿಯಾಲಜಿಗಳು ಸಾಧ್ಯವಾಗುತ್ತಿರುವ ಈ ಸಂದರ್ಭದಲ್ಲಿ, ಈ ಹೊಸ ಹೊಂದಾಣಿಕೆಗೆ ಒಂದು ಅವಕಾಶವನ್ನು ನೀಡಬೇಕಾದ ಅಗತ್ಯವಿದೆ. ಅಲ್ಲದೇ ಇಂದು ದಲಿತರು ಕೂಡ ಎಲ್ಲಾ ರೀತಿಯ ಯಾಜಮಾನ್ಯದ ವಿರುದ್ಧ ನಿಂತುಕೊಳ್ಳುವಷ್ಟು ಸಬಲರಾಗಿದ್ದಾರೆ.

೪. ಈ ಸಹಯೋಗದಿಂದ ಬಿಜೆಪಿ ಕನಲಿ ಹೋಗಿದ್ದು ಎಲ್ಲರೂ ಗಮನಿಸಲೇಬೇಕಾದ ಅತ್ಯಂತ ಮುಖ್ಯವಾದ ವಿಷಯವಾಗಿದೆ. ಈ ರಾಷ್ಟ್ರವನ್ನು ಕೋಮುದಳ್ಳುರಿಯ ಬೇಗೆಗೆ ತಳ್ಳಿದ ಪಕ್ಷವನ್ನು ಹತ್ತಿಕ್ಕುವುದಕ್ಕೆ ಇಂಥ ಅಸಂಪ್ರದಾಯಕವಾದ ಸಹಯೋಗಗಳು ಸಹಕಾರಿಯಾಗುವುದಾದರೆ, ಯಾಕೆ ಬೇಡ...? ಜನಹಿತಕ್ಕೆ ವಿರೋಧಿಯಾಗಿರುವ ಇಂಥ ಶಕ್ತಿಗಳನ್ನು ಯಾವುದೇ ರೀತಿಯಿಂದ ನಿರ್ಮೂಲನ ಮಾಡುವುದು, ಭಾರತದ ಭವಿಷ್ಯತ್ತಿನ ದೃಷ್ಟಿಯಿಂದ ಅತ್ಯಂತ ತುರ್ತಾದ ಸಂಗತಿಯಾಗಿದೆ.

೫. ಎಲ್ಲಕ್ಕಿಂತ ಮುಖ್ಯವಾಗಿ, ಇಷ್ಟು ಸ್ಪಷ್ಟ ಬಹುಮತ ಪಡೆದು, ೧೪ ವರ್ಷಗಳ ನಂತರ, ಉತ್ತರಪ್ರದೇಶದಲ್ಲಿ ಏಕಪಕ್ಷದ ಆಳ್ವಿಕೆ ಬರುತ್ತಿದೆ ಎಂದರೆ, ಅದೂ ನಾಲ್ಕನೇ ಬಾರಿ ಮಾಯಾವತಿಗೆ ಅವಕಾಶ ದೊರೆತಿದೆ ಎಂದರೆ, ಬೇರೆ ಯಾರಲ್ಲೂ ಕಾಣದ ಗುಣಗಳನ್ನು, ಅಲ್ಲಿನ ಜನ ಈ 'ದಲಿತ' ನಾಯಕಿಯಲ್ಲಿ ಕಂಡಿದ್ದಾರೆಂದರೆ, ಅದೊಂದು ಮೈಲಿಗಲ್ಲಾಗಬಹುದಾದ ದೊಡ್ಡ ಬದಲಾವಣೆಯತ್ತ ಬೆರಳು ತೋರುತ್ತಿದೆ ಎಂದೇ ಅರ್ಥ. □

ಗಳನ್ನು [illegible] ವರ್ಗಾಯಿಸಿದ ತಣ್ಣನೆಯ ವ್ಯಕ್ತಿತ್ವದ ಪಕ್ಕಾ ಕೆಲಸಗಾರ.

ಎಲ್ಲ ಚುನಾವಣೆಗಳ ಪ್ರಣಾಳಿಕೆ ಮತ್ತು ಮತ ಸೆಳೆಯುವ ತಂತ್ರಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ಮಾಯಾವತಿಯವರು ತಮ್ಮ ಪಕ್ಷದಿಂದ ಯಾವುದೇ ಪ್ರಣಾಳಿಕೆ ಹೊರರಸದೆ, ಮಾಧ್ಯಮಗಳ ಮರ್ಜಿಗೆ ಕಾಯದೆ, ತಮ್ಮದೇ ಆದ ವಿಶಿಷ್ಟ ರಣತಂತ್ರವನ್ನು ರೂಪಿಸಿ ರಾಜಕೀಯ ಪಂಡಿತರ ಲೆಕ್ಕಾಚಾರ ತಲೆಕೆಳಗಾಗಿಸಿದ್ದಾರೆ. ಮಾಧ್ಯಮಗಳ ಸಮೀಕ್ಷೆಗಿಂತಲೂ ಅಧಿಕ ಸ್ಥಾನಗಳನ್ನು ಪಡೆದು ಶಾಕ್ ನೀಡಿದ್ದಾರೆ. ಮಾಯಾವತಿಯವರ ರಣ ತಂತ್ರವನ್ನು ಇತ್ತೀಚೆಗಿನ ದಶಕಗಳಲ್ಲೇ ರಾಜಕಾರಣ ಕಂಡ ಅತಿದೊಡ್ಡ 'ಸಾಮಾಜಿಕ ಬದಲಾವಣೆ' (Social engineering) ಎನ್ನುಲಾಗುತ್ತಿದೆ. ಚುನಾವಣಾ ಪ್ರಚಾರದ ಕಾಲದಲ್ಲಿ ಅವರು ಭಾಗವಹಿಸುತ್ತಿದ್ದುದು ದಿನಕ್ಕೆರಡು ಸಭೆಗಳಲ್ಲಿ ಮಾತ್ರ. ಆದರೆ ಅದಕ್ಕಿಂತ ಮೊದಲು ರಾಜ್ಯದ ಪ್ರತಿಯೊಂದು ಹಳ್ಳಿಯನ್ನೂ ಸುತ್ತಿದ್ದಾರೆ. ಕಳೆದ ಲೋಕಸಭಾ ಚುನಾವಣೆ ಮುಗಿದ ದಿನದಿಂದಲೇ ವಿಧಾನಸಭಾ ಚುನಾವಣೆಯ ಸಿದ್ಧತೆ ಆರಂಭಿಸಿದ್ದ ಅವರು, ಆರು ತಿಂಗಳು ಮುಂಚೆಯೇ ೧೫೦ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿ ಪ್ರಚಾರ ಪ್ರಾರಂಭಿಸಿದ್ದರೆಂದರೆ, ಬಿಎಸ್‌ಪಿಯ ಪೂರ್ವ ತಯಾರಿ ಹೇಗಿದ್ದಿರಬಹುದೆಂದು ನೀವೇ ಊಹಿಸಿ. ಬಿಎಸ್‌ಪಿಯ ರಣ ನೀತಿಯ ಜೊತೆಗೆ ನಿಷ್ಪಕ್ಷಪಾತ ನಿರ್ಭೀತ ಚುನಾವಣೆ ನಡೆಯಲು ಕಾರಣವಾದ ಚುನಾವಣಾ ಆಯೋಗದ ದಕ್ಷತೆಯೂ ಅಭಿನಂದನೀಯ. ಶೇಕಡ ೫೦ಕ್ಕಿಂತಲೂ ಕಡಿಮೆ ಮತದಾನ ನಡೆದರೂ ಸಹ ಬೆಹನ್‌ಜಿ (ಅಕ್ಕ) ಮಾಯಾವತಿಯವರ ಅಣತಿಯಂತೆ ಮತಗಟ್ಟೆಗಳಿಗೆ ತೆರಳಿ ಮತ ಚಲಾಯಿಸಿದ ಆ ಪಕ್ಷದ ಕಾರ್ಯಕರ್ತರ ಬದ್ಧತೆ ಇತರ ಪಕ್ಷಗಳಿಗೆ ಮಾದರಿಯಾಗುವಂತಿದೆ.

ಈ ಸಲದ ಯು.ಪಿ. ಚುನಾವಣೆಯ ಗೆಲುವು, ಕಾನ್ಶಿರಾಮ್‌ರವರ ೩ ಶಪಥಗಳಲ್ಲಿ ಒಂದಾದ ಸ್ವಂತ ಬಲದ ಮೇಲೆ ರಾಜ್ಯದಲ್ಲಿ ಸರ್ಕಾರ ರಚಿಸಬೇಕೆನ್ನುವುದು ಈಡೇರಿದಂತಾಗಿದೆ. ಇನ್ನೆರಡು ಶಪಥಗಳಾದ–ಭಾರತವು ಬಿಎಸ್‌ಪಿಯ ಕಬ್ಜಾ ಆಗಬೇಕು ಹಾಗೂ ಅಶೋಕನ ಕಾಲದ ಪ್ರಬುದ್ಧ ಭಾರತ ನಿರ್ಮಾಣವಾಗಬೇಕೆಂಬ ಶಪಥಗಳು ಬಾಕಿ ಇವೆ. ನೆಹರೂ, ಇಂದಿರಾ, ರಾಜೀವ್, ಲಾಲ್ ಬಹದ್ದೂರ್ ಶಾಸ್ತ್ರಿ, ವಿ.ಪಿ. ಸಿಂಗ್‌ರಂಥ ಪ್ರಧಾನ ಮಂತ್ರಿಗಳನ್ನು ನೀಡಿದ ಯು.ಪಿ.ಯಿಂದಲೇ ಉಕ್ಕಿನ ಮಹಿಳೆ ದೆಹಲಿಯ ಗದ್ದುಗೆಯನ್ನು ಆಕ್ರಮಿಸುವುದಾಗಿ ಈಗಾಗಲೇ ಘೋಷಿಸಿಕೊಂಡಿರುವುದು ಉತ್ಪ್ರೇಕ್ಷೆಯಂತೆ ಕಾಣಿಸುತ್ತಿಲ್ಲ. ದಕ್ಷಿಣ ಭಾರತದ ಕರ್ನಾಟಕ ಒಳಗೊಂಡಂತೆ ರಾಷ್ಟ್ರದ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್, ಬಿಜೆಪಿ ನಂತರದ ೩ನೇ ರಾಷ್ಟ್ರೀಯ ಪಕ್ಷವಾಗಿ ಬಿಎಸ್‌ಪಿ ಚಾಲ್ತಿಯಲ್ಲಿರುವುದು ಇದಕ್ಕೆ ಪುಷ್ಟಿ ಕೊಡುತ್ತದೆ. ಇಂದಿನ ಅನಿಶ್ಚಿತ ರಾಜಕೀಯ ಸನ್ನಿವೇಶದಲ್ಲಿ ಕೇವಲ ೫೦ ಲೋಕಸಭಾ ಕ್ಷೇತ್ರಗಳಲ್ಲಿ ಜಯಬೇರಿ ಬಾರಿಸಿ, ಪೊಲಿಟಿಕಲ್ ಬಾರ್ಗೇನ್ ಮುಖಾಂತರ ಮಾಯಾವತಿಯವರು ಪ್ರಧಾನಿ ಪಟ್ಟಕ್ಕೇರುವುದು ಬಿಎಸ್‌ಪಿಯ ದೂರಗಾಮಿ ದೃಷ್ಟಿಕೋನವಾಗಿದೆ.

ಉತ್ತರ ಪ್ರದೇಶದಲ್ಲಿ ಬಲವಾಗಿ ಬೇರೂರಿರುವ ಭ್ರಷ್ಟಾಚಾರ, ಅಪರಾಧ ಮತ್ತು ಅನ್ಯಾಯವನ್ನು ಬೇರು ಸಮೇತ ಕಿತ್ತೆಸೆದು ಜನತೆಗೆ ಉತ್ತಮವಾದ ಅಭಿವೃದ್ಧಿ ಪರ ಮತ್ತು ನಿರ್ಭೀತಿಯ ಆಡಳಿತ ಒದಗಿಸಲು ಬದ್ಧವಿರುವುದಾಗಿ ಘೋಷಿಸಿರುವ ಮಾಯಾವತಿಯವರು, ಸಮಾಜದ ಉನ್ನತ ಶ್ರೇಣಿಯಲ್ಲಿರುವ ಬ್ರಾಹ್ಮಣರಿಂದ ಹಿಡಿದು ಕಟ್ಟಕಡೆಯ ಸ್ಥಾನದಲ್ಲಿರುವ ದಲಿತರಿಗೆ ಯಾವ ರೀತಿಯಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸುವುದರ ಮೂಲಕ ಪ್ರಬುದ್ಧ ಭಾರತದ ನಿರ್ಮಾಣದ ಪ್ರಕ್ರಿಯೆಗೆ ಚಾಲನೆ ನೀಡುತ್ತಾರೆ ಎಂಬುದನ್ನು ಬರಲಿರುವ ದಿನಗಳಲ್ಲಿ ಕಾಯ್ದು ನೋಡಬೇಕಾಗಿದೆ.

ಪ್ರಸ್ತುತ ರಾಷ್ಟ್ರಪತಿ ಹುದ್ದೆಗೆ ನಡೆಯಲಿರುವ ಚುನಾವಣೆಯಲ್ಲಿ ಕೇಂದ್ರದ ಯು.ಪಿ.ಎ ಮಿತ್ರ ಪಕ್ಷಗಳೊಂದಿಗೆ ನಿರ್ಣಾಯಕ ನಿರ್ಧಾರ ತೆಗೆದುಕೊಳ್ಳುವ ವಿಚಾರದಲ್ಲಿ ಬಿಎಸ್‌ಪಿಯನ್ನು ಕಡೆಗಣಿಸಲಾಗದು. ಈ ಚುನಾವಣೆಯಲ್ಲಿ ಪ್ರತಿ ೮ ಮತಗಳಲ್ಲಿ ೧ ಮತ ಉತ್ತರ ಪ್ರದೇಶದಿಂದ ಚಲಾವಣೆಯಾಗುವುದರಿಂದ ಮಾಯಾವತಿ ಯಾವ ಅಭ್ಯರ್ಥಿಯನ್ನು ಬೆಂಬಲಿಸುತ್ತಾರೋ ಅವರು ರಾಷ್ಟ್ರಪತಿಯಾಗುವುದು ಖಚಿತ. ದಲಿತ ವ್ಯಕ್ತಿಯನ್ನು ರಾಷ್ಟ್ರಪತಿ ಹುದ್ದೆಗೇರಿಸಬೇಕೆಂಬುದು ಮಾಯಾವತಿಯ ಮನದಾಳವಾಗಿದ್ದರೆ, ಅವರೊಂದಿಗೆ ಸೌಹಾರ್ದ ಸಂಬಂಧ ಹೊಂದಿರುವ ಕೇಂದ್ರ ಸಚಿವ ಸುಶೀಲ್‌ಕುಮಾರ್ ಶಿಂಧೆ ಆಯ್ಕೆಯಾಗುವ ಸಾಧ್ಯತೆ ಹೆಚ್ಚಾಗಿದೆ.

ಉತ್ತರ ಪ್ರದೇಶದಲ್ಲಿ ಬಲವಾಗಿ ಬೇರೂರಿರುವ ಭ್ರಷ್ಟಾಚಾರ, ಅಪರಾಧ ಮತ್ತು ಅನ್ಯಾಯವನ್ನು ಬೇರು ಸಮೇತ ಕಿತ್ತೆಸೆದು ಜನತೆಗೆ ಉತ್ತಮವಾದ ಅಭಿವೃದ್ಧಿ ಪರ ಮತ್ತು ನಿರ್ಭೀತಿಯ ಆಡಳಿತ ಒದಗಿಸಲು ಬದ್ಧವಿರುವುದಾಗಿ ಘೋಷಿಸಿರುವ ಮಾಯಾವತಿಯವರು, ಸಮಾಜದ ಉನ್ನತ ಶ್ರೇಣಿಯಲ್ಲಿರುವ ಬ್ರಾಹ್ಮಣರಿಂದ ಹಿಡಿದು ಕಟ್ಟಕಡೆಯ ಸ್ಥಾನದಲ್ಲಿರುವ ದಲಿತರಿಗೆ ಯಾವ ರೀತಿಯಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸುವುದರ ಮೂಲಕ ಪ್ರಬುದ್ಧ ಭಾರತದ ನಿರ್ಮಾಣದ ಪ್ರಕ್ರಿಯೆಗೆ ಚಾಲನೆ ನೀಡುತ್ತಾರೆ ಎಂಬುದನ್ನು ಬರಲಿರುವ ದಿನಗಳಲ್ಲಿ ಕಾಯ್ದು ನೋಡಬೇಕಾಗಿದೆ.

ಈ ಮಧ್ಯೆ ವಿದರ್ಭ ಪ್ರಾಂತ್ಯದಲ್ಲಿ...

(೭ನೇ ಪುಟದಿಂದ)

ಸುವುದೊಂದೆ; ಹೆಚ್ಚುತ್ತಿರುವ ಆತ್ಮಹತ್ಯೆಗಳು. ಆದರೆ ಸರ್ಕಾರ ಇದನ್ನು ಸಮಸ್ಯೆ ಎಂದು ಪರಿಗಣಿಸುವುದೇ ಇಲ್ಲ. ಸರ್ಕಾರದ ಪ್ರಕಾರ ಇದೊಂದು ದುಃಖಕರ ಮತ್ತು ಕೆಟ್ಟ ಪ್ರಚಾರದ ವಿಚಾರ. ಮತ್ತು ತೀರ ಮುಜುಗರದ ವಿಚಾರ. ಈ ಸರ್ಕಾರಕ್ಕೆ ಜನರ ಯಾವುದಾದರೂ ಭಾವನೆಗಳಿಗೆ ಸ್ಪಂದಿಸುವುದೆಂದರೆ ಏನೆಂದಾದರೂ ಗೊತ್ತೆ?

ವಿಧರ್ಭದ ಆರು ಜಿಲ್ಲೆಗಳಲ್ಲಿ ಆತ್ಮಹತ್ಯೆಗಳ ಪ್ರಮಾಣ ವಿಪರೀತಕ್ಕೆ ಹೋಗುತ್ತಿದೆ. ಈ ಆತ್ಮಹತ್ಯೆಗಳ ಪ್ರಮಾಣವನ್ನು ನಿಯಂತ್ರಿಸುವುದು ಹೇಗೆ? 'ನಿರಾಕರಣೆಯ ಸಂಖ್ಯೆ'ಯನ್ನು ಹೆಚ್ಚಿಸುವುದರ ಮೂಲಕ! ಇಡೀ ಪ್ರಪಂಚದಲ್ಲೆಲ್ಲೂ ಇಲ್ಲದ 'ಅರ್ಹ ಆತ್ಮಹತ್ಯೆಗಳು' (ಎಲಿಜಿಬಲ್ ಸೂಸೈಡ್) ಎಂಬ ವಿಚಿತ್ರ ವಿಭಾಗೀಕರಣ ನಮ್ಮ ದೇಶದಲ್ಲಿ ಮಾತ್ರ ಇರುವುದು ಅಕ್ಷರಶಃ ಸತ್ಯ. ಸರ್ಕಾರವೇ ನಿರ್ಧರಿಸುವ 'ನಿಜವಾದ ಕೃಷಿ ಸಂಬಂಧಿತ ಆತ್ಮಹತ್ಯೆ'ಗಳನ್ನು 'ಅರ್ಹ ಆತ್ಮಹತ್ಯೆ'ಗಳೆಂದು ವ್ಯಾಖ್ಯಾನಿಸಲಾಗಿದೆ. ಇದರರ್ಥ, ಆತ್ಮಹತ್ಯೆಗಳಿಂದ ತೊಂದರೆಗೊಳಗಾದ ಕುಟುಂಬಗಳು ಪರಿಹಾರವನ್ನು ಪಡೆಯಲು ಅರ್ಹವಾಗುತ್ತವೆ. ಉಳಿದವರು–'ಅನರ್ಹ ಆತ್ಮಹತ್ಯೆಗಳು'–ಸ್ವಾಭಾವಿಕವಾಗಿ ಸಾವನ್ನಪ್ಪಿದವರು ಎಂದಾಗುತ್ತದೆ. ಇವರ ಕುಟುಂಬ ವರ್ಗಗಳೇನು ಕಡಿಮೆ ಸಂಕಷ್ಟ ಅನುಭವಿಸುವುದಿಲ್ಲ.

ಸರ್ಕಾರದ ಒಂದು ವರದಿಯ ಪ್ರಕಾರ ವಿಧರ್ಭದ ಆರು ಜಿಲ್ಲೆಗಳಲ್ಲಿ ೨೦೦೨ರಲ್ಲಿ "ವರದಿಯಾದ ಆತ್ಮಹತ್ಯೆ ಕೇಸ್‌ಗಳ" ಸಂಖ್ಯೆ ೧೦೫. ೨೦೦೬ರಲ್ಲಿ ೧,೪೪೭. ವರದಿಯಾದ ಕೇಸ್‌ಗಳನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಕಳೆದ ಐದು ವರ್ಷಗಳಲ್ಲಿ ಶೇ. ೧,೩೦೦ಕ್ಕೂ ಅಧಿಕ ಪ್ರಮಾಣದಲ್ಲಿ ಆತ್ಮಹತ್ಯೆಗಳು ಸಂಭವಿಸಿವೆ. ೨೦೦೨ರಲ್ಲಿ ಶೇ. ೯ರಷ್ಟು ಆತ್ಮಹತ್ಯೆಗಳು ಪರಿಹಾರ ಪಡೆಯಲು 'ಅರ್ಹ' ಎನಿಸಿಕೊಂಡರೆ, ೨೦೦೬ರಲ್ಲಿ ಕೇವಲ ಶೇ. ೪೦ರಷ್ಟು ಆತ್ಮಹತ್ಯೆಗಳು ಪರಿಹಾರ ಪಡೆಯಲು 'ಅರ್ಹ' ಎನಿಸಿಕೊಂಡಿವೆ. ಹೆಚ್ಚು ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾರೆ. ಆದರೆ ಇದರಲ್ಲಿ ಅತಿ ಕಡಿಮೆ ಮಂದಿಯ ಆತ್ಮಹತ್ಯೆಗಳನ್ನು ಸರ್ಕಾರ 'ಕೃಷಿ ಸಂಬಂಧಿತ ಆತ್ಮಹತ್ಯೆ' ಎಂದು ಗುರುತಿಸುತ್ತಿದೆ. ೨೦೦೬ರ ಪ್ರತಿ ತಿಂಗಳು ಕಳೆದಂತೆ 'ನಿರಾಕರಣೆಯ ಪ್ರಮಾಣ' ಕೂಡ ಹೆಚ್ಚಾಗುತ್ತಲೇ ಬಂದಿದೆ. ಉದಾಹರಣೆಗೆ ಆ ವರ್ಷದ ಜನವರಿ ತಿಂಗಳಲ್ಲಿ ೬೦ ಆತ್ಮಹತ್ಯೆಗಳು 'ಅನರ್ಹ' ಎನಿಸಿಕೊಂಡರೆ, ಅಕ್ಟೋಬರ್ ತಿಂಗಳಲ್ಲಿ ನಿರಾಕರಿಸಲ್ಪಟ್ಟ ಆತ್ಮಹತ್ಯೆಗಳ ಸಂಖ್ಯೆ ೧೨೦ಕ್ಕೆ ಏರಿದೆ. ಏರುತ್ತಲೇ ಇರುವ ಆತ್ಮಹತ್ಯೆಗಳ ಸಂಖ್ಯೆಯನ್ನು ಕೆಟ್ಟಸುದ್ದಿ ಎಂಬ ನೆಪವೊಡ್ಡಿ ಇವ್ಯಾವುವು ಆತ್ಮಹತ್ಯೆಗಳೇ ಅಲ್ಲ ಎಂದು ಸರ್ಕಾರ ಹೇಳುತ್ತಾ ಬಂದಿದೆ.

ಸರಳವಾಗಿ ಹೇಳಬೇಕೆಂದರೆ, ಮಹಾರಾಷ್ಟ್ರ ರಾಜ್ಯದಲ್ಲಿ ವೈಯಕ್ತಿಕ ಹತಾಶೆ ಅತಿ ವೇಗವಾಗಿ ವ್ಯಾಪಿಸುತ್ತಿದೆ. ಮೇ– ಜೂನ್ ತಿಂಗಳ ನಂತರ ದೊಡ್ಡ ಬಿಕ್ಕಟ್ಟು ಆರಂಭವಾಗಲಿದೆ. ಮಾನ್ಸೂನ್ ಕೂಡ ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಾರ್ಗ ಅನುಸರಿಸಿಬಿಟ್ಟರೆ, ದೀಪಾವಳಿಯ ಹೊತ್ತಿಗೆ ರೈತರೆಲ್ಲರೂ ದಿವಾಳಿಯೆದ್ದು ಆತ್ಮಹತ್ಯೆಗೆ ಶರಣಾಗುವುದರಲ್ಲಿ ಸಂಶಯವಿಲ್ಲ. □

ಕೃಪೆ: 'ದಿ ಹಿಂದೂ'

ಚಪಲದ ಹಕ್ಕಿ

ಚಪಲದ ಹಕ್ಕಿಯಿದು ಮನಸ್ಸು
ತುಕ್ಕು ಹಿಡಿದ ಹಳೆಯ ತಂತಿಯ ಮೇಲೆ
ಮತ್ತೆ ಮತ್ತೆ ಕೂರುತ್ತದೆ

ಈ ಮನಸ್ಸೊಂದು ಹಂದಿಯ ಹಾಗೆ
ಸಂದುಗೊಂದುಗಳಲ್ಲಿ ಮೂತಿ ಇಕ್ಕಿ
ಹೊಲಸನ್ನೆ ಅಮೃತವೆಂದು ಸವಿಯುತ್ತದೆ

ಸಭ್ಯತೆಯ ಸೋಗಿನಲ್ಲಿ ಬಾಲ ಮುಚ್ಚಿಕೊಳ್ಳುವ
ಹೆಣ್ಣು ನಾಯಿಯ ಹಾಗೆ
ಜೊಲ್ಲು ಸುರಿವ ನಾಲಿಗೆ, ನಿಮಿರಿದ ಕಿವಿಗಳ
ಚಡಪಡಿಕೆ

ಅಕುಶಲ ವಿಷಯಾವಿಶೇಷ ವಿಚಾರಗಳ
ಬೆನ್ನಬುತ್ತಿಯನ್ನು ಉಗುರಿನಿಂದ ಕಿತ್ತು
ತನ್ನ ತಾನೇ ತಿನ್ನುತ್ತದೆ.

○ ಮೂಡ್ನಾಕೂಡು ಚಿನ್ನಸ್ವಾಮಿ



ಉಮರ್ ಖಯ್ಯಾಮನ ಪದ್ಯಗಳು

೧.
ಸಖಿ
ಅಲ್ಲೊಂದು ಮರವಿರಲಿ
ಆ ಮರದಡಿಯಲ್ಲಿ
ಒಂದಿನಿತು ರೊಟ್ಟಿ
ಬಟ್ಟಲು ತುಂಬ ಮಧ್ಯ
ಜೊತೆಗೆ ನೀನು
ನಿನ್ನ ಹಾಡುಗಳ
ಅನುರಣಗಳಿರಲಿ
ಇವಿಷ್ಟು ಸಾಕು
ಸ್ವರ್ಗವಾದರೂ ಏಕೆ ಬೇಕು?

೨.
ವಂಚಕರ ಮಾತುಗಳನ್ನೆಲ್ಲಾ
ನಂಬಿ ಬದುಕಿದ್ದು ಸಾಕು
ಗೆಳೆಯರು ಮಾತ್ರ
ಒಳ್ಳೆಯ ಮಧ್ಯ ಕೊಡುತ್ತಾರೆ
ಅಷ್ಟೇ ಅಲ್ಲ ಅವರೆಲ್ಲರೂ
ಒಬ್ಬೊಬ್ಬರಾಗಿ ಇಲ್ಲಿಂದ
ಹೊರಟು ಹೋಗುತ್ತಾರೆ
ಹಿಂತಿರುಗುವ ಸುಳಿವು
ಮಾತ್ರ ನೀಡುವುದಿಲ್ಲ.

○ ಎನ್. ಜಗದೀಶ್ ಕೊಪ್ಪ

'ಆತ್ಮ ಸಂಗಾತಕ್ಕೆ ನೀನುಂಟು'

ಸುಜಾತ ಕುಮಟ

ಕೊಳ್ಳುಬಾಕ, ಮಾರುಕಟ್ಟೆ ಸಂಸ್ಕೃತಿಯಲ್ಲಿ ಹೆಣ್ಣು ಕೇವಲ ಭೋಗದ ವಸ್ತುವಾಗಿ, ಸರಕಾಗಿ ಬಿಕರಿಗೆ ಇಟ್ಟಂತಾಗಿದೆ. ತಮ್ಮ ತೃಷೆಯನ್ನು ತೀರಿಸಿಕೊಳ್ಳಲು ಬರುವ ಈ ಗಂಡಸರು ಎಂದೂ ತಿರುಗಿ ನೋಡದೆ ಹೋಗಿ ಬಿಡುತ್ತಾರೆ. ಆದರೆ ಅವರು ಎಂದಿಗೂ ತಮ್ಮ ತೀಟೆಯನ್ನು ತೀರಿಸಿ ಕೊಂಡ ಆ ಹೆಣ್ಣು ಈ ಸಮಾಜದಲ್ಲಿ ತಮ್ಮೊಡನೆ ಬದುಕುತ್ತಿರುವ ಸಹ ಜೀವಿ ಎಂದು ಭಾವಿಸುವುದಿಲ್ಲ. ಇದೆಂತಹ ಮೃಗೀಯ ವರ್ತನೆ. ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ವಿಚಾರ. ಮನೆ ಕೆಲಸಕ್ಕೆಂದು ನೇಮಿಸಿ ಕೊಳ್ಳುವ ಚಿಕ್ಕವಯಸ್ಸಿನ ಬಡ ಹೆಣ್ಣು ಮಕ್ಕಳ ಮೇಲೆ ಸಾಕಷ್ಟು ಲೈಂಗಿಕ ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿವೆ. ಒಂದು ಕಡೆ ಸರ್ಕಾರ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತದೆ. ಆದರೆ ಸಾಮಾಜಿಕವಾಗಿ ಮಹಿಳೆಯರ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯಗಳ ಬಗ್ಗೆ ಮೌನವಹಿಸಿದೆ.

ಅಕ್ಕ ಮಹಾದೇವಿಯ ವಚನದ ಈ ಸಾಲು ನನ್ನನ್ನು ಕಾಡಿದ ಹಾಗೆ ಬೇರಾವುದು ಕಾಡಲಿಲ್ಲ ಅನ್ನಿಸುತ್ತೆ. ಹೀಗಾಗಿಯೆ ನನ್ನ ಎರಡನೇ ಕವನ ಸಂಕಲಕ್ಕೆ "ಆತ್ಮ ಸಂಗಾತಕ್ಕೆ ನೀನುಂಟು" ಎಂಬ ಹೆಸರನ್ನಿಟ್ಟಿದ್ದೇನೆ. ಹನ್ನೆರಡನೆ ಶತಮಾನದಲ್ಲಿ ಒಬ್ಬ ಮಹಿಳೆ ಎಲ್ಲ ಸುಖ, ಭೋಗಳಿದ್ದ ಗಂಡಸಿಗೆ ಮಡದಿಯಾದರೂ ಅದು ಕೇವಲ ಕ್ಷಣಿಕವೆಂದೂ ಅತ್ಯಂತಿಕವಾಗಿ ಮನುಷ್ಯನಿಗೆ ಬೇಕಾಗಿರುವುದು ಇವುಗಳೆಲ್ಲವನ್ನು ಮೀರಿದ ಬೌದ್ಧಿಕತೆ ಹಾಗೂ ಸಮಾನತೆ ಎಂದು ಮೊಟ್ಟ ಮೊದಲಬಾರಿಗೆ ಪುರುಷ ಸಮಾಜಕ್ಕೆ ಸವಾಲು ಹಾಕಿದ ಮಹಿಳೆ. ಈಕೆ ಸರ್ವಕಾಲಿಕವಾಗಿ ಕನ್ನಡದ ಬರಹಗಾರ್ತಿಯರನ್ನು ಕಾಡುತ್ತಲೇ ಬಂದಿದ್ದಾಳೆ. ಸ್ತ್ರೀ ಸ್ವಾತಂತ್ರದ ಪ್ರತಿಮೆ ಅಥವಾ ಪ್ರತೀಕವಾಗಿದ್ದಾಳೆ. ಆಕೆಯ ಒಂದೊಂದು ವಚನವೂ ಸ್ತ್ರೀ ಹಾಗೂ ಪುರುಷರ ನಡುವಿನ ದೈಹಿಕತೆಯನ್ನು ಮೀರಿದ ಸಮಾನತೆಯ ಪರಿಕಲ್ಪನೆಯ ಬಗ್ಗೆ ಹೇಳುತ್ತದೆ. ಹಿಂದೆಂದಿಗಿಂತಲೂ ಇಂದು ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ದಿನೇ ದಿನೆ ಹೆಚ್ಚಾಗುತ್ತಿದೆ. ಕೊಳ್ಳುಬಾಕ, ಮಾರುಕಟ್ಟೆ ಸಂಸ್ಕೃತಿಯಲ್ಲಿ ಹೆಣ್ಣು ಕೇವಲ ಭೋಗದ ವಸ್ತುವಾಗಿ, ಸರಕಾಗಿ ಬಿಕರಿಗೆ ಇಟ್ಟಂತಾಗಿದೆ.

ತಮ್ಮ ತೃಷೆಯನ್ನು ತೀರಿಸಿಕೊಳ್ಳಲು ಬರುವ ಈ ಗಂಡಸರು ಎಂದೂ ತಿರುಗಿ ನೋಡದೆ ಹೋಗಿಬಿಡುತ್ತಾರೆ. ಆದರೆ ಅವರು ಎಂದಿಗೂ ತಮ್ಮ ತೀಟೆಯನ್ನು ತೀರಿಸಿಕೊಂಡ ಆ ಹೆಣ್ಣು ಈ ಸಮಾಜದಲ್ಲಿ ತಮ್ಮೊಡನೆ ಬದುಕುತ್ತಿರುವ ಸಹ ಜೀವಿ ಎಂದು ಭಾವಿಸುವುದಿಲ್ಲ. ಇದೆಂತಹ ಮೃಗೀ ಯವರ್ತನೆ. ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ವಿಚಾರ. ಮನೆ ಕೆಲಸಕ್ಕೆಂದು ನೇಮಿಸಿಕೊಳ್ಳುವ ಚಿಕ್ಕವಯಸ್ಸಿನ ಬಡ ಹೆಣ್ಣು ಮಕ್ಕಳ ಮೇಲೆ ಸಾಕಷ್ಟು ಲೈಂಗಿಕ ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿವೆ. ಒಂದು ಕಡೆ ಸರ್ಕಾರ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತದೆ. ಆದರೆ ಸಾಮಾಜಿಕವಾಗಿ ಮಹಿಳೆಯರ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯಗಳ ಬಗ್ಗೆ ಮೌನವಹಿಸಿದೆ. ರಾಜಕೀಯವಾಗಿ ಮಹಿಳೆಗೆ ಯಾವುದೇ ಬಗೆಯ ಪ್ರಾತಿನಿಧ್ಯ ನೀಡಲು ಸಿದ್ಧವಿಲ್ಲದ ಈ ಪುರುಷ ಪ್ರಧಾನ ಸಮಾಜ ಬಹುಶಃ ಮಾನಸಿಕವಾಗಿ ಯಾವುದೇ ರೀತಿಯ ಬದಲಾವಣೆಯನ್ನು ಹೊಂದಲು ತಯಾರಿಲ್ಲವೆಂದೇ ಅನ್ನಿಸುತ್ತದೆ.

ಮೊನ್ನೆ ಖಾಸಗಿ ಟಿವಿ ಸುದ್ದಿಯೊಂದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಪ್ರದರ್ಶನಗೊಳ್ಳುತ್ತಿರುವ ಚಲನಚಿತ್ರಗಳು, ಹಾಗೂ ಅಸಹ್ಯಕರವಾದ ಭಿತ್ತಿ ಪತ್ರಗಳ ಬಗ್ಗೆ ವರದಿ ಮಾಡಿದ್ದು ನಿಜಕ್ಕೂ ಸಾಂದರ್ಭಿಕ. ರಾಜಕಾರಣಿಗಳ ಸಭೆಯಲ್ಲಿ ಸಾರ್ವಜನಿಕವಾಗಿ ನಡೆಯುವ ಅಶ್ಲೀಲ ನೃತ್ಯ, ಇವೆಲ್ಲ ಮಹಿಳೆಯರ ಸಾಮಾಜಿಕ ಜೀವನದ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರಬಹುದು ಎನ್ನುವ ಕನಿಷ್ಟ ಅರಿವು ಇಲ್ಲದ ಪ್ರಭುತ್ವದಲ್ಲಿ ಮಹಿಳೆಯರು ಅದೆಷ್ಟರ ಮಟ್ಟಿಗೆ ಕ್ಷೇಮವಾಗಿರಬಹುದು. ಸಾಲದಕ್ಕೆ ಡ್ಯಾನ್ಸ್‌ಬಾರ್‌ಗಳು ಈ ನಗರದಲ್ಲಿ ತಲೆ ಎತ್ತಿ ನಿಂತರೆ ರಸ್ತೆಯಲ್ಲಿ ಒಬ್ಬಂಟಿಯಾಗಿ ತಿರುಗುವ ಮಹಿಳೆಯರೆಲ್ಲರನ್ನು ನೋಡುವ ಚಪಲ ಚೆನ್ನಿಗರಾಯರಿಗೆ ಇನ್ನಷ್ಟು ಕುಮ್ಮಕ್ಕು ಕೊಟ್ಟಂತಾಗುವುದಿಲ್ಲವೆ. ನಾಗರೀಕರಣದ ಭರಾಟೆಯಲ್ಲಿ ಬೆಂಗಳೂರು ಈಗಾಗಲೆ ಸಾಮಾಜಿಕವಾಗಿ ತನ್ನ ಸ್ವಾಸ್ಥ್ಯವನ್ನು ಕಳೆದುಕೊಂಡಿದೆ ಇವುಗಳ ನಡುವೆ ಸರ್ಕಾರವೆ ಡ್ಯಾನ್ಸ್ ಬಾರ್‌ಗಳಿಗೆ ಪರವಾನಿಗೆ ನೀಡಲು ಆಸಕ್ತಿ ತೋರಿಸುತ್ತಿರುವುದು ಯುವಜನರನ್ನು ಹಾದಿಗೆಡಿಸುವಲ್ಲಿ ಮತ್ತಷ್ಟು ಸಹಾಯಕವಾಗುತ್ತದೆ. ಲಾಟರಿ, ಸಾರಾಯಿಗಿಂತ ಘೋರವಾದ ವ್ಯವಹಾರ ಇದಲ್ಲವೆ?

ನನ್ನ ಮಾತು ಅಕ್ಕಮಹಾದೇವಿಯಿಂದ ಡ್ಯಾನ್ಸ್‌ಬಾರ್ ಕಡೆಗೆ ಹೊರಳುತ್ತಿದೆ. ದಯವಿಟ್ಟು ಕ್ಷಮಿಸಿ. ಅದೇಕೋ ಗೊತ್ತಿಲ್ಲ ಮೊನ್ನೆ ಒಂದು ಪುಸ್ತಕ ಸಿಕ್ಕಿತು. ಅದರ ಹೆಸರು "ಅನುಭಾವಿ ಅಕ್ಕಮಹಾದೇವಿ" ಎಂದು. ಆ ಪುಸ್ತಕವನ್ನು ಓದಿದ ಯಾರೇ ಮಹಿಳೆ ಆಗಲಿ ತಮ್ಮ ಕಳೆದುಕೊಂಡಿರುವ ಕಳೆದುಕೊಳ್ಳಬಹುದಾದ ವ್ಯಕ್ತಿತ್ವದ ಬಗ್ಗೆ ಕಿಂಚಿತ್ತಾದರು ಗಂಭೀರವಾಗಿ ಆಲೋಚಿಸುವುದರಲ್ಲಿ ಸಂಶಯವಿಲ್ಲ.

"ತೆರಣಿಯ ಹುಳ ತನ್ನ ಸ್ನೇಹದಿಂದ
ಮನೆಯ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ
ಸಾವತೆರನಂತೆ ಮನ ಬಂದುದ ಬಯಸಿ
ಬೇವುತ್ತಿದ್ದೆನಯ್ಯ
ನನ್ನ ಮನದ ದುರಾಶೆಯ ಮಾಣಿಸಿ ನಿಮ್ಮತ್ತ
ತೋರು ಚೆನ್ನಮಲ್ಲಿಕಾರ್ಜುನ."

ಹೆಣ್ಣು ಬದುಕುವ ಸದಾ ಇನ್ನೊಬ್ಬರ ಅಡಿಯಾಳಾಗಿ ಇದರ ಜೊತೆಗೆ ಆಕೆಯದೇ ಆದ ಸಣ್ಣಸಣ್ಣ ಬಯಕೆ ಇಲ್ಲಿ ಚೆನ್ನಮಲ್ಲಿಕಾರ್ಜುನನೆಂದರೆ ಪ್ರಾಣ ಸಖ ಮಾತ್ರವಲ್ಲ ಆತ ಮಹಾದೇವಿಯಕ್ಕನ ವ್ಯಕ್ತಿತ್ವ ಇದು ದೇಹವನ್ನು ಮೀರಿದ ಒಂದು ಅತ್ಯಂತಿಕ ಸ್ಥಿತಿ

"ಅಮೇಧ್ಯದ ಮಡಕೆ ಮೂತ್ರದ ಕುಡುಕೆ
ಎಲುವಿನ ತಡಿಕೆ, ಕೀವಿನ ಹಡಿಕೆ
ಸುಡಲಿ ದೇಹವ, ಒಡಲು ವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನನರಿ ಮರುಳೆ".

ಇಂದಿನ ಫ್ಯಾಶನ್ ಜಗತ್ತಿನಲ್ಲಿ ಹೆಣ್ಣು ಮಕ್ಕಳು ತಮ್ಮ ಯೌವನ ಹಾಗೂ ರೂಪಕ್ಕೆ

ಖಾಸಗಿ ಟಿವಿ ಸುದ್ದಿಯೊಂದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಪ್ರದರ್ಶನಗೊಳ್ಳುತ್ತಿರುವ ಚಲನಚಿತ್ರಗಳು, ಹಾಗೂ ಅಸಹ್ಯಕರವಾದ ಭಿತ್ತಿ ಪತ್ರಗಳ ಬಗ್ಗೆ ವರದಿ ಮಾಡಿದ್ದು ನಿಜಕ್ಕೂ ಸಾಂದರ್ಭಿಕ. ರಾಜಕಾರಣಿಗಳ ಸಭೆಯಲ್ಲಿ ಸಾರ್ವಜನಿಕವಾಗಿ ನಡೆಯುವ ಅಶ್ಲೀಲ ನೃತ್ಯ, ಇವೆಲ್ಲ ಮಹಿಳೆಯರ ಸಾಮಾಜಿಕ ಜೀವನದ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರಬಹುದು ಎನ್ನುವ ಕನಿಷ್ಟ ಅರಿವು ಇಲ್ಲದ ಪ್ರಭುತ್ವದಲ್ಲಿ ಮಹಿಳೆಯರು ಅದೆಷ್ಟರ ಮಟ್ಟಿಗೆ ಕ್ಷೇಮವಾಗಿರಬಹುದು. ಸಾಲದಕ್ಕೆ ಡ್ಯಾನ್ಸ್‌ಬಾರ್‌ಗಳು ಈ ನಗರದಲ್ಲಿ ತಲೆ ಎತ್ತಿ ನಿಂತರೆ ರಸ್ತೆಯಲ್ಲಿ ಒಬ್ಬಂಟಿಯಾಗಿ ತಿರುಗುವ ಮಹಿಳೆಯರೆಲ್ಲರನ್ನು ನೋಡುವ ಚಪಲ ಚೆನ್ನಿಗರಾಯರಿಗೆ ಇನ್ನಷ್ಟು ಕುಮ್ಮಕ್ಕು ಕೊಟ್ಟಂತಾಗುವುದಿಲ್ಲವೆ. ನಾಗರೀಕರಣದ ಭರಾಟೆಯಲ್ಲಿ ಬೆಂಗಳೂರು ಈಗಾಗಲೆ ಸಾಮಾಜಿಕವಾಗಿ ತನ್ನ ಸ್ವಾಸ್ಥ್ಯವನ್ನು ಕಳೆದುಕೊಂಡಿದೆ.

ಇನ್ನಿಲ್ಲದ ಮಹತ್ವವನ್ನು ನೀಡುತ್ತಾ ಸಲ್ಲದ ಬಯಕೆಗಳಿಗಾಗಿ ವ್ಯಕ್ತಿತ್ವ ಶೂನ್ಯರಾಗಿ ಹತ್ತರೊಳಗೆ ಹನ್ನೊಂದಾಗಲು ಬಯಸುತ್ತಾರೆ.

ಅಂಧಾನುಕರಣೆಯೆ ಯಶಸ್ಸಿನ ಸೋಪಾನ ಎಂದು ಭಾವಿಸಿದಂತಿದೆ. ಅದರಲ್ಲಿ ಆಕಸ್ಮತ್ತಾಗಿ ಉಂಟಾಗಬಹುದಾದ ಏರುಪೇರುಗಳನ್ನು ಸಹಿಸಲು ಬೇಕಾದ ಮಾನಸಿಕ ಗಟ್ಟಿತನವನ್ನು ಬೆಳೆಸಿಕೊಳ್ಳಲು ಸೋತು ಆತ್ಮಹತ್ಯೆಗೆ ಶರಣಾಗುತ್ತಾರೆ. ಈ ರೀತಿ ಸಾಕಷ್ಟು ಮಾನಸಿಕ ಹಿಂಸೆಗೆ ಒಳಗಾದ ಸುಪ್ರಸಿದ್ಧ ಗಾಯಕಿ ಬ್ರಿಟ್ನಿ ಸ್ಪಿಯರ್ ಒಂದು ಉತ್ತಮ ಉದಾಹರಣೆ ತನ್ನ ಗಂಡನಿಂದ ಬೇರ್ಪಟ್ಟ ಗಳಿಗೆಯಲ್ಲಿ Rehabilitation ಕೇಂದ್ರಕ್ಕೆ ಸೇರಿದ ಈಕೆ ಸುಂದರವಾದ ತನ್ನ ಕೂದಲನ್ನು ಬೋಳಿಸಿಕೊಂಡು ಪಟ್ಟ ಮಾನಸಿಕ ಆಘಾತ ಎಂತಹವರಿಗೂ ಮರುಕ ಹುಟ್ಟಿಸುತ್ತದೆ.

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಗಳ ಚೇಷ್ಟೆಗೆ ಮನವೇ ಬೀಜ
ಉಳ್ಳದೊಂದು ತನು, ಉಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಬಡವರೆದ ಬಳಿಕ
ಎನಗನ್ಯ ವಿಚಾರವುಂಟೆ ಚೆನ್ನ ಮಲ್ಲಿಕಾರ್ಜುನ"

ಹೆಣ್ಣು ಸಮಾನತೆಯ ಬಗ್ಗೆ ಮಾತನಾಡುವ ಮೊದಲು ತನ್ನೊಳಗೆ ಅಡಗಿರುವ ತನ್ನ ಅಂತರಂಗದ ಶಕ್ತಿಯನ್ನು ಗ್ರಹಿಸಬೇಕು

"ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡೆಯ್ಯ
ಏನ ಮಾಡಿದಡೆಯೂ ನಾನಂಜುವವಳಲ್ಲ
ತರಗಲೆಯ ಮೇಲಿಂದು ನಾನಿಹೆನು
ಸೂರಗಿಯ ಮೇಲೊರಗಿ ನಿದ್ರೈವೆನು
ಚೆನ್ನ ಮಲ್ಲಿಕಾರ್ಜುನಯ್ಯ ಕರಕರ ಕಾಡಿದರೆ
ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು"

ಭಕ್ತಿಯ ಪರಾಕಾಷ್ಠೆಯಲ್ಲಿ "ಶರಣಸತಿ ಲಿಂಗಪತಿ" ಎನ್ನುವ ಕಲ್ಪನೆಯಲ್ಲಿ ಅನುಭಾವದ ಮಾರ್ಗದಲ್ಲಿ ಹೆಣ್ಣು ತನ್ನ ವ್ಯಕ್ತಿತ್ವವನ್ನು ಅರಸುತ್ತಲೇ ಕೊನೆಗೆ ಸಂಪೂರ್ಣ ಸಮಾಧಿ ಸ್ಥಿತಿಯನ್ನು ತಲುಪಲು ಸಜ್ಜಾಗುತ್ತಾಳೆ. ಆದರೆ ಆ ಸ್ಥಿತಿಯನ್ನು ತಲುಪುವ ಮೊದಲು ಪಟ್ಟ ಪಾಡೆಷ್ಟು, ಕೇಳಿದ ನಿಂದೆಯೆಷ್ಟು? ತನ್ನಂತರಂಗದಲ್ಲಿ ಹುಟ್ಟು ಕಾಮನೆಗಳ ಬಗೆಗೂ ವಿಷಾದ ಸೂಸುವ ಅಕ್ಕ ಹೆಣ್ಣಿಗೂ ಬಯಕೆಗಳು ಸಹಜ ಎನ್ನುವುದನ್ನು ಆಕಾಲದಲ್ಲಿ ಹೇಳುವುದು ಹೀಗೆ"

"ಒಮ್ಮೆ ಕಾಮನ ಕಾಲೂ ಹಿಡಿವೆ
ಒಮ್ಮೆ ಚಂದ್ರಮಗೆ ಸೆರಗೊಡ್ಡಿ ಬೇಡುವೆ
ಸುಡುವಿರಹವನು ಇನ್ನಾರಿಗೆ ಧೃತಿಗೆಡುವೆ
ಚೆನ್ನಮಲ್ಲಿಕಾರ್ಜುನ ಎನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗಿತಿಯಾದೆ ನವ್ವ"

ಭಕ್ತಿಯ ಹಾದಿಯಲ್ಲಿ ಕಾಡುವ ಕಾಮನೆಗಳನ್ನು ಮೀರಿ ಚೆನ್ನ ಮಲ್ಲಿಕಾರ್ಜುನನು ಬಯಸುವ ಅಕ್ಕಮಹಾದೇವಿಯ ಅನುಭಾವದ ಹಾದಿ ಎರಡು ಘಟ್ಟದ್ದು. ಆರಂಭದಿಂದ ಅನುಭವ ಮಂಟಪದವರೆಗಿನ ಪಯಣ ಒಂದು ಬಗೆಯದಾದರೆ ಶ್ರೀಶೈಲಕ್ಕೆ ನಡೆದು ಚೆನ್ನಮಲ್ಲಿಕಾರ್ಜುನೊಳಗೊಂದಾಗುವ ಪಯಣ ಮತ್ತೊಂದು ಬಗೆಯದು.

ಆರಂಭದ ಹಾದಿಯಲ್ಲಿ ತನ್ನನು ಕಾಮಿಸುವ ಬಯಸುವ ಛೇಡಿಸುವ ಗಂಡಸರಿಗೆ ಬುದ್ಧಿಮಾತು ಹೇಳುವ ಅಕ್ಕ, ಗಂಡಸರ ಬಯಕೆಗಳ ಬಗ್ಗೆ ತಿಳಿ ಹೇಳುವುದು.

"ಮುಡಿಬಿಟ್ಟ ಮೊಗಬಾಡಿ ತನುಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ?
ಬಲುಹಳಿದು ಭವಗೆಟ್ಟ ಛಲವಳಿದು ಭಕ್ತೆಯಾಗಿ
ಚೆನ್ನ ಮಲ್ಲಿಕಾರ್ಜುನನ ಕೂಡಿ ಕುಲವಳಿದವಳ"

ಈ ಲೋಕದ ಗಂಡಸರು ಸುಂದರವಾದ ಮಹಿಳೆ ತನ್ನ ವ್ಯಕ್ತಿತ್ವ, ತನ್ನ ದೇವರ ಹುಡುಕಾಟದಲ್ಲಿ ಒಬ್ಬಂಟಿಯಾಗಿ ಹೊರಟಾಗ ಅವಳನ್ನು ನೋಡುವ ದೃಷ್ಟಿ ಕೆಟ್ಟದ್ದೆ ಆಗಿರುತ್ತದೆ. ಆದರೂ ವ್ಯಕ್ತಿತ್ವದ ಹುಡುಕಾಟ ನಿರಂತರ. ಒಮ್ಮೆ ಭಯಗಳನ್ನು ಮೀರಿದ ವ್ಯಕ್ತಿತ್ವವನ್ನು, ಸಾಧನೆ ಮಾಡಿದ ಬಳಿಕ ಹೆಣ್ಣಿನ ವ್ಯಕ್ತಿತ್ವದಲ್ಲಿರುವ ಶಕ್ತಿ ಅಪಾರ ಎನ್ನುವುದು ಅರಿವಾಗುತ್ತದೆ. ಈ ಲೇಖನವನ್ನು ಅನುಭಾವದ ಅಂಚಿಗೆ ತೆಗೆದುಕೊಂಡು ಹೋಗಲು ಬಯಸದೇ ಕೇವಲ ನೆಲಕ್ಕಂಟಿದ ಬದುಕಿನ ಹೆಣ್ಣುಗಳು ಇನ್ನಾದರು ತಮ್ಮ ವ್ಯಕ್ತಿತ್ವದ ಬಗ್ಗೆ ಅರಿವು ಮೂಡಿಸಿಕೊಳ್ಳಲಿ ಎಂದು ಬಯಸುತ್ತೇವೆ.

"ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲು ಹೊಯ್ದು ಕಿಡಿಯ ಕೊಂಬಂತೆ
ಬಲ್ಲದರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ
ಸಂಗ ಕರ್ಪೂರದ ಗಿರಿಯ ಉರಿಕೊಂಬಂತೆ"

ಹೀಗೆ ಚೆನ್ನ ಮಲ್ಲಿಕಾರ್ಜುನ ಅಕ್ಕನಿಗೆ ಅನುಭಾವದ ಹಾದಿ. ಆದರೆ ಇಂದು ಸ್ತ್ರಿ ಸ್ವಾತಂತ್ರ್ಯಕ್ಕೆ ಹಂಬಲಿಸುವ ನಮ್ಮಂತವರಿಗೆ ಅಕ್ಕನೇ ಹಾದಿ ಅದಕ್ಕೆ "ಅಕ್ಕ ಆತ್ಮ ಸಂಗಾತಕ್ಕೆ ನೀ ಎನಗುಂಟು" □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಜಾಗತೀಕರಣ ಮತ್ತು ವಿಕಾಸವಾದ

ಜಾಗತೀಕರಣ ತನ್ನ ಕಬಂಧ ಬಾಹುಗಳನ್ನು ಶಿಕ್ಷಣ ಕ್ಷೇತ್ರಕ್ಕೂ ಚಾಚಿದೆ. ಜನತಂತ್ರ ಸರ್ಕಾರದ ಮೂಲಭೂತ ಕರ್ತವ್ಯವಾಗಬೇಕಿದ್ದ ಸಮಗ್ರ ಶಿಕ್ಷಣ ನೀಡಿಕೆ, ಅದರ ಪಲಾಯನವಾದ ದಿಂದ "ಉಳ್ಳವರಿಗೇ ಶಿಕ್ಷಣ ಉಳ್ಳವರಿಗೇ ಬದುಕು" ಎಂಬ ಖಾಸಗಿ ಶಿಕ್ಷಣ ವ್ಯವಸ್ಥೆ ತಲೆ ಎತ್ತಲು ಕಾರಣವಾಗಿದೆ. ಇಲ್ಲಿ ಮಗುವೊಂದು ಶಿಕ್ಷಣ ಪಡೆಯಲು ಇರುವ ಮೊದಲ ಅರ್ಹತೆ-ದುಡ್ಡು, ನಂತರ ಮಗುವಿನ ಪಾಲಕರೂ ವಿದ್ಯಾವಂತರಾಗಿರಬೇಕು ಎನ್ನುವುದು (ಕನಿಷ್ಠ ಪದವಿ!) ಅಂಥವರು ಮಾತ್ರ ತಮ್ಮ ಮುಂದಿನ ಪೀಳಿಗೆಯನ್ನು ಸುಶಿಕ್ಷತರಾಗಿಸಬಲ್ಲರು ಎಂಬುದು ಖಾಸಗಿ ಶಿಕ್ಷಣ ವ್ಯವಸ್ಥೆಯ ಪ್ರತಿಪಾದನೆ ಇದು ಶ್ರಮಿಕ ವರ್ಗವನ್ನು ತಮ್ಮ ಕುಲಕಸುಬುಗಳಿಗೆ ಮರಳಿಸುವ ಆಧುನಿಕ ಮನುವಾದ ಇಂತಹ ಸುಶ್ರಾವ್ಯ ಹಿಮ್ಮೇಳವಾಗಿ ಒದಗಿ ಬಂದಿರುವುದೇ ಜಾಗತೀಕರಣ.

ಸದಾನಂದ
ಸಿ. ಗಂಗನಬೀಡು

ಜಾಗತೀಕರಣದ ಈ ಯುಗದಲ್ಲಿ ಉಳ್ಳವರ ಅಸ್ತಿತ್ವ ದಿನೇ ದಿನೇ ಬಲವರ್ಧನೆಗೊಳ್ಳುತ್ತಿದ್ದರೆ, ಶ್ರೇಣೀಕೃತ ವ್ಯವಸ್ಥೆಯ ಕಟ್ಟ ಕಡೆಯಲ್ಲಿರುವ ದೀನ ದಲಿತರ, ಬಡವರ ಅಸ್ತಿತ್ವ ತೀರಾ ದುರ್ಬಲಗೊಂಡು, ಅವರ ಬದುಕು ಡೋಲಾಯಮಾನವಾಗ ತೊಡಗಿದೆ. ಇದು ಅನುಭೋಗಿಗಳು ಮತ್ತು ಪರಿಚಾರಿಕರು ಎಂಬ ಎರಡು ಪ್ರತ್ಯೇಕ ವರ್ಗಗಳ ಹುಟ್ಟಿಗೆ ಕಾರಣೀಭೂತವಾಗಿದೆ. 'ಜಾಗತೀಕರಣವೆಂದರೆ ಅಭಿವೃದ್ಧಿ' ಎಂಬ ತಪ್ಪು ಗ್ರಹಿಕೆಯನ್ನು ಜನ ಸಾಮಾನ್ಯರಲ್ಲಿ ಆಳವಾಗಿ ಬಿತ್ತುತ್ತಿರುವ ಸಾಮ್ರಾಜ್ಯಶಾಹಿಗಳು, ಜಾಗತೀಕರಣದ ಅಪಾಯಗಳ ಆಳ, ಅಗಲ, ವಿಸ್ತಾರಗಳನ್ನು ಸಮರ್ಥವಾಗಿ ಗ್ರಹಿಸಲಾಗದ ಕೆಲವು ಸ್ವಘೋಷಿತ ಬುದ್ಧಿಜೀವಿಗಳು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿರುವ ಪರಿಚಾರಕ ವರ್ಗವನ್ನೇ ಅಭಿವೃದ್ಧಿಯ ಮಾನದಂಡವಾಗಿ ಬಳಸಲಾರಂಭಿಸಿದ್ದಾರೆ. ಮೊದಲಿಗೆ ಮಿಶ್ರ ಆರ್ಥಿಕ ವ್ಯವಸ್ಥೆಯ ತಳಹದಿಯಲ್ಲಿ ರೂಪುಗೊಂಡ ನಮ್ಮ ದೇಶದಲ್ಲಿ, ಆ ಕಾರಣದಿಂದ ಹಾಗೂ ಸಂವಿಧಾನ ನೀಡಿದ ಮೀಸಲಾತಿಯ ಸವಲತ್ತಿನಿಂದ ವಿದ್ಯೆ, ಉದ್ಯೋಗಗಳ ಲಾಭ ಪಡೆದ ಶೂದ್ರ, ದಲಿತವರ್ಗಗಳೂ ಕೂಡಾ ಜಾಗತೀಕರಣದ ಗುಮ್ಮನನ್ನು ಆಪ್ತವಾಗಿ ಬರಮಾಡಿಕೊಳ್ಳುತ್ತಿದ್ದು, ಸಮಾಜದ ಕಟ್ಟಕಡೆಯಲ್ಲಿರುವ ತಮ್ಮದೇ ವರ್ಗದ ಶ್ರಮಿಕ ವರ್ಗಕ್ಕೆ ಜಾಗತೀಕರಣ ಅಘೋಷಿತ, ಆದರೆ ಶಾಶ್ವತ ಜೀತದ ಕೋಳವನ್ನು ತೊಡಿಸುತ್ತಿರುವುದನ್ನು ಕಂಡೂ ಕಾಣದಂತೆ ನಿಷ್ಕ್ರಿಯರಾಗಿರುವ ಘೋರ ದುರಂತ ಕಾಣಿಸುತ್ತದೆ. ಹೀಗೆ ಪರಿಚಾರಕ ವರ್ಗದಲ್ಲೂ ಉಪಬೋಗಿಗಳು ಮತ್ತು ಹೇರಲ್ಪಟ್ಟವರು ಎಂಬ ಎರಡು ಸ್ಪಷ್ಟ ವರ್ಗಗಳ ವಿಭಜನೆಯಾಗಿದೆ.

ಜಾಗತೀಕರಣ ಶುರುವಾದಾಗಿನಿಂದ ರಸ್ತೆ ಕಾಮಗಾರಿ, ಕಟ್ಟಡ ಕಾಮಗಾರಿ, ಔದ್ಯಮೀಕರಣ ತೀವ್ರಗತಿಯಲ್ಲಿ ನಡೆಯುತ್ತಿದ್ದು ಶ್ರಮಿಕ ವರ್ಗಗಳಿಗೆ ಉಪವೃತ್ತಿಯನ್ನು ಸೃಷ್ಟಿಸಿರುವುದು ನಿಜವೇ ಆದರೂ ಶ್ರಮಿಕ ವರ್ಗದ ಕುಟುಂಬಗಳನ್ನು ಅವರ ಭವಿಷ್ಯದ ಪೀಳಿಗೆಯನ್ನು ನಿಂತ ನೀರಾಗಿಸಿರುವುದು ಅಷ್ಟೇ ಸತ್ಯ. 'ಹೇರಲ್ಪಟ್ಟ' ವರ್ಗವು ಸಂಪೂರ್ಣ ಕೂಲಿ ಕಾರ್ಮಿಕರನ್ನೆ ಒಳಗೊಂಡಿದ್ದು, ಸಾವಿರಾರು ವರ್ಷಗಳಿಂದ ವಿದ್ಯೆ, ಆಸ್ತಿ, ಉದ್ಯೋಗಗಳಿಂದ ವಂಚಿತವಾಗಿ, ಅವರ ಭವಿಷ್ಯದ ಪೀಳಿಗೆಯೂ ಅದೇ ದಿಕ್ಕಿನಲ್ಲಿ ನಡೆಯುತ್ತಿದ್ದು ಏಕಮುಖಿ ಜೀವನಕ್ಕೆ ಪಕ್ಕಾಗುತ್ತಿದ್ದಾರೆ. ಹೇರಲ್ಪಟ್ಟ ವರ್ಗದವರದು ಅಧೋಮುಖಿ ನಡೆಯಾಗಿದೆ. ಜಾಗತೀಕರಣದ ಪ್ರಭಾವದಿಂದ ಹೈಟೆಕ್ ಸೌಲಭ್ಯದ ನಗರಗಳು ನಿರ್ಮಾಣವಾಗುತ್ತಿರುವಂತೆಯೇ ಅದರ ಮಗ್ಗುಲಲ್ಲಿ ನರಕಮಯ ಕೊಳೆಗೇರಿಗಳು ವ್ರಣಗಳಂತೆ ಅವುಗಳ ಸೌಂದರ್ಯವನ್ನು ಭಾಧಿಸತೊಡಗಿವೆ. ಈ ವ್ರಣಗಳನ್ನು ಶ್ರಮಿಕವರ್ಗದವರು ತಾವಾಗಿಯೇ ನಿರ್ಮಿಸಿದ್ದಲ್ಲ. ಜಾಗತೀಕರಣಕ್ಕೆ ಪರ್ಯಾಯವಾದ ಬದುಕು, ಪ್ರಾದೇಶಿಕ ಉಪಕಸುಬು, ಸಂಸ್ಕೃತಿಯನ್ನು ಕೊಂದು ಹಾಕಿ, ಕೊಳ್ಳಬಾಕ ಸಂಸ್ಕೃತಿಗೆ ದೇಸೀಯ ಪ್ರತಿಸ್ಪರ್ಧೆಯಿಲ್ಲದಂತೆ ಮಾಡಲು ವ್ಯವಸ್ಥಿತ ಪ್ರಚಾರ ಜಾಹೀರಾತುಗಳ ಮೂಲಕ ಜನಸಾಮಾನ್ಯ ಸುಪ್ತ ಲೋಭದಾಸೆಯ ದುರ್ಲಾಭ ಮಾಡಿಕೊಳ್ಳಲು ಸಮೂಹ ಮಾಧ್ಯಮಗಳನ್ನು ವಿಕಾರವಾಗಿ ಬಳಸಿಕೊಂಡಿದ್ದರಿಂದ ಕೊಳೆಗೇರಿ ಎಂಬ ನರಕಗಳು ಸೃಷ್ಟಿಯಾಗಿವೆ.

ಜಾಗತೀಕರಣ ಸೃಷ್ಟಿಸುತ್ತಿರುವ ತ್ಯಾಜ್ಯಗಳು ಶ್ರಮಿಕ ವರ್ಗದ ಗುಡಿಸಲು, ಡೇರೆಗಳ ಬಗಲಲ್ಲಿದ್ದರೆ, ಅದನ್ನು ಉತ್ಪಾದಿಸಿ, ವಿಲೇವಾರಿ ಮಾಡುವ ಉಳ್ಳವರು 'ಸಭ್ಯ ವಸತಿ ಪ್ರದೇಶ'ಗಳೆಂಬ ಹೈಟೆಕ್ ವಸಾಹತುಗಳಲ್ಲಿ ಗಣ್ಯತೆಯ ಮುಖವಾಡ ತೊಟ್ಟು ನಿರ್ಭಿಡೆಯಿಂದ ಜೀವಿಸುತ್ತಿದ್ದಾರೆ. ಈ ಗಣ್ಯರ economy ಲೆಕ್ಕಾಚಾರಗಳಿಗೆ ಸೃಷ್ಟಿಯಾಗುತ್ತಿರುವ ಪ್ಲಾಸ್ಟಿಕ್ ಚೀಲ, ತಟ್ಟೆ, ಲೋಟ ಇತ್ಯಾದಿಗಳೆಲ್ಲ ಕಡೆಗೆ ಜನಸಾಮಾನ್ಯನಿಗೂ ಅನಿವಾರ್ಯ ಅಗತ್ಯವಾಗಿ ಬದಲಾಗಿ, ಶ್ರಮಿಕ ವರ್ಗಗಳ ವಾಸಸ್ಥಳಗಳೆಲ್ಲ ಸುರಿಹೊಂಡಗಳಾಗಿ ಪರಿವರ್ತನೆಯಾಗುತ್ತಿವೆ. ಉಳ್ಳವರ ಮೋಜುಗಳಿಂದ ಸುರಿಹೊಂಡಗಳಾಗಿ ಬದಲಾದ ಶ್ರಮಿಕ ವರ್ಗದ ವಾಸಸ್ಥಳಗಳು ಕೊನೆಗೆ ಕೊಳೆಗೇರಿಗಳೆಂಬ ಲೇಬಲ್ ಹಚ್ಚಿಕೊಂಡು ಮೂಲ ನಾಗರಿಕ ಸೌಲಭ್ಯಗಳಿಗೆ ಎರವಾಗಿ, ಉಳ್ಳವರಿಂದ, ಆಳುವವರಿಂದ ಇಬ್ಬರಿಂದಲೂ ನಿಸ್ಸೀಮ ತಾತ್ಸಾರಕ್ಕೆ ಗುರಿಯಾಗಿ, ತಮ್ಮ ಇಡೀ ಬದುಕನ್ನೇ ವ್ರಣಮಯವಾಗಿ ಸಾಗಿಸುವ ನರಕಯಾತನೆ ಅನುಭವಿಸುತ್ತಿದ್ದಾರೆ.

ಜಾಗತೀಕರಣದ ನೇರ ಪರಿಣಾಮ ಜನಸಾಮಾನ್ಯನ ಮೂಲಭೂತ ಅವಶ್ಯಕತೆಯಾದ ನೀರು, ಗಾಳಿಯ ಮೇಲೆ ಆಗುತ್ತಿದೆ. ಜಾಗತೀಕರಣ ಶುರುವಾದಂದಿನಿಂದ ರಸ್ತೆ, ಕಟ್ಟಡ ಕಾಮಗಾರಿಗಳು ಏರುಗತಿಯಲ್ಲಿ ಸಾಗಿದ್ದು, ಇದರಿಂದ ಕುಡಿಯುವ ನೀರಿಗೂ ತತ್ವಾರವಾಗುತ್ತಿದೆ. ಮೊದಲೆಲ್ಲ ಕಟ್ಟಡ ಕಾಮಗಾರಿಗಳಿಗೆ ಕೆರೆ, ಕುಂಟೆ, ಕಟ್ಟೆಗಳ ನೀರು ಬಳಕೆಯಾಗುತ್ತಿತ್ತು. ಈಗ ಕೆರೆಕುಂಟೆಗಳು ಬತ್ತಿಹೋಗಿವೆ ಇಲ್ಲದೇ ಭೂ ಮಾಫಿಯಾದವರಿಂದ ಅತಿಕ್ರಮಣಕ್ಕೊಳಗಾಗಿ ಅಲ್ಲೆಲ್ಲ ಗಗನ ಚುಂಬಿ ಅಪಾರ್ಟ್‌ಮೆಂಟ್‌ಗಳು, ಮಾಲ್‌ಗಳು ತಲೆ ಎತ್ತಿ ನಿಲ್ಲುತ್ತಿವೆ. ದಿನೇ ದಿನೇ ಕೆರೆಕುಂಟೆ ಮಾಯವಾಗುತ್ತಿರುವುದರಿಂದ ಕಟ್ಟಡ, ರಸ್ತೆ ಕಾಮಗಾರಿಗಳಿಗೂ ಶುದ್ಧ ಅಂತರ್ಜಲವನ್ನೇ ಆಶ್ರಯಿಸುವಂತಾಗಿ, ಅಂತರ್ಜಲದ ಅತಿಯಾದ ಬಳಕೆಯಿಂದ ಎಲ್ಲ ಕಡೆಯೂ ಜಲಕ್ಷಾಮ ತಲೆದೋರಿದ್ದು, ಅದರ ತೀವ್ರ ಪರಿಣಾಮ ದುಡಿಯುವ ವರ್ಗಗಳ ಮೇಲೆ ಆಗುತ್ತಿದೆ. ಶುದ್ಧ ಕುಡಿಯುವ ನೀರು ಅಗತ್ಯ ಪ್ರಮಾಣದಲ್ಲಿ ದೊರಕದೆ ಮಳೆಗಾಲದಲ್ಲಿ ಅಳಿದುಳಿದಿರುವ ಕೆರೆ, ಕುಂಟೆಗಳಲ್ಲಿ ಶೇಖರವಾಗುವ ಮಲಿನ ನೀರನ್ನೇ ತಮ್ಮ ದಿನ ನಿತ್ಯದ ಶುಚೀರ್ಭೂತಗಳಿಗೆ ಬಳಸಬೇಕಾದ ಸಂಕಟ ಶ್ರಮಿಕ ವರ್ಗದವರ ಪಾಲಿಗೆ ಸೃಷ್ಟಿಯಾಗಿದೆ. ಮಲಿನ ನೀರಿನ ಬಳಕೆಯಿಂದ ಜಾಂಡೀಸ್, ಕಾಲರಾ, ಕರುಳುಬೇನೆಯಂಥ ಮಾರಕ ಸಾಂಕ್ರಾಮಿಕ ರೋಗಗಳು ತೀವ್ರಗತಿಯಲ್ಲಿ ಶ್ರಮಿಕ ವರ್ಗದ ವಸತಿ ಪ್ರದೇಶಗಳಲ್ಲಿ ವ್ಯಾಪಿಸುತ್ತಿದ್ದು. ಇದ್ಯಾವುದಕ್ಕೂ ಕಾರಣರೇ ಅಲ್ಲದ ಅಮಾಯಕ ಶ್ರಮಿಕರು ತಮ್ಮ ಅರೆ ವಯಸ್ಸಿನಲ್ಲೇ ಕನಸಿಲ್ಲದ ಲೋಕಕ್ಕೆ ಪಯಣ ಬೆಳೆಸುತ್ತಿದ್ದಾರೆ.

ನಾಯಿಕೊಡೆಗಳಂತೆ ಹುಟ್ಟುಕೊಳ್ಳುತ್ತಿರುವ ಮಿನರಲ್ ವಾಟರ್ ಕಂಪನಿಗಳು ನೀರಿನ ಖಾಸಗೀಕರಣಕ್ಕೆ ನಮ್ಮ ಆಳುವ ಸರ್ಕಾರಗಳ ಮೇಲೆ ಒತ್ತಡ ತರಲಾರಂಬಿಸಿವೆ. ಇದಕ್ಕೆ ನಮ್ಮ ಹೊಣೆಗೇಡಿ ಸರ್ಕಾರಗಳು ತಮ್ಮ ಒಪ್ಪಿಗೆಯ ಮುದ್ರೆಯೊತ್ತಲು ತುದಿಗಾಲ ಮೇಲೆ ನಿಂತಿವೆ. ಉಳ್ಳವರ ಕಾಂಚಾಣ ಬಿಸಿಯಿಂದ ಅದೂ ಜರುಗಿಯೇ ಹೋದರೆ, ಶ್ರಮಿಕ ವರ್ಗದವರ ಪಾಲಿಗೆ ಮರಣಶಾಸನವಾಗುವುದು ಖಂಡಿತ. ಜಾಗತೀಕರಣದಿಂದ ಒಂದು ಸ್ಕೂಟರ್‌ಗಾಗಿ ವರ್ಷಗಟ್ಟಲೆ ಕಾಯುವುದು ತಪ್ಪಿತು ಎಂಬ

ಮೊದಲು ಬೇಸಿಗೆ, ಬರಗಾಲಗಳಲ್ಲಿ ಮಾತ್ರ ನೀರಿನ ಕ್ಷಾಮ ತಲೆದೋರುತ್ತಿತ್ತು ಆದರೆ ಈಗ ಮಳೆಯ ಕಣ್ಣಾಮುಚ್ಚಾಲೆ, ಅಂತರ್ಜಲದ ಮಿತಿಮೀರಿದ ಬಳಕೆಯಿಂದ ಜನಸಾಮಾನ್ಯರು ವರ್ಷಪೂರ್ತಿ ನೀರಿಗಾಗಿ ಹಾಹಾಕಾರ ಪಡಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಇದರ ಸಂಪೂರ್ಣ ಲಾಭ ನೀರಿನ ಮಾಫಿಯಾ ಆಗಿ ಬದಲಾಗಿರುವ ಬಹುರಾಷ್ಟ್ರೀಯ ಕಂಪೆನಿಗಳಿಗೆ, ಸ್ಥಳೀಯ ಬಂಡವಾಳ ಶಾಹಿಗಳಿಗೆ ಆಗುತ್ತಿದೆ. ಮುಫತ್ತಾಗಿ ದೊರೆಯುವ ಶುದ್ಧ ಅಂತರ್ಜಲ, ತಿಳಿ ಹೊಳೆಗಳಿಗೆಲ್ಲ ತಮ್ಮ ಪಂಪುಗಳನ್ನು ಇಳಿಸಿ, ಅವುಗಳಿಗೆ ಹಾನಿಕಾರಕ ಕ್ರಿಮಿನಾಶಕಗಳನ್ನು ಅವೈಜ್ಞಾನಿಕ ಪ್ರಮಾಣದಲ್ಲಿ ಬೆರೆಸಿ, ವಿಷಪೂರಿತ ನೀರನ್ನೇ ಶುದ್ಧ ಕುಡಿಯುವ, ಖನಿಜಯುಕ್ತ ನೀರು ಎಂಬ ಲೇಬಲ್ ಹಚ್ಚಿ ಮನಸೋ ಇಚ್ಛೆ ಬೆಲೆಗಳಿಗೆ ಮಾರಾಟ ಮಾಡುತ್ತಿದ್ದಾರೆ.

ಹುಂಬು ವಾದ ಮಂಡಿಸುವವರಿಗೆ ಮೋಟಾರು ವಾಹನ ಕ್ರಾಂತಿಯಿಂದ ಸೃಷ್ಟಿಯಾಗಿರುವ ಪರಿಸರ ಮಾಲಿನ್ಯ ಅದು ಮನುಷ್ಯನಿಗೆ ತಂದೊಡ್ಡುತ್ತಿರುವ ಮಾರಣಾಂತಿಕ ಬಾಹಲೆಗಳು, ಅವುಗಳ ಚಿಕಿತ್ಸೆಗೆ ವ್ಯರ್ಥವಾಗಿ ಪೋಲಾಗುತ್ತಿರುವ ಸರ್ಕಾರದ, ಜನಸಾಮಾನ್ಯನ ಗಳಿಕೆಯ ಬಗ್ಗೆ ಯಾವುದೇ ಕಾಳಜಿ ಇರುವಂತಿಲ್ಲ. ಮನುಷ್ಯನನ್ನು ದಿನೇ ದಿನೇ ಜಡವಾಗಿಸುತ್ತಿರುವ ಮೋಟಾರು ವಾಹನ ಕ್ರಾಂತಿ, ಬೃಹತ್ ಬಹುರಾಷ್ಟ್ರೀಯ ಔಷಧ ಕಂಪೆನಿಗಳಿಗೆ ಅಕ್ಷಯ ಗ್ರಾಹಕ/ಬಲಿಪಶುಗಳನ್ನು ತಯಾರು ಮಾಡುತ್ತಿದೆಯಷ್ಟೇ.

ಮೊದಲು ಬೇಸಿಗೆ, ಬರಗಾಲಗಳಲ್ಲಿ ಮಾತ್ರ ನೀರಿನ ಕ್ಷಾಮ ತಲೆದೋರುತ್ತಿತ್ತು ಆದರೆ ಈಗ ಮಳೆಯ ಕಣ್ಣಾಮುಚ್ಚಾಲೆ, ಅಂತರ್ಜಲದ ಮಿತಿಮೀರಿದ ಬಳಕೆಯಿಂದ ಜನಸಾಮಾನ್ಯರು ವರ್ಷ ಪೂರ್ತಿ ನೀರಿಗಾಗಿ ಹಾಹಾಕಾರ ಪಡಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಇದರ ಸಂಪೂರ್ಣ ಲಾಭ ನೀರಿನ ಮಾಫಿಯಾ ಆಗಿ ಬದಲಾಗಿರುವ ಬಹುರಾಷ್ಟ್ರೀಯ ಕಂಪೆನಿಗಳಿಗೆ, ಸ್ಥಳೀಯ ಬಂಡವಾಳಶಾಹಿಗಳಿಗೆ ಆಗುತ್ತಿದೆ. ಮುಫತ್ತಾಗಿ ದೊರೆಯುವ ಶುದ್ಧ ಅಂತರ್ಜಲ, ತಿಳಿ ಹೊಳೆಗಳಿಗೆಲ್ಲ ತಮ್ಮ ಪಂಪುಗಳನ್ನು ಇಳಿಸಿ, ಅವುಗಳಿಗೆ ಹಾನಿಕಾರಕ ಕ್ರಿಮಿನಾಶಕಗಳನ್ನು ಅವೈಜ್ಞಾನಿಕ ಪ್ರಮಾಣದಲ್ಲಿ ಬೆರೆಸಿ, ವಿಷಪೂರಿತ ನೀರನ್ನೇ ಶುದ್ಧ ಕುಡಿಯುವ, ಖನಿಜಯುಕ್ತ ನೀರು ಎಂಬ ಲೇಬಲ್ ಹಚ್ಚಿ ಮನಸೋ ಇಚ್ಛೆ ಬೆಲೆಗಳಿಗೆ ಮಾರಾಟ ಮಾಡುತ್ತಿದ್ದಾರೆ. ಪ್ರಕೃತಿಯ ಅಪೂರ್ವ ಕೊಡುಗೆಯಾದ ಜೀವದಾಯಿನಿ ನೀರಿನ ಮೇಲಿನ ಹಕ್ಕು ಶ್ರಮಿಕರ ಪಾಲಿಗೆ ಮರೀಚಿಕೆಯಾಗಿ, ಉಳ್ಳವರು ಮಾತ್ರ ಅನುಭವಿಸಬಹುದಾದ commodityಯಾಗಿ ರೂಪಾಂತರಗೊಂಡಿದೆ. ಈ ಒಂದೇ ಒಂದು ಹಕ್ಕಿನಿಂದ ವಂಚಿತರಾದ ಕೂಡಲೇ ಬಡವರು ನಿರ್ಗತಿಕರು ಪತಂಗಗಳಂತೆ ಉರಿದು ಬೀಳುವುದು ಖಚಿತ ಈ ದುರಂತವನ್ನು ಕಂಡು ಕೊಬ್ಬಿದ ಧನಿಕರು "Survival of the fittest" ಎಂದು ವ್ಯಂಗ್ಯವಾಡಲಿಕ್ಕೂ ಸಾಕು

ಜಾಗತೀಕರಣ ತನ್ನ ಕಬಂಧ ಬಾಹುಗಳನ್ನು ಶಿಕ್ಷಣ ಕ್ಷೇತ್ರಕ್ಕೂ ಚಾಚಿದೆ. ಜನತಂತ್ರ ಸರ್ಕಾರದ ಮೂಲಭೂತ ಕರ್ತವ್ಯವಾಗಬೇಕಿದ್ದ ಸಮಗ್ರ ಶಿಕ್ಷಣ ನೀಡಿಕೆ, ಅದರ ಪಲಾಯನವಾದದಿಂದ "ಉಳ್ಳವರಿಗೇ ಶಿಕ್ಷಣ ಉಳ್ಳವರಿಗೇ ಬದುಕು" ಎಂಬ ಖಾಸಗಿ ಶಿಕ್ಷಣ ವ್ಯವಸ್ಥೆ ತಲೆ ಎತ್ತಲು ಕಾರಣವಾಗಿದೆ. ಇಲ್ಲಿ ಮಗುವೊಂದು ಶಿಕ್ಷಣ ಪಡೆಯಲು ಇರುವ ಮೊದಲ ಅರ್ಹತೆ-ದುಡ್ಡು, ನಂತರ ಮಗುವಿನ ಪಾಲಕರೂ ವಿದ್ಯಾವಂತರಾಗಿರಬೇಕು ಎನ್ನುವುದು (ಕನಿಷ್ಠ ಪದವಿ!) ಅಂಥವರು ಮಾತ್ರ ತಮ್ಮ ಮುಂದಿನ ಪೀಳಿಗೆಯನ್ನು ಸುಶಿಕ್ಷಿತರಾಗಿಸಬಲ್ಲರು ಎಂಬುದು ಖಾಸಗಿ ಶಿಕ್ಷಣ ವ್ಯವಸ್ಥೆಯ ಪ್ರತಿಪಾದನೆ ಇದು ಶ್ರಮಿಕ ವರ್ಗವನ್ನು ತಮ್ಮ ಕುಲಕಸುಬುಗಳಿಗೆ ಮರಳಿಸುವ ಆಧುನಿಕ ಮನುವಾದ ಮತ್ತು Hidden agenda ಇಂತಹ Hidden agenda ಸುಶ್ರಾವ್ಯ ಹಿಮ್ಮೇಳವಾಗಿ ಒದಗಿ ಬಂದಿರುವುದೇ ಜಾಗತೀಕರಣ. ಜಾಗತೀಕರಣದ ಮೂಲಮಂತ್ರವೇ ಪರಿಚಾರಕರು, ಮತ್ತು ಹೇರಲ್ಪಟ್ಟವರನ್ನು ಗುಲಾಮಗಿರಿಗೆ ದೂಡುವುದು. ಜಾಗತೀಕರಣವನ್ನು ಪ್ರತಿರೋಧಿಸುವ ಕುರಿತು ಸೂಕ್ತ, ಆರೋಗ್ಯಕರ ಚರ್ಚೆ, ಸಂವಾದಗಳು ಜರುಗದೆ ಹೋದರೆ, ದೀನ ದಲಿತರ ನಂತರ ಹೆಚ್ಚು ಆಘಾತಕ್ಕೊಳಗಾಗುವವರು ನಮ್ಮ ಬದುಕಿನ ನೊಗ ಹೊತ್ತಿರುವ ಮಹಿಳೆಯರು.

ಜಾಗತೀಕರಣವನ್ನು ವಿವೇಚನಾರಹಿತವಾಗಿ, ಕಣ್ಣು ಮುಚ್ಚಿಕೊಂಡು ಬರಮಾಡಿಕೊಂಡ ತೃತೀಯ ಜಗತ್ತಿನ ಬಡರಾಷ್ಟ್ರಗಳು (ಲ್ಯಾಟಿನ್ ಅಮೆರಿಕಾ) ಈಗಾಗಲೇ ದಿವಾಳಿಯೆದ್ದಿದ್ದು, ಅವರ ಈಗಿನ ಆರ್ಥಿಕ ಮೂಲಾಧಾರ ವೇಶ್ಯಾವಾಟಿಕೆ ಎನ್ನುವುದು ಎಲ್ಲರೂ ಬಲ್ಲ ಸಂಗತಿ ಜಾಹಿರಾತು ಮಾರುಕಟ್ಟೆಯಲ್ಲಿ ಹೆಣ್ಣು ಭೋಗದ ವಸ್ತುವಿನಂತೆ ಪ್ರತಿಬಿಂಬಿತವಾಗುತ್ತಿದ್ದು, ಇದು ಮುಂದೊಮ್ಮೆ ಮುಕ್ತ ವೇಶ್ಯಾವಾಟಿಕೆಗೂ ಕಾರಣವಾಗಬಹುದು ಎನ್ನುವುದು ಕೇವಲ ಭಯ ಮಾತ್ರವಲ್ಲ ಎನ್ನುವುದಕ್ಕೆ ಮೇಲಿನ ಉದಾಹರಣೆ ಏಡ್ಸ್ ಎಂಬ ಮಹಾಮಾರಿ ವಿಶ್ವವ್ಯಾಪಿಯಾಗಿದ್ದು ಕೂಡಾ ವಿಚಾರಶೂನ್ಯವಾಗಿ ಜಾಗತೀಕರಣವನ್ನು (ಅಮೆರಿಕೀಕರಣವನ್ನು) ಅಪ್ಪಿಕೊಂಡಿದ್ದರಿಂದಲೇ.

ಆದ್ದರಿಂದ ನಮ್ಮಲ್ಲಿ ತುರ್ತಾಗಿ ಆಗಬೇಕಿರುವುದು ಶೈಕ್ಷಣಿಕ ಕ್ರಾಂತಿ IT BT ಪರಿಚಾರಕ ವರ್ಗವನ್ನು ಸೃಷ್ಟಿಸುತ್ತಿರುವ ಆಧುನಿಕ ಶಿಕ್ಷಣ ಜಾಗದಲ್ಲಿ ಸೃಜನಶೀಲ ಮನಸ್ಸುಗಳನ್ನು ತಯಾರು ಮಾಡುವ, ವಿದ್ಯಾರ್ಥಿಗಳಲ್ಲಿ ಸಮಷ್ಟಿ ಪ್ರಜ್ಞೆ ಬೆಳೆಸುವ ಪುರೋಗಾಮಿ ಶಿಕ್ಷಣ ಕ್ರಮ ಜಾರಿಯಾಗಬೇಕಿದೆ ಬಂಡವಾಳಶಾಹಿಗಳ ಲಾಭಕೋರತನದಿಂದ ಸಮಷ್ಟಿ ಪ್ರಜ್ಞೆಯ ಜಾಗದಲ್ಲಿ Patent ಎಂಬ ಜೀವ ವಿರೋಧಿ, ಪ್ರಗತಿ ಘಾತುಕ ಕರಾಳ ಶಾಸನ ಪ್ರತಿಷ್ಠಾಪನೆಗೊಂಡಿದೆ. ಜಾಗತೀಕರಣ ಸೃಷ್ಟಿಸಿರುವ ಈ ಕರಾಳ ಹಂಗಿನಿಂದ ಹೊರಬರಬಲ್ಲಂತಹ, ಎಲ್ಲ ವರ್ಗದ ಜನರಲ್ಲೂ ಆರ್ಥಿಕ ಚೈತನ್ಯ, ಆತ್ಮ ಸಮ್ಮಾನ ತರಬಲ್ಲ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬಲ್ಲ ದಿಕ್ಕಿನಲ್ಲಿ ಎಲ್ಲ ಶಿಕ್ಷಣ ತಜ್ಞರೂ, ಪ್ರಜ್ಞಾವಂತರೂ, ಪ್ರಗತಿಪರರು ಚಿಂತಿಸಬೇಕಿದೆ. □

ಕಾಲದ ಮರದಲ್ಲಿ ಕಲ್ಲು ಹಣ್ಣುಗಳು

ಬುದ್ಧಿವಂತ ಅಕ್ಷರಜ್ಞಾನಿ ಇಲಾಖೆಗಳ, ಸೌಖ್ಯ ಅಳು ಗಳು ಹಳ್ಳಿಗಳ ಅನ್ನ ಜ್ಞಾನಿಗಳನ್ನು ನಡು ನೀರಿ ನಲ್ಲಿ ಕೈ ಬಿಟ್ಟು ಆರಾಮ ವಾಗಿರುವುದು ಸಾಧ್ಯವೇ ಇಲ್ಲ. ಬಹು ಸಂಖ್ಯಾತರು ಈಗ ಕಣ್ಣಿಲ್ಲದವರಾಗಿ, ಹಣ್ಣಿಲ್ಲದವರಾಗಿ ಸ್ವಯಂಕೃತ ಕಷ್ಟಗಳಲ್ಲಿ ದ್ದಾರೆ. ಆದ್ದರಿಂದಲೇ ಇವರೆಲ್ಲಾ ತಮ್ಮನ್ನು ಅನಾದಿ ಕಾಲದಿಂದಲೂ ಕಾಪಾಡಿ ಉಳಿಸಿರುವ ಕಾರೆ, ಜಿಕ್ಕೆ, ಸೀಬೆ, ನಿಂಬೆ, ಚಕೋತ, ಹಲಸು, ಮಾವು, ಹುಣಸೆ, ಎರದೆ, ಈಚಲು, ರಾಮಫಲ, ಗವಳಿ, ಸೀತಾಫಲ ಇತ್ಯಾದಿ ಹಣ್ಣಿನ ಗಿಡಗಳನ್ನು ಹೊಲ ತೋಟಗಳಲ್ಲಿ ನಟ್ಟು ಅವಕ್ಕೆ ಆಡು, ಕುರಿ, ದನಗಳಿಂದ ರಕ್ಷಣೆಗಾಗಿ ಗೂಡುಕಟ್ಟಿ ಕೈನೀರು ಹಾಕಿ ಬೆಳೆಸಬೇಕಾಗಿದೆ. ಇರುವುದೊಂದು ಮಾರ್ಗ ಅದು ಮರದ ಮಾರ್ಗ. ಅದೇ ಅಮರ ಮಾರ್ಗ. ಈ ಜಾತಿಯ ದೇಶೀ ಗಿಡಗಳು ನೆಲಕ್ಕೆ ಆಳವಾಗಿ ಬೇರು ಬಿಟ್ಟು ಬರಸಿಡಿಲಿಗೂ ಬಗ್ಗದೇ ಬೆಳೆಯುವ ಪೈಕಿಯವು.

ಕೃಷ್ಣಮೂರ್ತಿ ಬಿಳಿಗೆರೆ

ನನ್ನ ಅವ್ವನ ತವರೂರು ಕಂಗಸನಹಳ್ಳಿಯಲ್ಲಿನ ಚೋಳರ ಕಾಲದ ಆ ದೊಡ್ಡ ಕಲ್ಯಾಣಿಯ ಬಳಿ ಇನ್ನೂ ಇರುವ ಒಂದು ಬೆಲವತ್ತೆ ಹಣ್ಣಿನ ಮರ ಎತ್ತರೆತ್ತರಕ್ಕೆ ಬೆಳೆಯುತ್ತಲೇ ಇದೆ. ನನ್ನೊಳಗೆ ಕನಸಿನ ಮರವಾಗಿ ಬೆಳೆಯುತ್ತಿರುವ ಇದು 'ಕಾಲದ ಮರ'ದಂತೆ ಚಿರಕಾಲವೂ ಇದ್ದುಬಿಡುವ ಪಣತೊಟ್ಟಂತೆ ತೋರುತ್ತಿದೆ. ಅಲ್ಲಿ ಪ್ರತಿ ವರ್ಷವೂ ನಡೆಯುತ್ತಿದ್ದ ಪರೇವಿಗೆ ಹೋದರೆ ಅಲ್ಲಿನ ಮುದ್ದೆ ಸಾರು, ತೇರು, ಗುಡಿ, ಕಲ್ಯಾಣಿ, ಗರುಡಗಂಭ, ಗದ್ದೆ, ತೋಟಗಳು, ಬಿಲ್ವಪತ್ರೆ ಮರಗಳು ಇತ್ಯಾದಿಗಳೊಂದಿಗೆ ಈ ಮರವೂ ನನ್ನ ಸೆಳೆದಪ್ಪುತ್ತಿತ್ತು. ಹಣ್ಣು ಬಿದ್ದಿರಲಿ ಬಿಡಲಿ ಅದರಡಿಗೊಂದು ರೌಂಡು ಹೋಗಿ ಮೇಲೆ ಕಾಯಿ ತುಂಬಿದ ನಕ್ಷತ್ರದ ಮರದಂಥ ಈ ಮರವನ್ನೊಮ್ಮೆ ನೋಡಿ ಗಮ್ಮೆನ್ನುವ ವಾಸನೆಯೇನಾದರೂ ಸುಳಿದರೆ ದಿಬ್ಬದ ಆ ಪ್ರದೇಶದಿಂದ ಉರುಳುರುಳಿ ದೂರ ಹೋಗಿ ಕಣ್ಮುಚ್ಚಾಲೆ ಆಡಬಯಸಿದ ಹಣ್ಣುಗಳಿಗಾಗಿ ಹುಡುಕಾಡುತ್ತಿದ್ದೆ. ಈ ಮರದ ಬಳಿಗೆ ಮಾತ್ರ ಯಾವ ಗೆಳೆಯರೊಂದಿಗೂ ಹೋಗುತ್ತಿರಲಿಲ್ಲ. ಇಲ್ಲಿ ನಾನು ಮತ್ತು ಮರ.

ಅದೇ ನನಗಿಷ್ಟವಾಗಿತ್ತು. ನಮ್ಮ ಬಯಲು ಸೀಮೆಯ ಬಿಸಿಲುಂಡು, ಕಡಿಮೆ ಮಳೆಯಲ್ಲಿ ಗಟ್ಟಿ ನೆಲದಾಳಕ್ಕೆ ಬೇರುಬಿಟ್ಟು ನೂರಾರು ವರ್ಷಗಳ ಕಾಲ ಹಣ್ಣುಕೊಡಬಲ್ಲ ಪುಣ್ಯದ ಮರಗಳಲ್ಲೊಂದಾದ ಈ ಬೆಲವತ್ತೆ ಮರಕ್ಕೆ ಯಾರೋ ಈಗ ಮುಳ್ಳು ತಂತಿ ಬೇಲಿ ಹಾಕಿ ಕಾಲವನ್ನೆ ಕದಿಯ ಬಯಸಿದ್ದಾರೆ. ಈ ಮರ ಇವರಪ್ಪನ ಸ್ವತ್ತಿನಂತೆ ಕಂಡಿದೆ. ಇದು ಹತ್ತಾರು ವರ್ಷಗಳ ಕಾಲ ನಿಂತಲ್ಲೆ ನಿಂತಿರುವುದರಿಂದಲೋ ಏನೋ ಸದರಿ ದೊಡ್ಡ ಮನುಷ್ಯನಿಗೆ ಇದನ್ನು ಕಡಿಯುವ ಮನಸ್ಸಾಗಿರಬೇಕು. ಜನ ಅತಿ ಬುದ್ಧಿವಂತರಲ್ಲದಿದ್ದಾಗ ತುಂಬಿ ತುಳುಕುತ್ತಿದ್ದ ಒಂದೂವರೆ ಎಕರೆಯಷ್ಟು ವ್ಯಾಪ್ತಿಯಲ್ಲಿರುವ ಕಲ್ಯಾಣಿ ಈಗ ಬಿಸಿಲು ಮತ್ತು ಜನರ ಮಾತುಗಳಿಂದ ತುಂಬಿ ಹೋಗಿದೆ. ದೇವಾಲಯದ ಸುತ್ತಾ ಇದ್ದ ದೊಡ್ಡ ದೊಡ್ಡ ಮರಗಳ ತೋಪು ಕುಬ್ಜಗೊಂಡು ಬರಡಾಗಿದೆ. ಬೋರ್‌ವೆಲ್ಲ ಕ್ರೌರ್ಯದಿಂದ ತಮ್ಮ ತೋಟ ತುಡಿಕೆಗಳನ್ನು ತಾವೇ ಕೈಯಾರೆ ಕೊಂದು ಹಾಕಿದೆ. ಇವುಗಳ ಕಡೆ ಕಿಂಚಿತ್ತೂ ಗಮನ ಕೊಡದ ಜನ ಒಂದೇ ಒಂದು ಉಳಿವಿನ ಬೀಜದಂತಿರುವ ಈ ಬೆಲವತ್ತೆ ಮರವನ್ನು ಬಳಸಿ ಮುಳ್ಳುತಂತಿ ಬೇಲಿ ಹಾಕಿ ಕಲ್ಲು ನೆಟ್ಟುಕೊಂಡಿದ್ದಾರಲ್ಲ. ಇವರಿಗೆ ಬೀಜಗಳ ಕೊರತೆ ಇದೆಯಾ? ಅಥವಾ ಬೀಜಗಳನ್ನು ಸಸಿ ಮಾಡಿಕೊಳ್ಳುವ ಪ್ರೀತಿ ಬತ್ತಿಹೋಗಿದೆಯಾ?

ಇನ್ನೊಂದು ಇಂಥದೇ ಬೆಲವತ್ತೆ ಮರ ನಮ್ಮ ಕಣಿವೆ ಕಟ್ಟೆ ತೋಟದ ಸಾಲಿನಲ್ಲಿನ ಹೊಸಕಟ್ಟೆ ಏರಿಯ ಮೇಲೆ ಯಾರ ಹಂಗೂ ಇಲ್ಲದೆ ಸರ್ಕಾರಿ ಜಮೀನಿನಲ್ಲಿ ಪಗಡದಸ್ತಾಗಿ ಬೆಳೆದು ನಿಂತಿತ್ತು. ಅದರಡಿಯಲ್ಲಿ ಬೆಳೆದಿದ್ದ ಪೊದೆಗಳು, ಹುತ್ತಗಳಿಗೆಲ್ಲಾ ಕೇರು ಮಾಡದೆ ನನ್ನಪ್ಪ ಸಂದಿಗೊಂದಿಗಳಲ್ಲಿ ಬಿದ್ದಿರುತ್ತಿದ್ದ ಹಣ್ಣುಗಳನ್ನು ಆಯ್ದು ತರುತ್ತಿತ್ತು. ಅವು ನಮ್ಮ ಪಾಲಿನ ಬೋನಸ್ ಸಂಪತ್ತಾಗಿ ಒದಗಿಬರುತ್ತಿದ್ದವು. ಅವ್ವ ಬೆಲವತ್ತಕ್ಕೆ ಬೆಲ್ಲ ಕೆಚ್ಚಿ ಹಾಕಿ ಕೂಲಿರಿದು ಕೊಡುತ್ತಿತ್ತು. ಮೆತ್ತನೆಯ ಬೀಜಗಳು ಅದರೊಳಗೆ ಕರಗಿ ಬಿಡುತ್ತಿದ್ದವು. ಅದೇ ನಮ್ಮ ಪರಮಾನ್ನ, ಅದೇ ನಮ್ಮ ಪಾಯಸ. ಬೆಲವತ್ತೆ ಹಣ್ಣಿನ ರುಚಿಯಾದ ಪಾನಕವೂ ಒಮ್ಮೊಮ್ಮೆ ಇಳಿಯುತ್ತಿತ್ತು. ಬೆಲ್ಲವನ್ನು ಜಾಸ್ತಿ ಎಳೆಯುತ್ತದೆ ಎಂಬ ಕಾರಣದಿಂದ ಪಾನಕ ಮಾಡುವುದು ಅಪರೂಪವಾಗಿತ್ತು.

ಈಗ ಎಲ್ಲ ನುಣ್ಣು ತುಂಬಿದ ಹಣ್ಣುಗಳು ರಾಸಾಯನಿಕ ವಿಷವನ್ನೂ ತುಂಬಿಕೊಂಡಿರುವುದು ಖಾತ್ರಿಯಾಗಿರುವುದರಿಂದ ಬೆಲವತ್ತೆಯಂಥ ನಿಜ ಹಣ್ಣುಗಳಿಗೆ ಎಲ್ಲಿಲ್ಲದ ಗೌರವ ಪ್ರಾಪ್ತವಾಗಿದೆ. ಆದ್ದರಿಂದ ಬುದ್ಧಿವಂತ ರೈತರ ತೋಟ ಹೊಲಗಳ ಬದುಗಳಲ್ಲಿ ಇಂಥ ಗಿಡಗಳು ಕಾಣತೊಡಗಿವೆ. ಆದರೆ ಬೆಲವತ್ತ ತನ್ನ ವಿಶಿಷ್ಟ ಗುಣದಿಂದಲೇ ಕಷ್ಟಕ್ಕೀಡಾಗಿದೆ. ನಗರ ವಾಸಿಗರ ದಾಹಕ್ಕೆ ಏನು ತಾನೆ ಸಾಲುತ್ತದೆ. ಹಾಗೇ ಈ ಬೆಲವತ್ತೆ ಹಣ್ಣುಗಳು ಸೀಸನ್ನಿನಲ್ಲಿ ಸರಿಯಾಗಿ ಬರುವ ಗುತ್ತಿಗೆದಾರರು ನೂರೋ, ಐವತ್ತೋ ಕೊಟ್ಟು ಸಣ್ಣ, ದಪ್ಪ, ಬಲಿತ-ಎಳೆಯ ಎಂಬ ಯಾವ ತಾರತಮ್ಯವೂ ಇಲ್ಲದೆ ಎಲ್ಲವನ್ನೂ ತರಿದು ಗೋಣಿಚೀಲಕ್ಕೆ ತುಂಬಿ ಮೆಟಡೋರ್‌ಗೆ ಲೋಡು ಮಾಡಿಕೊಂಡು ಹೋಗುತ್ತಾರೆ. ಮರ ಅತ್ಯಾಚಾರಕ್ಕೊಳಗಾದಂತೆ ಪೆಚ್ಚು ಮೋರೆ ಹಾಕಿ ನಿಂತಿರುತ್ತದೆ. ಅದರಡಿಯಲ್ಲಿ ಆಗ ಯಾರೂ ಇರುವುದಿಲ್ಲ. ಇದು ಹಳ್ಳಿಗರ ಮತಿಗೇಡಿ ಸ್ಥಿತಿಗೆ ಕೊನೆ ಎಂಬುದಿಲ್ಲ ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಹಳ್ಳಿಯ ಒಳಿತನ್ನು ದುಗ್ಗಾಣೀ ಬೆಲೆಗೆ ಮಾರಿ, ನಗರದ ಕೇಡುಗಳನ್ನು ದೊಡ್ಡ ಬೆಲೆ ತೆತ್ತುಕೊಳ್ಳುತ್ತಿರುವ ಪರಿ ಕಣ್ಣ ಮುಂದಿದೆ. ಬೆಲವತ್ತೆಗೆ ಬೆಲೆ ಇಲ್ಲವಾಗಿ, ಅದರ ಪಾನಕ ಮರೆತೇ

ಹಲಸಿನ ಹಣ್ಣು

ಹೋಗಿ, ಕಚಡಾ ಪೆಪ್ಸಿಯೇ ಇವರ ಎದೆಹಾಲು ಗೌರವ ಪಡೆದಿರುವುದನ್ನು ಇದೆಲ್ಲಾ ಸೂಚಿಸುತ್ತಿದೆಯೇ?

ಹೊಂಗೆ ಮರಗಳನ್ನು ಹಣ್ಣಿನ ಗಿಡಗಳ ಸಾಲಿಗೆ ಸೇರಿಸಿ ನೋಡುವ ಮನಸ್ಸಾಗುತ್ತಿದೆ. ಇದೊಂದು ನೆರಳಿನ ಮರ. ನಮಗೆ ಇದರಡಿಯಲ್ಲಿ ಹಣ್ಣುಗಳು ಸಿಗುತ್ತಿರಲಿಲ್ಲವೆಂಬುದೇನೋ ನಿಜ, ಆದರೆ ಅದೆಷ್ಟೊ ಬಗೆಯ ಹಣ್ಣುಗಳನ್ನು ಕಾಯಿಗಳನ್ನು ಇದು ಸುರಿಸುತ್ತಿದ್ದ ನೆರಳಿನ ತಂಪಿನೊಂದಿಗೆ ತಿಂದಿದ್ದೇವೆ. ಹೂವಿನ ತೇರಿನಂಥಾ ಈ ಮರದಡಿಯಲ್ಲಿಯೇ ದುಂಬಿಗಳನ್ನು ತೀರಾ ಹತ್ತಿರದಿಂದ ಅವುಗಳ ಹಾಡಿನ ಸಂಯೋಜನೆಯೊಂದಿಗೆ ಮೊದಲು ನೋಡಿದ್ದು, ದಟ್ಟ ನೆರಳ ಈ ಮರದಡಿಯಲ್ಲಿ ಮಂಪರು ಕವಿದು ಮಲಗುತ್ತಿದ್ದುದ್ದು. ಕೆರೆ ಬಯಲಲ್ಲಿ ಒಳ್ಳೆ ಮೇವು ಇದ್ದು ನಮ್ಮ ಎಮ್ಮೆಗಳು ಮೈಮರೆತು ಮೇಯುತ್ತಿದ್ದಾಗ ಹೊಂಗೆ ಮರಗಳ ಮೈಮೇಲೆ ಓಡಾಡುತ್ತಾ ಮರಕೋತಿ ಆಟದೊಳಗೆ ಮುಳುಗುತ್ತಿದ್ದೆವು. ಹೊಂಗೆ ಮರದ ಪುಟಾಣಿ ಕೊಂಬೆಗಳೂ ನಮ್ಮ ಭಾರ ತಡಕೊಂಡು ಆಡಿಸುತ್ತಿದ್ದವು. ನೆಲಾರಕ್ಕೆ ಹರಡಿಕಕಂಡಿದ್ದ ಮರಗಳನ್ನು ಆರಿಸಿಕೊಂಡು ಆಟಕ್ಕಿಳಿಯುತ್ತಿದ್ದೆವು. ಕೆರೆ ದಂಡೆಗೆ ಹೊಂದಿಕೊಂಡು ಅವರಷ್ಟಕ್ಕೆ ಅವು ಬೆಳೆದಿದ್ದ ಅಂಥ ನೂರಾರು ಮರಗಳನ್ನು ಅರೆಬರೆ ಬೇಲಿಯಲ್ಲಿ ರೈತರು ಬಿಟ್ಟುಕೊಂಡಿದ್ದರು. ಅದೇ ರೈತರಿಗೆ ಇದೀಗ ಕೆರೆಯ ಬಯಲನ್ನು ನುಂಗುವ ಏಕೋದ್ದೇಶದಿಂದ ಅದಕ್ಕೆ ಅಡ್ಡಿಯಾದ ಇಂಥ ಹೊಂಗೆ ಇತ್ಯಾದಿ ಎಲ್ಲ ಮರಗಳನ್ನು ಕೊಚ್ಚಿ ಹಾಕಿದ್ದನ್ನು ಕಣ್ಣಾರೆ ಕಂಡರೂ ಅದನ್ನು ಯಾವ ಚಂದಕ್ಕೆ ವರ್ಣಿಸಲಿ.

ಈ ನಾರುಳ್ಳ ಹೊಂಗೆ ಮರದ ಕೊಂಬೆಗಳನ್ನು ಹಿಡಿದು ಹಗ್ಗವೆಂಬಂತೆ ಬಳಸಿ ರೊಯ್ಯನೆ ಮೇಲಿನಿಂದ ನೆಲಕ್ಕಿಳಿದು ಆಟ ತೋರಿಸುತ್ತಿದ್ದಾಗ, ಹೊಂಗೆ ಮರ ನಮಗೆ ಕೇವಲ ಮರವಾಗಿರದೆ ಆಕಾಶಕ್ಕೆ ಹಗ್ಗ ಹಾಕಿ ತೂಗುತ್ತಿದ್ದ ಉಯ್ಯಾಲೆಯಾಗುತ್ತಿತ್ತು. ದಿನವೂ ನಮ್ಮಂಥವರ ಈ ಬಗೆಯ ಒರಟು ಆಟಕ್ಕೆ ಇನ್ಯಾವ ಮರವಾದರೂ ತಡೆಯುತ್ತಿರಲಿಲ್ಲ. ತಗ್ಗಿಬಗ್ಗಿ, ಕುಗ್ಗಿ ತಾನೂ ಮುರಿಯದೆ, ನಮ್ಮನ್ನೂ ಬೀಳಿಸದೆ ಆಡಿಸುತ್ತಿತ್ತು. ಅಲ್ಲಿ ಹೂವು, ದುಂಬಿಗಳು, ಹಕ್ಕಿಗಳು ಅನೇಕ ಬಗೆಯ ಕೀಟಗಳು ಮತ್ತು ನಾವು ಒಟ್ಟಿಗೆ ಇರುತ್ತಿದ್ದೆವು. ಹೊಂಗೆ ಜೇನುಹುಳುಗಳಿಗಿಂತಾ ಮಿಗಿಲಾಗಿ ಚಪ್ಪರಿಸುತ್ತಾ ಕಾಲ ಕಳೆಯುತ್ತಿದ್ದೆವು.

ಮರದ ಕೊಂಬೆ ಕೊಂಬೆಯ ಮೇಲೆ ನಮ್ಮ ಕೈಕಾಲುಗಳ ಮುದ್ರೆ ಅಚ್ಚೊತ್ತಿರುತ್ತಿತ್ತು. ಇದರ ಮೂಲಕ ನಮ್ಮನ್ನು ಮರ ಗುರ್ತಿಸುತ್ತಿತ್ತು. ನಮ್ಮ ಉಪಟಳಗಳನ್ನೆಲ್ಲಾ ಸೈರಿಸಿಕೊಳ್ಳುತ್ತಲೇ ನಿಧಾನವಾಗಿ ನಮ್ಮನ್ನೆಲ್ಲಾ ಹೊತ್ತುಕೊಂಡಿರುವಾಗಲೇ ಮೇಲೆ ಮೇಲೆ ಬೆಳೆಯುತ್ತಿತ್ತು. ಆಗ ಈಗ ಎನ್ನುತ್ತಿರುವಾಗಲೇ ಮೂರು, ನಾಲ್ಕು, ಐದು, ಆರು, ಏಳನೇ ಕ್ಲಾಸಿಗೆ ಬಂದು ನೋಡಿದರೆ, ನಮ್ಮ ಅಪ್ಪ, ಅವ್ವ ಮತ್ತು ಮೇಷ್ಟ್ರು ಎಷ್ಟಿದ್ದರೋ ಅಷ್ಟೇ ಎತ್ತರ ಇರುವಂತೆಯೂ, ನಾವು ಮತ್ತು ಈ ಮರಗಳು ಮಾತ್ರ ಆಕಾಶದೆತ್ತರಕ್ಕೆ ಬೆಳೆದು ಬಿಟ್ಟಿರುವಂತೆಯೂ ಅನಿಸುತ್ತಿತ್ತು. ನಮ್ಮ ಬಗೆಗೆ ಇದು ಊಹೆಯಂತೆ ಕಂಡರೂ ಈ ಮರಗಳ ವಿಷಯದಲ್ಲಿ ವಾಸ್ತವವಾಗಿತ್ತು. ಅಷ್ಟು ವೇಗವಾಗಿ ಬೆಳೆದು ಹೂ, ಕಾಯಿ, ಚಿಗುರು ತುಂಬಿ ತೊನೆಯುತ್ತಿತ್ತು. ಅದು ಹೂ ಬಿಟ್ಟ ಕಾಲದಲ್ಲಿ ಥೇಟ್ ಗಬ್ಬದೆಮ್ಮೆಯಂತೆ ತೂಗುತ್ತಾ ಮಾಗ್ಯಾಡುತ್ತಿತ್ತು. ಗಾಳಿ ಬೀಸಿದರೂ ಜಪ್ಪಯ್ಯ ಎನ್ನುತ್ತಿರಲಿಲ್ಲ. ನಿಧಾನವಾಗಿ ತನ್ನ ಕೋಟಿ ಹೂಗಳಲ್ಲಿ ತನಗೆ ಕಾಯಿಕಟ್ಟಿ ಕಾಪಾಡಿಕೊಳ್ಳುವಷ್ಟನ್ನು ನಿಲ್ಲಿಸಿಕೊಂಡು ತಾನೂ

ನಾರುಳ್ಳ ಹೊಂಗೆ ಮರದ ಕೊಂಬೆಗಳನ್ನು ಹಿಡಿದು ಹಗ್ಗವೆಂಬಂತೆ ಬಳಸಿ ರೊಯ್ಯನೆ ಮೇಲಿನಿಂದ ನೆಲಕ್ಕಿಳಿದು ಆಟ ತೋರಿಸುತ್ತಿದ್ದಾಗ, ಹೊಂಗೆ ಮರ ನಮಗೆ ಕೇವಲ ಮರವಾಗಿರದೆ ಆಕಾಶಕ್ಕೆ ಹಗ್ಗ ಹಾಕಿ ತೂಗುತ್ತಿದ್ದ ಉಯ್ಯಾಲೆಯಾಗುತ್ತಿತ್ತು. ದಿನವೂ ನಮ್ಮಂಥವರ ಈ ಬಗೆಯ ಒರಟು ಆಟಕ್ಕೆ ಇನ್ಯಾವ ಮರವಾದರೂ ತಡೆಯುತ್ತಿರಲಿಲ್ಲ. ತಗ್ಗಿಬಗ್ಗಿ, ಕುಗ್ಗಿ ತಾನೂ ಮುರಿಯದೆ, ನಮ್ಮನ್ನೂ ಬೀಳಿಸದೆ ಆಡಿಸುತ್ತಿತ್ತು.

ಉಳಿದು, ಮಿಕ್ಕೆಲ್ಲ ಹೂಗಳನ್ನು ನೆಲಕ್ಕೆ ಚೆಲ್ಲಿಬಿಡುತ್ತಿತ್ತು. ಅಲ್ಲಿಗೂ ಎಷ್ಟೊ ಜೇನುಹುಳುಗಳೂ ಬಂದು ನೋಡಿ ಬೇಜಾರು ಮಾಡಿಕೊಂಡು ಹೋಗುತ್ತಿದ್ದವು. ಇದರ ಮೇಲೆ ಕುಳಿತು ಒಂದು ಭಗ್ನ ಪ್ರೇಮದ ಕವಿತೆ ಬರೆದದ್ದು ನನಗಿನ್ನೂ ನೆನಪಿದೆ.

ಹೊಂಗೆ ಮರವು ಮಕ್ಕಳ ಪಾಲಿನ ಹಣ್ಣಿನ ಮರಕ್ಕಿಂತಲೂ ಹೀಗೆ ಮಿಗಿಲಾಗಿ ಆಟದ ಮೈದಾನದಂತೆ ಇದ್ದರೆ ರೈತರ ಪಾಲಿಗೆ ಸಂಪತ್ತಿನ ಮರ. ಗದ್ದೆಗಳಿಗೆ ಇದರ ಸೊಪ್ಪು ತುಳಿಯಲು ಇದನ್ನು ರೈತರು ಸವರಿದರೆ ಅದು ಸಾವರಿಸಿಕೊಂಡು ಚಿಗುರುವ 'ಅಮರ' ಈ ಮರ. ಒಂದು ಕಾಲದಲ್ಲಿ ಇದರ ಕಾಯಿಯಿಂದ ತೆಗೆದ ಹೊಂಗೆ ಎಣ್ಣೆ ಬೆಳಕಿನ ಮೂಲವಾಗಿತ್ತು. ಗೊಬ್ಬರ ತಯಾರಿಕೆಯಲ್ಲಿಯೂ ಈ ಮರದ ಪಾತ್ರ ದೊಡ್ಡದಿತ್ತು. ರಾಸಾಯನಿಕ ಗೊಬ್ಬರದ ಬಳಕೆಯ ಭರಾಟೆಯಲ್ಲಿ ಇವೆಲ್ಲಾ ಈಗ ಮರೆತೇ ಹೋಗಿವೆ. ಅದರ ಶಕ್ತಿ, ಒಳಗುಟ್ಟು, ಅರಿಯದ ಅವಿವೇಕಿಗಳು ಬೇರು ಸಹಿತ ಕಿತ್ತೊಗೆದರೆ, ಅವು ತಾನೆ ಏನು ಕಡಿಮೆ ಮಳೆಗೆ ಬೇಲಿ ಸಾಲುಗಳಲ್ಲಿ ಯಾವ ಆರೈಕೆಯೂ ಇಲ್ಲದೆ ಬೆಳೆದು ಫಲಕೊಡುವ ಈ ಮರಕ್ಕೆ, ಇದೀಗ ಮತ್ತೆ ಅಪಾರ ಗೌರವ ಪ್ರಾಪ್ತವಾಗಿದೆ. ತೆಂಗು, ಅಡಿಕೆಗಳು ಹೇಳ ಹೆಸರಿಲ್ಲದಂತಾಗುವ ಭಯದ ನಡುವೆ, ಹೊಂಗೆ ಕಾಯಿಯಲ್ಲಿ ಬಯೋ ಡೀಸೆಲ್ ಉತ್ಪಾದಿಸುವ ತಂತ್ರಜ್ಞಾನ ಅಭಿವೃದ್ಧಿ ಹೊಂದಿರುವುದು ಇದಕ್ಕೆ ಕಾರಣ. ಅಂತೂ ಈ ಮರವನ್ನು ಕೊಲ್ಲುತ್ತಿದ್ದವರೆ ಕರುಣಾಳುಗಳಾಗಿ ಕಾಪಾಡತೊಡಗಿದ್ದಾರೆ. ಇನ್ನೂ ಬಹುತೇಕರು ತಮ್ಮ ಪಟ್ಟುಬಿಡದೆ ಮತ್ತೆ ಮತ್ತೆ ಚಿಗುರಲೆತ್ನಿಸುವ ಹೊಂಗೆ ಬುಡಗಳನ್ನು ತರಿದು ಹಾಕುತ್ತಾ ಬೆಂಕಿ ಇಡುತ್ತಿದ್ದಾರೆ.

ಆ ಬಸ್‌ಸ್ಟ್ಯಾಂಡಿನ ಬಳಿ, ಬರೋಬರಿ ಒಂದು ಚೋಟುದ್ದವಿದ್ದ ಆ ಹಲಸಿನ ತೊಳೆಯನ್ನು ಐದು ರೂಪಾಯಿಗೆ ಎರಡು ಎಂದು ಬಲು ಘನವಾಗಿ ಕೂಗುತ್ತಿದ್ದ ಆ ಹುಡುಗ. ಛಲೆ ಕೊನೆಗೂ ನಿಜ ಹಣ್ಣಿಗೆ ಬೆಲೆ ಬಂತಲ್ಲಾ ಎಂದುಕೊಂಡು ಕೊಂಡು ತಿಂದೆ. ಹಣ್ಣು ಹಣ್ಣು ಎಂದು ಲೋಕವೆಲ್ಲಾ ರಾಪಾಡಿಕೊಂಡು ತಿನ್ನುತ್ತಿರುವ ಸೇಬು, ದ್ರಾಕ್ಷಿ, ಅನಾನಸ್, ಮೊಸಂಬಿ, ಕಿತ್ತಾಳೆ, ಬಾಳೆ ಇವೆಲ್ಲಾವೂ ತಮ್ಮ ಕಣಕಣದಲ್ಲೂ ಶಕ್ತ್ಯಾನುಸಾರ ರಾಸಾಯನಿಕ ವಿಷಗಳನ್ನು ತುಂಬಿಕೊಂಡಿವೆ. ಈ ಹಣ್ಣಿನ ಗಿಡಗಳು ಹುಟ್ಟಿದಂದಿನಿಂದ ಸಾಯುವವರೆಗೂ ನಿರಂತರವಾಗಿ ಎಂಡೋಸಲ್ಫಾನ್, ಡೆಮೊಕ್ರಾನ್, ಇತ್ಯಾದಿ ಕರಗದ ವಿಷವುಂಡು ತಿಂದವರಿಗೆ ಉಣಿಸುತ್ತಿವೆ. ಇದರ ಅರಿವುಳ್ಳವರು ಐದು ರೂಪಾಯಿಗೆ ಎರಡಲ್ಲಾ ಒಂದಾದರೂ ಹಲಸಿನ ತೊಳೆಯನ್ನೆ ಕೊಂಡು ತಿಂದು ತೃಪ್ತಿಪಟ್ಟುಕೊಳ್ಳುತ್ತಾರೆ.

ನಮ್ಮೂರ ಪಶ್ಚಿಮಕ್ಕೆ ಕಾವಲು ಹೊಲಗಳು. ಅಲ್ಲಿ ಸಾಲು ಸಾಲು ಹಲಸಿನ ಮರಗಳು, ಬೆಳೆಗಳಿಗೆ ಯಾವ ತೊಂದರೆಯೂ ಆಗದಂತೆ ಆವರಿಸಿ 'ಹಲಸಿನ ತೋಟ' ಗಳೇನೋ ಎನ್ನುವ ಭ್ರಮೆ ಹುಟ್ಟಿಸುತ್ತಿದ್ದವು. ಏಪ್ರಿಲ್, ಜೂನ್ ತಿಂಗಳ ಸೀಸನ್ನಿನಲ್ಲಿ ಈ ಸಾಲು ಹಲಸಿನ ಮರಗಳು ನಮ್ಮಲ್ಲಿ ಎಲ್ಲಿಲ್ಲದ ಆಕರ್ಷಣೆ ಹುಟ್ಟಿಸುತ್ತಿದ್ದವು. ದೊಡ್ಡವರ ಹಿಂದೆ ಬೀಳದೆ ಇದ್ದರೆ ಹಲಸಿನ ಹಣ್ಣಿನ ಪುಣ್ಯ ಲಭಿಸುತ್ತಿರಲಿಲ್ಲ. ಅದಕ್ಕೆ ನಾವು ತುಂಬಾ ಸೀನಿಯರ್‌ಗಳ ಗೆಳೆತನ ಸಂಪಾದಿಸಿಕೊಂಡು ಸದಾ ಅವರಿಂದೆ ಅವರು ಹೇಳಿದ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾ ಮನ ಒಲಿಸಿ, ಶಿಷ್ಯತ್ವ ಪಡೆಯುತ್ತಿದ್ದೆವು.

ಇತರೆ ಯಾವುದೇ ಹಣ್ಣನ್ನು ಸಂಪಾದಿಸಿಕೊಂಡಷ್ಟು ಸುಲಭವಾಗಿ ಈ ಮುಳ್ಳುಹಂದಿ ಹಲಸಿನ ಹಣ್ಣನ್ನು ಸಂಪಾದಿಸಲು ಸಾಧ್ಯವಿರಲಿಲ್ಲ. ಹಲಸಿನ ಮರದ ರಕ್ಷಣೆಗೆಂದು ಜಾಲಿ ಮತ್ತು ಕಾರೆ ಮುಳ್ಳುಗಳನ್ನು ರಾಶಿ ರಾಶಿಯಾಗಿ ಬುಡಕ್ಕೆ ಹಾಕುತ್ತಿದ್ದರು. ಅಲ್ಲೊಂದು ಮುಳ್ಳಿನ ಮಂಟಪ ರೂಪ ಪಡೆಯುತ್ತಿತ್ತು. ಆ ಸದರಿ ಮುಳ್ಳಿನ ಮಂಟಪವನ್ನು ಭೇದಿಸಿ ಮರ ಹತ್ತುವುದು ಸುಲಭ ಸಾಧ್ಯವಾಗಿರಲಿಲ್ಲ. ಪ್ರತಿವರ್ಷವೂ ಮುಳ್ಳು ಹಚ್ಚುವುದೊಂದು ರೂಢಿಯೇ ಆಗಿತ್ತು. ಮುಳ್ಳಿಲ್ಲದ ಮರವೇ ನಮಗೆ ಸಿಗುತ್ತಿರಲಿಲ್ಲ. ಇಲ್ಲಿ ವಿಚಾರವೊಂದನ್ನು ಸ್ಪಷ್ಟ ಮಾಡಬೇಕು. ಹಳ್ಳಿಗಳಲ್ಲಿ ಹಣ್ಣು ಕದಿಯುವುದು, ಅದರಲ್ಲೂ ಹಲಸಿನ ಹಣ್ಣು ಕದಿಯುವುದು ಮಹಾ ಅಪರಾಧವೇನೂ ಆಗಿರಲಿಲ್ಲ. 'ತಿನ್ನುವ ಮುಕ್ಕ ಬಿಡೋ ಅತ್ಲಾಗಿ' ಎಂದು ಕಳ್ಳರನ್ನು ಶಿಕ್ಷಿಸದೇ ಬಿಟ್ಟುಬಿಡುತ್ತಿದ್ದರು. ಆದರೂ ಮರದ ಮಾಲೀಕರಿಗೆ ಗೊತ್ತಾಗದಂತೆ ಹಣ್ಣು ಕಿತ್ತು ತಿನ್ನುವುದು ಸೂಕ್ತವೂ, ಗೌರವಾನ್ವಿತವೂ, ಬುದ್ಧಿವಂತರು ಮಾಡುವಂಥ ಕೃತ್ಯವೂ ಆಗಿತ್ತು. ಮತ್ತೆ ಮತ್ತೆ ಆ ಮರದ ಹಣ್ಣಿನಲ್ಲಿ ಪಾಲು ಪಡೆಯುವುದಕ್ಕೆ ಇದು ಸರಿಯಾದ ಉಪಕ್ರಮವಾಗಿತ್ತು. ಇವರು ಅವರ ಮರದಲ್ಲಿ, ಅವರು ಇವರ ಮರದಲ್ಲಿ ಕದ್ದು ಹಣ್ಣು ತಿನ್ನುವ ಪರಿಪಾಠ ಅನೂಚಾನವಾಗಿ ನಡೆದು ಬಂದಿತ್ತು. ಕದ್ದು ತಿನ್ನುವ ಹಣ್ಣಿಗೆ ಅದರದ್ದೇ ಆದ ರುಚಿ ನಾಲಿಗೆಗೆ ಇಳಿಯುತ್ತಿತ್ತು.

ಸ್ಕೂಲಿನಲ್ಲಿ ಹಿರಿಯ ಸದಸ್ಯರೊಬ್ಬರ (ಫೇಲಾದ ಸದಸ್ಯರು) ನಾಯಕತ್ವದಲ್ಲಿ ಹಲಸಿನ ಹಣ್ಣು ಹುಡುಕಲು ದಂಡಯಾತ್ರೆ ಹೊರಟರೆ ಕಡ್ಡಾಯವಾಗಿ ಹಣ್ಣುಗಳು ಸಿಗುತ್ತಿದ್ದವು. ಸ್ಕೂಲು ತಪ್ಪಿಸಿದ ಪರಿಣಾಮವಾಗಿ ಮುಂದೆ ಒದಗಲಿರುವ ಕಷ್ಟ ಕಾರ್ಪಣ್ಯಗಳನ್ನು ಲೆಕ್ಕಿಸದೆ ಅವರ ಜೊತೆ ಹೋಗುವ ಧೈರ್ಯ ಮಾಡಬೇಕಿತ್ತಷ್ಟೆ.

ಕಷ್ಟಪಟ್ಟು ದಪ್ಪ ಕಲ್ಲುಗಳನ್ನು ತಂದುಕೊಡುವುದು ಸಣ್ಣ ಹುಡುಗರ ಕರ್ತವ್ಯವಾಗಿತ್ತು. ನಮ್ಮ ನಾಯಕರು ಅವುಗಳನ್ನು ಮುಳ್ಳಿನ ಮಂಟಪದ ಮೇಲೆ ಮೆಟ್ಟಲಿನಂತೆ ಹಾಕಿ, ಅದರ ಮೇಲೆ, ನಡೆಮುಡಿಯ ಮೇಲೆ ನಡೆದಂತೆ ಸುನಾಸಾಗಿ ಹೋಗಿ ಬುಡ ಹಿಡಿದು ಮೇಲೆ ಹತ್ತಬೇಕಾಗಿತ್ತು. ಮರಹತ್ತಲು ಇನ್ನೂ ಮಾರ್ಗವಿತ್ತು. ಅದು ಜೋಲುಗೊಂಬೆಯನ್ನು ಜಗ್ಗಿಸಿಕೊಂಡು ಕೋತಿಯಂತೆ

ಹತ್ತಿ ಹೋಗುವ ಮಾರ್ಗ, ಹೀಗೆ ಜೋಲು ಗೊಂಬೆ ಹಿಡಿದು ಹತ್ತುವ ಕಲೆ ಕೆಲವರಿಗೆ ಮಾತ್ರ ಕರಗತವಾಗಿರುತ್ತಿತ್ತು. ಕೆಲವು ಮರಗಳಿಗೆ ಜೋಲುಗೊಂಬೆ ತಳಾರದಲ್ಲೆ ಇರುತ್ತಿದ್ದರೆ, ಇನ್ನು ಕೆಲವು ಗಗನದಲ್ಲಿ ಕೊಂಬೆಗಳನ್ನು ಚಾಚಿಕೊಂಡು ನಮ್ಮ ಕೈತಪ್ಪಿಸಿ ಹಾರುತ್ತಿದ್ದವು.

ಒಮ್ಮೊಮ್ಮೆ ಹೀಗೆ, ಹೇಗೋ ಮಾಡಿ ಮಹಾತಾಯಿಯ ಬುಡ ತಲುಪುವ ಹೊತ್ತಿಗೆ ಮುಳ್ಳಿನ ಮೇಲೆ ಬಿದ್ದ ಹಣ್ಣುಗಳ ಭಾನ್ಸು ಹೊಡೆಯುತ್ತಿತ್ತು. ಇನ್ನೊಮ್ಮೆ ಇಡೀ ಮರವನ್ನು ಸಿದಿಕಿದರೂ ಒಂದು 'ಹುಳಿಗಾಯಿ'ಯೂ ಲಭಿಸುತ್ತಿರಲಿಲ್ಲ. ಆಗ ನಮ್ಮ ನಾಯಕನು ಮುಳ್ಳುಗಳಿಂದ ಮೈಕೈ ತರಚಿಕೊಂಡು ಸಿಟ್ಟಿಗೆ ಬಲಿತ ನಾಲ್ಕಾರು ಕಾಯಿಗಳನ್ನೇ ಮರದಲ್ಲಿದ್ದಂತೆಯೇ ನುಲುಚಿ ಅಲ್ಲೇ ಬಿಟ್ಟು ಇಳಿಯುತ್ತಿದ್ದ. ಅವು ನಮ್ಮ ಮುಂದಿನ ದಂಡಯಾತ್ರೆಯ ಹೊತ್ತಿಗೆ ಹಣ್ಣಾಗಿ ನಮ್ಮ ಪಾಲಾಗುತ್ತಿದ್ದವು. ಮರದ ಒಡೆಯರು ಆ ಮಧ್ಯೆ ಕೈಯಾಡಿಸದೇ ಇದ್ದ ಪಕ್ಷದಲ್ಲಿ ಮಾತ್ರ

ಒಂದಲ್ಲವೆಂದರೆ ಇನ್ನೊಂದು ಮೊತ್ತೊಂದು ಹೀಗೆ ಅನೇಕ ಮರಗಳನ್ನು ಹತ್ತಿ ಹುಡುಕಿ ಹಣ್ಣುಗಿಟ್ಟಿಸಿಕೊಂಡರೆ ಎಲ್ಲ ಸಮಸ್ಯೆಗಳು ಬಗೆಯರಿದು ಬಿಡುತ್ತಿರಲಿಲ್ಲ. ಅದನ್ನು ಕೊಯ್ದು ತಿನ್ನುವುದು ಸಲೀಸು ಕೆಲಸವಾಗಿರಲಿಲ್ಲ. ನಮ್ಮ ಬಳಿ ಹಣ್ಣು ಕೊಯ್ಯಲು ಬೇಕಾದ ಕನಿಷ್ಟ ಹತಾರವೂ ಇರುತ್ತಿರಲಿಲ್ಲ. ಗೆಳೆಯನೊಬ್ಬ ನನ್ನ ಬಳಿ ಬಟನ್ ಚಾಕು ಇದೆಯೆಂದೂ ಅದನ್ನು ತರುತ್ತೇನೆಂದೂ ಸದಾ ಕಾಲವೂ ಹೇಳುತ್ತಿದ್ದ. ಆದರೆ ಎಂದೆಂದಿಗೂ ಅವನ ಆ ಬಟನ್‌ಚಾಕನ್ನು ನೋಡುವ ಭಾಗ್ಯ ನಮಗೆ ಒದಗಿ ಬರಲೇ ಇಲ್ಲ.

ಹೊಲದ ಹದ್ದುಬಸ್ತಿಗೆ ನೆಟ್ಟ ಚೂಪನೆಯ ಕೂಳೆ ಕಲ್ಲು ಅಥವಾ ಪಹಣಿ ಕಲ್ಲಿಗೆ ಚಚ್ಚಿ ಹಣ್ಣು ಸೀಳುತ್ತಿದ್ದೆವು. ಅದೊಂದು ಪ್ರಾಣಿಯನ್ನು ಬಲಿ ಕೆಡವಿ ಪಾಲು ಹಾಕಿದಷ್ಟೆ ಸಂಪ್ರಾದಾಯಕ ಕೆಲಸವಾಗಿತ್ತು. ಮೂಗು ಮುಸುಡಿ ಕೈಮೈ ಗೆಲ್ಲ ಹಲಸಿನ ಅಂಟು ಮೆತ್ತಿಕೊಂಡು ಆದಿಮಾನವರ ರೂಪ ತಾಳುತ್ತಿದ್ದೆವಲ್ಲಾ ಅದನ್ನು ನೋಡಬೇಕಿತ್ತು. ಮಾಮೇರಿ ಅಂಟು ಈ ಹಲಸಿಗೇ ಯಾಕೆ ಅಂಟಿತೋ ಎಂದು ಶಪಿಸುತ್ತಿದ್ದೆವು. ಹಲಸು ಪೂರಾ ಹಣ್ಣಾಗಿದ್ದರೆ ಪರವಾಗಿಲ್ಲ, ಅದೇನಾದರೂ ಹುಳಿಗಾಯಿಯೇನಾದರೂ ಆಗಿದ್ದರೆ ಮುಗಿಯಿತು. ಅಂಟು ನಮ್ಮನ್ನು ದೃತಿಗೆಡಿಸಿ ಕೈಬಾಯಿಗೆ ಬೀಗ ಹಾಕಿ ಬಿಡುತ್ತಿತ್ತು. ಒಮ್ಮೊಮ್ಮೆ ಈ ಹಲಸಿನ ಬೇಟೆಯ ಬಗೆಗೆ ಬೇಜಾರು ಬಂದು ಬಿಡುತ್ತಿತ್ತು. ಈ ಅಂಟನ್ನು ತೊಳೆಯುವ ಸುಲಭ ಮಾರ್ಗಗಳ್ಯಾವುವೂ ನಮಗೆ ಆಗ ಲಭ್ಯವಿಲ್ಲದ ಕಾರಣ ಕೈಗಳನ್ನು ಮಣ್ಣಿಗೆ ಹಾಕಿ ಉಜ್ಜುತ್ತಿದ್ದೆವು.

ಹೀಗೆ ಹಲಸಿನ ಬೇಟೆ ರೂಢಿಯಾದಂತೆ ಯಾವ ದರ್ಕಾರವು ಇಲ್ಲದೆ ಮಬ್ಬುಗತ್ತಲಲ್ಲಿ ಹಲಸಿನ ಮರದ ಸಾಲಿಗೆ ಹೋಗಿ ಹಲಸಿನ ಕಾಯಿಗಳನ್ನೇ ಕಿತ್ತು ತಂದು ಕೊಪ್ಪಲುಗಳ ಹುಲ್ಲಿನ ಬಣವೆಗಳ ಅಡಿಯಲ್ಲಿ ಬಚ್ಚಿಡುವ ಪರಿಪಾಠ ಚಾಲ್ತಿಗೆ ಬಂತು. ಹೀಗೆ ಬಚ್ಚಿಡುವುದನ್ನು ನೋಡಿಕೊಂಡ ಕೆಲವರು ಹಲಸಿನ ಮರದ ಸಾಲಿಗೇ ಹೋಗದೆ, ಮುಳ್ಳಿನ ಮಂಟಪದ ದರ್ಶನವನ್ನೇ ಮಾಡದೆ ಹಣ್ಣುಗಿಟ್ಟಿಸುವ ಪಂಜುಗಳ್ಳರ ಗುಂಪೊಂದು ಸದಾ ಇದ್ದೇ ಇರುತ್ತಿತ್ತು.

ಒಮ್ಮೆ ನಾನು ಮತ್ತು ನಮ್ಮ ಚಿಕ್ಕಪ್ಪನ ಮಗ ಸೇರಿ ನಮ್ಮ ಪಕ್ಕದ ತೋಟದ 'ಅಜ್ಜ' ಮರಕ್ಕೆ ಸ್ಕೆಚ್ ಹಾಕಿದೆವು. ಪಾಪ ಆ ಅಜ್ಜ ಒಂಟಿ. ಯಾರೂ ಇರಲಿಲ್ಲ. ತೋಟ ಮಾತ್ರ ಜೋರಾಗಿತ್ತು. ಎರಡು ಹಲಸಿನ ಮರಗಳು ಅಜ್ಜಿ ಪಾಲಿನಲ್ಲಿದ್ದವು. ಒಂದು ಲದ್ದಿಗ; ಆದರ ಹಣ್ಣು ಯಾರಿಗೂ ಬೇಡ. ಹಣ್ಣಾಗಿ ಕೆಳಗೆ ಉದುರಿದರೂ ನಾಯಿ ನರಿ, ಕರಡಿ, ಹಂದಿಗಳೂ ಮುಟ್ಟುತ್ತಿರಲಿಲ್ಲ. ಆದರೆ ಆ ಮರದ ಕಾಯಿಗಳು ಮಾತ್ರ ಸಾರಿಗೆ ಬಲುರುಚಿ. ಇನ್ನೊಂದು ಬಲುಸಿಹಿ ಅಂದು ಭಾನುವಾರ ಮಧ್ಯಾಹ್ನ ಇಬ್ಬರೂ ಮರ ಹತ್ತಿದೆವು. ಜೋಲು ಗೊಂಬೆ ಕೆಳಗೆ ನೇತಾಡುತ್ತಿದ್ದುದ್ದರಿಂದ ಬಲು ಸುಲಭವಾಗಿ ಮರ ಹತ್ತಿದೆವು. ಏನಾಶ್ಚರ್ಯ ಮಿಡಿಯುತ್ತಾ ಹೋದಂತೆ ಹಣ್ಣು, ಹಣ್ಣು ಬರೀ ಹಣ್ಣು. ದುಬ್ ದುಬ್ ಶಬ್ಧ ಭಯ ಮತ್ತು ಆಶ್ಚರ್ಯ ಎರಡನ್ನೂ ಉಂಟು ಮಾಡಿತು. ಹತ್ತಾರು ಹಣ್ಣುಗಳನ್ನು ಕಿತ್ತೆವು. ಇನ್ನೂ ಎಷ್ಟು ಹಣ್ಣುಗಳಿದ್ದವೋ, ಎರಡೇ ಕೊಂಬೆಗಳಿಗೆ ಅಷ್ಟು ಹಣ್ಣು ಕೆಳಗುರುಳಿದ್ದವು. ಅಷ್ಟನ್ನೂ ನಮ್ಮ ಜೋಳದ ಮಡಿಯೊಳಗೆ ಉರುಳಾಡಿಸಿಕೊಂಡು ಕೊಯ್ದು ತಿಂದು ತೇಗಿದೆವು. ಹಣ್ಣು ಸಿಹಿ, ಆದರೆ ಬೊಚ್ಚು, ತೊಳೆ ತೀರಾ ಕಡಿಮೆ. ಹೀಗಾಗಿ ಎರಡು ಮೂರು ದಿನಗಳಲ್ಲಿ ಆ ಎಲ್ಲಾ ಹಣ್ಣುಗಳನ್ನು ಯಶಸ್ವಿಯಾಗಿ ಸ್ವಾಹ ಮಾಡಿದೆವು.

ನಮಗೆ ಯಾವ ಆರೋಗ್ಯದ ತೊಂದರೆಯೂ ಆದ ನೆನಪಿಲ್ಲ. ಆ ಕಡೇ ದಿನ, ಎಲ್ಲಾ ಹಣ್ಣುಗಳು ಮುಗಿದ ಮೇಲೆ ಅದೇ ಮರದ ಕಡೆ ಕಳ್ಳ ಹೆಜ್ಜೆ ಹಾಕುತ್ತಿದ್ದಾಗ ಅಜ್ಜಿ ಪ್ರತ್ಯಕ್ಷಗೊಂಡು "ಮೂರ್ತಪ್ಪ ಬಾರ್ಲಾ ಇಲ್ಲಿ ಹಲಸಿನ ಹಣ್ಣು ಕಿತ್ತಾಕು" ಎಂದು ಕಳ್ಳರಿಗೇ ಸ್ವಾಗತ ನೀಡಿತು. ಬಚಾವಾದೆವು ಎಂದುಕೊಂಡು ಇಬ್ಬರೂ ಮರಹತ್ತಿ ಅದೆಷ್ಟೋ ಹಣ್ಣುಗಳನ್ನು ನುಲುಚಿ ಕಿತ್ತೆವು. ಹಣ್ಣಾದರೂ ಕೆಳಕ್ಕೆ ಕೆಡವಲೊಪ್ಪದ ಸ್ವಭಾವ ಈ ಮರದ್ದು. ಕೆಲ ಮರಗಳಂತೂ ಇನ್ನೂ ಹುಳಿಗಾಯಿಯಾಗಿದ್ದಾಗಲೇ ತೊಟ್ಟು ಕಳಚಿ ಉದುರಿಸಿ ಬಿಡುತ್ತವೆ. ಇಷ್ಟಾದರೂ 'ನಾಳೆಗೆ' ನಮಗೆ ಇರಲಿ ಎಂದು ಒಳ್ಳೆ ಸೈಜಿನ ನಾಲ್ಕು ಹಣ್ಣುಗಳನ್ನು ಮರದ ಮೇಲೆ ಉಳಿಸಿ ಇಳಿದೆವು. ಅಜ್ಜಿಯಾದರೋ ಕರುಣಾಳು "ತಗಂಡೊಗುರ್ಲಾ ಹುಡುಗುರಾ ನೀವೆಲ್ಲೆಲ್ಲಾ" ಎಂದು ಧಾರವಾಳವಾಗಿ ಕೊಟ್ಟು ಕಳಿಸಿತು. ಸ್ವಲ್ಪ ಪೆಚ್ಚಾದಂತಾಗಿ ಹಣ್ಣಿನೊಂದಿಗೆ ಜಾಗ ಖಾಲಿ ಮಾಡಿದೆವು.

ಹೊಲದ ಹದ್ದುಬಸ್ತಿಗೆ ನೆಟ್ಟ ಚೂಪನೆಯ ಕೂಳೆ ಕಲ್ಲು ಅಥವಾ ಪಹಣಿ ಕಲ್ಲಿಗೆ ಚಚ್ಚಿ ಹಣ್ಣು ಸೀಳುತ್ತಿದ್ದೆವು. ಅದೊಂದು ಪ್ರಾಣಿಯನ್ನು ಬಲಿ ಕೆಡವಿ ಪಾಲು ಹಾಕಿದಷ್ಟೆ ಸಪ್ರಾದಾಯಕ ಕೆಲಸವಾಗಿತ್ತು. ಮೂಗು ಮುಸುಡಿ ಕೈಮೈ ಗೆಲ್ಲ ಹಲಸಿನ ಅಂಟು ಮೆತ್ತಿಕೊಂಡು ಆದಿಮಾನವರ ರೂಪ ತಾಳುತ್ತಿದ್ದೆವಲ್ಲಾ ಅದನ್ನು ನೋಡಬೇಕಿತ್ತು. ಮಾಮೇರಿ ಅಂಟು ಈ ಹಲಸಿಗೇ ಯಾಕೆ ಅಂಟಿತೋ ಎಂದು ಶಪಿಸುತ್ತಿದ್ದೆವು. ಹಲಸು ಪೂರಾ ಹಣ್ಣಾಗಿದ್ದರೆ ಪರವಾಗಿಲ್ಲ, ಅದೇನಾದರೂ ಹುಳಿಗಾಯಿಯೇನಾದರೂ ಆಗಿದ್ದರೆ ಮುಗಿಯಿತು. ಅಂಟು ನಮ್ಮನ್ನು ದೃತಿಗೆಡಿಸಿ ಕೈಬಾಯಿಗೆ ಬೀಗ ಹಾಕಿ ಬಿಡುತ್ತಿತ್ತು.ಹಾಕಿ ಉಜ್ಜುತ್ತಿದ್ದೆವು.

ಒಮ್ಮೆ ನೆಟ್ಟು ಕನಿಷ್ಟ ಆರೈಕೆ ಮಾಡಿದರೆ ನೂರಾರು ವರ್ಷ ಗಾಡಿಗಟ್ಟಲೆ ರುಚಿಯಾದ ಹಣ್ಣು ಕೊಡುವ ಇಂಥ ಮರಗಳು ಈ ಭೂಮಂಡಲದಲ್ಲಿರುವುದೇ ನಮ್ಮ ಪುಣ್ಯ. ಗೊಬ್ಬರವಿಲ್ಲ, ಗೋಡಿಲ್ಲ, ನೀರಾವರಿ ಮೊದಲೇ ಇಲ್ಲ. ಪುಣ್ಯಾತ್ಮರಾದ ನಮ್ಮ ಹಿಂದಿನವರು ಸಾಕಿ ಸಲಹಿದ ಇಂಥ ಮರಗಳನ್ನು ಕಡಿದು, ಡೈನಿಂಗ್ ಟೇಬಲ್, ಮಂಚ, ಟೀಪಾಯಿ ಮಾಡಿಸಿ ಪಟ್ಟಣಿಗರಂತೇ ಕುಣಿದು ಹಾಳುಗೆಡವಿದ ಹಳ್ಳಿಗರ ಪಾಡು ಈಗ ಮೂರಬಟ್ಟೆ. ಹೊಸ ತಲೆಮಾರಿನ ಜನರಿಗೆ ದೀರ್ಘಾವಧಿ ಯೋಜನೆಗಳೇ ಇಲ್ಲ. 'ಮರ'ವೆಂಬುದು ಎಂದೋ ಕೈಗೆ ಸಿಗುವ ಮರೀಚಿಕೆಯಂತೆ. ಆದ್ದರಿಂದ ಅವುಗಳ ಕಡೆ ಒಲವಿಲ್ಲ. ಹಳ್ಳಿಯ ಹಳೆಯ ಒಳಿತುಗಳನ್ನು ಕಾಪಾಡಿ ಬೆಳೆಸಬೇಕಾದ ಹಿರಿಯರೂ ಈಗ ತಾತ್ಸಾರ ತೋರಿ ಬರಡು ನೆಲದಂತಾಗಿದ್ದಾರೆ. ಬರಡು ನೆಲದಲ್ಲೆಲ್ಲಾ ಹಬ್ಬಿ ಬೆಳೆಯುವ ಗಿಡಮರಗಳನ್ನು ಚಿಂದಿ ಚೂರು ಮಾಡಿ ಸುಟ್ಟ ಇಟ್ಟಿಗೆ ಮಾಡಿದ್ದಾರೆ.

ಬುದ್ಧಿವಂತ ಅಕ್ಷರಜ್ಞಾನಿ ಇಲಾಖೆಗಳ, ಸೌಖ್ಯ ಆಳುಗಳು ಹಳ್ಳಿಗಳ ಅನ್ನ ಜ್ಞಾನಿಗಳನ್ನು ನಡು ನೀರಿನಲ್ಲಿ ಕೈಬಿಟ್ಟು ಆರಾಮವಾಗಿರುವುದು ಸಾಧ್ಯವೇ ಇಲ್ಲ. ಬಹುಸಂಖ್ಯಾತರು ಈಗ ಕಣ್ಣಿಲ್ಲದವರಾಗಿ, ಹಣ್ಣಿಲ್ಲದವರಾಗಿ ಸ್ವಯಂಕೃತ ಕಷ್ಟಗಳಲ್ಲಿದ್ದಾರೆ. ಆದ್ದರಿಂದಲೇ ಇವರೆಲ್ಲಾ ತಮ್ಮನ್ನು ಅನಾದಿ ಕಾಲದಿಂದಲೂ ಕಾಪಾಡಿ ಉಳಿಸಿರುವ ಕಾರೆ, ಬಿಕ್ಕೆ, ಸೀಬೆ, ನಿಂಬೆ, ಚಕೋತ, ಹಲಸು, ಮಾವು, ಹುಣಸೆ, ಎರದೆ, ಈಚಲು, ರಾಮಫಲ, ಗವಳಿ, ಸೀತಾಫಲ ಇತ್ಯಾದಿ ಹಣ್ಣಿನ ಗಿಡಗಳನ್ನು ಹೊಲ ತೋಟಗಳಲ್ಲಿ ನಟ್ಟು ಅವಕ್ಕೆ ಆಡು, ಕುರಿ, ದನಗಳಿಂದ ರಕ್ಷಣೆಗಾಗಿ ಗೂಡುಕಟ್ಟಿ ಕೈನೀರು ಹಾಕಿ ಬೆಳೆಸಬೇಕಾಗಿದೆ. ಇರುವುದೊಂದು ಮಾರ್ಗ ಅದು ಮರದ ಮಾರ್ಗ. ಅದೇ ಅಮರ ಮಾರ್ಗ. ಈ ಜಾತಿಯ ದೇಶೀ ಗಿಡಗಳು ನೆಲಕ್ಕೆ ಆಳವಾಗಿ ಬೇರು ಬಿಟ್ಟು ಬರಸಿಡಿಲಿಗೂ ಬಗ್ಗದೇ ಬೆಳೆಯುವ ಪೈಕಿಯವು. ಗೊಬ್ಬರವನ್ನು ನೀರನ್ನು ಕೇಳದೆ ಸುಮ್ಮನೆ ಸಂತರಂತೆ ನಿಂತು ಹಣ್ಣು ಕೊಡುತ್ತಾ ಪುನರ್ಜನ್ಮ ಪಡೆಪಡೆದು ಸಾಗುವ ಜೀವಿಗಳಿವು. ಇವುಗಳ ಸಾಲುಸಾಲು ಸಂಪತ್ತು ಹಳ್ಳಿಗಳ ಜೀವಾಳವಾಗಿತ್ತು. ಈಗ ಸಾಲು ಸಾಲು ಮರಗಳಿಲ್ಲ ಸಾಲು ಸಾಲು ನೇಣುಗಂಬಗಳು. ಹಳ್ಳಿಗಳು ಅದರ ವಿಷ ಫಲವನ್ನೀಗ ಉಣ್ಣ ತೊಡಗಿವೆ.

ವಿವೇಕದ ಬೀಜಗಳು, ಈ ಸಾಲು ಸಾಲು ಹಣ್ಣಿನ ಮರಗಳ ಆಡು, ಕುರಿ, ದನ, ಕೋಳಿಗಳ, ಹಸಿರುಬೇಲಿಗಳ, ಶ್ರಮ ಶಕ್ತಿಯ, ನಾಟಿ ಬೀಜಗಳ ಕೆರೆ ಕಟ್ಟೆಗಳ ಹೀಗೆ ನಾನಾ ರೂಪಗಳಲ್ಲಿದ್ದವು. ಈಗ ಅವುಗಳ ಕೊರತೆ ಎಲ್ಲೆಲ್ಲೂ ಎದ್ದು ಕಾಣುತ್ತಿವೆ.

ಅವೆಲ್ಲಾ ಏನಾದವು. ಎಲ್ಲಿ ಎಲ್ಲಿ ಆ ವಿವೇಕದ ಬೀಜಗಳು, ಎಂದು ಇದೀಗ ವಿಜ್ಞಾನಿಗಳೂ, ಕೃಷಿ ತಜ್ಞರು, ವಿಶ್ವವಿದ್ಯಾಲಯ ಪಂಡಿತರು, ತತ್ವಜ್ಞಾನಿಗಳು, ಬೀಜ ತಜ್ಞರು, ಪರಿಸರ ಪ್ರಿಯರು ತಡಕಾಡುತ್ತಿದ್ದಾರೆ. ಇದ್ದಾಗ ಬಿಟ್ಟು ಸತ್ತಾಗ ಕಂಗೆಟ್ಟು ಹುಡುಕುಡುಕಿ ಸಾಯುವುದು, ಅಕ್ಷರ ಅವಿವೇಕ ಎಂದರೆ ಇದೇ ಅಲ್ಲವೆ, ಜ್ಞಾನದ ಬಲದಿಂದ ಅಜ್ಞಾನದ ಕೇಡು ಎಂದರೆ ಇದೆ ತಾನೇ? □

ತೊಗಲಿಗೂ ಹೊಲೆಯೋ-ಬಿದಿರು ಮಳೆಯೋ

○ ರಾಮಪ್ಪ ಮಾದರ



ನನ್ನೆದೆಯೇ
ದೇವಾಲಯ ಎಂದು ಕೊಂಡಾಗಲೆಲ್ಲ
ಹೃದಯ ನ್ಯಾಯ ಸ್ಥಾನದಲ್ಲಿ ಕುಂತು
ಪ್ರೀತಿ ಸ್ನೇಹವನ್ನು ಹಂಚುತಿರುತ್ತದೆ
ಇಲ್ಲಿ ಮಂದಿರವಿದೆ ಮಸೀದಿಯಿದೆ
ಮರಿಯಾ ಹಾದು ಹೋಗುವ ಚರ್ಚಿನ
ಮೆಟ್ಟಲುಗಳ ಮೇಲೆ ಬುದ್ಧ ಪಾದವನ್ನಿಟ್ಟ
ಗುರುತುಗಳಿವೆ.

ಎದೆಯಲ್ಲಿ ಮುಳ್ಳು
ಕಾಲಲ್ಲಿ ಬೆಂಕಿಯನ್ನಿಟ್ಟುಕೊಂಡು
ಸದಾ ಧ್ಯಾನ ಸ್ಥಿತಿಯಲ್ಲಿರುವ ತೊಗಲಿಗೂ ಹೊಲೆಯೇ
ಎದೆಯ ಬತ್ತಿವಸೆದು ದೀಪ ಹಚ್ಚುತ್ತಿದ್ದ
ಆ ಸಾಧು ಅವನ್ನಿಟ್ಟ ದೀಪ
ಅವನಿಗೆ ಬೆಳಕಾಗದಿದ್ದರೂ....
ಕನಸ್ಸು ಕಾಣುತ್ತಲೇ ಇದ್ದಾನೆ.
ಹುಟ್ಟುವ ಸೂರ್ಯನ ಬಗ್ಗೆ

ಅಲ್ಲಮ!
ಚಿತ್ಕಾರದ ನಡುವೆಯೂ ಚೈತನ್ಯ ತುಂಬುವ
ಭ್ರಮಿತ ಬದುಕು ಯಾಕೆ? ಕೊಲ್ಲುತ್ತಿದೆ
ಈ ಬದುಕು ಬಯಲು ಆಲಯ
ರಾತ್ರಿ ಬಂದು ಹೋಗುವ ಕನಸ್ಸು ಮಾತ್ರ
ಮುಟ್ಟಬಾರದವನಾದ ನನ್ನೆದೆಯಲ್ಲೂ
ಕೆಲವೊಂದು ಅಳುಕುಗಳಿವೆ ಮಾನವರ ಬಗ್ಗೆ
ದೇಶದ ಬಗ್ಗೆ ದೇವರ ಬಗ್ಗೆ.
ನಗಬೇಕು ಅನಿಸುತ್ತದೆ ಹೊಟ್ಟೆ ಬಿರಿಯುವ ಹಾಗೆ

ನೋಡು ಅಲ್ಲಮ
ಎದೆಯ ಜಲಧಾರೆಯಲಿ
ಮಿಂದು ಮೀಯಬೇಕಾದ ಎಷ್ಟೋ ಜನ
ಮುಖಕ್ಕೆ ಅಂಟಿಸಿಕೊಂಡ ನಗೆ ಚೆಲ್ಲಿದ್ದಾರೆ
ಹೊಲೆಯ ಎನ್ನುವ ನನಗೆ
ಆ ಬಿದಿರು ಮಳೆಯ ಒಂದು ಹನಿಬಾರವಾಗಿದೆ.

ಹೋಗಿ ಬಾ ಅಲ್ಲಮ
ನಿನ್ನ ತೀರದ ಮೋಹದ ದಾಹಕ್ಕೆ
ನಾನು ಬಲಿಯಾಗಲಾರೆ
ಹುಟ್ಟನ್ನೇ ಬಂಡವಾಳ ಎನ್ನುವರಿಗೆಲ್ಲ
ಹೇಳುವುದಿಷ್ಟೆ: ಧಾತು ಬೀಜವಾಗಬಲ್ಲದೆ
ಹೊರತು ಹೊಲೆಯಲ್ಲ.

ಆವರಣ-ಕೋಮುವಾದಿಗಳ ಅಪೀಮು

ಪುಸ್ತಕ ಅವಲೋಕನ

ಜ.ಹೊ ನಾರಾಯಣ ಸ್ವಾಮಿ

'ಆವರಣ'ಕ್ಕಿಂತ ಕೊಂಚ ಉತ್ತಮ ಕಾದಂಬರಿಗಳನ್ನು ಭೈರಪ್ಪ ಬರೆದಾಗ ಇರದ ಪ್ರಚಾರದ ಅಬ್ಬರ, ವಿಮರ್ಶೆಯ ನೆಪದಲ್ಲಿ ರಾಜಕೀಯ ಪ್ರೇರಿತ ವಿಚಾರ ಸಂಕಿರಣಗಳ ಹಾವಳಿಗಳು ಈ 'ಆವರಣ' ಕಾದಂಬರಿಗೆ ಏಕೆ ಮುಗಿ ಬಿದ್ದಿವೆ ಎಂದರೆ ಅದು ಪ್ರತಿಪಾದಿಸುವ ಜನಾಂಗೀಯ ಹಾಗೂ ಧಾರ್ಮಿಕ ದ್ವೇಷ. ಏನು ಹೇಳುತ್ತಿದ್ದೇನೆ ಎಂಬುದರ ಬಗ್ಗೆ ಕಾದಂಬರಿಕಾರನಿಗೆ ಪೂರ್ಣನಂಬಿಕೆ ಇಲ್ಲ. ಆದ ಕಾರಣವೆ ತಮ್ಮ ಇತರ ಯಾವ ಕಾದಂಬರಿಗೂ ಕೇಳದ ಕಾನೂನು ಸಲಹೆಯನ್ನು ಭೈರಪ್ಪ ಈ ಕಾದಂಬರಿಗೆ ಎಂ. ರಾಮಾಜೋಯಿಸ, ಹಾರ್ನಳ್ಳಿ ರಾಮಸ್ವಾಮಿ, ಅಶೋಕ್‌ಹಾರ್ನಳ್ಳಿ ಇವರ ಪ್ರಕಟಣಾ ಪೂರ್ವ ಪರಾಮರ್ಶೆಯನ್ನು ಯಾಚಿಸಿದ್ದಾರೆ. ಇದು ಅವರ ಅಳುಕು ಮನಸ್ಸಿಗೆ ಸಾಕ್ಷಿಯಾಗಿದೆ.

ಅಗತ್ಯಕ್ಕಿಂತ ಹೆಚ್ಚು ಪುಕಾರು ಮಾಡುತ್ತಿರುವ ಭೈರಪ್ಪನವರ 'ಆವರಣ' ಕಾದಂಬರಿ ಎಂದು ಕರೆಸಿಕೊಳ್ಳಲು ಅರ್ಹವಲ್ಲದ ವಿಕೃತ ವಿಚಾರಗಳ ಒಂದು ಸಂಗಹ. ರಾಜಕೀಯದಿಂದ ಪ್ರೇರಿತವಾದುದು. ಸಾವರ್ಕರ್ ಪ್ರಣೀತ ಕೋಮುವಾದಿಗಳ ಅಪೀಮು.

'ಬೌದ್ಧ ಧರ್ಮ ಜೀವ ವಿರೋಧಿ' ಎಂದು ಭೈರಪ್ಪನವರಿಗೆ ಬುದ್ಧಿ ಭ್ರಮಣೆಯಾಗಿರಬಹುದೆಂಬ ಶಂಕೆ ಇದ್ದವರಿಗೆ ಈ 'ಆವರಣ' ಅವರ ಬುದ್ಧಿ ಭ್ರಮಣೆ ಈಗ ತುರಿಯಾವಸ್ಥೆ ತಲಪಿರುವುದನ್ನು ಖಚಿತ ಪಡಿಸುತ್ತದೆ.

ಭಾರತದ ಸಂವಿಧಾನ ಹೊರಿಸಿರುವ ಜವಾಬ್ದಾರಿಗಳಾದ ಐಕ್ಯತೆ, ಪ್ರಾಮಾಣಿಕತೆ, ಸಹೋದರ ಭಾವ, ವೈಜ್ಞಾನಿಕ ಮನೋಭಾವ, ಮಾನವೀಯತೆ, ವೈಚಾರಿಕತೆ, ಬದಲಾವಣೆ, ಜಾತ್ಯತೀತತೆ ಇತ್ಯಾದಿಗಳೆಲ್ಲವನ್ನೂ ಗಾಳಿಗೆ ತೂರಿ ಜನಾಂಗೀಯ ಕಿಚ್ಚು ಹಚ್ಚುವ ಎಲ್ಲ ಲಕ್ಷಣಗಳನ್ನು 'ಆವರಣ' ಮೈಗೂಡಿಸಿಕೊಂಡಿದೆ.

'ಆವರಣ'ಕ್ಕಿಂತ ಕೊಂಚ ಉತ್ತಮ ಕಾದಂಬರಿಗಳನ್ನು ಭೈರಪ್ಪ ಬರೆದಾಗ ಇರದ ಪ್ರಚಾರದ ಅಬ್ಬರ, ವಿಮರ್ಶೆಯ ನೆಪದಲ್ಲಿ ರಾಜಕೀಯ ಪ್ರೇರಿತ ವಿಚಾರ ಸಂಕಿರಣಗಳ ಹಾವಳಿಗಳು ಈ 'ಆವರಣ' ಕಾದಂಬರಿಗೆ ಏಕೆ ಮುಗಿ ಬಿದ್ದಿವೆ ಎಂದರೆ ಅದು ಪ್ರತಿಪಾದಿಸುವ ಜನಾಂಗೀಯ ಹಾಗೂ ಧಾರ್ಮಿಕ ದ್ವೇಷ. ಏನು ಹೇಳುತ್ತಿದ್ದೇನೆ ಎಂಬುದರ ಬಗ್ಗೆ ಕಾದಂಬರಿಕಾರನಿಗೆ ಪೂರ್ಣನಂಬಿಕೆ ಇಲ್ಲ. ಆದ ಕಾರಣವೆ ತಮ್ಮ ಇತರ ಯಾವ ಕಾದಂಬರಿಗೂ ಕೇಳದ ಕಾನೂನು ಸಲಹೆಯನ್ನು ಭೈರಪ್ಪ ಈ ಕಾದಂಬರಿಗೆ ಎಂ. ರಾಮಾಜೋಯಿಸ, ಹಾರ್ನಳ್ಳಿ ರಾಮಸ್ವಾಮಿ, ಅಶೋಕ್‌ಹಾರ್ನಳ್ಳಿ ಇವರ ಪ್ರಕಟಣಾ ಪೂರ್ವ ಪರಾಮರ್ಶೆಯನ್ನು ಯಾಚಿಸಿದ್ದಾರೆ. ಇದು ಅವರ ಅಳುಕು ಮನಸ್ಸಿಗೆ ಸಾಕ್ಷಿಯಾಗಿದೆ.

'ಮನುಸ್ಮೃತಿ'ಯನ್ನು ಡಾ॥ ಅಂಬೇಡ್ಕರ್ ಏಕೆ ಸುಟ್ಟರು ಎಂಬ ಅಂಶವನ್ನು ತಮ್ಮ ತಲೆಯೊಳಗೆ ಬಿಟ್ಟುಕೊಳ್ಳಲು ಇಚ್ಛಿಸದ ಭೈರಪ್ಪ 'ಮನುಸ್ಮೃತಿ' ಸರ್ವೋತ್ಕೃಷ್ಟ ಗ್ರಂಥ ಎನ್ನುವ ರಾಮಾಜೋಯಿಸರ ಸಲಹೆ ಕೇಳುವ ಉದ್ದೇಶ ಹಿಂದೂ ಧರ್ಮದ ಹೆಸರಿನಲ್ಲಿ ವೈದಿಕ ಧರ್ಮದ ರಕ್ಷಣೆ ಮಾಡುವುದೆ ಆಗಿದೆ. ಸಾಹಿತ್ಯೇತರ ಉದ್ದೇಶ ಹೊಂದಿರುವ ಕಾರಣ ಈ ಕಾದಂಬರಿಯನ್ನು ವಿಭಿನ್ನ ನೆಲೆಯಲ್ಲಿಯೆ ನೋಡಬೇಕಾಗುತ್ತದೆ.

ಆವರಣ
ಲೇ: ಎಸ್.ಎಲ್. ಭೈರಪ್ಪ
ಬೆಲೆ: ರೂ. ೧೭೫/-
ಪ್ರಕಾಶಕರು: ಸಾಹಿತ್ಯ ಭಂಡಾರ,
ಬಳೇಪೇಟೆ, ಬೆಂಗಳೂರು-೫೬೦೦೫೩

ವೈದಿಕ ಸಂಸ್ಕೃತಿಯೆ ಭಾರತೀಯ ಸಂಸ್ಕೃತಿ ಎನ್ನುವಂತೆ ಬರೆದ ಯು.ಆರ್. ಅನಂತ ಮೂರ್ತಿಯವರ ಲೇಖನಕ್ಕೆ ಪೂರ್ಣಚಂದ್ರ ತೇಜಸ್ವಿಯವರು ಪ್ರತಿಯಾಗಿ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ಅರ್ಥಪೂರ್ಣ ಲೇಖನವನ್ನು ಬರೆದು ಈ ದೇಶವನ್ನು ದಿವಾಳಿಗೈಯುತ್ತಿರುವ ಹಾರುವರ ಅಂತರಂಗವನ್ನು ಅತ್ಯಂತ ಸಮರ್ಥವಾಗಿ ಬಹಿರಂಗಗೊಳಿಸಿದ್ದಾರೆ. ಅದರಲ್ಲಿ ತೇಜಸ್ವಿ "... ಅಪ್ರಮಾಣಿಕತೆ ಆಳಕ್ಕೆ ಇಳಿದ ಬ್ರಾಹ್ಮಣನ ಒಳ ಪ್ರಜ್ಞೆಯಾಗಿದೆ. ಈಗ ಬ್ರಾಹ್ಮಣ ಅಪ್ರಜ್ಞಾಪೂರ್ವಕವಾಗಿ ನಿದ್ದೆಗಣ್ಣಿನಲ್ಲಿ ಕದಿಯುವವನಂತೆ ಈ ರೀತಿಯ ಮೋಸಗಾರಿಕೆಯ ಆಲೋಚನೆಯಲ್ಲಿ ತೊಡಗಿದ್ದಾನೆ... ವೈದಿಕ ಸಂಸ್ಕೃತಿ, ಭಾರತಕ್ಕೆ ಹತ್ತಿಕೊಂಡ, ಸದಾ ಅವನತಿಯ ಮತ್ತು ಸೃಷ್ಟಿ ವಿರೋಧಿಯಾದ ಒಂದು ಮುದಿ ಬಂದಳಿಕೆ." ಎಂದಿದ್ದಾರೆ. ಈ ಮಾತಿಗೆ ಸಾಕ್ಷಿಯಾಗಿದೆ. ಭೈರಪ್ಪನವರ 'ಆವರಣ'.

ಇಡೀ ಕಾದಂಬರಿ ಭಾರತದಲ್ಲಿ ಮುಸ್ಲಿಮರ ಆಳ್ವಿಕೆಯಲ್ಲಿ ಆಗಿರಬಹುದಾದ ಘಟನೆಗಳನ್ನು ಅತಿರಂಜಕವಾಗಿ ದ್ವೇಷದ ಲೇಪ ಹಚ್ಚಿ ಪ್ರಚೋದನೆಗೆ ಒಳಗಾಗುವ ರೀತಿಯಲ್ಲಿ ಚಿತ್ರಿತವಾಗಿದೆ. ಎಲ್ಲಿಯೂ ಯಾವ ಮಾನವೀಯ ಮೌಲ್ಯವನ್ನು ಈ ಕಾದಂಬರಿ ಪ್ರತಿಪಾದಿಸದೆ ತನ್ನಿಂದ ತಾನೆ ಆತ್ಮಹತ್ಯೆ ಮಾಡಿಕೊಂಡಿದೆ. ಕೊಳೆತ ಆ ಹೆಣಕ್ಕೆ ಈಗ RSS ಪರಿವಾರಗಳು ಮುಗಿಬೀಳುತ್ತಿವೆ.

"ಗ್ರಂಥಗಳ ಗುರಿ ಪರಾವಲಂಬಿಗಳನ್ನು
ಮತ್ತಷ್ಟುಪರಾವಲಂಬಿ
ಗಳನ್ನಾಗಿಸುವುದಲ್ಲ; ಬದುಕಲು ಅಶಕ್ತರಾದವರಿಗೆ
ಅಗ್ಗದ
ಭ್ರಮೆಯನ್ನು ಪ್ರತಿಯಾಗಿ ಕೊಡುವುದೂ ಅಲ್ಲ.
ಬದಲಿಗೆ ಗ್ರಂಥಗಳು
ಬದುಕನ್ನು ನಿರ್ಮಿಸುವುದಕ್ಕೆ, ಬದುಕು
ಫಲಪ್ರದವಾಗುವುದಕ್ಕೆ
ಸಹಕಾರಿಯಾದರೆ ಅವಕ್ಕೆ ಬೆಲೆ ಇರುತ್ತಾದೆ.
ಶಕ್ತಿಯ ಬೆಳಕನ್ನು
ಬೀರದಿದ್ದರೆ, ಜೀವನ ಸಾಮರ್ಥ್ಯವನ್ನು
ತಿಳಿಯ ಹೇಳದೆ ಹೋದರೆ,
ಹೊಸ ಬೆಳಕು ಪ್ರತಿಫಲಿಸದಿದ್ದರೆ
ಓದುವ ಪ್ರತಿಯೊಂದು ಕ್ಷಣವೂ ವ್ಯರ್ಥವಾದಂತೆ."

ಎನ್ನುವ ಜರ್ಮನಿಯ ನೊಬೆಲ್ ಪ್ರಶಸ್ತಿ ವಿಜೇತ ಹರ್ಮನ್ ಹೆಸ್ ಅವರ ಈ ಮಾತಿಗೆ 'ಆವರಣ' ಕಾದಂಬರಿ ತದ್ವಿರುದ್ಧವಾಗಿದೆ.

RSS ಸ್ಥಾಪಕ ಸಾವರ್ಕರ್ ಚಿಂತನೆಗಳನ್ನು ಈ ಕಾದಂಬರಿಯ ತಾಯಿ-ಬೇರನ್ನಾಗಿ ಮಾಡಿಕೊಳ್ಳಲಾಗಿದೆ. "ಹಿಂದೂಗಳು ಮಾತ್ರ ಭಾರತದ ಪ್ರಜೆಗಳು. ಏಕೆಂದರೆ ಭಾರತ ಅವರ ಪಿತೃಭೂಮಿ ಹಾಗೂ ಪುಣ್ಯಭೂಮಿ.. ಮುಸ್ಲಿಂ, ಕ್ರಿಶ್ಚಿಯನ್ನರನ್ನು ಹಿಂದುತ್ವದೊಂದಿಗೆ ಒಂದಾಗಿಸಲು ಸಾಧ್ಯವಿಲ್ಲ. ಏಕೆಂದರೆ ಅವರ ಪುಣ್ಯಭೂಮಿ ಬಹುದೂರ ಇರುವ ಅರೇಬಿಯಾ ಅಥವಾ ಪ್ಯಾಲಸ್ಟೈನ್" ಎಂಬ ಸಾವರ್ಕರ್ ಅವರ ಭಾವನೆಯನ್ನ ಈ ಕಾದಂಬರಿ ಬಿಂಬಿಸುತ್ತದೆ.

ವಾಸ್ತವ ಸತ್ಯ ಎಂದರೆ ಭಾರತ ಆರ್ಯರ 'ಪಿತೃಭೂಮಿ' ಅಲ್ಲ. ಇಲ್ಲಿಯ ಮೂಲ ನಿವಾಸಿಗಳಾದ ದ್ರಾವಿಡರ 'ಮಾತೃಭೂಮಿ'. ಆರ್ಯರು ಮಧ್ಯ ಏಷ್ಯಾದಿಂದ ಬಂದವರು. ಅವರು 'ಮಾತೃಭೂಮಿ'ಯ ಪ್ರಜೆಗಳಾಗಲು ಸಾಧ್ಯವಿಲ್ಲ. ಹೇಗೆ ಮುಸ್ಲಿಮರು

ತಮ್ಮ ಧರ್ಮ ಪ್ರಚಾರಕ್ಕೆ 'ಕುರಾನ್' ಅನ್ನು ಇಟ್ಟುಕೊಂಡರೋ ಅದೇ ರೀತಿ ಹಾರುವರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು 'ಮನುಸ್ಮೃತಿ'ಯನ್ನು ಇಟ್ಟುಕೊಂಡರು. 'ಪಿತೃಭೂಮಿ' ಎನ್ನುವ ಈ ಸು(ಕು)ಪುತ್ರರು ಈ ದೇಶದಿಂದಲೇ ಉಚ್ಚಾಟನೆಯಾಗಬೇಕು ಎಂದಾದರೆ ಪರಿಸ್ಥಿತಿ ಎಲ್ಲಿಗೆ ಬಂದು ನಿಲ್ಲುತ್ತದೆ? ಈ ಕಾರಣದಿಂದಲೇ ಹುನಾರು ಹೂಡುವಲ್ಲಿ ಎಂದೂ ಹುಸಿಯದ ವೈದಿಕಶಾಹಿ ಈಗ ತನ್ನ ಬಿಲ್ಲುಗಳಿಗೆ ಶೂದ್ರರನ್ನ ಅರ್ಥಾತ್ ದ್ರಾವಿಡರನ್ನ ಬಾಣವಾಗಿಸಿಕೊಂಡಿದೆ.

ಈ ಕಾದಂಬರಿಯೂ ಕೂಡ ಅಂಥ ಹುನಾರುಗಳನ್ನ ನಾಜೂಕಿನಿಂದ ಹೆಣೆದಿದೆ. ಉದಾಹರಣೆಗೆ ರಾಜಿಯೂ ಆಗಿ ಮತಾಂತರಗೊಂಡಿರುವ ಲಕ್ಷ್ಮಿ ನರಸಿಂಹಪ್ಪಗೌಡರ ಮಗಳು, ಅಮೀರನನ್ನು ಪ್ರೀತಿಸಿ ಮದುವೆಯಾಗಿದ್ದಾಳೆ. ಅನ್ಯಧರ್ಮೀಯರನ್ನು, ಹೊಲೆ ಮಾದಿಗರನ್ನ ಹೆಚ್ಚು ಮದುವೆಯಾಗಿರುವವರು ಬ್ರಾಹ್ಮಣ ಹಾಗೂ ಅಯ್ಯಂಗಾರ್ ಹುಡುಗಿಯರು. ಇದು ಸರ್ವೇಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಾಸ್ತವ. ಭೈರಪ್ಪ ಈ ಕಾದಂಬರಿಯಲ್ಲಿ ಗೌಡರ ಮಗಳನ್ನೆ ಎಳೆದು ತರುವ ಉದ್ದೇಶದಲ್ಲಿ ಹಿಂದೂ–ಮುಸ್ಲಿಂ ಗಲಭೆಯಾದರೆ ಬಲಿಷ್ಠ ಕೋಮು ಒಕ್ಕಲಿಗರು ಲಕ್ಷ್ಮಿಯ ಪರ ಎದ್ದು ನಿಲ್ಲಲಿ ಎನ್ನುವ ಕುತಂತ್ರವಲ್ಲದೆ ಮತ್ತೇನೂ ಅಲ್ಲ. ಬ್ರಾಹ್ಮಣ ಬಿಲ್ಲಿಗೆ ಶೂದ್ರ ಬಾಣಗಳನ್ನು ಹೂಡುವ ಈ ಹುನಾರು ಎಷ್ಟು ನಾಜೂಕಿನದಾಗಿದೆ ನೋಡಿ! ಬಿಲ್ಲು ಹಾಗೂ ಅದನ್ನು ಹಿಡಿದ ಬ್ರಾಹ್ಮಣ ಸುರಕ್ಷಿತವಾಗಿರುತ್ತಾರೆ; ಬಾಣವಾದ ಶೂದ್ರ ಸಾಯಬೇಕು ಇಲ್ಲ ಸಾಯಿಸಬೇಕು. ಎಂಥ ತಂತ್ರಗಾರಿಕೆ! ಇದರ ಅರಿವಿರದ RSS. BJP, ಭಜರಂಗದಳ, VHP, ABVP, ಶಿವಸೇನೆ ಇತ್ಯಾದಿಗಳಲ್ಲಿ ಸೇರಿಕೊಂಡಿರುವ ಶೂದ್ರ ಮುಂಡೇವಕ್ಕೆ ಎಂದಿಗೆ ಬುದ್ಧಿ ಬಂದೀತು?! ಆದ ಕಾರಣವೆ ಇಂಥ ಹುನಾರು ಹೂಡುವ ಹಾರುವರನ್ನು ಕುರಿತು 'ಅಪ್ರಾಮಾಣಿಕತೆ ಆಳಕ್ಕೆ ಇಳಿದ ಬ್ರಾಹ್ಮಣನ ಒಳ ಪ್ರಜ್ಞೆಯಾಗಿದೆ' ಎಂದು ತೇಜಸ್ವಿ ಹೇಳಿದ್ದು.

ಸ್ವಾತಂತ್ರ್ಯದ ಗುರಿ ಹಿಂದೂ ರಾಷ್ಟ್ರ ಸ್ಥಾಪನೆ ಎನ್ನುವ ಸಾವರ್ಕರ್ "ಹಿಂದೂ ವಿಜಯಶಾಲಿಗಳು ಮುಸ್ಲಿಂ ಹೆಂಗಸರ ಮಾನಹರಣ ಮಾಡಬೇಕಿತ್ತು. ಶಿವಾಜಿ ಹಾಗೆ ಮಾಡಲಿಲ್ಲ." ಎಂದು ಎಚ್ಚರಿಸುತ್ತಾರೆ. ಸಾವರ್ಕರ್‌ಗೆ ಟಿಪ್ಪು ಸುಲ್ತಾನ ಅಸಂಸ್ಕೃತ, ಅನಾಗರಿಕ; ಅಕ್ಬರ್ ವಿದೇಶಿ, ಕ್ರೂರಿ, ಅಸಹಿಷ್ಣು, ಎರಡು ರಾಷ್ಟ್ರಗಳ ನಿಲುವು ತಾಳಿದ್ದ ಸಾವರ್ಕರ್ ಪಾಕಿಸ್ತಾನ ಮುಸ್ಲಿಂರಾಷ್ಟ್ರ, ಭಾರತ ಸಂಪೂರ್ಣ ಹಿಂದೂ ರಾಷ್ಟ್ರವಾಗಬೇಕು ಎಂದು ಬಯಸಿದ್ದರು. ಅದಕ್ಕಾಗಿ ಗಾಂಧಿಯನ್ನು ಕೊಲ್ಲಲು ಗೋಡ್ಸೆಯೊಂದಿಗೆ ಕೈ ಜೋಡಿಸಿದ ಸಾವರ್ಕರ್ ಹಿಂದೂ ರಾಷ್ಟ್ರಕ್ಕಾಗಿ ಜರ್ಮನಿಯ ನಾಜಿಗಳಂತೆ ರಕ್ತದ ಕಾಲುವೆ ಹರಿಸುವ ಕೋಮು ಬೀಜಗಳನ್ನು ಬಿತ್ತಿದ್ದಾರೆ. RSS, VHP, BJP, ABVP, ಶಿವಸೇನೆ, ಭಜರಂಗದಳ ಇವುಗಳೆಲ್ಲ ಈ ಕೋಮು ಕಮಲದ ದಳಗಳೆ. ಇದರೊಟ್ಟಿಗೆ ಭೈರಪ್ಪನವರ 'ಆವರಣ' ಎಂಬ ಸಂಗ್ರಹ ಕೈಪಿಡಿಯಾಗಿ ಸೇರಿಕೊಂಡಿದೆ.

'ಟಿಪ್ಪು ಸುಲ್ತಾನನನ್ನು ಕೆಲವು ಲೇಖಕರು ಅದರಲ್ಲೂ ಕೆಲವು ಹಳೆ ಮೈಸೂರು ಸಂಸ್ಥಾನದ ಕನ್ನಡಿಗರು ವೈಭವೀಕರಿಸುವುದನ್ನು ನೋಡಿದರೆ ಸಾಹಿತಿಗಳು ಐತಿಹಾಸಿಕ ವಸ್ತುವನ್ನು ಮುಟ್ಟಿ ಸತ್ಯವನ್ನು ಅಪವಿತ್ರಗೊಳಿಸುವ ಹೇಸಿಗೆಯ ಸ್ವಾತಂತ್ರ್ಯಕ್ಕೆ ಮಿತಿ ಇರಬೇಡವೆ?... ಇತಿಹಾಸದ ಅಧ್ಯಯನವಿಲ್ಲದ, ಅರೆ ಓದು ಬರಹ ಬಲ್ಲ

'ಟಿಪ್ಪು ಸುಲ್ತಾನನನ್ನು ಕೆಲವು ಲೇಖಕರು ಅದರಲ್ಲೂ ಕೆಲವು ಹಳೆ ಮೈಸೂರು ಸಂಸ್ಥಾನದ ಕನ್ನಡಿಗರು ವೈಭವೀಕರಿಸುವುದನ್ನು ನೋಡಿದರೆ ಸಾಹಿತಿಗಳು ಐತಿಹಾಸಿಕ ವಸ್ತುವನ್ನು ಮುಟ್ಟಿ ಸತ್ಯವನ್ನು ಅಪವಿತ್ರಗೊಳಿಸುವ ಹೇಸಿಗೆಯ ಸ್ವಾತಂತ್ರ್ಯಕ್ಕೆ ಮಿತಿ ಇರಬೇಡವೆ?... ಇತಿಹಾಸದ ಅಧ್ಯಯನವಿಲ್ಲದ, ಅರೆ ಓದು ಬರಹ ಬಲ್ಲ ಲಾವಣಿಕಾರರು ಟಿಪ್ಪುವನ್ನು ವೈಭವೀಕರಿಸಿ ಬರೆದ ಲಾವಣಿಗಳನ್ನು ದುಮಡಿ ಬಾರಿಸಿಕೊಂಡು ಹಾಡುತ್ತಿದ್ದರು' (ಪುಟ–೫೫). ಇತಿಹಾಸದ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಸತ್ಯಹರಿಶ್ಚಂದ್ರ ಈ ಭೈರಪ್ಪ ಒಬ್ಬರೇ! ಕೋಮುವಾದದ ಕತ್ತಲೆಯಿಂದ ತುಂಬಿ ಹೋಗಿರುವ ವೈದಿಕ ಅಸಹನೆ ಎಂಥದು ಎಂಬುದಕ್ಕೆ ಭೈರಪ್ಪನವರೆ ಸಾಕ್ಷಿ.

ಲಾವಣಿಕಾರರು ಟಿಪ್ಪುವನ್ನು ವೈಭವೀಕರಿಸಿ ಬರೆದ ಲಾವಣಿಗಳನ್ನು ದುಮಡಿ ಬಾರಿಸಿಕೊಂಡು ಹಾಡುತ್ತಿದ್ದರು. "(ಪುಟ–೫೫). ಇತಿಹಾಸದ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಸತ್ಯಹರಿಶ್ಚಂದ್ರ ಈ ಭೈರಪ್ಪ ಒಬ್ಬರೇ! ಕೋಮುವಾದದ ಕತ್ತಲೆಯಿಂದ ತುಂಬಿ ಹೋಗಿರುವ ವೈದಿಕ ಅಸಹನೆ ಎಂಥದು ಎಂಬುದಕ್ಕೆ ಭೈರಪ್ಪನವರೆ ಸಾಕ್ಷಿ. ಅವರ ಅಸಹನೆ ಅಲ್ಲಿಗೆ ನಿಲ್ಲುವುದಿಲ್ಲ. ವೈಯಕ್ತಿಕ ದ್ವೇಷಾಸೂಯೆಗಳು ಎಂಥ ಕುಚೋದ್ಯಗಳಿಗೆ ಎಡೆಮಾಡುತ್ತವೆ ಎಂಬುದಕ್ಕೆ ಮತ್ತೊಂದು ಉದಾಹರಣೆ ಎಂದರೆ ಕಾದಂಬರಿಯಲ್ಲಿ ಬರುವ ಪ್ರೊ॥ ಶಾಸ್ತ್ರಿ ಮತ್ತಾರೂ ಅಲ್ಲ ಡಾ॥ ಯು.ಆರ್. ಅನಂತಮೂರ್ತಿ ಎಂಬುದು ಹಿನ್ನೆಲೆ ಗೊತ್ತಿರುವ ಯಾರಿಗಾದರೂ ಥಟ್ಟನೆ ಹೊಳೆದು ಬಿಡುತ್ತದೆ. ಅದು ಸಹಿಸಿಕೊಳ್ಳಲಾಗದ ಸಂಸ್ಕಾರದ ಬ್ರಾಹ್ಮಣ್ಯದಗೆಲು (ತಮ್ಮ ಮನೆಯ ಮೇಲೆ ಕಲ್ಲು ಹೊಡೆಸುವಲ್ಲಿ ಯು. ಆರ್.ಎ. ಕೈವಾಡವಿದೆ, ಎಂಬುದು ಸೂಚ್ಯವಾಗಿ ಭೈರಪ್ಪನವರ 'ಭಿತ್ತಿ'ಯಲ್ಲೆ ಇದೆ), ಹೀಗೆ ದ್ವೇಷಾಸೂಯೆಗಳನ್ನು ಒಡಲಲ್ಲಿ ಹೊತ್ತ 'ಆವರಣ' RSS ಗೆ ಮುತ್ತಾದರೆ ಮಾನವತೆಗೆ ಕುತ್ತಾಗಿದೆ.

ವೈದಿಕ ಧರ್ಮಕ್ಕೆ 'ಸ್ತ್ರೀ' ಎಂದೂ ಶೂದ್ರಳೆ. ಅವಳಿಗೆ ಮುಕ್ತಿಯ ಹಕ್ಕಿಲ್ಲ. ಯಜ್ಞೋಪವೀತವನ್ನು ಹಾಕುವಂತಿಲ್ಲ. ಗೀತೆ ಓದುವಂತಿಲ್ಲ. ಇಂಥ ಹಳಸಲು ತನ್ನ ತಟ್ಟೆಯಲ್ಲೇ ಬಿದ್ದಿರುವಾಗ ಭೈರಪ್ಪ ಅಮೀರನ ಬಾಯಲ್ಲಿ ಹೇಳಿಸುವ "... ಸಮಾನತೆ ಮಾತನಾಡ್ತಾಳೆ" (ಪು–೧೩), "ಹೆಂಗಸು ಅಂದರೆ ಅಬಲೆ ಅನ್ನುವ ಸತ್ಯವನ್ನ ಹೋಗಲಾಡಿಸುಕ್ಕೆ ಸಾಧ್ಯವಿಲ್ಲ. ದೈಹಿಕವಾಗಿಯೂ ಅಷ್ಟೆ ಬುದ್ಧಿ ಮನಸ್ಸುಗಳಲ್ಲಿಯೂ ಅಷ್ಟೆ ದೈವಸೃಷ್ಟಿ ಸುಳ್ಳಲ್ಲ" (ಪು–೧೫). ಈ ಮಾತುಗಳನ್ನು ನೋಡಿದರೆ ನಾಚಿಕೆ ಪಡುವಂಥದ್ದು. ಅಲ್ಲದೆ ರಜಿಯಾಳ (ಲಕ್ಷ್ಮಿ) ಮಾವ 'ಹೆಚ್ಚು ಓದಿರುವ ಹೆಂಗಸಿನ ಮುಖದಲ್ಲಿ ಸೌಂದರ್ಯವಿರೋದಿಲ್ಲ' (ಪುಟ ೦೨೬) ಎಂದು ಹೇಳುವ ಮಾತಾಗಲೀ, 'ಹೆಂಗಸರಿಗೆ ಆತ್ಮಾಭಿಮಾನ ಕಡಿಮೆ' (ಪು–೧೬೩) ಎನ್ನುವ ಪ್ರೊ॥ ಶಾಸ್ತ್ರಿ ಮಾತಾಗಲೀ ಭೈರಪ್ಪನವರ 'ಸ್ತ್ರೀ' ಧೋರಣೆ ಎಂಥದ್ದು ಎಂಬುದರ ಪ್ರತೀಕವಾಗಿದೆ. ಹಾಗಾಗಿ ಅವರ ಎಲ್ಲ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಒಂದು ರೀತಿಯ ಮಾನಸಿಕ ರೋಗಿಗಳು. ಇದರಿಂದ 'ಆವರಣ'ದ ರಜಿಯಾ ಲಕ್ಷ್ಮಿಯೂ ಹೊರತಾಗಿಲ್ಲ.

ಈ ಕಾದಂಬರಿಯ ಹಿನ್ನೆಲೆಯಲ್ಲಿ ದೊಡ್ಡ ರಾಜಕೀಯವಿದೆ. ತೊಂಬತ್ತರ ದಶಕದಲ್ಲಿ ದೆಹಲಿಯ ಸಂಘಪರಿವಾರದವರ 'ಧರ್ಮಸಂಸತ್'ನಲ್ಲಿ ಅಂಗೀಕರಿಸಲಾದ ನಿರ್ಣಯಗಳು BJP ಯ 'ಸಂವಿಧಾನ ಪರಾಮರ್ಶೆ'ಯ ಅಂತರಂಗವನ್ನು ಬಹಿರಂಗಗೊಳಿಸುತ್ತದೆ. ಆ ಹದಿಮೂರು ನಿರ್ಣಯಗಳೆಂದರೆ

೧. ಸಂವಿಧಾನದ ಪ್ರಸ್ತಾವನೆಯಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳು ಹಿಂದೂ ಧರ್ಮದ ಪರಿಕಲ್ಪನೆಗಳಿಗೆ ವಿರುದ್ಧವಾಗಿವೆ.

೨. ಅಲ್ಪಸಂಖ್ಯಾತ ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ ವಿಶೇಷ ಹಕ್ಕು ನೀಡಿದ್ದು ಸರಿಯಲ್ಲ.

೩. ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಾತಿ ಸೌಲಭ್ಯ ನೀಡಬಾರದಿತ್ತು.

೪. ರಾಷ್ಟ್ರಗೀತೆ 'ಜನಗಣಮನ'ದ ಬದಲು 'ಒಂದೇ ಮಾತರಂ' ಇರಬೇಕಿತ್ತು.

೫. ಭಾಷಾವಾರು ಪ್ರಾಂತ ರಚನೆ ಸರಿಯಲ್ಲ. ಭಾರತ ಹಿಂದೂ ರಾಷ್ಟ್ರವಾಗಿದೆ.

೬. ೬೦–೭೦ ಸಣ್ಣ ಸಣ್ಣ ರಾಜ್ಯಗಳನ್ನಾಗಿ ಮಾಡಿ ಏಕೀಕೃತ, ಅತಿ ಕೇಂದ್ರೀಕೃತ ಪ್ರಭುತ್ವ ಸ್ಥಾಪನೆ ಆಗಬೇಕು.

೭. ನಾಗರಿಕ ಹಕ್ಕುಗಳನ್ನು ದೇಶ ಪ್ರೇಮಕ್ಕೆ ಬದ್ಧರಾದವರಿಗೆ ಕೊಡಬೇಕು.

೮. ಭಾರತ ಎಂದೂ ಹಿಂದೂ ರಾಷ್ಟ್ರ.

೯. ರಾಷ್ಟ್ರಧ್ವಜ ಬದಲಾಗಬೇಕು. ಅಶೋಕ ಚಕ್ರ ಬದಲಿಗೆ 'ಓಂ' ಅಥವಾ 'ಸ್ವಸ್ತಿಕ್' ಚಿಹ್ನೆ ಇರಬೇಕು.

೧೦ 'ಲೋಕಸಭೆ', 'ರಾಜ್ಯಸಭೆ' ಬದಲಿಗೆ ಅತ್ಯುನ್ನತ ಮಟ್ಟದ ಸಾಧು ಸನ್ಯಾಸಿಯರ 'ಗುರುಸಭೆ' ಇರಬೇಕು.

೧೧. ಎಲ್ಲ ಮಸೂದೆಗಳು 'ಗುರುಸಭೆ'ಯಲ್ಲಿ ಚರ್ಚಿಸಿ ಅನುಮತಿ ಪಡೆಯಬೇಕು. ನಂತರ ಔಪಚಾರಿಕವಾಗಿ ಲೋಕಸಭೆ ಅಂಗೀಕರಿಸುವಂತಾಗಬೇಕು.

೧೨. ಸುಪ್ರೀಂ ಕೋರ್ಟ್‌ಗಳ ನ್ಯಾಯಾಧೀಶರ ನೇಮಕ ಹಾಗೂ ಅವರ ಮೇಲೆ ಶಿಸ್ತಿನ ಕ್ರಮ 'ಗುರುಸಭೆ' ಇರಬೇಕು.

೧೩. ಗುರುಸಭೆ ಮತ್ತು ಲೋಕಸಭೆಗಳ ನಡುವೆ ರಕ್ಷಾಸಭೆ (ಮಿಲಿಟರಿ) ಇರಬೇಕು. ತುರ್ತು ಪರಿಸ್ಥಿತಿ ಘೋಷಿಸಬಹುದೆಂಬ ತೀರ್ಮಾನ 'ರಕ್ಷಾಸಭೆ'ಗೆ ಇರಬೇಕು.

ಕೊಂಚ ಸಾವಧಾನವಾಗಿ ಯೋಚಿಸೋಣ. ಸಂವಿಧಾನದ 'ಜಾತ್ಯತೀತ' ಮತ್ತು 'ಸಮಾಜವಾದಿ' ಪದಗಳು ಹಿಂದೂ ಧರ್ಮದ ಅರ್ಥಾತ್ ವರ್ಣವ್ಯವಸ್ಥೆಗೆ ಒತ್ತ ಬ್ರಾಹ್ಮಣ ಧರ್ಮದ ಪರಿಕಲ್ಪನೆಗೆ ವಿರುದ್ಧವಾಗಿದೆ. ಅಂದರೆ ಜಾತಿ, ವರ್ಗ, ವರ್ಣವ್ಯವಸ್ಥೆಯನ್ನು ಪ್ರತಿಪಾದಿಸಿ ಹಾರುವರ ಹಿತಾಸಕ್ತಿ ಕಾಪಾಡುವ 'ಮನುಸ್ಮೃತಿ'ಯನ್ನು ಸರ್ವೋತ್ಕೃಷ್ಟ ಗ್ರಂಥ ಎಂದು ಎಂ. ರಾಮಾಜೋಯಿಸರ ಹಾರುವ

ಹಿತಾಸಕ್ತಿಗೆ ಅರ್ಥಮಂತ್ರಿ ಯಡಿಯೂರಪ್ಪ 'ರಾಮಾಜೋಯಿಸ ಸಾಹಿತ್ಯ ಸಂಶೋಧನೆಗೆ ಎರಡು ಕೋಟಿ, ರಾಜ ಧರ್ಮ ಮತ್ತು ನ್ಯಾಯದರ್ಶನ ಅಧ್ಯಯನಕ್ಕೆ ಎರಡು ಕೋಟಿ' ಹಣವನ್ನು ಬಜೆಟ್‌ನಲ್ಲಿ ಘೋಷಿಸಿರುವುದರ ಹಿಂದೆ ದೊಡ್ಡ ರಾಜಕೀಯ ಕುತಂತ್ರವಿದೆ. ಈ ರಾಮಾಜೋಯಿಸ, ಹಾರ್ನಳ್ಳಿ ರಾಮಸ್ವಾಮಿ 'ಆವರಣ' ಕಾದಂಬರಿಯ ಹಿನ್ನೆಲೆಯಲ್ಲಿದ್ದಾರೆ. ಹಾರುವ ಕುತಂತ್ರಕ್ಕೆ ಕೊನೆ ಎಂಬುದು ಇದೆಯೆ?!

ಇತಿಹಾಸವನ್ನು ಕೆದಕುತ್ತ 'ಇರುವ ಊರುಗಳ ಹೆಸರು ಬದಲಿಸುವುದು ಒಬ್ಬ ಜೀವಂತ ವ್ಯಕ್ತಿಯನ್ನು ಧರ್ಮಾಂತರಿಸುವಷ್ಟೇ ಹೀನ ಕೃತ್ಯ' (ಪು-೬೧) ಎಂದಿರುವ ಭೈರಪ್ಪ ತಾವು ವಾಸಿಸುವ ಕುವೆಂಪುನಗರವನ್ನು ಕುವೆಂಪುನಗರ ಎಂದು ಇಂದಿಗೂ ಕರೆದಿಲ್ಲ. ಅವರಿಗೆ ಅದು ತೊಣಚಿಕೊಪ್ಪಲು. ಬದಲಾವಣೆಗೆ ಎಂದೂ ತೆರೆದುಕೊಳ್ಳದ ಕರ್ಮಠ ಬ್ರಾಹ್ಮಣ ಭೈರಪ್ಪ. ಅಂಥ ಕರ್ಮಠರಿಂದ ಬದಲಾವಣೆ ಸಾಧ್ಯತೆ? ಮನಕುಲಕ್ಕೆ ಏನು ಸಂದೀತು?

'.... ಆದರೆ ಮಾಡುವುದೇನು? ಆಯುಧವಿಲ್ಲ. ಇದ್ದರೂ ಬಳಸುವ ಸಮೂಹಶಕ್ತಿಯಿಲ್ಲ. ರಾಜಶಕ್ತಿ, ಸೈನ್ಯ ಶಕ್ತಿ ಎಲ್ಲ ಮಂದಿರ ನಾಶಕರ ಕೈಲಿ ಇದೆ' (ಪು-೧೯೬) ಎಂದು ಹಲುಬುವ ಭೈರಪ್ಪ ಇಂಥ ಸ್ಥಿತಿ ಹಿಂದೂಗಳಿಗೆ ಪ್ರಾಪ್ತವಾಗಲು ಕಾರಣವಾದ 'ಮನುಸ್ಮೃತಿ'ಯ ಬಗ್ಗೆ ಅಪ್ಪಿತಪ್ಪಿಯೂ ಆಡುವುದಿಲ್ಲ. ಏಕೆಂದರೆ 'ಮನುಸ್ಮೃತಿ' ಹಾರುವ ಹಿತಾಸಕ್ತಿಯನ್ನು ಪೂರ್ಣಪ್ರಮಾಣದಲ್ಲಿ ಕಾಪಾಡುತ್ತದೆ. ಎಲ್ಲಿ ಅವಕಾಶಗಳನ್ನು ಕಲ್ಪಿಸಿಕೊಂಡು ನಿಜವಾದ ಅರ್ಥದಲ್ಲಿ ಹೊಡಕೊಂಡು ಹೊಟ್ಟೆಬಿರಿಯ ತಿನ್ನುತ್ತಿದ್ದ ಹಾರುವರು ಯಾವ ಕೆಲಸವನ್ನು ಮಾಡದೆ ಜೀರ್ಣಚೂರ್ಣದ ಮೂಲಕ ಪಚನಕ್ರಿಯೆ ಮಾಡಿಕೊಳ್ಳುತ್ತಿದ್ದರು. ಹೀಗಿರುವಾಗ 'ಸಮೂಹ ಶಕ್ತಿ' ಎಲ್ಲಿಂದ ಬರಬೇಕು?

'ಜಿಹಾದ್ ಮಾಡಿದವನಿಗೆ ಮಾತ್ರ ಸ್ವರ್ಗ... ಸ್ವರ್ಗದಲ್ಲಿ ಏನಿದೆ ಗೊತ್ತೆ ನಿನಗೆ?... ತುಸು ಮುಚ್ಚಿಕೊಂಡ ಮುತ್ತುಗಳೆಂಬಂತಹ ವಿಶಾಲ ಕಣ್ಣುಗಳ ಮುಗುದೆಯರು. ಎಂಥಾ ಮುಗುದೆಯರು ಗೊತ್ತಾ? ಸದಾ ಕಿರು ಪ್ರಾಯದ ದುಂಡನೆಯ ತುಂಬು ಮೊಲೆಗಳ ಅಕ್ಷತ ಯೋನಿಯರು' (ಪು-೨೧೯-೧೦) ಭೈರಪ್ಪ ವಿಕೃತ ಕಾಮಿ. ಅದು ಅವರ ಹಿಂದಿನ ಕಾದಂಬರಿಗಳಲ್ಲಿ ದೃಢಪಟ್ಟಿದೆ. ಅವರ ಆ ವಿಕೃತ ಕಾಮಗೀಳುಗಳು ಈ ಕಾದಂಬರಿಯಲ್ಲಿ ಕಾಡಿವೆ. ಧರ್ಮ ಸಂರಕ್ಷಣೆಗೆಂದು ಮಹಾಭಾರತದ ಯುದ್ಧದಲ್ಲಿ ಮಡಿದವರಿಗೂ ಈ ಮುಗುದೆಯರು ಸಿಕ್ಕಿದ್ದಾರೆಯೆ ಎಂಬುದನ್ನು ಕಂಡ ಭೈರಪ್ಪನವರೇ ಹೇಳಬೇಕು!

'... ಜೆಸಿಯಾ (ಕಂದಾಯ) ಕೊಡಲಾರದೆ ಕಾಡುಪಾಲದ ಎಷ್ಟೋ ಮೇಲುಜಾತಿಯ ಜನರು ಅನಂತರ ಕಾಡು ಜನಾಂಗವಾದದ್ದಕ್ಕೆ ದಾಖಲೆಗಳಿವೆ' (ಪು-೨೩೩) 'ಬ್ರಹ್ಮಣರಾಗಿಯೂ ರಿಕ್ಷಾ ತುಳೀತಿದೀಯಲ್ಲ?' (ಪು-೧೮೧). ಪಾಪ, ಹಾರುವರಿಗೆ ಇಂಥ ಪರಿಸ್ಥಿತಿ ಬರಬಾರದಿತ್ತು!

ಇತಿಹಾಸವನ್ನು ಸರಿಯಾಗಿ ಗ್ರಹಿಸಲಾಗದ ಹಾರುವ ಹಿತಾಸಕ್ತಿಯ ಮನಸ್ಸೊಂದು ಹೇಗೆ ಆಲೋಚಿಸಬಹುದು ಎಂಬುದಕ್ಕೆ ಇಂಥ ಅಸಂಖ್ಯಾತ ಉದಾಹರಣೆಗಳು 'ಆವರಣ' ಕಾದಂಬರಿಯಲ್ಲಿ ಸಿಗುತ್ತವೆ. 'ನಮ್ಮ ಪೂರ್ವಿಕರ ಯಾವ ಯಾವ ಕೃತ್ಯಗಳನ್ನು ನಾವು ತಿರಸ್ಕರಿಸಬೇಕು, ಯಾವ ಯಾವ ಸಾಧನೆಗಳಿಂದ ಸ್ಫೂರ್ತಿ ಪಡೆಯಬೇಕು ಎಂಬ ವಿವೇಚನೆ ಇಲ್ಲದಿದ್ದರೆ ನಾವು ಪ್ರೌಢರಾಗುವುದಿಲ್ಲ' ಎನ್ನುವ ಭೈರಪ್ಪ ಕುವೆಂಪು ಅವರನ್ನು ಕೊಂಚ ಓದಿಕೊಂಡಿದ್ದರೆ ಇತಿಹಾಸದ ಬೆಳಕನ್ನು ಕಾಣಬಹುದಾಗಿತ್ತು, ಮಾನವೀಯ ನೆಲೆಯಲ್ಲಿ ನಿಲ್ಲಬಹುದಾಗಿತ್ತು.

ಜಾತಿ ಹಿರಿಮೆಯ ಅಹಂಕಾರದ ಅಮಲಿನಿಂದ ಮಾನವೀಯ ಮೌಲ್ಯಗಳೆಲ್ಲವನ್ನು ಗಾಳಿಗೆ ತೂರಿ ತನ್ನ ಕ್ರೂರ ಹೃದಯವನ್ನು ಪರಿಚಯಿಸಿಕೊಂಡಿದ್ದಾರೆ. ತನ್ಮೂಲಕ ಭಾರತದ ಬಹುಸಂಖ್ಯಾತ ಶೂದ್ರರನ್ನು, ಸ್ತ್ರೀಯರನ್ನ ಅಮಾನವೀಯವಾಗಿ ಕಂಡು ಮೃಗತ್ವಕ್ಕೆ ತಳ್ಳಿದ್ದಾರೆ. ಇದನ್ನು ಖಂಡಿ ಸುವ ನೈತಿಕ ಧೈರ್ಯ ಭೈರಪ್ಪನವರಿಗಿದೆಯೆ! ಒಟ್ಟಿನಲ್ಲಿ ಕಾದಂಬರಿಯಿಂದ ಕಾದಂಬರಿಗೆ ಸಾವಿನ ಅಂಚಿಗೆ ಸಾಗುತ್ತಿರುವ ಸನ್ಮಾನ್ಯ ಭೈರಪ್ಪನವರಿಗೆ "ನಮ್ಮ ಮಾತೃ ಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು.

ಬಿ.ಎಂ. ಶ್ರೀ ಅನುವಾದಿಸಿರುವ ಪ್ರೊ॥ ಮಹಮ್ಮದ್ ಅಬ್ಬಾಸ್ ಷೂಸ್ತ್ರಿ ಅವರ 'ಇಸ್ಲಾಂ ಸಂಸ್ಕೃತಿ' ಎಂಬ ಗ್ರಂಥಕ್ಕೆ ಕುವೆಂಪು ಮುನ್ನುಡಿ ಬರೆದಿದ್ದಾರೆ. ಅದನ್ನು ಬರೆದಿದ್ದು ೩೦-೮-೧೯೪೮ರಲ್ಲಿ. ಭೈರಪ್ಪ ಹುಟ್ಟಿದ್ದು ೨೬-೭-೧೯೩೪ ಆ ಮುನ್ನುಡಿ ಬರೆದಾಗ ಭೈರಪ್ಪ ೧೪ ವರ್ಷದ ಹುಡುಗ. ಮುನ್ನುಡಿಯಲ್ಲಿ ಕುವೆಂಪು ಹೀಗೆ ಬರೆದಿದ್ದಾರೆ.

"ಶತಮಾನಗಳ ದೀರ್ಘಾವಧಿಯಲ್ಲಿ ಎರಡೂ ಜನರ ಸಂಸ್ಕೃತಿಗಳೂ ಯಮಳ ನದಿಗಳಂತೆ ಜೊತೆ ಜೊತೆಗೆ ಸಾಗಿಯೂ ಒಂದನ್ನೊಂದು ವರ್ಧಿಸದೆ, ಒಂದರ ಮುನ್ನಡೆಗೆ ಮತ್ತೊಂದು ನೆರವಾಗದೆ ಒಂದನ್ನೊಂದು ಸಂಗಮಿಸದೆ ಅಪರಿಚಿತರಂತೆ ಮಾರ್ಮಲೆತು ಮೊಗದಿರುಹಿ ದೂರ ದೂರವೆ ನಿಲ್ಲುವುದು ಅಸಾಧ್ಯವೆಂಬ ಮಾತು ಎಂತಹರಿಗೂ ಸುಸಂವೇದ್ಯ. ಆದರೆ ಇಂದು ಏನಾಗಿದೆ? ಹಿಂದುಗಳು-ಮುಸ್ಲಿಮರು ಇಬ್ಬರಲ್ಲು-ವಿಶೇಷತಃ ಇಸ್ಲಾಂ ಬಂಧುಗಳಲ್ಲಿ-ಪ್ರತ್ಯೇಕತಾ ಮನೋಭಾವ ಉಲ್ಬಣವಾಗಿ ಪರಸ್ಪರ ಸಂದೇಹಕ್ಕು ತಿರಸ್ಕಾರಕ್ಕೂ ವಿದ್ವೇಷ ದೃಷ್ಟಿಗೂ ಅವಕಾಶವಿತ್ತಿರುವುದರ ಮೂಲ ಕಾರಣ, ಮುಖ್ಯವಾಗಿ ಇತಿಹಾಸ ಬುದ್ಧಿ ಲೋಪ. ಇಂದಿನ ಭರತ ಖಂಡದ ಸಂಸ್ಕೃತಿ ವಿಕಾಸಕ್ಕೆ ಪ್ರೇರಕ ಶಕ್ತಿ ಇಲ್ಲಿಯ ಹಿಂದೂ ಮುಸ್ಲಿವಾದಿ ಎಲ್ಲ ಜನತೆಯ ಮಧುರ ಮೈತ್ರಿ ಸಹಕಾರಗಳೆಂಬುದರ ಅರಿವಿಲ್ಲದಿರುವುದೇ ನಮ್ಮ ಬೀಳಿಗೆ ಕಾರಣವಾಗಿದೆ. ಈ ಅಜ್ಞಾತ ಕಾರ್ಕೋಟಕ ತನ್ನ ಪ್ರತ್ಯೇಕ ತಾಭಾವದ ಹೆಡೆಯನ್ನೆತ್ತಿ ಇಂದು ರಾಜಕೀಯದಲ್ಲಿ ವಿರೂಪಕಾರಕವಾದ ಮಾರಕ ವಿಷವನ್ನು ಕಾರಿ, ಅಖಂಡ ರಾಷ್ಟ್ರ ಪುರುಷನನ್ನು ಇಬ್ಭಾಗ ಮಾಡಿದೆ.

ಇದು ರಾಷ್ಟ್ರದ ದುರದೃಷ್ಟ ಭಾರತ ಮಹಾಮಾನಸದಲ್ಲಿ ಅಕ್ಷಯ ಸಂಸ್ಕೃತಿಯೊಡನೆ ಅನ್ಯ ಸಂಸ್ಕೃತಿಗಳು ಮಧುರವಾಗಿ ಕೂಡಿಕೊಂಡು, ಕೊಟ್ಟು, ಬೆಳೆದು ಬೆಳಗಿ ಬಾಳಿದುದನ್ನು ಅರಿಯದೆ ಹೋದುದು ನಿಜವಾಗಿಯೂ ನಮ್ಮ ನಾಡಿನ ದೌರ್ಭಾಗ್ಯ ವಿಚಾರಿಸಿ ನೋಡಿದರೆ ಒಂದು ರಾಷ್ಟ್ರದ ಇತಿಹಾಸದ ತಿರುಳಿರುವುದು ಅಲ್ಲಿ ಸಂಧಿಸಿದ ವಿವಿಧ ಜನಾಂಗಗಳ ಸಮರಸ ಜೀವನದಿಂದ ಹೊಮ್ಮುವ ಸಂಸ್ಕೃತಿಯ ಸಂದರ್ಭದಲ್ಲಿ."

ಭೈರಪ್ಪನವರ ಕಾಮಾಲೆ ಕಣ್ಣುಗಳಿಗೆ ಇಂಥ ಸೂರ್ಯ ಪ್ರಖರವಾದ ಇತಿಹಾಸ ಸತ್ಯಗಳು ಕಾಣುವುದಾದರೂ ಹೇಗೆ?

ಭೈರಪ್ಪ ಕಾದಂಬರಿಯ ಕಡೆಯಲ್ಲಿ ಸ್ವಾಮಿ ವಿವೇಕಾನಂದರ ಮಾತನ್ನು ಉಲ್ಲೇಖಿಸಿದ್ದಾರೆ. ಅದರಲ್ಲಿ "... ಅವರು (ಪ್ರವಾದಿ ಮಹಮ್ಮದರು) ಕ್ರಮವಾಗಿ ತರಬೇತಿ ಪಡೆದು ಸಾಧನೆ ಮಾಡಿದ ಯೋಗಿಯಾಗಿರಲಿಲ್ಲ; ಆದ್ದರಿಂದ ತಾವು ಮಾಡುತ್ತಿರುವುದರ ಕಾರಣ ಅವರಿಗೆ ಗೊತ್ತಿರಲಿಲ್ಲ. ಮಹಮ್ಮದರು ಪ್ರಪಂಚಕ್ಕೆ ಮಾಡಿದ ಒಳ್ಳೆಯದರ ಜೊತೆಗೆ ಅವರ ಮತಾಂಧತೆಯಿಂದ ಪ್ರಪಂಚಕ್ಕೆ ಆದ ಮಹಾಕೇಡನ್ನು ಆಲೋಚಿಸಿ!"

ನಿಜ. ಅದೇ ವಿವೇಕಾನಂದರು ಆದಿ ಶಂಕರಾಚಾರ್ಯರನ್ನೂ ಕುರಿತು ಹೇಳಿದ್ದಾರೆ. ಅದನ್ನು ಭೈರಪ್ಪ ತಮ್ಮ ಯಾವ ಬರಹದಲ್ಲೂ ಕಡೆಗೆ ಸ್ವಾರ್ಥ ಕಾದಂಬರಿಯಲ್ಲಿ ಉಲ್ಲೇಖಿಸುವುದಿಲ್ಲ ಏಕೆ? ಶಂಕರರನ್ನು ಕುರಿತು ವಿವೇಕಾನಂದರು "ಶಂಕರಾಚಾರ್ಯ ಮುಂತಾದ ಯುಗಾವತಾರ ವ್ಯಕ್ತಿಗಳು ಹಲವು ಜಾತಿಗಳನ್ನು ಸೃಷ್ಟಿಸಿದರು... ಅವರಿಗೆ ಕತ್ತಿಯ ಧಾರೆಯಂಥ ಬುದ್ಧಿ, ವಿಚಾರಕರು ಹೌದು, ಪಂಡಿತರು ಹೌದು. ಆದರೆ ಅವರ ಉದಾರತೆಯು ತುಂಬ ಗಂಭೀರವಾದದ್ದಾಗಿರಲಿಲ್ಲ... ಬ್ರಾಹ್ಮಣ ಅಭಿಮಾನವೂ ಹೆಚ್ಚಾಗಿತ್ತು... ಭಾಷ್ಯವನ್ನು ಬರೆದ ದೊಡ್ಡ ಆಚಾರ್ಯರೆಲ್ಲಾ ಕೆಲವು ವೇಳೆ ತಮ್ಮ ಸಿದ್ಧಾಂತಕ್ಕೆ ಸರಿಯಾದ ಅರ್ಥವನ್ನು ಸೂತ್ರದಲ್ಲಿ ಬರುವಂತೆ ಮಾಡುವಾಗ ತಿಳಿದೇ ಸುಳ್ಳನ್ನು ಹೇಳುತ್ತಿದ್ದರು." ಎಂದಿದ್ದಾರೆ.

ಶಂಕರಾಚಾರ್ಯ ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆದು

"ಶೂದ್ರನಿಗೆ ಅಧಿಕಾರವಿಲ್ಲ. ಏಕೆಂದರೆ ವೇದ ಶ್ರವಣ ಮತ್ತು ಅಧ್ಯಾಯನ ಆತ ಮಾಡಕೂಡದೆಂದೂ ಅರ್ಥವನ್ನು ತಿಳಿದುಕೊಳ್ಳಕೂಡದೆಂದೂ ಅನುಷ್ಠಾನ ಮಾಡಕೂಡದೆಂದು ಸ್ಮೃತಿ ಹೇಳುತ್ತದೆ. ಹಾಗೇನಾದರೂ ಆತ ವೇದವನ್ನು ಕೇಳಿದರೆ ಕರಗಿಸಿದ ಸೀಸ ಮತ್ತು ಅರಗುಗಳಿಂದ ಅವನ ಕಿವಿಯನ್ನು ತುಂಬಿಬಿಡಬೇಕು. ಶೂದ್ರನೆಂದರೆ ಚಲಿಸುವ ಸ್ಮಶಾನ... ವೇದೋಚ್ಚಾರಣೆಯನ್ನು ಮಾಡಿದರೆ ನಾಲಿಗೆಯನ್ನು ಕತ್ತರಿಸಿ ಹಾಕಬೇಕು; ಕಂಠಪಾಠ ಮಾಡಿ ಹೃದಯ ಸೇರಿಬಿಟ್ಟಿದ್ದರೆ ಆ ದೇಹವನ್ನೇ ಕತ್ತರಿಸಿಬಿಡಬೇಕು." ಎಂದು ತಮ್ಮ ಜಾತಿ ಹಿರಿಮೆಯ ಅಹಂಕಾರದ ಅಮಲಿನಿಂದ ಮಾನವೀಯ ಮೌಲ್ಯಗಳೆಲ್ಲವನ್ನು ಗಾಳಿಗೆ ತೂರಿ ತನ್ನ ಕ್ರೂರ ಹೃದಯವನ್ನು ಪರಿಚಯಿಸಿಕೊಂಡಿದ್ದಾರೆ. ತನ್ಮೂಲಕ ಭಾರತದ ಬಹುಸಂಖ್ಯಾತ ಶೂದ್ರರನ್ನು, ಸ್ತ್ರೀಯರನ್ನ ಅಮಾನವೀಯವಾಗಿ ಕಂಡು ಮೃಗತ್ವಕ್ಕೆ ತಳ್ಳಿದ್ದಾರೆ. ಇದನ್ನು ಖಂಡಿಸುವ ನೈತಿಕ ಧೈರ್ಯ ಭೈರಪ್ಪನವರಿಗಿದೆಯೆ!

ಒಟ್ಟಿನಲ್ಲಿ ಕಾದಂಬರಿಯಿಂದ ಕಾದಂಬರಿಗೆ ಸಾವಿನ ಅಂಚಿಗೆ ಸಾಗುತ್ತಿರುವ ಸನ್ಮಾನ್ಯ ಭೈರಪ್ಪನವರಿಗೆ "ನಮ್ಮ ಮಾತೃ ಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮಿದುಳು ಇಸ್ಲಾಮಿನ ದೇಹ ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ" ಎಂದ ವಿವೇಕಾನಂದರ ಮಾತು 'ಜೀವ ಧಾತು'ವಾಗಿ ಪರಿಣಮಿಸಲಿ. □

'ಖಚಿತಗೊಳ್ಳದ ಅನುಮಾನಿತ ಸತ್ಯ'

ಬಸವಣ್ಣನ ಹುಟ್ಟು ಜಾತಿ ಕುರಿತ ತಮ್ಮ ಸಂಶೋಧನೆಗೆ ಸಾಧುತ್ವವನ್ನು, ಸಮರ್ಥನೆಯನ್ನು ಒದಗಿಸಿಕೊಳ್ಳುವ ಲೇಖಕರು, ಬಸವಣ್ಣನ ಜೀವನ ಚರಿತ್ರೆಯನ್ನು ಈವರೆಗೆ ಕಟ್ಟಿಕೊಟ್ಟಿರುವ-ಅವನು ಜನ್ಮತಃ ಬ್ರಾಹ್ಮಣ ಎಂದು ಪ್ರಬಲವಾಗಿ ಪ್ರತಿಪಾದಿಸುವ ಹಲವು ಸಂಶೋಧಕರ ಆಕರಗಳು ಹಾಗೂ ವ್ಯಾಖ್ಯಾನಗಳನ್ನು, ಇತರ ಪೂರಕ ಮಾಹಿತಿ ಹಾಗೂ ಅವುಗಳ ವ್ಯಾಖ್ಯಾನಗಳ ಮೂಲಕ ಪುನಾರಚಿಸುತ್ತಾರೆ. ಈ ಪುನಾರಚನೆಗಳ ಆಧಾರದ ಮೇಲೆ ವ್ಯಾಖ್ಯಾವಾಗಿ ಬಸವಣ್ಣ ಜನ್ಮತಃ ಬ್ರಾಹ್ಮಣನಲ್ಲ ಹಾಗೂ ನಿರ್ದಿಷ್ಟವಾಗಿ ಆತ ಮಾದಿಗ ಜಾತಿಗೆ ಸೇರಿದವನು ಎಂಬುದನ್ನು ನಿರೂಪಿಸಲು ಪ್ರಯತ್ನಿಸುತ್ತಾರೆ. ಬಂಜಗೆರೆಯವರು ಕಲ್ಯಾಣ ಕ್ರಾಂತಿಯ ಸಾಮಾಜಿಕ ಚರಿತ್ರೆಯನ್ನೂ ನಿರೂಪಿಸಲು ಪ್ರಮುಖವಾಗಿ ವಚನ ಸಾಹಿತ್ಯವನ್ನೇ ಅವಲಂಬಿಸುತ್ತಿದ್ದ ಈವರೆಗಿನ ಪ್ರವೃತ್ತಿಗೆ ಇತಿಶ್ರೀ ಹಾಡಬೇಕಾದ ಅಗತ್ಯವನ್ನು ಮನಗಾಣಿಸಿದ್ದಾರೆ.

ಡಿ.ಎಸ್. ನಾಗಭೂಷಣ್

ಪುಸ್ತಕ ಅವಲೋಕನ

೧೨ನೇ ಶತಮಾನದ ಕಲ್ಯಾಣ ಕ್ರಾಂತಿಗೆ ಕಾರಣನಾದ ಬಸವಣ್ಣ ಹುಟ್ಟಿನಿಂದ ಬ್ರಾಹ್ಮಣನಲ್ಲ; ಆತ ಹುಟ್ಟಿದ್ದು ಮಾದಿಗ ಜಾತಿಯಲ್ಲಿ ಎಂದು ಗೆಳೆಯ ಬಂಜಗೆರೆ ಜಯಪ್ರಕಾಶ್ ಅವರು ಒಂದು ವರ್ಷದ ಹಿಂದೆ 'ಅಗ್ನಿ' ವಾರಪತ್ರಿಕೆಯಲ್ಲಿ ಆರಂಭಿಸಿದ ಸಂವಾದ, ಕುತೂಹಲ ಹಾಗೂ ವಿವಾದಗಳನ್ನು ಒಟ್ಟೊಟ್ಟಿಗೇ ಹುಟ್ಟಿಸುತ್ತ ಬೆಳೆದು, ಈಗ 'ಆನು ದೇವಾ ಹೊರಗವನು...' ಎಂಬ ಹೆಸರಿನ ಪುಸ್ತಕದ ರೂಪದಲ್ಲಿ ಪ್ರಕಟವಾಗಿದೆ. ಈ ಪುಸ್ತಕದ ಬಿಡುಗಡೆ ಈ ವರ್ಷದ ಬಸವ ಜಯಂತಿಯ ಹೊತ್ತಿಗೇ ಆದದ್ದು, ಪುಸ್ತಕದ ಪ್ರಚಾರದ ದೃಷ್ಟಿಯಿಂದಲೋ ಅಥವಾ ಈ ವಿಷಯವಾಗಿ ಅರ್ಥಪೂರ್ಣ ಚರ್ಚೆಯೊಂದನ್ನು ಆರಂಭಿಸಲು ಇದು ಸುಸಂದರ್ಭವೆಂಬ ಕಾರಣದಿಂದಲೋ ತಿಳಿಯದು! ಅದೇನೇ ಇರಲಿ, ಅರ್ಥಪೂರ್ಣ ಚರ್ಚೆಯಲ್ಲರಿದ್ದರೂ ಬಂಜಗೆರೆಯರ ಪ್ರಯತ್ನಕ್ಕೆ ಖಂಡನೆ ಹಾಗೂ ಬೆಂಬಲ ವ್ಯಕ್ತಪಡಿಸುವ ಹೇಳಿಕೆ ಪ್ರತಿ ಹೇಳಿಕೆಗಳ ಮಹಾಪೂರವೇ ಆರಂಭವಾಗಿದೆ. ಆದರೆ ಇವಾವುವೂ ಪುಸ್ತಕದಲ್ಲಿನ ಮಾಹಿತಿ ಹಾಗೂ ವಾದ ಸರಣಿಯನ್ನು ಆಧರಿಸಿ ನೀಡಿದ ಹೇಳಿಕೆಗಳಾಗಿರದೆ, ಬಸವಣ್ಣನ ಹುಟ್ಟಿನ ಬಗ್ಗೆ ಈಗಾಗಲೇ ಪ್ರಚಲಿತವಾಗಿರುವ ನಂಬಿಕೆ ಮತ್ತು ಅನುಮಾನಗಳಿಗೆ ಕಟ್ಟುಬಿದ್ದು ನೀಡಿರುವ ಕುರುಡು ಅಭಿಮಾನದ ಹೇಳಿಕೆಗಳೇ ಆಗಿವೆ.

ಬಂಜಗೆರೆಯವರು ಈ ಪುಸ್ತಕವನ್ನು ರಚಿಸಿರುವುದು ಪುಸ್ತಕದಲ್ಲಿ ಅವರೇ ಹೇಳಿಕೊಂಡಿರುವಂತೆ 'ಅನುಮಾನಿತ ಸತ್ಯ'ವನ್ನು ಹಿಂಬಾಲಿಸಿ ನಡೆಸಿದ ಸಂಶೋಧನೆಯ ಆಧಾರದ ಮೇಲೆ. ಮಾದಿಗ ಜಾತಿಗೆ ಸೇರಿದ ಇಬ್ಬರು ಕಿರಿಯ ಸ್ನೇಹಿತರು 'ಬಸವಣ್ಣ ನಮ್ಮ ಜಾತಿಗೆ ಸೇರಿದವನಂತೆ, ಹೌದೆ?' ಎಂದು ತಮ್ಮನ್ನು ಕೇಳಿದ ಪ್ರಶ್ನೆ ಯಿಂದ ಕುತೂಹಲಿತರಾಗಿ ತಮ್ಮ ಸಂಶೋಧನೆಯನ್ನು ಆರಂಭಿಸಿದ್ದಾಗಿ ಅವರು ಹೇಳಿಕೊಂಡಿದ್ದಾರೆ. ಬಸವಣ್ಣ ಜನ್ಮಜಾತ ಬ್ರಾಹ್ಮಣನಾಗಿದ್ದು, ನಂತರ ಬಂಡೆದ್ದು (ಯಾಕೆಂದು ಯಾರಿಗೂ ಗೊತ್ತಿಲ್ಲ!) ಕೆಳ ಜಾತಿಗಳೊಂದಿಗೆ ಗುರುತಿಸಿಕೊಂಡು ಅವರ ಆತ್ಮಗೌರವದ ಹೋರಾಟದಲ್ಲಿ ತೊಡಗಿಸಿಕೊಂಡ ಎಂಬ ಜನಪ್ರಿಯ ಸತ್ಯ ಹೇಗೆ ಪಟ್ಟಭದ್ರ (ಜಾತಿ) ಹಿತಾಸಕ್ತಿ ಗಳ ಹುನ್ನಾರದ ಪರಿಣಾಮವಾಗಿರಬಹುದು ಎಂಬುದನ್ನು ಮನವರಿಕೆ ಮಾಡಿ ಕೊಡಲು ಬಂಜಗೆರೆಯವರು ಪೀಠಿಕೆ ಯಾಗಿ, ಇತಿಹಾಸವೆಂಬುದು ಹೇಗೆ ರಚಿ ತವಾಗುತ್ತದೆ; ಅದರ ಮಿತಿಗಳೇನು; ಅವು ಯಾವ್ಯಾವ ರೂಪಗಳಲ್ಲಿ ವ್ಯಕ್ತವಾಗ ಬಹುದು ಎಂಬುದನ್ನು ಅನೇಕ ಇತಿಹಾಸ ಶಾಸ್ತ್ರಜ್ಞರ ಇತಿಹಾಸ ವ್ಯಾಖ್ಯಾನ ಗಳನ್ನು ಪ್ರಸ್ತುತ ಪಡಿಸುತ್ತಾರೆ. ವಿಶೇಷ ವಾಗಿ ಇ.ಎಚ್. ಕಾರ್ ಎಂಬುವವರ ವ್ಯಾಖ್ಯಾನಗಳನ್ನು. ಅಲ್ಲದೆ, ನಮ್ಮದೇ ಮಹಾಭಾರತ-ರಾಮಾಯಣಗಳ ಅನೇಕ ವಿವರಗಳು ಹಾಗೂ ಬುದ್ಧನ ಜೀವನ ಪ್ರಸಂಗಗಳನ್ನು ಕುರಿತ ಜನಪ್ರಿಯ ನಂಬಿ ಕೆಗಳನೇಕವು ಕಾಲಾನುಕಾಲದ ಇತಿಹಾಸ ಸಂಶೋಧನೆಗಳ ಮೂಲಕ ಹೇಗೆ ಬುಡ ಮೇಲುಗೊಂಡಿವೆ. ಎಂಬುದನ್ನು ಸೋದಾಹರಣವಾಗಿ ವಿವರಿ ಸುತ್ತಾರೆ.



ಆನು ದೇವ ಹೊರಗಣವನು
ಲೇ: ಡಾ॥ ಬಂಜಗೆರೆ ಜಯಪ್ರಕಾಶ್
ಬೆಲೆ: ರೂ. ೬೦/-
ಪ್ರಕಾಶಕರು: ಲಕ್ಷ್ಮಿ ಪ್ರಕಾಶನ,
ಬೆಂಗಳೂರು-೫೬೦೦೯೪

ಹೀಗೆ ಬಸವಣ್ಣನ ಹುಟ್ಟು ಜಾತಿ ಕುರಿತ ತಮ್ಮ ಸಂಶೋಧನೆಗೆ ಸಾಧುತ್ವವನ್ನೂ, ಸಮರ್ಥನೆಯನ್ನು ಒದಗಿಸಿಕೊಳ್ಳುವ ಲೇಖಕರು, ಬಸವಣ್ಣನ ಜೀವನ ಚರಿತ್ರೆಯನ್ನು ಈವರೆಗೆ ಕಟ್ಟಿಕೊಟ್ಟಿರುವ-ಅವನು ಜನ್ಮತಃ ಬ್ರಾಹ್ಮಣ ಎಂದು ಪ್ರಬಲವಾಗಿ ಪ್ರತಿಪಾದಿಸುವ ಡಾ॥ ಎಂ. ಚಿದಾನಂದ ಮೂರ್ತಿಯವರೂ ಸೇರಿದಂತೆ-ಹಲವು ಸಂಶೋಧಕರ ಆಕಾರಗಳು ಹಾಗೂ ವ್ಯಾಖ್ಯಾನಗಳನ್ನು, ಇತರ ಪೂರಕ ಮಾಹಿತಿ ಹಾಗೂ ಅವುಗಳ ವ್ಯಾಖ್ಯಾನಗಳ ಮೂಲಕ ಪುನಾರಚಿಸುತ್ತಾರೆ. ಈ ಪುನಾರಚನೆಗಳ ಆಧಾರದ ಮೇಲೆ ಮುಖ್ಯವಾಗಿ ಬಸವಣ್ಣ ಜನ್ಮತಃ ಬ್ರಾಹ್ಮಣನಲ್ಲ ಹಾಗೂ ನಿರ್ದಿಷ್ಟವಾಗಿ ಆತ ಮಾದಿಗ ಜಾತಿಗೆ ಸೇರಿದವನು ಎಂಬುದನ್ನು ನಿರೂಪಿಸಲು ಪ್ರಯತ್ನಿಸುತ್ತಾರೆ. ಬಂಜಗೆರೆಯವರು ಕಲ್ಯಾಣ ಕ್ರಾಂತಿಯ ಸಾಮಾಜಿಕ ಚರಿತ್ರೆಯನ್ನೂ ನಿರೂಪಿಸಲು ಪ್ರಮುಖವಾಗಿ ವಚನ ಸಾಹಿತ್ಯವನ್ನೇ ಅವಲಂಬಿಸುತ್ತಿದ್ದ ಈವರೆಗಿನ ಪ್ರವೃತ್ತಿಗೆ ಇತಿಶ್ರೀ ಹಾಡಬೇಕಾದ ಅಗತ್ಯವನ್ನು ಮನಗಾಣಿಸಿದ್ದಾರೆ.

ಸಾಹಿತ್ಯಾಧಾರಿತ ಸಂಶೋಧನೆ, ಎಂದೂ ಐತಿಹಾಸಿಕತೆಯ ಮಾನ್ಯತೆಯನ್ನು ದೊರಕಿಸಿಕೊಳ್ಳಲಾರದು. ಏಕೆಂದರೆ ಸಾಹಿತ್ಯ ಮೂಲತ: ರೂಪಕಗಳ ನೆಲೆಯಲ್ಲಿ ಹುಟ್ಟುವಂತಹುದಾಗಿದ್ದು, ಸಹಜವಾಗಿ ಅದರಲ್ಲಿ 'ಐತಿಹಾಸಿಕತೆ' ಸಾಕಷ್ಟು ಘಾಸಿಗೊಂಡಿರುವ ಸಂಭವವುಂಟು. ಹೀಗಾಗಿ ಕಲ್ಯಾಣ ಕ್ರಾಂತಿಯ ಐತಿಹಾಸಿಕತೆಯನ್ನು (ಅದಕ್ಕೆ ಐತಿಹಾಸಿಕತೆಯೇ ಇಲ್ಲವೆಂದು ಹೇಳುವವರು ಸಾಕಷ್ಟು ಮಂದಿ ಕರ್ನಾಟಕದಲ್ಲಿ ಇದ್ದಾರೆ!) ನಿರೂಪಿಸಲು ಬಹುಮುಖಿ ಹಾಗೂ ಅಂತರಶಿಸ್ತೀಯ ನೆಲೆಯ ಸಂಶೋಧನೆ ಅಗತ್ಯವಾಗಿದೆ. ಈ ದಿಸೆಯಲ್ಲಿ ಬಂಜಗೆರೆಯವರು ವಚನ, ಕಾವ್ಯ ಹಾಗೂ ಪುರಾಣ ಸಾಹಿತ್ಯವಲ್ಲದೆ, ಶಾಸನ, ಸಮಾಜಶಾಸ್ತ್ರ ಹಾಗೂ ರಾಜಕೀಯ ಅರ್ಥಶಾಸ್ತ್ರಗಳ ಅಧ್ಯಯನಗಳ ಆಧಾರದ ಮೇಲೆ-ಇವು ಬಿಟ್ಟು ಕೊಡುವ ಸತ್ಯಗಳನ್ನು ಸತಾರ್ಕಿವಾಗಿ ಒಂದ ಕ್ಕೊಂದು ಜೋಡಿಸಿ-ತಮ್ಮ ತೀರ್ಮಾನಗಳಿಗೆ ಬರುತ್ತಾರೆ.

ಉದಾಹರಣೆಗೆ, ಮೊದಲಿಗೆ ಬಸವಣ್ಣನಿಗೆ ನೇರವಾಗಿ ಸಂಬಂಧವೇ ಇಲ್ಲದಂತೆ ತೋರುವ; ಆದರೆ ಆತನ ಪ್ರಸ್ತಾಪ, ಪ್ರಸಕ್ತಿ ಇರುವುದೆಂದು ಹೇಳಲಾದ, ಬಸವಣ್ಣನಿಗೆ ಸಂಬಂಧಿಸಿದಂತೆ ಈವರೆಗೆ ಲಭ್ಯವಾಗಿರುವ ಎರಡೇ ಎರಡು ಶಾಸನಗಳ ಪಠ್ಯಗಳ ವಿಶ್ಲೇಷಣೆಯನ್ನು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ಲೇಖಕರು ಕೈಗೊಳ್ಳುತ್ತಾರೆ. ನಂತರ ಕಲ್ಯಾಣ ಕ್ರಾಂತಿಯ ಕಾಲ ಹಾಗೂ ಅದರ ಚರಿತ್ರೆ ಕಾವ್ಯ-ಪುರಾಣಗಳ ರೂಪದಲ್ಲಿ ದಾಖಲಾದ ಕಾಲಗಳ ನಡುವಣ ಸುಮಾರು ಒಂದು-ಒಂದೂವರೆ ಶತಮಾನದ ಅಂತರದಲ್ಲಿ ಶುದ್ಧ ಸ್ವಾರ್ತಸ್ತ್ರೈವರು

[illegible] ಬಸವಣ್ಣ [illegible] ಧಾರ್ಮಿಕ ರಾಜಕಾರಣದ ಹೊಳಹು ನೀಡುತ್ತಾರೆ. ಕೊನೆಗೆ ಬಸವಣ್ಣನ ಕಾಲದಲ್ಲಿ ಕರ್ನಾಟಕದ ಆ ಸೀಮೆಯಲ್ಲಿ ಪ್ರಬಲವಾಗಿದ್ದ ಅವೈದಿಕ ಆಗಮ ಶಾಸ್ತ್ರಾಚಾರಗಳ (ಕಾಪಾಲಿಕ, ಕಾಳಾಮುಖ ಇತ್ಯಾದಿ) ಹಿನ್ನೆಲೆಯಲ್ಲಿ ಆತ ಮಾದಿರಾಜನ 'ಕರಸಂಜಾತ'ನಾದ 'ಸಿಸುಮಗ'ನಾಗಿದ್ದುದು ಹೆಚ್ಚು ನಂಬಲರ್ಹ ಸಂಗತಿಯಾಗಿರುತ್ತದೆ ಎಂಬ ತೀರ್ಮಾನಕ್ಕೆ ಬರುತ್ತಾರೆ.

ಇದಕ್ಕೆ ಪೂರಕವಾಗಿ ಅವರು ವಾಯುವ್ಯ ಕರ್ನಾಟಕದಲ್ಲಿ ಆಗ ಉತ್ಕರ್ಷಕ್ಕೆ ಬಂದಿದ್ದುವೆಂದು ಹೇಳಲಾದ ಕುಶಲಕರ್ಮಿ ಜಾತಿಗಳ ಎಡ ಹಾಗೂ ಬಲ ಪಣಕಟ್ಟುಗಳ ವಿಂಗಡಣೆ ಹಾಗೂ ಆ ವಿಂಗಡಣೆಯ ಪರಿಣಾಮದಿಂದುಂಟಾದ ಹೊಸ ಅಸ್ಪೃಶ್ಯ ಜಾತಿಗಳ ನಿರ್ಮಾಣ, ಮಾದೇಶ್ವರ, ಗೋಣಿ ಬಸವೇಶ್ವರ, ಮಂಟೇಸ್ವಾಮಿ, ಮರುಳಸಿದ್ಧರ ಕತೆಗಳು, ದೇವ ಚಂದ್ರನ 'ರಾಜಾವಳಿ ಕಥೆ' ಹಾಗೂ ಈಗಲೂ ಕಲ್ಯಾಣ ಕರ್ನಾಟಕದಲ್ಲಿ ಪ್ರಚಲಿತವಿರುವ 'ಬಾಲಬಸಪ್ಪ'ಗಳ ಮಾದಿಗ ಪರಂಪರೆಯ ಉಲ್ಲೇಖ ಮಾಡುತ್ತಾರೆ. ಆ ಉಲ್ಲೇಖಗಳ ಜೊತೆಗೆ ಬಸವಣ್ಣನ ಜೀವನ ಚರಿತ್ರೆಯನ್ನು ಕಟ್ಟಿಕೊಡುವ ಕಾವ್ಯ-ಪುರಾಣ ಹಾಗೂ ವಚನಗಳಲ್ಲಿ ಬರುವ ವಿವರಗಳನ್ನು ಜೋಡಿಸುತ್ತಾ, ಆತ ಮಾದಿಗ ಜಾತಿಗೆ ಸೇರಿದವನು ಎಂಬುದು ಹೇಗೆ ಸುವ್ಯಕ್ತವಾಗುತ್ತದೆ ಎಂಬುದನ್ನು ಸೂಚಿಸುತ್ತಾರೆ.

ಬಂಜಗೆರೆಯವರು ತಮ್ಮ ವಾದವನ್ನು ಮಂಡಿಸಿರುವುದು ಮುಖ್ಯವಾಗಿ ಈ ಐದು ಸಂಗತಿಗಳ ಆಧಾರದ ಮೇಲೆ:

೧. ಬಸವ ಎಂಬ ಹೆಸರು ಮತ್ತು ಅದರ ಏಕವಚನ ಸಂಬೋಧನ ಬ್ರಾಹ್ಮಣೇತರ ಮೂಲದ್ದು

೨. ಅರ್ಜುನವಾಡದ ಶಾಸನ, ಬಸವಣ್ಣ ಮೂಲತಃ 'ಮುನಿ' ಸಂಸ್ಕೃತಿಗೆ ಸೇರಿದವನೆಂದು ಸೂಚಿಸುತ್ತಿದೆ.

೩. ಬಸವಣ್ಣನಿಗೆ ಹುಟ್ಟಿನಲ್ಲೇ ಶಿವದೀಕ್ಷೆಯಾಗಿತ್ತು ಎಂಬ ನಂಬಿಕೆಯು ಆತನನ್ನು 'ದೇವರ ಮಗ'ನೆಂದು ಸೂಚಿಸುತ್ತಿದ್ದು; ಆತ ಆಗಮಶಾಸ್ತ್ರದ ಪ್ರಕಾರ ದೀಕ್ಷೆ ಪಡೆದ ನಂತರವಷ್ಟೇ 'ಬ್ರಾಹ್ಮಣ'ನಾಗಿ 'ಪರಿವರ್ತಿತ'ನಾದನೆಂಬುದನ್ನೂ ಹೇಳುತ್ತದೆ.

೪. 'ಸಿಸು ಮಗ'ನನ್ನು ಪಡೆಯುವ ಯೋಗಾಚಾರ ಮಾತೃಪ್ರಧಾನವಾದ ಮಾದಿಗ ಪರಂಪರೆಗೆ ಸೇರಿದ್ದೆಂಬುದನ್ನು ಸಾಂಸ್ಕೃತಿಕ ಅಧ್ಯಯನಗಳು ದೃಢಪಡಿಸುತ್ತವೆ. (ಬಸವಣ್ಣ ತನ್ನ ಹೆಂಡಿರನ್ನು ಜಂಗಮರ 'ಸೇವೆ'ಗೆ ಒಪ್ಪಿಸುತ್ತಿದ್ದ 'ಸಂಪ್ರದಾಯ'ದವನು ಎಂಬುದೂ ಇಲ್ಲಿ ಉಲ್ಲೇಖಾರ್ಹ)

೫. ಮಾದಾರ ಚೆನ್ನಯ್ಯನನ್ನು ತನ್ನ ಮೂಲಪುರುಷನೆಂದು ಬಸವಣ್ಣ ತನ್ನ ವಚನಗಳಲ್ಲಿ ಪದೇ ಪದೇ ವಿವಿಧ ರೀತಿ-ನೀತಿಗಳಲ್ಲಿ ಹೇಳಿಕೊಂಡಿದ್ದಾನೆ.

ಬಸವಣ್ಣ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನೆಂಬುದು ಐತಿಹಾಸಿಕವಾಗಿ ಸಾಧಿತವಾದ ಸತ್ಯವೇನಲ್ಲ. ಅದು ಜಾತಿ ಶ್ರೇಣೀಕರಣದಲ್ಲಿ ಆನಂದ ಪಡೆಯುತ್ತಿದ್ದ ಸಮಾಜದ ಪ್ರಭಾವ ವಲಯಕ್ಕೆ ಸಿಕ್ಕ ಬಸವ ಸಂಪ್ರದಾಯ ರೂಢಿಸಿಕೊಂಡ ಒಂದು ನಂಬಿಕೆ ಇರಬಹುದು. ಏಕೆಂದರೆ ಬಸವಣ್ಣ ಬ್ರಾಹ್ಮಣರಿಗೆ ಅಡ್ಡಹುಟ್ಟಿದವನೆಂದು ಉ.ಕರ್ನಾಟಕದ ಬ್ರಾಹ್ಮಣರು ಹೇಳುವುದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಹಾಗೇ ಆತ ಎಡ ಪಣಕಟ್ಟಿನ ನಾಯಕತ್ವ ವಹಿಸಿದ್ದ ವಿಶ್ವಕರ್ಮ ಜಾತಿಗೆ ಸೇರಿದವನೆಂಬ ನಂಬಿಕೆ ವ್ಯಾಪಕವಾಗಿ ಕಲ್ಯಾಣ ಕರ್ನಾಟಕದಲ್ಲಿರುವುದನ್ನೂ, ಈ ಸಂಬಂಧ ಅನೇಕ ಸಂಶೋಧನ ಪ್ರಬಂಧಗಳು ಪ್ರಕಟವಾಗಿರುವುದನ್ನು ನಾವು ಗಮನಿಸಬಹುದು. ಈ ಎಲ್ಲ ಹಿನ್ನೆಲೆಯಲ್ಲಿ ಬಂಜಗೆರೆಯವರ ವಾದವನ್ನು ಪರಿಶೀಲಿಸಿದಾಗ, ಬಸವಣ್ಣ ಬ್ರಾಹ್ಮಣನೆಂಬ ನಂಬಿಕೆಗಿಂತ ಆತ ಬ್ರಾಹ್ಮಣನಲ್ಲವೆಂಬ ಅನುಮಾನವೇ ಹೆಚ್ಚು ವಿಶ್ವಸನೀಯವಾಗಿ ಕಾಣುತ್ತದೆ. ಆದರೆ ಆತ ಮಾದಿಗ ಜಾತಿಗೆ ಸೇರಿದ್ದವನು ಎಂಬುದನ್ನು ಖಚಿತವಾಗಿ ಹೇಳುವಷ್ಟು ಪುರಾವೆಗಳನ್ನು ಲೇಖಕರು ಒದಗಿಸಿಲ್ಲವೆಂದೇ ಹೇಳಬೇಕಾಗುತ್ತದೆ. ಅವರ ವಾದದ ಪ್ರಕಾರವೇ ಆತ 'ಸಿಸುಮಗ'ನಾಗಿ ಹುಟ್ಟಿ ಬಾಲಯೋಗಿದ್ದರೆ, ಆ ಪರಂಪರೆಯ ಬಗ್ಗೆ ಗೌರವ ಇಟ್ಟುಕೊಂಡು ಆತನಿಗೆ ಯಾವುದೇ ಜಾತಿಯನ್ನು ಆರೋಪಿಸುವುದು ಎಷ್ಟು ಸರಿ ಅಥವಾ ಸಂಗತ?

ಬಸವಣ್ಣ ಹಾಗೆ ಮಾದಿಗನೇ ಆಗಿದ್ದರೆ, ಹುಟ್ಟಿನಿಂದ ಕ್ಷೌರಿಕನಾದರೂ ಕ್ಷತ್ರಿಯನಾಗಿ ಪಟ್ಟವೇರಿದ್ದ ಬಿಜ್ಜಳ ತನ್ನ ತಂಗಿಯನ್ನು ಆತನಿಗೆ ಮದುವೆ ಮಾಡಿಕೊಡುವಂತಹ ಉದಾರವಾದ ಸಾಮಾಜಿಕವಾತಾರವಣ ಆಗ ಇದ್ದಲ್ಲಿ, ಹರಳಯ್ಯ-ಮಧುವರಸರ ಮಕ್ಕಳ ಮದುವೆ ಬಗ್ಗೆ ಬಿಜ್ಜಳನೇಕೆ ಅಷ್ಟು ಕೆರಳ ಬೇಕು? ಜೈನ-ಬ್ರಾಹ್ಮಣರು ಆ ಪ್ರಮಾಣದ ರಾದ್ಧಾಂತ ಸೃಷ್ಟಿಸಲು ಹೇಗೆ ಸಾಧ್ಯ? ಇಲ್ಲೇನೋ ಒಂದು ಆಯಾಮ ಬಂಜೆಗೆರೆಯವರ ಪರಿಶೀಲನೆಯಿಂದ ತಪ್ಪಿಸಿಕೊಂಡಂತಿದೆ. ಹಾಗೇ ತಮ್ಮ ವಾದಕ್ಕೆ ನಿರ್ಣಾಯ ಕವಾಗಿ ಬಳಸುವ (I) 'ಜಾತಿ ಶೈವ' ಪರಂಪರೆಯ ಹಲವಾರು ಗುಣದೋಷಗಳನ್ನು ಬಸವ ಪ್ರಣೀತ ಲಿಂಗಾಯಿತ ದೊಳಕ್ಕೆ 'ಕಸಿ' ಮಾಡಲಾಯಿತು (ಪುಟ: ೨೯) ಮತ್ತು (II) ಬಸವಣ್ಣ ತನ್ನದೇ ಆದ ತಾತ್ವಿಕ ಕಾರಣಗಳಿಗಾಗಿ ಅಥವಾ ಸಾಮಾಜಿಕ ಹಿನ್ನೆಲೆಯಿಂದಾಗಿ ಸಂಗಮನಾಥ ದೇವ ಸ್ಥಾನದ ಆಶ್ರಯಕ್ಕೆ ಬಂದ (ಪು: ೬೭) ಎಂಬ ಲೇಖಕರ ಹೇಳಿಕೆಗಳು ಬರೀ ಸ್ಥೂಲ ಊಹೆಗಳಾಗಿ ಉಳಿದು ವಿವರಗಳನ್ನು ಬೇಡುತ್ತ ಲೇಖಕರ ವಾದದಲ್ಲಿ ಬಿರುಕುಗಳನ್ನು ಸೃಷ್ಟಿಸುತ್ತದೆ. ಆದರೆ ಈ ಯಾವ ಕೊರತೆಯೂ ಬಂಜಗೆರೆಯವರ ವಾದದ ಆಶಯವನ್ನು ವಿಸ್ತರ ಗೊಳಿಸ ಲಾರದ್ದು. ಹಾಗೇ ಈ ಸಂಶೋಧನಾ 'ವಿವಾದ'ದಿಂದ ಪ್ರಯೋಜನವಾದರೂ ಏನು ಎಂದು ಕೇಳುವ ಕಳ್ಳ 'ಜಾತ್ಯತೀತರ ಮಳ್ಳತನವೇನೂ ಮುಚ್ಚಿಹೋಗದು.

ಬಸವಣ್ಣ ಹಾಗೆ ಮಾದಿಗನೇ ಆಗಿದ್ದರೆ ಮತ್ತು ಹುಟ್ಟಿನಿಂದ ಕ್ಷೌರಿಕನಾದರೂ ಕ್ಷತ್ರಿಯನಾಗಿ ಪಟ್ಟವೇರಿದ್ದ ಬಿಜ್ಜಳ ತನ್ನ ತಂಗಿಯನ್ನು ಆತನಿಗೆ ಮದುವೆ ಮಾಡಿಕೊಡುವಂತಹ ಉದಾರವಾದ ಸಾಮಾಜಿಕ ವಾತಾರವಣ ಆಗ ಇದ್ದುದಾದರೆ, ಹರಳಯ್ಯ-ಮಧುವರಸರ ಮಕ್ಕಳ ಮದುವೆ ಬಗ್ಗೆ ಬಿಜ್ಜಳನೇಕೆ ಅಷ್ಟು ಕೆರಳ ಬೇಕು? ಹಾಗೇ, ಜೈನರು ಮತ್ತು ಬ್ರಾಹ್ಮಣರು ಆ ಪ್ರಮಾಣದ ರಾದ್ಧಾಂತ ಸೃಷ್ಟಿಸಲು ಹೇಗೆ ಸಾಧ್ಯ? ಇಲ್ಲೇನೋ ಒಂದು ಆಯಾಮ ಬಂಜಗೆರೆಯವರ ಪರಿಶೀಲನೆಯಿಂದ ತಪ್ಪಿಸಿಕೊಂಡಂತಿದೆ. ಹಾಗೇ ತಮ್ಮ ವಾದಕ್ಕೆ ನಿರ್ಣಾಯಕವಾಗಿ ಬಳಸುವ (1) 'ಜಾತಿ ಶೈವ' ಪರಂಪರೆಯ ಹಲವಾರು ಗುಣದೋಷಗಳನ್ನು ಬಸವ ಪ್ರಣೀತ ಲಿಂಗಾಯಿತದೊಳಕ್ಕೆ 'ಕಸಿ' ಮಾಡಲಾಯಿತು (ಪುಟ: ೨೯) ಮತ್ತು (2) ಬಸವಣ್ಣ ತನ್ನದೇ ಆದ ತಾತ್ವಿಕ ಕಾರಣಗಳಿಗಾಗಿ ಅಥವಾ ಸಾಮಾಜಿಕ ಹಿನ್ನೆಲೆಯಿಂದಾಗಿ ಸಂಗಮನಾಥ ದೇವಸ್ಥಾನದ ಆಶ್ರಯಕ್ಕೆ ಬಂದ (ಪು: ೬೭) ಎಂಬ ಲೇಖಕರ ಹೇಳಿಕೆಗಳು ಬರೀ ಸ್ಥೂಲ ಊಹೆಗಳಾಗಿ ಉಳಿದು, ವಿವರಗಳನ್ನು ಬೇಡುತ್ತ ಲೇಖಕರ ವಾದದಲ್ಲಿ ಬಿರುಕುಗಳನ್ನು ಸೃಷ್ಟಿಸುತ್ತದೆ. ಆದರೆ ಈ ಯಾವ ಕೊರತೆಯೂ ಬಂಜಗೆರೆಯವರ ವಾದದ ಆಶಯವನ್ನು ವಿಸ್ತರಗೊಳಿಸಲಾರದ್ದು. ಹಾಗೇ ಈ ಸಂಶೋಧನಾ 'ವಿವಾದ'ದಿಂದ ಪ್ರಯೋಜನವಾದರೂ ಏನು ಎಂದು ಕೇಳುವ ಕಳ್ಳ 'ಜಾತ್ಯತೀತ'ರ ಮಳ್ಳತನವೇನೂ ಮುಚ್ಚಿಹೋಗದು.

ಜಯಪ್ರಕಾಶ್, ತಮ್ಮ ವಾದದದಲ್ಲಿ ಕಂಡುಬರುವ ಈ ಬಿರುಕುಗಳನ್ನು ಭದ್ರವಾಗಿ ಮುಚ್ಚುವಂತಹ ಇನ್ನಷ್ಟು ಪುರಾವೆಗಳನ್ನು ಒದಗಿಸುವಂತಾದರೆ, ಕರ್ನಾಟಕ ಸಂಸ್ಕೃತಿ ಅಧ್ಯಯನದ ಮಟ್ಟಿಗೆ ಅದೊಂದು ದೊಡ್ಡ ಸಾಧನೆಯೇ ಆದೀತು, ಏಕೆಂದರೆ ಬಸವಣ್ಣ ಮಾದಿಗ ಜಾತಿಗೆ ಸೇರಿದವನೆಂದು ಸಿದ್ಧವಾದರೆ, ಬಸವಣ್ಣ ಜಾತಿ ಲಿಂಗಾಯತರಿಂದ ಮುಕ್ತಿ ಪಡೆದು ಕರ್ನಾಟಕದ ನಿಜ ನಾಯಕನಾಗಿ ಮೂಡಿ ಹೊಸ ಸಾಮಾಜಿಕ-ರಾಜಕೀಯ ತಳಮಳ-ಸಂಚಲನಕ್ಕೆ ಕಾರಣನಾದಾನು. ಹಾಗೇ ಕಾಲಾನುಕಾಲದಿಂದ ಅನೇಕ ಸಾಮುದಾಯಿಕ ಅಪನಂಬಿಕೆಗಳಿಗೂ ಅನಗತ್ಯ ಸಂಘರ್ಷಗಳಿಗೂ ಕಾರಣವಾಗಿರುವ ಜಾತಿ ವ್ಯವಸ್ಥೆ ಕುರಿತ ಸರಳೀಕೃತ ಹಾಗೂ ಸಗಟುಗೊಂಡ ಭಾವನಾತ್ಮಕ ಕಲ್ಪನೆಗೆ ತೆರೆ ಬಿದ್ದು, ಸಾಮಾಜಿಕ ಉನ್ನತಿಗಾಗಿ ಹೊಸ ನೆಲೆಯ ಚಿಂತನೆಗಳಿಗೆ ದಾರಿ ಮಾಡಿಕೊಟ್ಟೀತು.

ಕೊನೆಯದಾಗಿ: ಬಂಜಗೆರೆಯವರ ಈ ಸಂಶೋಧನೆ ಬಗ್ಗೆ ದಟ್ಟ ಜನಪದ ಪ್ರಜ್ಞೆಯ ಸಂಶೋಧಕ ಡಾ॥ ಎಂ.ಎಂ. ಕಲಬುರ್ಗಿಯವರು ಹಾಗೂ ದಟ್ಟ ಶಿಷ್ಟ ಪ್ರಜ್ಞೆಯ ಸಂಶೋಧಕ ಡಾ॥ ಷ. ಶೆಟ್ಟರ್ ಏನು ಹೇಳುವರೋ ಎಂಬ ಕುತೂಹಲ ನನಗೆ. ಏಕೆಂದರೆ ಸದ್ಯಕ್ಕೆ ಕನ್ನಡ ಸಂಸ್ಕೃತಿ ಸಂಶೋಧನೆಗೆ ಸಂಬಂಧಪಟ್ಟಂತೆ-ಎರಡು ತಾತ್ವಿಕ ತುದಿಗಳಲ್ಲಿದ್ದಂತೆ ತೋರುವಂತಿದ್ದರೂ-ಇವರಿಬ್ಬರೇ ಅಗತ್ಯ ಸಂಯಮ ಹಾಗೂ ಶಿಸ್ತುಗಳನ್ನು ಕಾಪಾಡಿಕೊಂಡು ಬಂದಿರುವವರು. □

ಲೈಂಗಿಕ ಶಿಕ್ಷಣ-ಮಡಿವಂತಿಕೆ ಸಲ್ಲದು

ನಾ ದಿವಾಕರ

ಭಾರತೀಯ ಸಮಾಜದಲ್ಲಿ ಹೆಣ್ಣು ಗಂಡುಗಳ ಸ್ಪರ್ಶವೇ ಒಂದು ರೀತಿಯಲ್ಲಿ ನಿಷಿದ್ಧವಾಗಿದೆ. ಆಲಿಂಗನ ಎನ್ನುವುದು ಒಂದು ನೈತಿಕ ಅಪರಾಧವೇನೋ ಎನ್ನುವಂತೆ ನೋಡಲಾಗುತ್ತದೆ. ಆಧುನಿಕ ಸಮಾಜದಲ್ಲಿ ಈ ನಿಟ್ಟಿನಲ್ಲಿ ಕೊಂಚ ಸುಧಾರಣೆ ಕಾಣಬಹುದಾದರೂ, ಇಂದಿಗೂ ಸೋದರ ಸಂಬಂಧಗಳಲ್ಲೂ ಸಹ ಹೆಣ್ಣು-ಗಂಡುಗಳ ಸ್ಪರ್ಶವನ್ನು ವಿರೋಧಿಸಲಾಗುತ್ತದೆ. ತನ್ನ ಸ್ನೇಹಿತರೊಡನೆಯೋ, ಸಂಬಂಧಿಯೊಡನೆಯೋ ಕೈ ಕುಲುಕುವುದೇ ಒಂದು ಅಪರಾಧವಾಗಿಬಿಡುತ್ತದೆ. ಉನ್ನತ ಮೇಲ್ವರ್ಗದ ಸಮಾಜದಲ್ಲಿ ಈ ತಾರತಮ್ಯಗಳು ಇಲ್ಲವಾದರೂ, ಬಹುತೇಕ ಭಾರತೀಯ ಸಮಾಜದಲ್ಲಿ ಈ ಪ್ರವೃತ್ತಿ ಕಂಡುಬರುತ್ತದೆ. ಈ ಮಡಿವಂತಿಕೆಯೇ ನಮ್ಮ ಸಮಾಜದ ಹೆಣ್ಣು ಮಕ್ಕಳನ್ನು ಆಧುನಿಕತೆಯಿಂದ ದೂರವಿರಿಸಿದೆ. ಇದರ ನೇರ ಪರಿಣಾಮವನ್ನು ನಾವು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ.

ಶಾಲಾ ಮಕ್ಕಳಿಗೆ ೬ನೇ ತರಗತಿಯಿಂದಲೇ ಹಂತ ಹಂತವಾಗಿ ಲೈಂಗಿಕ ಶಿಕ್ಷಣವನ್ನು ನೀಡಬೇಕೆಂಬ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತು ಸಂಸ್ಥೆ (NCERT) ೧೯೯೮ ರಲ್ಲಿ ನೀಡಿದ್ದ ಶಿಫಾರಸ್ಸಿನ ಮೇರೆಗೆ ದೇಶದ ಎಲ್ಲಾ ಶಾಲೆಗಳಲ್ಲೂ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದ್ದು, ರಾಜ್ಯದಲ್ಲಿ ಅನೇಕ ಪ್ರತಿಭಟನೆ ಕಂಡು ಬಂದಿವೆ. ಹಲವು ದಿನಗಳ ಹಿಂದೆ ಗುಲ್ಬರ್ಗದ ಶಾಲೆಯೊಂದರಲ್ಲಿ ಆರಂಭಗೊಂಡ ಈ ಪ್ರತಿಭಟನೆಗಳು ಈಗ ರಾಜ್ಯವ್ಯಾಪಿಯಾಗಿದ್ದು, ರಾಜ್ಯ ಸರ್ಕಾರವೂ ಮುಂದಾಲೋಚನೆ ಮಾಡದೆ ಪ್ರತಿಭಟನಾಕಾರರಿಗೆ ಮಣಿ ಹಾಕುವಂತೆ ಇಡೀ ಯೋಜನೆಯನ್ನೇ ರದ್ದುಪಡಿಸಿದೆ. ಮೂಲಭೂತವಾದಿ ಸಂಘಟನೆಗಳಾದ ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ, ಎಡ ಪಂಥೀಯ ವಿಚಾರಧಾರೆಗಳ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಗಳು ಈ ಪ್ರತಿಭಟನೆಯಲ್ಲಿ ಒಂದಾಗಿರುವುದು ವಿಡಂಬನೆಯಾದರೂ, ಸರ್ಕಾರದ ನಿರ್ಧಾರವನ್ನು ವಿರೋಧಿಸುವವರ ವಾದದಲ್ಲೂ ಕೆಲವು ಒಪ್ಪತಕ್ಕ ಅಂಶಗಳಿವೆ.

ಆದರೆ ಸರ್ಕಾರೀ ಕ್ಷೇತ್ರದವರ ಹೇಳಿಕೆಯಂತೆ ಶಾಲಾ ಮಕ್ಕಳಿಗಾಗಿ ಯಾವುದೇ ಪಠ್ಯ ಕ್ರಮವನ್ನು ಇದುವರೆಗೂ ಸಿದ್ಧ ಪಡಿಸಿಲ್ಲ. ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೇಳುವಂತೆ NCERT ಶಿಫಾರಸ್ಸುಗಳನ್ನು ಜಾರಿಗೊಳಿಸಲು ಸರ್ಕಾರಕ್ಕೆ ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಆರನೆಯ ತರಗತಿಯಿಂದಲೇ ಲೈಂಗಿಕ ಶಿಕ್ಷಣ ನೀಡಬೇಕೆಂದಿದ್ದರೂ, ಆರರಿಂದ ಹತ್ತನೆಯ ತರಗತಿಯವರೆಗೆ ಮಕ್ಕಳ ತಿಳುವಳಿಕೆಯ ಮಟ್ಟವನ್ನು ಗಮನದಲ್ಲಿಟ್ಟುಕೊಂಡು, ಆಯಾ ಓರಿಗೆಯ ಮಕ್ಕಳಿಗೆ ಯಾವ ರೀತಿಯ ಲೈಂಗಿಕ ಶಿಕ್ಷಣ ನೀಡಬೇಕೆಂದು ತೀರ್ಮಾನಿಸಲಾಗುತ್ತದೆ. ಈ ನಿಟ್ಟಿನಲ್ಲಿ ಪ್ರಥಮ ಹಂತದಲ್ಲಿ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತದೆ. ಪ್ರತಿ ಶಾಲೆಯಿಂದ ಒಬ್ಬ ಶಿಕ್ಷಕ ಮತ್ತು ಶಿಕ್ಷಕಿಯನ್ನು ಆರಿಸಿ, ಅವರಿಗೆ ಈ ಶಿಬಿರದಲ್ಲಿ ತರಬೇತಿ ನೀಡಲಾಗುತ್ತದೆ. ಬಳ್ಳಾರಿಯಲ್ಲಿ ಈಗಾಗಲೇ ಇಂತಹ ಒಂದು ತರಬೇತಿ ಶಿಬಿರ ಮುಕ್ತಾಯವಾಗಿದ್ದು, ೩೦೦ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಈ ಶಿಬಿರದಲ್ಲಿ ಭಾಗವಹಿಸಿದ ಶಿಕ್ಷಕರಲ್ಲೇ ಅನೇಕರು ಶಾಲಾ ಮಕ್ಕಳಿಗೆ ಲೈಂಗಿಕ ಶಿಕ್ಷಣ

ಕೊಡುವುದರ ವಿರುದ್ಧ ಮಾ. ಪತ್ರಿಕೆಗಳು ಸರ್ಕಾರವನ್ನು ಮತ್ತು ಶಿಕ್ಷಣ ಇಲಾಖೆಯನ್ನು ಕಂಗೆಡಿಸಿವೆ.

ಶಿಕ್ಷಕರಿಗೆ ತರಬೇತಿ ನೀಡಲಾಗುವ ಶಿಬಿರದಲ್ಲಿ ಮುಖ್ಯವಾಗಿ ಶಿಸ್ತು, ಪೌಷ್ಠಿಕತೆ, ಆರೋಗ್ಯ ಪಾಲನೆ, ಸಂಬಂಧಗಳು, ಲೈಂಗಿಕತೆ–ದೇಹ ಮತ್ತು ಮನಸ್ಸಿನ ಅರಿವು ಸಾಮಾಜಿಕ ಹೊಣೆಗಾರಿಕೆ ಮುಂತಾದವುಗಳನ್ನು ಪ್ರಥಮ ಹಂತದಲ್ಲಿ ಬೋಧಿಸಲಾಗುತ್ತದೆ. ಈ ಹಂತದಲ್ಲಿ ಲೈಂಗಿಕ ಪ್ರಕ್ರಿಯೆಗಳನ್ನು ಕುರಿತಂತೆ ಋತುಸ್ರಾವ, ದೇಹದ ಅಂಗಾಂಗಗಳ ಕ್ರಿಯೆಗಳು, ಸ್ವಪ್ನ ಸ್ಖಲನ, ಹಸ್ತ ಮೈಥುನ ಮುಂತಾದ ವಿಷಯಗಳ ಬಗ್ಗೆ ಉಲ್ಲೇಖವಿದೆ. ಮುಂದಿನ ಹಂತದಲ್ಲಿ ಲೈಂಗಿಕ ಸಂಪರ್ಕ, ಇದರಿಂದ ಹರಡುವ ಕಾಯಿಲೆಗಳು, ಲೈಂಗಿಕ ಶೋಷಣೆಗಳ ಬಗ್ಗೆ ಹೇಳಲಾಗಿದೆ. ಮೂರನೆಯ ಹಂತದಲ್ಲಿ ಲೈಂಗಿಕ ಕ್ರಿಯೆ, ಗರ್ಭ ಮತ್ತು ಗರ್ಭಧಾರಣೆ, ತಪ್ಪು ತಿಳುವಳಿಕೆಗಳು, ಗರ್ಭ ನಿರೋಧಕಗಳ ಬಗ್ಗೆ ಹೇಳಲಾಗಿದೆ. ಈ ಮೂರು ಹಂತಗಳನ್ನು ಎಂಟನೆ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಹಂತ ಹಂತವಾಗಿ ಹೇಳಿಕೊಡುವುದು ಶಿಕ್ಷಣ ಇಲಾಖೆಯ ಮೂಲ ಉದ್ದೇಶವಾಗಿದೆ. ಆದರೆ ಈಗ ಸಿದ್ಧಪಡಿಸಿರುವ ಪುಸ್ತಕಗಳಾಗಲೀ, ಆಕರ ಕೃತಿಗಳಾಗಲೀ, ಶಿಕ್ಷಕರ ತರಬೇತಿಗೇ ಹೊರತು ಮಕ್ಕಳಿಗೆ ಪಾಠ ಹೇಳಲು ಅಲ್ಲ ಎಂದು ಶಿಕ್ಷಣ ಇಲಾಖೆ ಸ್ಪಷ್ಟ ಪಡಿಸಿದೆ. ಈ ಪುಸ್ತಕಗಳಲ್ಲಿರುವುದನ್ನು ಅಧ್ಯಯನ ಮಾಡಿ, ಮಕ್ಕಳಿಗೆ ಯಾವ ರೀತಿಯಲ್ಲಿ ಪಾಠ ಮಾಡಬೇಕೆಂದು ನಿರ್ಧರಿಸುವುದು ಶಿಕ್ಷಕರ, ಶಿಕ್ಷಣ ಇಲಾಖೆಯ ಹೊಣೆಗಾರಿಕೆಯಾಗಿದೆ.

ದುರದೃಷ್ಟವಶಾತ್ ಶಿಕ್ಷಕ ಬಣದಿಂದಲೇ ಪ್ರತಿರೋಧ ವ್ಯಕ್ತವಾಗಿರುವುದು ಸರ್ಕಾರವನ್ನು ಪೇಚಿಗೆ ಸಿಲುಕಿಸಿದೆ. ಸಂಪ್ರದಾಯವಾದಿ ಪಕ್ಷವಾದ ಭಾ.ಜ.ಪ.ದ ಮಂತ್ರಿಗಳಿಗೆ, ಇಡೀ ಯೋಜನೆಯನ್ನೇ ರದ್ದು ಪಡಿಸಲು ಈ ಕುಂಟುನೆಪ ಸಾಕಾಯಿತು. ಬಹುರಾಷ್ಟ್ರೀಯ ಕಂಪನಿಗಳು, ಏಡ್ಸ್ ನಿಯಂತ್ರಣ ಸಂಸ್ಥೆಗಳು ಕಾಂಡೋಮ್‌ಗಳ ಮಾರಟಕ್ಕಾಗಿ ಈ ಯೋಜನೆಯನ್ನು ರೂಪಿಸಿವೆ. ಎಂಬ ಆರೋಪ ಕೇಳಿ ಬರುತ್ತಿದೆ. ಈ ಯೋಜನೆಯ ಹಿಂದೆ ಕೆಲವು ಧನಗಾಹಿ ಸ್ವಯಂ ಸೇವಾ ಸಂಸ್ಥೆಗಳ (NGO) ಕೈವಾಡವೇ ಇದ್ದಲ್ಲಿ ಅದನ್ನು ವಿರೋಧಿಸುವಲ್ಲಿ ಅರ್ಥವಿದೆ. ಆದರೆ ಆಂಗ್ಲ ಭಾಷೆಯಲ್ಲಿ "Don't tthrow out the Baby with the Bath-water" ಎಂಬ ಗಾದೆ ಮಾತಿದೆ. ಈ ವಿಷಯದಲ್ಲಿ ಹಾಗಾಗದಿದ್ದರೆ ಒಳಿತು. ಯೋಜನೆಯಲ್ಲಿ ಕೆಲವು ಲೋಪದೋಷಗಳಿವೆ ಎಂದ ಮಾತ್ರಕ್ಕೆ ಇಡೀ ಯೋಜನೆಯನ್ನೇ ರದ್ದು ಪಡಿಸುವದು ತಪ್ಪಾದೀತು.

ಈ ದೃಷ್ಟಿಕೋನದಿಂದ ನೋಡಿದಾಗ ನಮ್ಮ ಅಂತರ್ಮುಖೀ ಸಮಾಜದಲ್ಲಿ ಯುವ ಜನತೆಗೆ ಲೈಂಗಿಕ ಶಿಕ್ಷಣದ ಅವಶ್ಯಕತೆ ಇದೆ. ಕೇಂದ್ರೀಯ ಶಾಲೆಗಳಲ್ಲಿ NCERT ಪಠ್ಯವನ್ನು ಓದುವ ಮಕ್ಕಳಿಗೆ ಈ ತಿಳುವಳಿಕೆ ನೀಡಬಹುದಾದರೆ ರಾಜ್ಯ ಪಠ್ಯ ಕ್ರಮದಲ್ಲಿ ಏಕೆ ನೀಡಬಾರದು ಎಂಬ ಪ್ರಶ್ನೆ ಏಳುತ್ತದೆ. ಲೈಂಗಿಕತೆಗೂ, ಅಶ್ಲೀಲತೆಗೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಗ್ರಹಿಸದೇ ಹೋದಲ್ಲಿ ನಮ್ಮವಾದ ವಿವಾದಗಳು ಹಾದಿ ತಪ್ಪುವ ಸಾಧ್ಯತೆಗಳೇ ಹೆಚ್ಚು. ಪ್ರಸ್ತುತ ಕೇಳಿ ಬರುತ್ತಿರುವ ಪ್ರತಿಭಟನೆಗಳ ಧೋರಣೆಯೂ ಇದೇ ಆಗಿದೆ. ಕೆಲವು ಸಮೀಕ್ಷೆಗಳ ಪ್ರಕಾರ ಭಾರತದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಹರೆಯದ ಹೆಣ್ಣು ಮಕ್ಕಳು ಅತ್ಯಾಚಾರಕ್ಕೀಡಾಗುತ್ತಿದ್ದಾರೆ. ಶೇ. ೫೪.೨ರಷ್ಟು ಹೆಣ್ಣು ಮಕ್ಕಳು ಲೈಂಗಿಕ ಆಕ್ರಮಣಕ್ಕೀಡಾಗುತ್ತಿದ್ದಾರೆ. ಈ ಅತ್ಯಾಚಾರ, ದೌರ್ಜನ್ಯ ಎಸಗುವವರಲ್ಲಿ ಶೇ ರಷ್ಟು ಹತ್ತಿರದ ಸಂಬಂಧಿಗಳೇ ಆಗಿರುವುದೂ ಸಮೀಕ್ಷೆಯಲ್ಲಿ ಕಂಡು ಬಂದಿದೆ.

ಭಾರತೀಯ ಅಂತರ್ಮುಖೀ ಸಮಾಜದಲ್ಲಿ ಹೆಣ್ಣು ಗಂಡುಗಳ ಸ್ಪರ್ಶವೇ ಒಂದು ರೀತಿಯಲ್ಲಿ ನಿಷಿದ್ಧವಾಗಿದೆ. ಆಲಿಂಗನ ಎನ್ನುವುದು ಒಂದು ನೈತಿಕ ಅಪರಾಧವೇನೋ ಎನ್ನುವಂತೆ ನೋಡಲಾಗುತ್ತದೆ. ಅವಿಭಕ್ತ ಕುಟುಂಬಗಳಲ್ಲೂ ಈ ಪ್ರವೃತ್ತಿಯನ್ನು ಕಾಣಬಹುದು. ಆಧುನಿಕ ಸಮಾಜದಲ್ಲಿ ಈ ನಿಟ್ಟಿನಲ್ಲಿ ಕೊಂಚ ಸುಧಾರಣೆ ಕಾಣಬಹುದಾದರೂ, ಇಂದಿಗೂ ಸೋದರ ಸಂಬಂಧಗಳಲ್ಲೂ ಸಹ ಹೆಣ್ಣು–ಗಂಡುಗಳ ಸ್ಪರ್ಶವನ್ನು ವಿರೋಧಿಸಲಾಗುತ್ತದೆ. ತನ್ನ ಸ್ನೇಹಿತರೊಡನೆಯೋ, ಸಂಬಂಧಿಯೊಡನೆಯೋ ಕೈ ಕುಲುಕುವುದೇ ಒಂದು ಅಪರಾಧವಾಗಿ ಬಿಡುತ್ತದೆ. ಉನ್ನತ ಮೇಲ್ವರ್ಗದ ಸಮಾಜದಲ್ಲಿ ಈ ತಾರತಮ್ಯಗಳು ಇಲ್ಲವಾದರೂ, ಬಹುತೇಕ ಬಾರತೀಯ ಸಮಾಜದಲ್ಲಿ ಈ ಪ್ರವೃತ್ತಿ ಕಂಡುಬರುತ್ತದೆ.

ಭಾರತೀಯ ಅಂತರ್ಮುಖೀ ಸಮಾಜದಲ್ಲಿ ಹೆಣ್ಣು ಗಂಡುಗಳ ಸ್ಪರ್ಶವೇ ಒಂದು ರೀತಿಯಲ್ಲಿ ನಿಷಿದ್ಧವಾಗಿದೆ. ಆಲಿಂಗನ ಎನ್ನುವುದು ಒಂದು ನೈತಿಕ ಅಪರಾಧವೇನೋ ಎನ್ನುವಂತೆ ನೋಡಲಾಗುತ್ತದೆ. ಅವಿಭಕ್ತ ಕುಟುಂಬಗಳಲ್ಲೂ ಈ ಪ್ರವೃತ್ತಿಯನ್ನು ಕಾಣಬಹುದು. ಆಧುನಿಕ ಸಮಾಜದಲ್ಲಿ ಈ ನಿಟ್ಟಿನಲ್ಲಿ ಕೊಂಚ ಸುಧಾರಣೆ ಕಾಣಬಹುದಾದರೂ, ಇಂದಿಗೂ ಸೋದರ ಸಂಬಂಧಗಳಲ್ಲೂ ಸಹ ಹೆಣ್ಣು–ಗಂಡುಗಳ ಸ್ಪರ್ಶವನ್ನು ವಿರೋಧಿಸಲಾಗುತ್ತದೆ. ತನ್ನ ಸ್ನೇಹಿತರೊಡನೆಯೋ, ಸಂಬಂಧಿಯೊಡನೆಯೋ ಕೈ ಕುಲುಕುವುದೇ ಒಂದು ಅಪರಾಧವಾಗಿ ಬಿಡುತ್ತದೆ. ಉನ್ನತ ಮೇಲ್ವರ್ಗದ ಸಮಾಜದಲ್ಲಿ ಈ ತಾರತಮ್ಯಗಳು ಇಲ್ಲವಾದರೂ, ಬಹುತೇಕ ಭಾರತೀಯ ಸಮಾಜದಲ್ಲಿ ಈ ಪ್ರವೃತ್ತಿ ಕಂಡುಬರುತ್ತದೆ. ಈ ಮಡಿವಂತಿಕೆಯೇ ನಮ್ಮ ಸಮಾಜದ ಹೆಣ್ಣು ಮಕ್ಕಳನ್ನು ಆಧುನಿಕತೆಯಿಂದ ದೂರವಿರಿಸಿದೆ. ಇದರ ನೇರ ಪರಿಣಾಮವನ್ನು ನಾವು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. Socialisation ಎಂಬ ಪ್ರವೃತ್ತಿ ನಗರ ಹಾಗೂ ಪಟ್ಟಣಗಳಲ್ಲಿ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ, ಶಾಲಾ ಕಾಲೇಜುಗಳಲ್ಲಿ ಯುವಕ ಯುವತಿಯರು ಒಟ್ಟಾಗಿಯೇ ಆಟವಾಡುವುದು, ಚಾರಣಗಳಿಗೆ ಹೋಗುವುದು, ಪ್ರವಾಸ ಹೋಗುವುದು ಆಧುನಿಕ ಮಧ್ಯಮ ವರ್ಗದಲ್ಲಿ ಸರ್ವೇ ಸಾಮಾನ್ಯವಾಗಿದೆ.

ಇಂತಹ ಸಂದರ್ಭಗಳಲ್ಲಿ ಹೆಣ್ಣು ಮಕ್ಕಳಿಗಾಗಲೀ, ಗಂಡು ಮಕ್ಕಳಿಗಾಗಲೀ, ಪರಸ್ಪರ ಸ್ಪರ್ಶವು ಒಂದು ರೀತಿಯ ವಿಲಕ್ಷಣ ಭ್ರಮೆ (Fantacy) ಉಂಟು ಮಾಡುವುದು ಸಹಜ ಪ್ರಕ್ರಿಯೆಯಾಗಿರುತ್ತದೆ. ಇದುವರೆಗೂ ತಮ್ಮ ಅನುಭವಕ್ಕೆ ಬಾರದ ಹೊಸ ಸನ್ನಿವೇಶಗಳಲ್ಲಿ ಅವರ ಭಾವನೆಗಳಿಗೆ ಈ ವಿಲಕ್ಷಣ ಭ್ರಮೆ ಇಂಬು ನೀಡುತ್ತದೆ. ಈ ಭ್ರಮೆಗಳು ಕುತೂಹಲಗಳಿಗೆ ಎಡೆ ಮಾಡಿಕೊಡುತ್ತವೆ. ತಮ್ಮ ಇಂದ್ರಿಯಗಳ ಮತ್ತು ಅಂಗಾಂಗಗಳ ಹೊಸ ಅನುಭವಗಳಿಗೆ ಕಾರಣವನ್ನು ತಿಳಿಯುವುದೂ ಅವರಿಗೆ ದುಸ್ಸಾಧ್ಯವಾಗಿರುತ್ತದೆ. ಮನುಜ ಸಹಜವಾದ ಲೈಂಗಿಕ ಪ್ರಚೋದನೆ ಅಥವಾ ಉದ್ರೇಕಗಳು ಈ ಯುವಕ/ಯುವತಿಯರ ಮನಸ್ಸನ್ನು ಕೆಂಗೆಡಿಸುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲೇ ಹುಟ್ಟಿ ಬೆಳೆದಿರುವ ಯುವಕರು ಹೆಣ್ಣನ್ನು ಒಂದು ಭೋಗದ ವಸ್ತುವನ್ನಾಗಿಯೇ ನೋಡುವುದು ನಮ್ಮ ಸಮಾಜದಲ್ಲಿ ಕಂಡುಬರುತ್ತಿರುವ ಒಂದು ಪಿಡುಗು.

ಚಲನ ಚಿತ್ರಗಳಲ್ಲಿ, ಕಿರುತೆರೆ ಧಾರಾವಾಹಿಗಳಲ್ಲಿ, ಕೆಲವು ಪತ್ರಿಕಾ ಮಾಧ್ಯಮಗಳಲ್ಲಿ ಈ ವ್ಯವಸ್ಥೆ ಮತ್ತು ಮನೋಭಾವವನ್ನು ಗಟ್ಟಿಗೊಳಿಸುವ ಪ್ರಯತ್ನಗಳೂ ನಿರಂತರವಾಗಿ ನಡೆಯುತ್ತಲೇ ಇದೆ. ಹೆಣ್ಣಿನ ಅಂಗಾಂಗ 'ಳಿರುವುದೇ ಪುರುಷರ ಕಣ್ಣುಗಳನ್ನು ತಣಿಸಲು ಎಂಬಂತೆ ಈ ಮಾಧ್ಯಮಗಳಲ್ಲಿ ಬಿಂಬಿಸಲಾಗುತ್ತಿದೆ. ಅದಕ್ಕೇ ಅಲ್ಲವೇ, ಚಲನ ಚಿತ್ರಗಳಲ್ಲಿ ಶಾಸ್ತ್ರೀಯ ನೃತ್ಯಗಳನ್ನು ಹೀರೋಗಳು ಮಾಡುತ್ತಾರೆ, ಆದರೆ ಹಿಂದಿನ ಕಾಲದ ಕ್ಯಾಬರೆ, ಇತ್ತೀಚಿನ ಐಟಂ ಸಾಂಗುಗಳು ಮಾತ್ರ ಹೆಣ್ಣುಗಳ ಪಾಲಾಗಿರುತ್ತದೆ. ಗೆದ್ದು ಬಂದ ಹೀರೋವನ್ನು ಸ್ವಾಗತಿಸಲು, ಸೋತು ಸುಣ್ಣವಾದ ಖಳನಾಯಕನ ಮನತಣಿಸಲು, ಎರಡೂ ಕಡೆ ಹೆಣ್ಣು ಒಂದು ಭೋಗದ ವಸ್ತುವಾಗುತ್ತಾಳೆ. ಇದೇ ಸನ್ನಿವೇಶವನ್ನು ನಾವು ಬಾಹ್ಯ ಸಮಾಜದಲ್ಲೂ ಕಾಣಬಹುದಾಗಿದೆ.

ಈ ಹಿನ್ನೆಲೆಯಿಂದಲೇ ನಾವು ಲೈಂಗಿಕ ಶಿಕ್ಷಣದ ಬೇಕು ಬೇಡಗಳನ್ನು ತೀರ್ಮಾನಿಸಬೇಕಾಗುತ್ತದೆ. ಕನಿಷ್ಠ ಯುವಜನತೆಗೆ ತಮ್ಮ ಅಂಗಾಂಗಗಳ ಸೂಕ್ಷ್ಮ ಪರಿಚಯ, ಅವುಗಳಿಂದಾಗುವ ಉಪಯೋಗಗಳು, ಅಂಗಾಂಗಳನ್ನು ರಕ್ಷಿಸಿಕೊಳ್ಳುವ ಅವಶ್ಯಕತೆ, ಸೂಕ್ತ ಎಚ್ಚರಿಕೆ ವಹಿಸದಿದ್ದಲ್ಲಿ ಉಂಟಾಗಬಹುದಾದ ಅಪಾಯಗಳು, ಲೈಂಗಿಕ ಕಾಮನೆಗಳು ಅರಳುವ ವಯಸ್ಸಿನಲ್ಲಿ, ಈ ಪ್ರಕೃತಿ ಸಹಜ ಬೆಳವಣಿಗೆಗಳ ಸೂಕ್ಷ್ಮತೆಗಳು, ಇವೆಲ್ಲವನ್ನೂ ಮಕ್ಕಳಿಗೆ ಸರಿಯಾದ, ವೈಜ್ಞಾನಿಕವಾದ ರೀತಿಯಲ್ಲಿ ಹೇಳುವುದು ಅಪರಾಧವೇನೂ ಅಲ್ಲ. ಲೈಂಗಿಕ ಮತ್ತು ಗುಹ್ಯ ರೋಗಗಳ ಬಗ್ಗೆ ನಮ್ಮ ಜನತೆಯಲ್ಲಿ ಸಾಕಷ್ಟು ಮೂಢ ನಂಬಿಕೆಗಳಿವೆ. ಈ ತಪ್ಪು ಕಲ್ಪನೆಗಳಿಗೆ ಯುವ ಜನಾಂಗ ಬಲಿಯಾಗುತ್ತಿರುವುದೂ ಸತ್ಯವೇ. ಇಂತಹ ಸನ್ನಿವೇಶದಲ್ಲಿ ಲೈಂಗಿಕ ಸುರಕ್ಷತೆಯ ಬಗ್ಗೆ ಸೂಕ್ತ ರೀತಿಯಲ್ಲಿ ಬೋಧನೆ ಮಾಡುವುದು ಅವಶ್ಯವಾಗಿದೆ. ಅನೇಕ ಪ್ರಕರಣಗಳಲ್ಲಿ ಇನ್ನೂ ಹರೆಯಕ್ಕೆ ಬಾರದ, ಹದಿನೈದು ವರ್ಷಕ್ಕೂ ಕೆಳಗಿನ ಹುಡುಗಿಯರು ತಮ್ಮ ಸಂಬಂಧಿಗಳಿಂದಲೇ ಅತ್ಯಾಚಾರಕ್ಕೊಳಗಾಗಿರುತ್ತಾರೆ. ಅಣ್ಣಂದಿರು, ಚಿಕ್ಕಪ್ಪ, ದೊಡ್ಡಪ್ಪ, ಸೋದರಮಾವ, ನೆರೆಮನೆಯ ಅಂಕಲ್ ಹೀಗೆ ಕುಟುಂಬಕ್ಕೆ ಹತ್ತಿರವಾದವರಿಂದಲೇ ಹೆಣ್ಣು ಮಕ್ಕಳು ಅತ್ಯಾಚಾರಕ್ಕೊಳಗಾಗಿದ್ದಾರೆ. ಆದರೆ ತಮ್ಮ ದೇಹದಲ್ಲಿನ ಅಂಗಾಂಗಗಳ ಪ್ರಕ್ರಿಯೆಯನ್ನಾಗಲೀ, ಅವುಗಳ ಉಪಯುಕ್ತತೆಯನ್ನಾಗಲೀ ಅರಿಯದ ಈ ಅಮಾಯಕ ಹೆಣ್ಣು ಮಕ್ಕಳು, ತಮ್ಮ ಮೇಲೆ ನಡೆದ

ದೌರ್ಜನ್ಯವನ್ನು ಗ್ರಹಿಸುವ ವೇಳೆಗೆ ಮದುವೆಯ ವಯಸ್ಸಿಗೆ ಬಂದಿರುತ್ತಾರೆ. ತಮ್ಮ ಎಳೆ ವಯಸ್ಸಿನಲ್ಲಿ ನಡೆದಿರುವ ಈ ಘಟನೆಗಳನ್ನು ಒತ್ತಾಯದಿಂದ, ಭಯದಿಂದ ಹಿರಿಯರಿಗೆ ಹೇಳದಿರುವ ಸಂದರ್ಭಗಳೇ ಹೆಚ್ಚು. ಈ ರೀತಿಯ ಅನೇಕ ಪ್ರಕರಣಗಳು ಬೆಳಕಿಗೆ ಬಂದಿದ್ದು ಇಂದಿಗೂ ನಡೆಯುತ್ತಲೇ ಇವೆ. ಒಂದು ವೇಳೆ ಈ ಹೆಣ್ಣು ಮಕ್ಕಳಿಗೆ ತಮ್ಮ ದೇಹದ ಸಂರಚನೆಯ ಅರಿವಿದ್ದಿದ್ದಲ್ಲಿ, ಈ ರೀತಿಯ ದೌರ್ಜನ್ಯಗಳು ನಡೆಯುತ್ತಿರಲಿಲ್ಲ ಅಲ್ಲವೇ.?

ಲೈಂಗಿಕ ಶಿಕ್ಷಣ ನೀಡುವುದರಿಂದ ಯುವ ಜನತೆಯಲ್ಲಿ ಮುಕ್ತ ಕಾಮಕ್ಕೆ ಅವಕಾಶ ನೀಡಿದಂತಾಗುತ್ತದೆ, ಅಮೆರಿಕದಲ್ಲಿ ಆದಂತೆ ಭಾರತದಲ್ಲಿಯೂ ಸಂಸ್ಕೃತಿಯ ನಾಸವಾಗುತ್ತದೆ, ಇದರಿಂದ ಮಕ್ಕಳು ಶಾಲೆ ಬಿಡುವ ಸಾಧ್ಯತೆಗಳು ಹೆಚ್ಚಾಗುತ್ತವೆ, ಆತ್ಮಹತ್ಯೆಗಳು ಹೆಚ್ಚಾಗುತ್ತವೆ, ಮಾನಸಿಕ ಸಮಸ್ಯೆಗಳು ಉಂಟಾಗುತ್ತವೆ, ನಮ್ಮಲ್ಲೂ ಅಮೆರಿಕಾದಂತೆ ಸ್ವೇಚ್ಛಾಚಾರದಿಂದ ಸಾಮಾಜಿಕ ಅರಾಜಕತೆ ಉಂಟಾಗುತ್ತದೆ, ಎಂದೆಲ್ಲಾ ಅಭಿಪ್ರಾಯಗಳು ಕೇಳಿಬರುತ್ತಿವೆ. ಲೈಂಗಿಕ ಶಿಕ್ಷಣ ನೀತಿಯನ್ನು ವಿರೋಧಿಸುವವರೂ ಇವನ್ನು ಅನುಮೋದಿಸುತ್ತಾರೆ. ಆದರೆ ಈ ರೀತಿಯ ವಾದಸರಣಿಯ ಹಿಂದೆ ಒಂದು ರೀತಿಯ ಆವರಣ ಪ್ರಕ್ರಿಯೆ ಕಂಡುಬರುತ್ತದೆ. ನಮ್ಮ ಸಮಾಜದಲ್ಲಿ ಎಲ್ಲವೂ ಚೆನ್ನಾಗಿದೆ, ಸ್ವೇಚ್ಛಾಚಾರವಿಲ್ಲ ಎಂದು ಎದೆ ತಟ್ಟಿ ಹೇಳುವ ಪರಿಸ್ಥಿತಿಯಲ್ಲಿ ನಾವಿದ್ದೇವೆಯೇ ಎಂಬುದನ್ನು ಗಮನಿಸಬೇಕು. ಒಂದು ಸಮೀಕ್ಷೆಯ ಪ್ರಕಾರ ಅಂತರ್ಮುಖೀ ಸಮಾಜಗಳಲ್ಲಿ ಲೈಂಗಿಕ ಅಪರಾಧಗಳು, ದೌರ್ಜನ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ಕೇರಳದಲ್ಲಿ ನಡೆದ ಒಂದು ಸಮೀಕ್ಷೆಯ ಪ್ರಕಾರ ಶೇ. ೬೨ ರಷ್ಟು ಹುಡುಗಿಯರು ತಮ್ಮ ಬಾಲ್ಯಾವಸ್ಥೆಯಲ್ಲೇ ಕನ್ಯತ್ವವನ್ನು ಕಳೆದುಕೊಂಡಿರುತ್ತಾರೆ. ಬೇರೆ ರಾಜ್ಯಗಳಲ್ಲೂ ಬಿನ್ನವಾದ ಪರಿಸ್ಥಿತಿಯೇನಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ಲೈಂಗಿಕ ಶಿಕ್ಷಣ ನೀಡಲಾಗುತ್ತದೆಯೇ ಹೊರತು, ಮುಕ್ತ ಕಾಮದ ಸ್ವಾತಂತ್ರ್ಯ ಇರುವುದಿಲ್ಲ. ನಮ್ಮಲ್ಲೂ ಈ ಸ್ವಾತಂತ್ರ್ಯವಿಲ್ಲ, ಆದಾಗ್ಯೂ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ದೌರ್ಜನ್ಯಗಳು, ಹೆಚ್ಚಾಗುತ್ತಿರುವುದೇಕೆ? ತಮಗಿಷ್ಟವಿಲ್ಲದವರೊಡನೆ ಲೈಂಗಿಕ ಸಂಬಂಧ ಹೊಂದಿರುವ ಪ್ರಕರಣಗಳೂ ಭಾರತ, ಪಾಕಿಸ್ತಾನ, ಬಾಂಗ್ಲಾದೇಶದಂತಹ ಮಡಿವಂತ ರಾಷ್ಟ್ರಗಳಲ್ಲೇ ಹೆಚ್ಚಾಗಿರುವುದೇಕೆ? ಸತ್ಯಾಂಶವೆಂದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯುವಕ ಯುವತಿಯರಿಗೆ ತಾವು ಮಾಡುತ್ತಿರುವ ಕೆಲಸ, ಕೈಗೊಳ್ಳುತ್ತಿರುವ ನಿರ್ಧಾರದ ಬಗ್ಗೆ ವಿಶ್ವಾಸವಿರುತ್ತದೆ. ಪಾಶ್ಚಾತ್ಯವೆಂದರೆ ಕೇವಲ ಅಮೆರಿಕಾ ಮಾತ್ರ ಎಂದು ನಾವು ಪರಿಗಣಿಸಬೇಕಿಲ್ಲ. ಫ್ರಾನ್ಸ್, ಜರ್ಮನಿ ಮುಂತಾದ ಐರೋಪ್ಯ ರಾಷ್ಟ್ರಗಳಲ್ಲೂ ಲೈಂಗಿಕ ಶಿಕ್ಷಣ ಬೋಧಿಸಲಾಗುತ್ತದೆ. ಅಮೆರಿಕಾ ಒಂದು ನಿರ್ದಿಷ್ಟ ಸಂಸ್ಕೃತಿ ಇಲ್ಲದ ರಾಷ್ಟ್ರವಾದ್ದರಿಂದ ಅಲ್ಲಿನ ಜನರ ನಡುವಳಿಕೆಗಳಿಗೆ ಯಾವುದೇ ಸಾಂಸ್ಕೃತಿಕ ನಿಬಂಧನೆಗಳಾಗಲೀ, ನೈತಿಕತೆಯಾಗಲೀ ಇರುವುದಿಲ್ಲ. ಆದರೆ ಇತರ ರಾಷ್ಟ್ರಗಳಲ್ಲಿ ಪರಿಸ್ಥಿತಿ ಭಿನ್ನವಾಗಿರುವುದನ್ನೂ ನಾವು ಗಮನಿಸಬೇಕಲ್ಲವೇ? ಇಷ್ಟಕ್ಕೂ ಆಧುನಿಕತೆಯ ಹರಿಕಾರರಲ್ಲಿ ಅಮೆರಿಕನ್ನರ ಹೆಸರು ಕೇಳಿ ಬರುವುದೇ ಇಲ್ಲ. ಇಂದಿನ ಆಧುನಿಕ ಸಮಾಜದ ಅಭಿವೃದ್ಧಿಗೆ ಕಾಣಿಕೆ ನೀಡಿರುವವರು ಯೂರೋಪ್, ಗ್ರೀಕ್, ಮತ್ತಿತರ ರಾಷ್ಟ್ರಗಳಲ್ಲವೇ. ಹೀಗಿರುವಾಗ ಅಮೆರಿಕಾದ ಉದಹರಣೆಯನ್ನೇ ಮುಂದೊಡ್ಡುವುದು ಒಂದು ರೀತಿಯಲ್ಲಿ ಆವರಣ ಪ್ರಕ್ರಿಯೆಯಾಗುತ್ತದೆ.

ಭಾರತೀಯ ಹದಿ ಹರೆಯದ ಯುವಜನತೆಗೆ ಲೈಂಗಿಕ ಶಿಕ್ಷಣದ ಅವಶ್ಯಕತೆ ಇದೆ ಎಂಬುದು ನಿರ್ವಿವಾದ. ಈ ಮೊದಲೇ ಹೇಳಿದಂತೆ ಲೈಂಗಿಕತೆ ಅಥವಾ ಲೈಂಗಿಕ ಶಿಕ್ಷಣ ಎಂದರೆ ಅಶ್ಲೀಲತೆಯಲ್ಲ. ಅಶ್ಲೀಲತೆಯನ್ನು ವಿರೋಧಿಸುವುದು ಯಾವುದೇ ಸಮಾಜದ ಕರ್ತವ್ಯವೂ ಹೌದು. ಇತ್ತೀಚೆಗೆ ನಡೆದ ಶಿಲ್ಪಾಶೆಟ್ಟಿ–ರಿಚರ್ಡ್‌ಗೆರೆ ಪ್ರಕರಣವಾಗಲೀ, ಸಿನಿಮಾಗಳಲ್ಲಿನ ಐಟಂ ನೃತ್ಯಗಳಾಗಲೀ, ನಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದಾಗುತ್ತಿರುವ ನಂಗಾ ನಾಚ್‌ಗಳಾಗಲೀ ಒಪ್ಪುವಂತಹುದಲ್ಲ. ಆದರೆ ಯುವ ಜನತೆಗೆ ಲೈಂಗಿಕ ಶಿಕ್ಷಣ ನೀಡುವುದರಿಂದ ಸಮಾಜ ಹಾಳಾಗುತ್ತದೆ ಎಂದು ಹೇಳವುದು ಬಾಲಿಶವಾಗುತ್ತದೆ. ಜಾತಿ, ಧರ್ಮ, ಮತ, ಪಂಗಡಗಳಲ್ಲಿ ಸಿಲುಕಿ ಹೆಚ್ಚು ಹೆಚ್ಚು ಅಂತರ್ಮುಖಿಗಳಾಗುತ್ತಿರುವ ಭಾರತೀಯ ಜನತೆಗೆ ಇಂದು ಒಂದು ರೀತಿಯ ಮುಕ್ತ ಸಮಾಜದ ಅವಶ್ಯಕತೆ ಇದೆ.

ಸಾಮಾಜಿಕ ಸಭ್ಯತೆ, ನೈತಿಕ ಬದ್ಧತೆಗಳನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವಂತಹ ಮುಕ್ತ ಸಮಾಜದ ನಿರ್ಮಾಣ ಇಂದಿನ ಅವಶ್ಯಕತೆಯಾಗಿದೆ. ಈ ನಿಟ್ಟಿನಲ್ಲಿ ಈ ಪ್ರಸ್ತುತ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಿಂದ ಮುಕ್ತರಾಗಲು, ಅಂತರ್ಜಾತಿ, ಅಂತರ್ ಧರ್ಮೀಯ ವಿವಾಹಗಳು ಉಪಯುಕ್ತವಾಗುತ್ತವೆ. ಪ್ರೇಮವಿವಾಹಗಳು ಈ ನಿಟ್ಟಿನಲ್ಲಿ ಸಹಕಾರಿಯಾಗಿರುತ್ತವೆ. ಲೈಂಗಿಕ ಶಿಕ್ಷಣದಿಂದ ಯುವ ಜನತೆಯಲ್ಲಿ ಮೂಡುವ ಆತ್ಮ ವಿಶ್ವಾಸ ಮತ್ತು ನಂಬಿಕೆಗಳು, ಪ್ರೇಮವಿವಾಹಗಳನ್ನು ಹೆಚ್ಚು ಸ್ವೀಕಾರಾರ್ಹವನ್ನಾಗಿ ಮಾಡುತ್ತವೆ. ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಅಂಶಗಳು ಸಾಬೀತಾಗಿವೆ.

ಹಾಗಾಗಿ ಮಕ್ಕಳಿಗೆ ಶಾಲಾ ಹಂತದಲ್ಲಿ ಸೂಕ್ತವಾದ ವೈಜ್ಞಾನಿಕ ರೀತಿಯಲ್ಲಿ ಲೈಂಗಿಕ ಶಿಕ್ಷಣ ನೀಡುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಅನಿವಾರ್ಯವೇ ಆಗಿದೆ. ಆದರೆ ಯಾವ ಹಂತದಲ್ಲಿ, ಯಾವ ಪ್ರಮಾಣದ, ಯಾವ ಮಟ್ಟದ ಶಿಕ್ಷಣ ನೀಡಬೇಕೆಂಬುದನ್ನು ನಿರ್ಧರಿಸಲು ಸರ್ಕಾರವು ಒಂದು ತಜ್ಞರ ಸಮಿತಿಯನ್ನು ನೇಮಿಸಿ ಅಂತಿಮ ನಿರ್ಧಾರ ಕೈಗೊಳ್ಳಬೇಕಾಗಿದೆ. □

ಭಾರತೀಯ ಹದಿ ಹರೆಯದ ಯುವಜನತೆಗೆ ಲೈಂಗಿಕ ಶಿಕ್ಷಣದ ಅವಶ್ಯಕತೆ ಇದೆ ಎಂಬುದು ನಿರ್ವಿವಾದ. ಈ ಮೊದಲೇ ಹೇಳಿದಂತೆ ಲೈಂಗಿಕತೆ ಅಥವಾ ಲೈಂಗಿಕ ಶಿಕ್ಷಣ ಎಂದರೆ ಅಶ್ಲೀಲತೆಯಲ್ಲ. ಅಶ್ಲೀಲತೆ ಯನ್ನು ವಿರೋಧಿಸುವುದು ಯಾವುದೇ ಸಮಾಜದ ಕರ್ತವ್ಯವೂ ಹೌದು. ಇತ್ತೀಚೆಗೆ ನಡೆದ ಶಿಲ್ಪಾಶೆಟ್ಟಿ–ರಿಚರ್ಡ್‌ಗೆರೆ ಪ್ರಕರಣವಾಗಲೀ, ಸಿನಿಮಾಗಳಲ್ಲಿನ ಐಟಂ ನೃತ್ಯಗಳಾಗಲೀ, ನಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದಾಗುತ್ತಿರುವ ನಂಗಾನಾಚ್‌ಗಳಾಗಲೀ ಒಪ್ಪುವಂತಹುದಲ್ಲ.



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಮಂಟೇಸ್ವಾಮಿ ನೀಲಗಾರ ಪರಂಪರೆಯ ಆಧ್ಯಾತ್ಮಿಕ ದಂಗೆಯ ಸ್ವರೂಪ

೧೨ನೇ ಶತಮಾನದ ವಚನ ಚಳುವಳಿಯ ಕಾಯಕತತ್ವ ಮತ್ತು ಜಾತಿರಹಿತ ಸಮಾಜ ನಿರ್ಮಾಣದ ಆಶಯಗಳನ್ನು ೧೪-೧೫ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಕೊಡೇಕಲ್ ಬಸವಣ್ಣ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಜನಪದ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಮುಂತಾದ ದೇಸಿ ಸಂತರು ಸಾಧಿಸಿ ತೋರಿಸಿದ್ದಾರೆ. ಶೋಷಣೆಯ ಮೂಲಬೇರುಗಳು ಅಧಿಕಾರ ಮತ್ತು ಸಂಪತ್ತಿನ ಕೇಂದ್ರೀಕರಣವು ರಾಜಕಾರಣವನ್ನು ಪೋಷಿಸುತ್ತದೆ. ಇಂತಹ ಶೋಷಣೆಯ ರಾಜಕಾರಣದ ವಿರುದ್ಧ ಹಾಗೂ ಜಾತೀಯತೆಯ ವಿರುದ್ಧ ಈ ಇಬ್ಬರೂ ನಾಯಕರು ನಡೆಸಿದ ಆಧ್ಯಾತ್ಮಿಕ ದಂಗೆಯ ಕಥನವನ್ನು ನೀಲಗಾರರು ಮತ್ತು ದೇವರ ಗುಡ್ಡರು ಇಂದಿಗೂ ತಮ್ಮ ಸಂಸ್ಕೃತಿ ನಿಷ್ಠವಾದ ಮೌಖಿಕ ಮಹಾಕಥನದ ರೂಪದಲ್ಲಿ ನಿರೂಪಿಸುತ್ತಾ, ಆಚರಣೆಯ ಸ್ವರೂಪದಲ್ಲೂ ಜೀವಂತವಾಗಿಟ್ಟಿದ್ದಾರೆ.

ವಡ್ಡಗೆರೆ ನಾಗರಾಜಯ್ಯ

ಕುಲವನರಸುವರೇಶರಣರಲ್ಲಿ? ಎಂದು ಪ್ರಶ್ನಿಸಿದ ಬಸವಣ್ಣನ ಕಗ್ಗೊಲೆಯೊಂದಿಗೆ ಅವನು ಕಂಡ ಕಾಯಕ ಜೀವಿಗಳ ಕಲ್ಯಾಣವು ಶರಣರ ರಕ್ತಪ್ರವಾಹದಲ್ಲಿ ಮುಳುಗಿ, ೧೨ನೇ ಶತಮಾನದ ವಚನ ಚಳುವಳಿ ವಿಫಲವಾದ ನಂತರ ದಲಿತ ಸಮುದಾಯಗಳು ಮತ್ತಿತರ ಕಾಯಕ ಜೀವಿಗಳು ಅನಾಥವಾಗಿ ದಿಕ್ಕಾಪಾಲಾಗಿ ಓಡಿಹೋದರು ವಚನಕಾರರ ಕೊಲೆಯೊಂದಿಗೆ ಅಪಾರ ಪ್ರಮಾಣದ ವಚನ ಸಾಹಿತ್ಯದ ಹೊತ್ತಿಗೆಗಳನ್ನೂ ನಾಶ ಮಾಡಲಾಯಿತು. ಉಳವಿ, ಶ್ರೀಶೈಲ, ದಕ್ಷಿಣ ಕರ್ನಾಟಕದ ಗುಮ್ಮಳಾಪುರ, ಹರದನಹಳ್ಳಿ, ಸಿದ್ಧಗಂಗೆ, ಯಡೆಯೂರು, ಗುಬ್ಬಿ, ಗೋಸಲ ಮುಂತಾದ ಕಡೆ ಚದುರಿ ಹೋದ ಶರಣರು ವೀರಶೈವ ಕೇಂದ್ರ್ರಗಳನ್ನು ಕಟ್ಟಿಕೊಂಡು ಸಮಾಜದಲ್ಲಿ ಬ್ರಾಹ್ಮಣರ ನಂತರದ ಸ್ಥಾನವನ್ನು ಗಳಿಸಿಕೊಂಡರು.

ವೀರಶೈವಧರ್ಮವು "ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ"ನೆಂದು ದಲಿತರಿಗೆ ಕುಲಶ್ರೇಷ್ಠ ಪದವಿಯನ್ನು ನೀಡಿದ್ದ ಬಸವಣ್ಣನ ಯಾವ ಮಾದರಿಯನ್ನು ಅನುಸರಿಸದೆ, ಕೆಳವರ್ಗದ ಜನರ ಸಂಸ್ಕೃತಿಕ ಶೂನ್ಯಗಳನ್ನು ತುಂಬಿಕೊಡದೆ ಹೋದ ಈ ಸಂದರ್ಭವು ನಂತರದಲ್ಲಿ ತಳಸಮುದಾಯಗಳ ಬದುಕಿನಲ್ಲಿ ತೀವ್ರತರವಾದ ಸಂಸ್ಕೃತಿಕ ಪುನರುಜ್ಜೀವನದ ಹುಟ್ಟುವಳಿಗೆ ಕಾರಣವಾಯಿತು. ತಮ್ಮದೇ ಮಾತೃ ಸಂಸ್ಕೃತಿಗಳಿಗೆ ಹಾಗೂ ತಮ್ಮ ತಮ್ಮ ಹಟ್ಟಿಕೇರಿಗಳಿಗೆ ಹಿಂತಿರುಗಿದ ತಳಸಮುದಾಯಗಳು ತಮ್ಮ ಜನಪದ ಪರಂಪರೆ ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ಮತ್ತಷ್ಟು ತೀವ್ರವಾಗಿ ಪ್ರತಿಪಾದಿಸಲು ತಮ್ಮದೇ ಜನಪದ ಸಾಂಸ್ಕೃತಿಕ ನಾಯಕರನ್ನು ರೂಪಿಸಿಕೊಂಡವು. ಇಂಥ ಸಾಂಸ್ಕೃತಿಕ ಪುನರುಜ್ಜೀವನದ ಭಾಗವಾಗಿ ಪ್ರತಿಯೊಂದು ತಳಸಮುದಾಯವೂ ತನ್ನದೇ ಆದ ಅನನ್ಯ ಜಾನಪದ ಪರಂಪರೆ ಮತ್ತು ಜ್ಞಾನಶಿಸ್ತುಗಳನ್ನು ಮೌಖಿಕ ಮಹಾಕಾವ್ಯಗಳ ಮೂಲಕ ನಿರೂಪಿಸುವ ಸೃಜನ ಶೀಲ ಜಾಣ್ಮೆಯನ್ನು ದಾಖಲಿಸಿರುವುದಕ್ಕೆ ಎತ್ತಪ್ಪ ಜುಂಜಪ್ಪನ ಕಾವ್ಯ, ಹಾಲುಮತ ಕಾವ್ಯ, ಮೈಲಾರಲಿಂಗನ ಕಾವ್ಯ ಮಲೆಮಾದೇಶ್ವರನ ಕಾವ್ಯ, ಮಂಟೇಸ್ವಾಮಿ ಕಾವ್ಯ, ಎಲ್ಲಮ್ಮನಕಾವ್ಯ ಗಾರುಡಿಗಂಗ ಭಾರತ ಇನ್ನೂ ಮುಂತಾದ ಕಾವ್ಯ ಪುರಾಣಗಳು ಇವೊತ್ತಿಗೂ ಶ್ರೇಷ್ಠ ಮಾದರಿಗಳಾಗಿವೆ.

ಬಸವಣ್ಣನ ನಾಯಕತ್ವದಲ್ಲಿ "ಕುಲೇಳು ಹದಿನೆಂಟು ಜಾತಿಗಳು ಒಂದೇ ಎನ್ನುತ್ತಿದ್ದ ಶರಣರು ನಂತರದ ಶತಮಾನದಲಿ ಜಾತಿಯ ರೂಪವಾಗಿಯೂ ಸಾಂಸ್ಥೀಕೃತ ವೀರಶೈಧರ್ಮವಾಗಿಯೂ ಹೊಮ್ಮಿದ ಬಳಿಕ ತಮ್ಮ ಕೃತಿಗಳನ್ನು ವೀರಶೈವ ಧಾರ್ಮಿಕ ಕೈಪಿಡಿಯನ್ನಾಗಿ ಮಾರ್ಪಡಿಸಿಕೊಂಡು ಶಿಷ್ಟ ಕಾವ್ಯ ಲಕ್ಷಣಗಳನ್ನು ಅನುಸರಿಸಿ ಬರೆದರು. ಉದಾ: ವಿರೂಪಾಕ್ಷಪಂಡಿತನ "ಚೆನ್ನಬಸವಪುರಾಣ" ಕೆಳದಿ ಬಸವ ಭೂಪಾಲನ 'ನಿರಂಜನ ವಂಶರತ್ನಾಕರ; ಲಕ್ಷ್ಮಣ ದಂಡೇಶನ 'ಶಿವತತ್ವಚಿಂತಾಮಣಿ; ಕರಸ್ಥಲ ವೀರಣ್ಣೊಡೆಯನ 'ಇಷ್ಟಲಿಂಗ ಚರಿತೆ; 'ಲಿಂಗಸೂತ್ರ್ರಗಳ ವಚನ, ಕರಸ್ಥಲ ನಾಗಿದೇವನ 'ಕರಸ್ಥಲನಾಗಿದೇವ ತ್ರಿಪದಿ' ಕೃತಿಗಳು ಮುಖ್ಯವಾದವು.

ಸಾಂಸ್ಥೀಕರಣಗೊಂಡ ವೀರಶೈವರಿಗಿಂತ ಭಿನ್ನವಾಗಿ; ಬರೆದಿಟ್ಟು ವಿನಾಶಕಾರಿ ಶಕ್ತಿಗಳ ಕೈಗೆ ಸಿಕ್ಕಿ ಸುಟ್ಟು ಬೂದಿಯಾಗುವುದಕ್ಕಿಂತ, ಬರೆಯದೆ ನೆನಪಿನ ಮೂಲಕ, ಜೀವಂತ ಹಾಡುಗಾವ್ಯಗಳ ಮೂಲಕ ಮೌಖಿಕಧಾರೆಗಳ ಮೂಲಕ ತಳಸಮುದಾಯಗಳು ತಮ್ಮ ಕುಲಕಥನವನ್ನು ಸಂಸ್ಕರಿಸಿ ಸ್ಮೃತಿಯಿಂದ ಸ್ಮೃತಿಗೆ ತಲೆಮಾರಿನಿಂದ ತಲೆಮಾರಿಗೆ ದಾಟಿಸಿ ರಕ್ಷಿಸುವ ಕೆಲಸವನ್ನು ತಮ್ಮ ಸಾಮಾಜಿಕ ಆಂದೋಲನಾದ ನಿರಂತರ ಕಾರ್ಯಕ್ರಮವಾಗಿಸಿಕೊಂಡವು.

'ಭೂಮಿ ಹುಟ್ಟುದಕೆ ಮುನ್ನ, ಭೂಲೋಕುಟ್ಟುದಕೆ ಮುನ್ನ ಸೂರ್ಯಚಂದ್ರಮರುಟ್ಟುದಕೆ ಮುನ್ನ' ತಮ್ಮ ಕುಲಪುರುಷರು ಹುಟ್ಟಿದರೆಂದೂ, 'ಭೂಮಿ ಆಕಾಶ ಸೂರ್ಯ ಚಂದ್ರಮರನ್ನು (ಸಕಲ ಜೀವರಾಶಿಗೆ, ನರಮುಂಡಾ ಮಕ್ಕಳಿಗೆ) ಉತ್ಪತ್ತಿ ಮಾಡಿದ ಮಹಾನುಭಾವರು, ಭೂಮಿಗಿಂತ ಏಳುದಿನಕೆ ಹಿರಿಯೋರು' ಎಂದೂ 'ಧರೆಯ ತಂದವರು, ಧರೆಗೆ ದೊಡ್ಡವರು" ಎಂದೆಲ್ಲಾ ತಮ್ಮ ಕುಲಪುರುಷರನ್ನು ಪುರಾಣೀಕರಿಸಿಕೊಂಡು ಪದವೆತ್ತಿ ಕೊಂಡಾಡುವ ಹಾಗೂ ತಮ್ಮ ಸಾಂಸ್ಕೃತಿಕ ನಾಯಕರ ಮೂಲವನ್ನು ಸೃಷ್ಟಿರಹಸ್ಯದ ಮೂಲವಸ್ತುವೆಂದು ಹೇಳಲಾಗುವ 'ಪರಾತ್ಪರ ವಸ್ತು'ವಿನೊಂದಿಗೆ ಸಮೀಕರಿಸಿ ಎಲ್ಲಾ ಕಾಲಗಳ ಶ್ರೇಷ್ಠ

ಚೇತನಗಳೊಂದಿಗೆ ಅಭಿನ್ನವಾಗಿ ಮತ್ತು ಜೈವಿಕವಾಗಿ ಮೈದಾಳಿ ನಿಲ್ಲುವ ವಿಲಕ್ಷಣ ವ್ಯಕ್ತಿತ್ವದ ಕಾಲಾತೀತ ನಾಯಕರನ್ನಾಗಿ ಪ್ರತಿಪಾದಿಸುವ ತಳಸಮುದಾಯಗಳು ತಮ್ಮ ಸ್ಮೃತಿಗಳಲ್ಲಿ ಆದಿ-ಅಂತ್ಯಗಳಿಲ್ಲದ ಅಖಂಡಕಾವ್ಯಗಳನ್ನು ಸೃಷ್ಟಿಸಿ, ಪೋಷಿಸಿ ತಮ್ಮ ಸ್ಮೃತಿಶಕ್ತಿಯಿಂದಲೇ ನಾಲ್ಕಾರು ದಿನಗಳವರೆಗೆ ಒಂದೇ ಸಮನೆ ಹಾಡಬಲ್ಲರು. ಹೀಗೆ ವೀರಶೈವ ಧರ್ಮದಿಂದ ಹೊರಗುಳಿದ ನಾಥ, ಸೂಫಿ, ಆರೂಢ, ಅವಧೂತ, ತತ್ವಪದಕಾರರು, ಅನುಭಾವಿ ಸಿದ್ಧರು, ಕಾಲಜ್ಞಾನಿಗಳು, ಗೊರವರು, ಜೋಗಿ-ಜಂಗಮರು, ದೇವರ ಗುಡ್ಡರು, ನೀಲಗಾರರು ಮುಂತಾದ ನೆಲಜೀವಿಗಳು ತಮ್ಮ ಸಾಂಸ್ಕೃತಿಕ ನಾಯಕರ ಜೀವನಕಥನಗಳನ್ನು, ಜ್ಞಾನ ಶಿಸ್ತುಗಳನ್ನು ಅನುಭಾವಿಕ ನೆಲೆಗಳನ್ನು ನಿರೂಪಿಸಲು ಮೌಖಿಕಧಾರೆಯುನ್ನು' ತಮ್ಮ ಅಭಿವ್ಯಕ್ತಿಯ ವಾಹಕಗಳನ್ನಾಗಿಸಿಕೊಂಡರು.

ದಕ್ಷಿಣ ಕರ್ನಾಟಕದ ಜನಪದ ಮಹಾಕಾವ್ಯಗಳನ್ನು ಕುರಿತು ಚರ್ಚಿಸುವಾಗ ಎರಡು ಅವಳಿ ಮಹಾಕಾವ್ಯಗಳೆನ್ನುವ ಜನಪ್ರಿಯತೆಗೆ ಪಾತ್ರವಾದವುಗಳಲ್ಲಿ ಒಂದು ಮಲೆಮಾದೇಶ್ವರ ಕಾವ್ಯವಾದರೆ ಮತ್ತೊಂದು ಮಂಟೇಸ್ವಾಮಿ ಕಾವ್ಯ. ೧೪-೧೫ನೇ ಶತಮಾನದ ನಡುವೆ ಬದುಕಿದ್ದ ಈ ಅವಳಿ ಜನಪದ ಸಾಂಸ್ಕೃತಿಕ ನಾಯಕರು ಪ್ರಾರಂಭಿಸಿದ ದೇವರ ಗುಡ್ಡರು ಮತ್ತು ನೀಲಗಾರರ ಪಂಥಗಳು ಜಾತೀಯತೆಯ ವಿರುದ್ಧ ಆಧ್ಯಾತ್ಮಕದಂಗೆಯನ್ನು ಸಾರಿದ ಸಾಮಾಜಿಕ ಸಂಘಟನೆಗಳಾಗಿ, ಸಾಂಸ್ಕೃತಿಕ ರಾಜಕಾರಣಕ್ಕಿಳಿದ ನೆಲಜೀವಿಗಳ ಜನಾಂದೋಲನವಾಗಿ, ತಳಸಮುದಾಯಗಳ ಕುಲಕಥನಕಾರರಾಗಿ ಸಾಂಸ್ಕೃತಿಕ ವೃತ್ತಾಂತಕಾರರಾಗಿ (cultural chroniclers) ಹೀಗೆ ಭಿನ್ನ ನೆಲೆಗಳಲ್ಲಿ ಭಿನ್ನಸ್ಥರಗಳಲ್ಲಿ ಇಂದಿಗೂ ಜೀವಂತವಾಗಿವೆ. ಈ ಇಬ್ಬರೂ ನಾಯಕರು ಮತ್ತು ಅವರು ರೂಪಿಸಿದ ಪಂಥಗಳ ಚಾರಿತ್ರಿಕ ರಾಜಕೀಯ-ಸಾಹಿತ್ಯಕ-ಮನೋವಿಶ್ಲೇಷಕ ನೆಲೆಗಳನ್ನು ಗಂಭೀರವಾಗಿ ಅನ್ವೇಷಿಸುವ ಅಧ್ಯಯನಗಳು ಈಗ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿವೆ.

೧೨ನೇ ಶತಮಾನದ ವಚನ ಚಳುವಳಿಯ ಕಾಯಕತತ್ವ ಮತ್ತು ಜಾತಿರಹಿತ ಸಮಾಜ ನಿರ್ಮಾಣದ ಆಶಯಗಳನ್ನು ೧೪-೧೫ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಕೊಡೇಕಲ್ ಬಸವಣ್ಣ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಜನಪದ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಮುಂತಾದ ದೇಸಿ ಸಂತರು ಸಾಧಿಸಿ ತೋರಿಸಿದ್ದಾರೆ. ಶೋಷಣೆಯ ಮೂಲಬೇರುಗಳು ಅಧಿಕಾರ ಮತ್ತು ಸಂಸತ್ತಿನ ಕೇಂದ್ರೀಕರಣದಲ್ಲಿವೆ. ಅಧಿಕಾರ ಮತ್ತು ಸಂಪತ್ತಿನ ಕೇಂದ್ರೀಕರಣವು ರಾಜಕಾರಣವನ್ನು ಪೋಷಿಸುತ್ತದೆ. ಇಂತಹ ಶೋಷಣೆಯ ರಾಜಕಾರಣದ ವಿರುದ್ಧ ಹಾಗೂ ಜಾತೀಯತೆಯ ವಿರುದ್ಧ ಈ ಇಬ್ಬರೂ ನಾಯಕರು ನಡೆಸಿದ ಆಧ್ಯಾತ್ಮಿಕ ದಂಗೆಯ ಕಥನವನ್ನು ನೀಲಗಾರರು ಮತ್ತು ದೇವರ ಗುಡ್ಡರು ಇಂದಿಗೂ ತಮ್ಮ ಸಂಸ್ಕೃತಿ ನಿಷ್ಠವಾದ ಮೌಖಿಕ ಮಹಾಕಥನದ ರೂಪದಲ್ಲಿ ನಿರೂಪಿಸುತ್ತಾ, ಆಚರಣೆಯ ಸ್ವರೂಪದಲ್ಲೂ ಜೀವಂತವಾಗಿಟ್ಟಿದ್ದಾರೆ. ಕೊಡೇಕಲ್ ಬಸವಣ್ಣನ ಪರಂಪರೆಯು ಕೊಡೇಕಲ್ ಬಸವಣ್ಣನನ್ನು ಕಲ್ಯಾಣದ ಬಸವಣ್ಣನ ಪುನರವತಾರವೆಂದೂ, ದೇವರಗುಡ್ಡರ ಪರಂಪರೆಯು ಮಾಯ್ಕಾರ ಮಾದೇವನನ್ನು ಕಲ್ಯಾಣದ ಬಸವಣ್ಣ ಮತ್ತಿತರ ಶರಣರ 'ದುಡ' ಪರೀಕ್ಷೆ ಮಾಡಿದ ಬಂಡುಕೋರ ದಲಿತ ಧಾರ್ಮಿಕ ನಾಯಕನೆಂದೂ, ಹಾಗೂ ನೀಲಗಾರರ ಪರಂಪರೆಯ ಮಂಟೇಸ್ವಾಮಿಯನ್ನು ೧೨ನೇ ಶತಮಾನದ ಅಲ್ಲಮಪ್ರಭುವೆಂದೂ ಸ್ವಯಂ ಬಸವಣ್ಣನಿಗೂ ಗುರುಗಳಾಗಿದ್ದರೆಂದೂ ಸಮೀಕರಿಸಿ ನಿರೂಪಿಸುವುದು ಅರ್ಥಪೂರ್ಣವಾಗಿದೆ.

ಕ್ರಿ.ಶ. ೧೮೩೨ರಲ್ಲಿ ರಚನೆಯಾದ ದೇವಚಂದ್ರನ ರಾಜಾವಳಿಕತೆಯು ಮಲೆಮಾದೇಶ್ವರ 'ಮಾದಿಗರವನು' ಎಂದು ಗುರುತಿಸುವ ಮೊದಲ ಚಾರಿತ್ರಿಕ ಕಾವ್ಯ. ಮಾದಾರಿ ಮಾದಯ್ಯನು ದಲಿತರ ಪೂರ್ವಿಕನಾದುದರಿಂದಲೇ ದೇವನೂರ ಮಹಾದೇವ ತಮ್ಮ 'ಕುಸುಮಬಾಲೆ' ಕಾದಂಬರಿಯನ್ನು 'ನಮ್ಮ ಪೂರ್ವಿಕ ಮಲೆಮಾದೇಶ್ವರನಿಗೆ ಅರ್ಪಿತವು' ಎಂದು ಮಾದಪ್ಪನಿಗೆ ಅರ್ಪಿಸಿ ನಮಿಸಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಮಾದರಿ ಮಾದಪ್ಪನಂತೆಯೇ ಮಂಟೇಸ್ವಾಮಿಯನ್ನು ಬಲಗೈ ಪಣಕಟ್ಟಿನ 'ಹೊಲೆಯರವನು' ಎಂದು ಊಹಿಸಲಾಗುತ್ತಿದೆ. ಆದರೆ ಈ ಸಂಗತಿಯನ್ನು ಸಮಥಿಸುವ ಯಾವುದೇ ಚಾರಿತ್ರಿಕ ದಾಖಲೆಗಳು ಈವರೆಗೆ ಲಭ್ಯವಿರುವುದಿಲ್ಲ. ಹಾಗೆಯೇ ಈ ಇಬ್ಬರೂ ಸಾಂಸ್ಕೃತಿಕ ವೀರರು ಸಮಕಾಲೀನ ನಾಯಕರೆಂಬುದಕ್ಕೂ ಯಾವುದೇ ಚಾರಿತ್ರಿಕ ಸಾಕ್ಷಿಗಳು ದೊರೆತಿರುವುದಿಲ್ಲ. ಲಿಖಿತ ಸಾಕ್ಷಾಧಾರಗಳ ಹೊರತಾಗಿಯೂ ಮಲೆಮಾದೇಶ್ವರ, ಮಂಟೇಸ್ವಾಮಿ ಈ ಈರ್ವ ಜನಪದ ಸಾಂಸ್ಕೃತಿಕ ನಾಯಕರು ಹೊಲೆಮಾದಿಗರ ಸಂಸ್ಕೃತಿಯನ್ನು ಪ್ರತಿನಿಧಿಸುವ ನಾಯಕರೇ ಆಗಿ ಚಿತ್ರಿಸಲ್ಪಟ್ಟಿರುವುದು ಹಾಗೂ ಇತರೆಲ್ಲಾ ಜಾತಿಗಳಿಗಿಂತಲೂ ಅಧಿಕವಾಗಿ ಎಡಗೈ ಮತ್ತು ಬಲಗೈ ಫಣಕಟ್ಟಿನ ಹೊಲೆಮಾದಿಗರು ಮಾತ್ರ ನೀಲಗಾರರಾಗಿ, ದೇವರ ಗುಡ್ಡರಾಗಿ ಶ್ರದ್ಧಾಭಕ್ತಿಗಳಿಂದ ಈ ನಾಯಕರನ್ನು ಆರಾಧಿಸುವುದನ್ನು ಬೆಂಬಲಕ್ಕಿರಿಸಿಕೊಂಡು ಇವರು ದಲಿತ ನಾಯಕರೆಂದೇ ಘೋಷಿಸಬಹುದಾಗಿದೆ. ಇಂದಿಗೂ ಈ ಎರಡು ಕೆಳಜಾತಿಗಳು ಮಾತ್ರ ಇಬ್ಬರೂ ನಾಯಕರ ಕಥನಕಾವ್ಯಗಳನ್ನು ಹಾಡಿ ಕೀರ್ತಿಸುವ ಕಾಯಕವನ್ನು ತಮ್ಮ ಸಂಸ್ಕೃತಿಯ ಚಲನಶೀಲತೆಗೆ ಅಗತ್ಯವಾದ ಸಹಜ ಪ್ರವೃತ್ತಿಯನ್ನಾಗಿ ಬದುಕಿನಲ್ಲಿ ಅಳವಡಿಸಿಕೊಂಡಿರುತ್ತಾರೆ.

ಆದರೆ, ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಹೊಲೆಮಾದಿಗ ಜಾತಿಯಿಂದ ಹುಟ್ಟಿಬಂದು ಸಾಮಾಜಿಕ ನಾಯಕತ್ವ ವಹಿಸಿದರೆಂಬುದನ್ನು ಒಪ್ಪಲು ಸಿದ್ಧವಿರದ ಜಾತಿಗ್ರಸ್ತ ಹಿಂದೂಧರ್ಮದಲ್ಲಿ ತಮ್ಮನ್ನು ಜಾತಿ ಮಟ್ಟಕ್ಕೆ ಇಳಿಸಿಕೊಂಡು ಹಿಂದು ಜಾತಿಪದ್ಧತಿಯ ಉಸುಬಿನ ಹೊಂಡದಲ್ಲಿ ಸಿಕ್ಕಿನರಳುತ್ತಿರುವ ಈಗಿನ ಲಿಂಗಾಯತರು ಮಾದೇಶ್ವರ ಲಿಂಗಾಯತ ಜಾತಿಗೆ ಸೇರಿದವನೆಂದು ಸಾಧಿಸಲು ಕೋರ್ಟಿನ ಮೆಟ್ಟಿಲು ಹತ್ತಿದರು. ಮಲೆಮಾದೇಶ್ವರ ಲಿಂಗಾಯತ ಜಾತಿಯವನು ಎಂದು ಕೋರ್ಟಿನಿಂದ ಸರ್ಟಿಫಿಕೇಟ್ ಗಿಟ್ಟಿಸುವಲ್ಲಿ ಯಶಸ್ವಿಯಾದರು! 'ಅಪ್ಪನು ನಮ್ಮ ಮಾದರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ'ನೆಂದು ಹೊಲೆಮಾದಿಗರನ್ನೇ ತಮ್ಮ ಗೋತ್ರಪುರುಷರನ್ನಾಗಿ ಸ್ವೀಕರಿಸಿ ಬ್ರಾಹ್ಮಣ ಪರಮ್ಯವನ್ನು ವಿರೋಧಿಸಿ ಹುಟ್ಟಿದ ವೀರಶೈವಧರ್ಮವು ಇಂದು ವೈದಿಕ ಯಾಜಮಾನ್ಯವನ್ನು ಒಪ್ಪಿಕೊಂಡು ಕೆಳಜಾತಿಗಳಿಂದ ಮೂಡಿಬಂದ ಮಹಾನ್ ಪ್ರತಿಭೆಗಳಾದ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿಯನ್ನು ದೂರಕ್ಕೆ ದೂಡುತ್ತಿರುವುದು ಅತ್ಯಂತ ವಿಷಾದದ ಸಂಗತಿ. ಇಷ್ಟಿದ್ದರೂ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿಯವರ ಕಥನಗಳು ಭಿನ್ನ ಪರಿಕಲ್ಪನೆಗಳ ಮೂಲಕ ಜೀವದುಸುರಿನ ಪ್ರತಿ ಸೊಲ್ಲಿನಲ್ಲೂ, ರಕ್ತದ ಪ್ರತಿ ಕಣಕಣದಲ್ಲೂ ಚಿಲುಮೆಯಾಗಿ ಹುಟ್ಟಿ ನದಿಯಾಗಿ ಹರಿಯುವುದು ಇದೇ ಕೆಳಜಾತಿಗಳಲ್ಲಿಯೇ ಹೊರತು ಮೇಲ್ಜಾತಿಗಳಲ್ಲಲ್ಲ ಅಥವಾ ಮಲೆಮಾದೇಶ್ವರ ಲಿಂಗಾಯತ ಜಾತಿಗೆ ಸೇರಿದವನೆಂದು ಸರ್ಟಿಫಿಕೇಟ್ ಗಿಟ್ಟಿಸಿಕೊಂಡು ಲಿಂಗಾಯತ ಜಾತಿಯಲ್ಲಲ್ಲ!

ಇಂದಿಗೂ ತಮ್ಮ ಮೌಖಿಕ ಆಚರಣಾತ್ಮಕ ಪದ್ಧತಿಯನುಸಾರ ಗುಡ್ಡನ ಬಿಟ್ಟು ಗುರುಮಣಿಕಟ್ಟಿ ಮಂಟೇಸ್ವಾಮಿಯ 'ಸಿಸುಮಕ್ಕಳಾಗಿ' ದೀಕ್ಷೆ ಪಡೆಯುತ್ತಿರುವ ಜಂಗಮ ಪ್ರವೃತ್ತಿಯ ನೀಲಗಾರರು ಮಂಟೇಸ್ವಾಮಿಯನ್ನು ವೀರಶೈವಧರ್ಮದ ಇಷ್ಟಲಿಂಗ ಕಲ್ಪನೆಯ ಆಚಾರತತ್ವವನ್ನು ಪ್ರತಿರೋಧಿಸಿದ 'ಜ್ಯೋತಿರ್ಲಿಂಗಯ್ಯ'ನೆಂದು ಕೀರ್ತಿಸುತ್ತಾರೆ. 'ನಾನು ಸತ್ತ ಮನೆಲೂ ಜ್ಯೋತಿ/ಹೆತ್ತಮನೆಲೂ ಜ್ಯೋತಿ/ ಬಡವರ ಮನೆಗೂ ಜ್ಯೋತಿ/ ಬಲಿಗಾರ್ರ ಮನೆಗೂ ಜ್ಯೋತಿ/ ಕುರುಬನ ಮನೆಗೂ ಜ್ಯೋತಿ/ ಕುಂಬಾರನ ಮನೆಗೂ ಜ್ಯೋತಿ/ ಹೊಲನ ಮನೆಗೂ ಜ್ಯೋತಿ/ ಹೊನ್ನಯ್ಯ ಮನೆಗೂ ಜ್ಯೋತಿ/ ಮಾದಿಗರ ಮನೆಗೂ ಜ್ಯೋತಿ/ ಮಾದಯ್ಯನ ಮನೆಗೂ ಜ್ಯೋತಿ/ ತಿಪ್ಪೆಮೇಲು ಹಸ್ಸಿ ಇಟ್ಟಿರುವ ಹತ್ತಕ ಉರಿಯೋ ಪರಂಜ್ಯೋತಿ/ ಕುಲೇಳು ಹದಿನೆಂಟು ಜಾತಿಯೊಳಗೆ ನಾ ಏಕದುಡ ಪರಂಜ್ಯೋತಿ ಕೇಳಯ್ಯಾ ನನಗೆ ಭಿನ್ನ ಭೇದ ಇಲ್ಲ ಕಾನೋ' ಎನ್ನುತ್ತಾನೆ ಮಂಟೇಸ್ವಾಮಿ. ಇದೇ ಪ್ರಕಾರ ಮಲೆಮಾದೇಶ್ವರನ ಕಾವ್ಯವನ್ನು ಹಾಡುವ ದೇವರ ಗುಡ್ಡರು 'ಮಾದಾರಿ ಚಮ್ಮಾಳ್ಗೆ ಬಸವಣ್ಣ ತಲಮೇಲ ಹೊತ್ಕೊಂಡ" ಎಂದು ಹಾಡುತ್ತಾರೆ.

ವಸ್ತು ಸ್ಥಿತಿ ಹೀಗಿರುವಾಗ ಜನಶ್ರೇಷ್ಠತೆಯ ವ್ಯಸ

ದಕ್ಷಿಣ ಕರ್ನಾಟಕದ ಜನಪದ ಮಹಾಕಾವ್ಯಗಳನ್ನು ಕುರಿತು ಚರ್ಚಿಸುವಾಗ ಎರಡು ಅವಳಿ ಮಹಾಕಾವ್ಯಗಳೆನ್ನುವ ಜನಪ್ರಿಯತೆಗೆ ಪಾತ್ರವಾದವುಗಳಲ್ಲಿ ಒಂದು ಮಲೆಮಾದೇಶ್ವರ ಕಾವ್ಯವಾದರೆ ಮತ್ತೊಂದು ಮಂಟೇಸ್ವಾಮಿ ಕಾವ್ಯ. ೧೪-೧೫ನೇ ಶತಮಾನದ ನಡುವೆ ಬದುಕಿದ್ದ ಈ ಅವಳಿ ಜನಪದ ಸಾಂಸ್ಕೃತಿಕ ನಾಯಕರು ಪ್ರಾರಂಭಿಸಿದ ದೇವರ ಗುಡ್ಡರು ಮತ್ತು ನೀಲಗಾರರ ಪಂಥಗಳು ಜಾತೀಯತೆಯ ವಿರುದ್ಧ ಆಧ್ಯಾತ್ಮಕದಂಗೆಯನ್ನು ಸಾರಿದ ಸಾಮಾಜಿಕ ಸಂಘಟನೆಗಳಾಗಿ, ಸಾಂಸ್ಕೃತಿಕ ರಾಜಕಾರಣಕ್ಕಿಳಿದ ನೆಲಜೀವಿಗಳ ಜನಾಂದೋಲನವಾಗಿ, ತಳಸಮುದಾಯಗಳ ಕುಲಕಥನಕಾರರಾಗಿ ಸಾಂಸ್ಕೃತಿಕ ವೃತ್ತಾಂತಕಾರರಾಗಿ (cultural chroniclers) ಹೀಗೆ ಭಿನ್ನ ನೆಲೆಗಳಲ್ಲಿ ಭಿನ್ನಸ್ಥರಗಳಲ್ಲಿ ಇಂದಿಗೂ ಜೀವಂತವಾಗಿವೆ.

ದಿಂದ ಬಳಲುವ ಮೂರ್ಖರು ಮಾತ್ರ ಬಸವಣ್ಣ ಮತ್ತಿತರ ಶರಣರ ಇಂಗಿತಗಳಿಗೆ ವಿರುದ್ಧವಾಗಿ ವರ್ತಿಸುತ್ತ ಕೆಳಜಾತಿಗಳಿಂದ ಮೂಡಿಬಂದ ಅರ್ಥಾತ್ ಮೂಲ ನಿವಾಸಿ ಪ್ರತಿಭೆಗಳನ್ನು ಮೂಲೆಗುಂಪು ಮಾಡಲೆತ್ನಿಸುತ್ತಿರುವುದನ್ನು ನೋಡಬಹುದು. ಶರಣರು ರೂಪಿಸಿದ ವೀರಶೈವಧರ್ಮವನ್ನು ಜಾತಿಯನ್ನಾಗಿ ಪರಿವರ್ತಿಸಿಕೊಂಡಿರುವ ಇಂದಿನ ಲಿಂಗಾಯತರು ತಮ್ಮ ಬೌದ್ಧಿಕ ದಾರಿದ್ರ್ಯವನ್ನು ನಿವಾರಿಸಿಕೊಂಡು ತಮ್ಮ ಮೂಲ ಸಂಸ್ಕೃತಿಯ ಮಾತೃನೆಲೆಗಳ ಕಡೆ ಕಣ್ಣು ತೆರೆಯುವ ಅಗತ್ಯವಿದೆ.

ಮಂಟೇಸ್ವಾಮಿಯ ಪರೀಕ್ಷೆಗಳಲ್ಲಿ ಆತ್ಮಶುದ್ಧಿಯುಳ್ಳ ಕುರುಬರ ಬೀರಯ್ಯ, ಮಡಿವಾಳ ಮಾಚಯ್ಯ, ಹೊಲೆಯರ ಹೊನ್ನಯ್ಯ, ಹಡಪದ ಅಪ್ಪಣ್ಣ, ಕುಂಬಾರ ಗುಂಡಯ್ಯ, ಮಾದರ ಚೆನ್ನಯ್ಯ ಮುಂತಾದ ಕೆಳಜಾತಿ ಶರಣರು ಮಾತ್ರ ಗೆದ್ದು ಯೋಗ್ಯ ಶರಣರಾಗಿ ಉಳಿದ ಕಾರಣ ಈ ಕೆಳಜಾತಿಗಳ ಕಾಯಕ ಜೀವಿಗಳು ಮಾತ್ರ ದೀಕ್ಷೆ ಕೊಡುವ-ದೀಕ್ಷೆ ತೆಗೆದುಕೊಳ್ಳುವ ನಿಜವಾದ ಹಕ್ಕುದಾರರೆಂದು ತಮ್ಮ ಹಕ್ಕು ಪ್ರತಿಪಾದಿಸುವುದರಿಂದ ಮಂಟೇಸ್ವಾಮಿ ದಲಿತನೇ ಆಗಿದ್ದಾನೆಂದು ಊಹಿಸಬಹುದು ಇಷ್ಟು ಮಾತ್ರವಲ್ಲದೆ ಅಲ್ಲಮ ಪ್ರಭುವಾದರೂ ಮದ್ದಳೆ ಬಾರಿಸುವ ನಟುವರ ಜಾತಿಯವನು ನಟುವರು ದೇವಾಲಯ ನರ್ತಕಿಯರೂ ದೇವದಾಸಿಯರೂ ಆಗಿ ಸೇವೆಗೆ ಮೀಸಲಿಟ್ಟ ಕೆಳವರ್ಗ. ಇಂತಹ ಕೆಳಜಾತಿಯಲ್ಲಿ ಹುಟ್ಟಿ ಬಂದ ಅಲ್ಲಮ ಪ್ರಭುವಿನೊಂದಿಗೆ ಸಮೀಕರಿಸಲ್ಪಡುವ ಮಂಟೇಸ್ವಾಮಿಯ ನೀಲಗಾರರ ಕಾವ್ಯಗಳಲ್ಲಿ ಅಲ್ಲಮಪ್ರಭುವೆಂದೇ ಕೊಂಡಾಡಲ್ಪಡುವುದರಿಂದ ಅವನು ಕೆಳಜಾತಿಯ ಆಧ್ಯಾತ್ಮಿಕ ಸಾಧಕನೆಂದು ನಂಬಬಹುದು. ಅಲ್ಲಮಪ್ರಭುವು ಅನುಭವ ಮಂಟಪದ ಶೂನ್ಯ ಸಿಂಹಾಸನಾದೀಶ್ವರನಾದ ಸಾಧ್ಯತೆಯಂತೆಯೇ ಕೆಳಜಾತಿಯ ಆಧ್ಯಾತ್ಮಿಕ ಸಾಧಕನಾದ ಮಂಟೇಸ್ವಾಮಿಯ ಇಡೀ 'ಕತ್ತಲರಾಜ್ಯ'ಕ್ಕೆ ಸಾಂಸ್ಕೃತಿಕ ನಾಯಕತ್ವ ಒದಗಿಸಿರುತ್ತಾನೆ. ಮಂಟೇಸ್ವಾಮಿಯ ಕಾವ್ಯಕತೆಯನ್ನು ಕೀರ್ತಿಸುವ ಪರಂಪರೆಯನ್ನು ಮುಂದುವರೆಸುತ್ತಿರುವ ಮಂಟೇಸ್ವಾಮಿಯ ಒಕ್ಕಲಾದ ನೀಲಗಾರರು, ವಿಶೇಷವಾಗಿ ಎಡಗೈಬಲಗೈ ಹೊಲೆಮಾದಿಗರು ತಮ್ಮ ಮೊದಲ ಮಗನಿಗೆ ಕಡ್ಡಾಯವಾಗಿ ನೀಲುಗಾರ ದೀಕ್ಷೆ ಕೊಡಿಸುತ್ತಾರೆ. ಹಾಡುಗಾರಿಕೆಯ ಕೌಶಲ್ಯ ಸಾಧಿಸಿದ ನೀಲುಗಾರರು ಮಂಟೇಸ್ವಾಮಿ ಮತ್ತು ಅವನ ಶಿಷ್ಯರ 'ಲೀಲೆ'ಗಳ ಪದಗಳನ್ನು ಹಾಡಿ ಕೊಂಡಾಡಿದರೆ, ಉಳಿದ ನೀಲಗಾರರು ಇತರ ಆಚರಣಾತ್ಮಕ ವಿಧಾನಗಳಿಂದ ನೀಲಗಾರರ ಪರಂಪರೆಯನ್ನು ಮುಂದುವರೆಸುತ್ತಾರೆ.

ಕೊಡೇಕಲ್ ಬಸವಣ್ಣನ ವಂಶಸ್ಥನಾದ ಕವಿ ವೀರಸಂಗಯ್ಯನು ಬರೆದಿರುವ "ನಂದಿ ಆಗಮ ಲೀಲೆ" ಕೃತಿಯಿಂದ ಮಂಟೇಸ್ವಾಮಿಯು ದಕ್ಷಿಣದ ದ್ರಾವಿಡ ದೇಶದಿಂದ ಗುರು ಬರಲಿಂಗಯ್ಯನ ಆದೇಶದನ್ವಯ ಕಾರ್ಯಸಿದ್ಧಿ ಪಡೆಯುವ ಸಲುವಾಗಿ ಉತ್ತರಕ್ಕೆ ಪ್ರಯಾಣಿಸಿದನೆಂದು ತಿಳಿದು ಬರುತ್ತದೆ. ಕೊಡೇಕಲ್ ಬಸವಣ್ಣನನ್ನು ಗುರುಗಳನ್ನಾಗಿ ಪಡೆದ ಮಂಟೇಸ್ವಾಮಿಯು ಕಾಯಸಿದ್ಧಿ, ರಸಸಿದ್ಧಿ, ಆಧ್ಯಾತ್ಮಸಿದ್ಧಿ ಮುಂತಾದ ಸಿದ್ಧಿಗಳನ್ನು ಹೊಂದಿದನೆಂದು ವೀರಸಂಗಯ್ಯನ ಹೇಳಿ ಕೊಂಡಿರುತ್ತಾನೆ. ಮಂಟೇಸ್ವಾಮಿ ತನ್ನ ಕಾಲಜ್ಞಾನ ವಚನಗಳನ್ನು ಬರೆದದ್ದು ಅಲ್ಲಿಯೇ ಎಂಬುದಕ್ಕೆ ಮಂಟೇಸ್ವಾಮಿಯ ಕಾಲಜ್ಞಾನ ವಚನ ಕಟುಗಳೂ ಕೊಡೇಕಲ್ಲು ಸಾಹಿತ್ಯದಲ್ಲಿ ದೊರೆತಿವೆ.

ಆದರೆ ನೀಲಗಾರರು ಹಾಡುವ ಕಾವ್ಯದ ಪ್ರಕಾರ 'ಉತ್ತರದೇಶದ ಸಿದ್ಧ' ಮಂಟೇಸ್ವಾಮಿಯು ಕಲ್ಯಾಣಪಟ್ಟಣದ ಶರಣರ ಗುಡ ಪರೀಕ್ಷೆ ಮಾಡಿಕೊಂಡು 'ಕತ್ತಲ ರಾಜ್ಯ'ಕ್ಕೆ ಪ್ರಯಾಣಿಸಿ ಬಂದರೆಂದು ತಿಳಿದು ಬರುತ್ತದೆ.

ನೀಲಗಾರರು ಹಾಡುವ "ಧರೆಗೆ ದೊಡ್ಡವರು ಕಥೆ" ಯಲ್ಲಿ ಹನ್ನೆರಡನೇ ಶತಮಾನದ ಬಸವಣ್ಣನವರು ಗುರುವೆಂದು ಕರೆಸಿಕೊಂಡಿರುವ ಹಳೇ ಮೈಸೂರು ಭಾಗದ ಅನುಭಾವಿ ಮಂಟೇಸ್ವಾಮಿ ಸ್ಥಾವರಗೊಂಡ ಶರಣ ಚಳುವಳಿಯನ್ನು ಜಂಗಮವಾಗಿಸಲು ದೈವತ್ವದ ಕಲ್ಪನೆಯನ್ನು ಸರಳೀಕರಿಸಿದ ಪವಾಡಪುರುಷ, ತ್ರಿಲೋಕಜ್ಞಾನಿ. ಕಲಿಪುರುಷನ ಆಗಮದಿಂದ ಭವಿಷ್ಯದಲ್ಲಿ ಉಂಟಾಗುವ ಸಂಕಟಗಳನ್ನು ತನ್ನ ದಿವ್ಯ ಜ್ಞಾನದಲ್ಲಿ ಕಂಡ ಕಾಲಜ್ಞಾನಿಯಾಗಿ ಭೂಮಾಲೀಕರ ಕ್ರೌರ್ಯ, ಕರಿಕಲ್ಲು ಲೂಟಿ, ಅರಣ್ಯನಾಶ, ಮೌಲ್ಯಗಳು ಅದ:ಪತನ ಕುರಿತು ಅಂದೇ ಜನರಿಗೆ ಎಚ್ಚರಿಕೆ, ನೀಡಿರುತ್ತಾನೆ. ಅದು ಇಂದಿಗೂ ಸತ್ಯವಾಗಿದೆ.

ಬಹುಮುಖ್ಯವಾಗಿ ವೀರಸಂಗಯ್ಯನ 'ನಂದಿ ಆಗಮಲೀಲೆ' ಹಾಗೂ ನೀಲಗಾರರು ಹಾಡುವ 'ಧರೆಗೆ ದೊಡ್ಡವರು' ಕತೆಯ ಅನ್ವಯ ದಕ್ಷಿಣದ ದ್ರಾವಿಡದೇಶದ 'ಕತ್ತಲರಾಜ್ಯ'ದಲ್ಲಿ ಗುರುಬಾರಲಿಂಗಯ್ಯನ ಶಿಷ್ಯನಾಗಿದ್ದ ಮಂಟೇಸ್ವಾಮಿಯು ತನ್ನ ಗುರುವಿನ ಆದೇಶದ ಮೇರೆಗೆ ಕಾಯಸಿದ್ಧಿಗಾಗಿ 'ಉತ್ತರ ದೇಶದ' ಕೊಡೇಕಲ್ಲಿಗೆ ಹೋಗಿ, ಕೊಡೇಕಲ್ಲು ಬಸವಣ್ಣನ ಬಳಿ ಶಿಷ್ಯನಾಗಿ ಕಾಯ ಸಿದ್ಧಿ ಪಡೆದನು. ಅಲ್ಲಿಂದ "ಉತ್ತರ ದೇಶದ ಸಿದ್ಧ"ನೆಂಬ ಬಿರುದಿನೊಂದಿಗೆ ಕೊಡೇಕಲ್ಲು ಬಸವಣ್ಣನ ಹಿರಿಯ ಮಗ ರಾಚಪ್ಪಾಜಿಯನ್ನು ಶಿಷ್ಯನನ್ನಾಗಿ ಸ್ವೀಕರಿಸಿ ದಕ್ಷಿಣ ಭಾಗದ ತಮಿಳುನಾಡಿನ ಗಡಿಯ ಕಾವೇರಿ ತೀರದ ಕತ್ತಲ ರಾಜ್ಯಕ್ಕೆ ಮರಳಿದನು. ಮಂಟೇಸ್ವಾಮಿಯ ಈ ಉತ್ತರ ದಕ್ಷಿಣ ಚಲನೆಯ ಕಥನವನ್ನು ನೀಲಗಾರರು'ಉತ್ತರ ದೇಶ-ಕತ್ತಲ ರಾಜ್ಯ'ವೆಂಬ ಎರಡು ಭಾಗಗಳನ್ನಾಗಿ ವಿಂಗಡಿಸಿ "ಧರೆಗೆ ದೊಡ್ಡವರ ಕತೆ"ಯನ್ನಾಗಿ ನಿರೂಪಿಸುತ್ತಾರೆ. ಗುಲಬರ್ಗಾ, ಬಿಜಾಪುರ, ಕಲ್ಯಾಣ, ಕಾಗಿನೆಲೆ, ವಿಜಯನಗರ ಉತ್ತರ ದೇಶದಲ್ಲಿ ಸೇರಿಕೊಂಡಿದ್ದರೆ, ಕಾವೇರಿ ತೀರದ ಮಂಡ್ಯ, ಮೈಸೂರು, ಚಾಮರಾಜನಗರಗಳು ಕತ್ತಲ ರಾಜ್ಯದಲ್ಲಿ ಸೇರಿವೆ.

ಕೊಡೇಕಲ್ಲು ಬಸವಣ್ಣನಿಂದ ಕಾಯಸಿದ್ಧಿಯೊಂದಿಗೆ ಅನೇಕ ಸಿದ್ಧಿಗಳನ್ನು ಪಡೆದ ಬಳಿಕ "ಉತ್ತರ ದೇಶದ ಸಿದ್ಧ"ನಾಗಿ ಉತ್ತರ ದೇಶದಿಂದ ಕತ್ತಲ ರಾಜ್ಯಕ್ಕೆ ಚಲಿಸಿ ಬಂದ ತನ್ನ ಸಾಂಸ್ಕೃತಿಕ ಸಿದ್ಧಪಥದುದ್ದಕ್ಕೂ 'ಮೊಗುರು' ಮಂಟೇಸ್ವಾಮಿ ಮೇಲು ಕೀಳೆನ್ನದೆ ಸ್ತ್ರೀಪುರುಷನೆಂಬ ಭೇದವಿಲ್ಲದೆ ಹರುಕ್ರು-ತಿರುಕ್ರು-ಬಡವ-ಬಲಿಗಾರ-ಕುರುಬ-ಕುಂಬಾರ ಮುಂತಾದ ಕುಲೇಳು ಹದಿನೆಂಟು ಜಾತಿ ಮತಗಳ ಒಂದು ಮಾಡುತ್ತಾ ಸಿಸುಮಕ್ಕನ್ನು ದಾನವಾಗಿ ಪಡೆಯುತ್ತಾ, ತನ್ನ ಆಧ್ಯಾತ್ಮಿಕ ದಂಗೆಯ ಅಥವಾ ಅನುಭಾವಿಕ ವಿಕ್ರಮದ ಪ್ರಭಾವಳಿಯ ಕುರುಹುಗಳನ್ನುಳಿಸಿ, ತೋರುಗದ್ದುಗೆಗಳನ್ನು ಸ್ಥಾಪಿಸಿ, ಒಕ್ಕಲು ಪಡೆದು ತನ್ನದೆ ಆದ ಜಾತ್ಯತೀತ ಧರ್ಮಾತೀತ ಆಧ್ಯಾತ್ಮಕ ಸಾಧಕರ ಪಡೆಯನ್ನು ಕಟ್ಟಿಕೊಂಡು ಜನಪರವಾದ ಸಾಂಸ್ಕೃತಿಕ ಆಂದೋಲನದ ಒಂದು ವಿಶಿಷ್ಟ ಪಂಥದ ಹುಟ್ಟಿಗೆ ಕಾರಣವಾಗುತ್ತಾನೆ. ಅದೇ ನೀಲಗಾರರ ಪರಂಪರೆ. ಮಂಟೇಸ್ವಾಮಿ ತನ್ನ ಜೀವಿತದ ಅರ್ಧಕ್ಕಿಂತಲೂ ಹೆಚ್ಚು ಆಯಸ್ಸನ್ನು ಉತ್ತರದ ಕೊಡೇಕಲ್ಲಿನಿಂದ ಪ್ರಾರಂಭಿಸಿ ತಾನು ಚಲಿಸಿ ಬಂದ ದಾರಿಯುದ್ದಕ್ಕೂ ವಿಶಿಷ್ಟ ನೀಲಗಾರರ ಸಾಂಸ್ಕೃತಿಕ ಸೇನೆಯನ್ನು ಕಟ್ಟುವ ಮೂಲಕ ದಕ್ಷಿಣದ ಬೊಪ್ಪೇಗೌಡನ ಪುರದಲ್ಲಿ ನೆಲೆಗೊಳ್ಳುವ ತನಕ ತನ್ನ ಸಾಂಸ್ಕೃತಿಕ ಸಿದ್ಧಪಥದ ಚಲನೆಗೆ ಬಳಸಿಕೊಂಡಿದ್ದಾನೆ. ಮಧ್ಯಕಾಲೀನ ಚರಿತ್ರೆಯಲ್ಲಿ ಮಂಟೇಸ್ವಾಮಿ ವಿಕ್ರಮಿಸಿದ ಈ ಸುದೀರ್ಘ ಸಿದ್ಧಪಥ ಮತ್ತಾವ ಸಂತರಿಗೂ ಸಾಧ್ಯವಾಗಿಲ್ಲ. ಆದುದರಿಂದಲೇ ಮಂಟೇಸ್ವಾಮಿ ಉಳಿದೆಲ್ಲ ದೇಶಿ ಸಂತರಿಗಿಂತ ಭಿನ್ನವಾ ಆಧ್ಯಾತ್ಮಿಕ ದಂಗೆಕೋರನಾಗಿ ಕಾಣಿಸುತ್ತಾನೆ.

ಉತ್ತರದೇಶದಿಂದ ಬರುವಾಗ 'ಮೊಗುರು' ಮಂಟೇಸ್ವಾಮಿ ತನ್ನ ಗುರು ಕೊಡೇಕಲ್ಲು ಬಸವಣ್ಣನ ಹಿರಿಮಗ ರಾಚಪ್ಪಯ್ಯನನ್ನು ಶಿಷ್ಯನನ್ನಾಗಿ ಪಡೆದು ನಾಗತಂಬೂರಿಯನ್ನು ನುಡಿಸುತ್ತಾ ಏಳುಗಿಣ್ಣಿನ ನಾಗಬೆತ್ತ ಏಳೆಡೆ ಕಂಡಾಯ (ಆಯುಧ)ಗಳನ್ನು ಮೆರೆಸುತ್ತಾ, ಜಾಗಟೆ ಬಾರಿಸುತ್ತ ಕಾವಿ ಜೋಳಿಗೆಗಳನ್ನು ಧರಿಸಿ ಸಿಸು ಮಕ್ಕಳ ಭಿಕ್ಷೆ ಪಡೆಯುತ್ತಾ ಸಂಗೀತದ ಸಾಕ್ಷಾತ್ಕರದಿಂದ ರಾಜೀಸುವ ನೀಲಗಾರರ ಪಡೆಯೊಂದಿಗೆ ಮಡಿವಾಳರ ಮಲ್ಲಿಗೆ ಮಾದೇವಮ್ಮ-ಮಾಚಯ್ಯನ ಮಗ ಫಲಾರದಯ್ಯ, ಸೂಫೀ ಸಂತ ಮುರ್ದಾನ ಗೈಬ್, ಕಾಗಿನೆಲೆಯ ಶರಣೆ ದುಡವುಳ್ಳ ದೊಡ್ಡಮ್ಮ ತಾಯಿ ಸಖರಾಯಪಟ್ಟಣದ ಅರಸುಮನೆತನದ ಈರಪ್ಪಾಜಿ-ಚೆನ್ನಪ್ಪಾಜಿ, ವಿಜಯನಗರದ ಗಾರುಡಿಗರ ಮಗಳು ಕಿರಿಚೆನ್ನಾಜಮ್ಮ, ಕೆಲೂರಿನ ಕೊಪ್ಪ ಮನೆತನದ ಕುರುಬರ ರಾಮವ್ವೆ ಮೊದಲಾದ ಶರಣ ಶರಣೆಯನ್ನು ಶಿಷ್ಯರನ್ನಾಗಿ ಪಡೆದು ತಂದನು. ದಕ್ಷಿಣದ ಕತ್ತಲ

ಕೊಡೇಕಲ್ಲು ಬಸವಣ್ಣನಿಂದ ಕಾಯಸಿದ್ಧಿಯೊಂದಿಗೆ ಅನೇಕ ಸಿದ್ಧಿಗಳನ್ನು ಪಡೆದ ಬಳಿಕ "ಉತ್ತರ ದೇಶದ ಸಿದ್ಧ"ನಾಗಿ ಉತ್ತರ ದೇಶದಿಂದ ಕತ್ತಲ ರಾಜ್ಯಕ್ಕೆ ಚಲಿಸಿ ಬಂದ ತನ್ನ ಸಾಂಸ್ಕೃತಿಕ ಸಿದ್ಧಪಥದುದ್ದಕ್ಕೂ 'ಮೊಗುರು' ಮಂಟೇಸ್ವಾಮಿ ಮೇಲು ಕೀಳೆನ್ನದೆ ಸ್ತ್ರೀಪುರುಷನೆಂಬ ಭೇದವಿಲ್ಲದೆ ಹರುಕ್ರು-ತಿರುಕ್ರು-ಬಡವ-ಬಲಿಗಾರ-ಕುರುಬ-ಕುಂಬಾರ ಮುಂತಾದ ಕುಲೇಳು ಹದಿನೆಂಟು ಜಾತಿ ಮತಗಳ ಒಂದು ಮಾಡುತ್ತಾ ಸಿಸುಮಕ್ಕನ್ನು ದಾನವಾಗಿ ಪಡೆಯುತ್ತಾ, ತನ್ನ ಆಧ್ಯಾತ್ಮಿಕ ದಂಗೆಯ ಅಥವಾ ಅನುಭಾವಿಕ ವಿಕ್ರಮದ ಪ್ರಭಾವಳಿಯ ಕುರುಹುಗಳನ್ನುಳಿಸಿ, ತೋರುಗದ್ದುಗೆಗಳನ್ನು ಸ್ಥಾಪಿಸಿ, ಒಕ್ಕಲು ಪಡೆದು ತನ್ನದೆ ಆದ ಜಾತ್ಯತೀತ ಧರ್ಮಾತೀತ ಆಧ್ಯಾತ್ಮಕ ಸಾಧಕರ ಪಡೆಯನ್ನು ಕಟ್ಟಿಕೊಂಡು ಜನಪರವಾದ ಸಾಂಸ್ಕೃತಿಕ ಆಂದೋಲನದ ಒಂದು ವಿಶಿಷ್ಟ ಪಂಥದ ಹುಟ್ಟಿಗೆ ಕಾರಣವಾಗುತ್ತಾನೆ.

ರಾಜ್ಯದಲ್ಲಿ 'ಜ್ಯೋತಿರ್ಲಿಂಗಯ್ಯ'ನಾಗಿ ಕುರುಬನಕಟ್ಟೆಯ ದಲಿತರಾದ ನಿಂಗಯ್ಯ ಚೆನ್ನಯ್ಯ, ಆದಿ ಹೊನ್ನಾಯಕನ ಹಳ್ಳಿಯ ಗಂಗಂಡಕಾರ ಹೊನ್ನಯ್ಯನನ್ನು ಸಿಸುಮಕ್ಕಳನ್ನಾಗಿ ಪಡೆದು ಕೊನೆಗೆ ಇಂದಿನ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಬೊಪ್ಪೇಗೌಡನಪುರದಲ್ಲಿ ಬಂದು ನೆಲೆಸುತ್ತಾನೆ.

ಇದರ ನಂತರ ಬಹುಮುಖ್ಯವಾಗಿ ಮಳವಳ್ಳಿ ತಾಲ್ಲೂಕು ನಿಡುಘಟ್ಟ ಮೂಲದ ಪಾಂಚಾಲ ಕುಲದ ಬಾಚಿಬಸಪ್ಪಾಜಿ ಮತ್ತು ಮುದ್ದಮ್ಮ ದಂಪತಿಗಳೇ ಏಳನೆ ಗರ್ಭದಲ್ಲಿ ಜನಿಸಿದ ಕಿರಿಮಗ, ಧೀರ ಮರಿ, ಭಾಗ್ಯವುಳ್ಳ ಕೆಂಪಾಚಾರಿಯನ್ನು ತನ್ನ ಉತ್ತರಾಧಿಕಾರಿ ಮಾಡಿಕೊಳ್ಳಲು ಸಿಸುಮಗನನ್ನಾಗಿ ದಾನ ಪಡೆಯುತ್ತಾನೆ. ಏಳುವರ್ಷದ ಎಳೆ ಕೆಂಪಾಚಾರಿಯನ್ನು ಹನ್ನೆರಡು ವರ್ಷ ಕಾಲ ಕುಂದೂರು ಬೆಟ್ಟದ ಕಾಳಿಂಗನ ಕಲ್ಲು ಗವಿಯಲ್ಲಿಟ್ಟು ಅವನನ್ನು ಸಿದ್ಧನನ್ನಾಗಿ ಮಾಡಿ 'ಜಲ್ಮಸುದ್ಧ'ವಾದ ಬಳಿ ಶಿಷ್ಯದೀಕ್ಷೆಯನ್ನು ನೀಡಿ 'ಸಿದ್ಧಪ್ಪಾಜಿ'ಯನ್ನಾಗಿ ಪರಿವರ್ತಿಸುತ್ತಾನೆ. ಆತನಿಂದಲೇ ಹಲಗೂರಿನ ಪಾಂಚಾಳರನ್ನು ಗೆದ್ದು ಅವರಿಂದ 'ಕಬ್ಬಿಣ ಭಿಕ್ಷಾ' ಪಡೆದು ಮಠಮನೆ ಕಟ್ಟಿಸಿಕೊಳ್ಳುತ್ತಾನೆ. ಬೊಪ್ಪೇಗೌಡನಿಂದ ಕುರಿ ಹುಂಡಿಯ ಜಾಗವನ್ನು 'ತಳಭಿಕ್ಷಾ' ಪಡೆದು ಕುರಿಹುಂಡಿಯನ್ನು ಉರಿಗದ್ದುಗೆ ಮಾಡಿಕೊಂಡು, ಮುಟ್ಟಿನ ಬಟ್ಟೆಯ ಕತ್ತೆ ಕೊಟ್ಟಿಗೆಯಲ್ಲಿ ಮಠಮನೆ ಕಟ್ಟಿಕೊಂಡು ಅಲ್ಲಿಯೇ ಜೀವಸಮಾಧಿ ಹೊಂದುತ್ತಾನೆ.

ಕೆಳಜಾತಿ ಶಿಷ್ಯರಿಂದಲೇ ಸಾಮಾಜಿಕ ಆಂದೋಲನ:

ಮಂಟೇಸ್ವಾಮಿ ಸಿಸುಮಕ್ಕಳನ್ನು ಪಡೆಯುವುದರ ಹಿಂದೆ ಮುಖ್ಯವಾಗಿ ಸ್ಥಿರೀಕೃತಗೊಂಡ ಸಾಮಾಜಿಕ ಮೌಲ್ಯಗಳು ಮತ್ತು ಉತ್ಪಾದನಾ ವಿಧಾನಗಳಲ್ಲಿ ಉಂಟಾಗಿದ್ದ ಆರ್ಥಿಕ ಅಸಮಾನ ನೆಲೆಗಳನ್ನು ಬದಲಾಯಿಸುವ ಬಹುದೊಡ್ಡ ಸಾಮಾಜಿಕ ಆಂದೋಲನದಲ್ಲಿ ಅವರನ್ನು ತೊಡಗಿಸುವ ಉದ್ದೇಶಿತ ಗುರಿಯಿತ್ತೆಂಬುದು ಆತನು ತನ್ನ ಶಿಷ್ಯರನ್ನು ಬಳಸಿಕೊಂಡ ವಿಧಾನಗಳಿಂದಲೇ ತಿಳಿದುಬರುತ್ತದೆ. ಈ ಸಾಮಾಜಿಕ ಕ್ರಾಂತಿಯನ್ನು ವಿಶೇಷವಾಗಿ ಕೆಳಜಾತಿ ಶಿಷ್ಯರಿಂದ ಹಾಗೂ ಮಹಿಳಾ ನಾಯಕತ್ವದಿಂದ ಸಾಧಿಸಿ ತೋರಿಸಿರುವುದು ಗಮನಾರ್ಹ ಸಂಗತಿ.

ವಚನ ಚಳುವಳಿಯ ಕಾಯಕತತ್ವವನ್ನು, ಸಮಾನತೆಯ ಆಶಯವನ್ನು ಎತ್ತಿಹಿಡಿದ ಮಂಟೇಸ್ವಾಮಿ ಕಾಯವನ್ನು ಕಾಯಕಕ್ಕೆ ಬಳಸುವ ಮತ್ತು ಉತ್ತಮ ಆರೋಗ್ಯಕ್ಕಾಗಿ 'ಕಾಯಸಿದ್ಧಿ'ಗಳಿಸಿಕೊಳ್ಳುವ ಕಾಯ-ಕಾಯಕದ ಪ್ರಯೋಗಕ್ಕೆ ತನ್ನ ಶಿಷ್ಯರನ್ನು ಬಳಸಿಕೊಂಡಿದ್ದಾನೆ. ಸ್ವತಃ ಮಂಟೇಸ್ವಾಮಿ ದಕ್ಷಿಣದಿಂದ ಉತ್ತರಕ್ಕೆ ಪ್ರಯಾಣಿಸಿದ್ದು ಕಾಯಸಿದ್ಧಿಗಾಗಿ. ಹನ್ನೆರಡು ವರ್ಷಕಾಲ ಕಾಳಿಂಗನ ಕಲ್ಲು ಗವಿಯೊಳಗಿದ್ದ ಕೆಂಪಾಚಾರಿಯು ಕಾಯಸಿದ್ಧಿ ಹೊಂದಿ ಸಿದ್ಧಪ್ಪಾಜಿಯಾಗುತ್ತಾನೆ. ಕಾಯಸಿದ್ಧ, ಆಧ್ಯಾತ್ಮಸಿದ್ಧಿ ಮುಂತಾದ ಸಿದ್ಧಿಗಳನ್ನು ಪಡೆದ ಸಿಸುಮಕ್ಕಳನ್ನು ಕೆಳವರ್ಗದ ಹಿತಸಾಧನೆಗಾಗಿ ಬಳಸಿಕೊಳ್ಳುವ ಮಂಟೇಸ್ವಾಮಿ ಕೆಂಪಾಚಾರಿಯ 'ಆಚಾರಿ' ಎಂಬ ಕುಲಶ್ರೇಷ್ಠತೆಯ ಕಳಂಕವನ್ನು ಕಳೆದು ಘನ ನೀಲಿ ಸಿದ್ಧಪ್ಪಾಜಿಯನ್ನಾಗಿ ಮಾರ್ಪಡಿಸಿರುವುದು ಸಾಮಾಜಿಕ ಬದಲಾವಣೆಯ ದೃಷ್ಟಿಯಲ್ಲಿ ಅತ್ಯಂತ ಮುಖ್ಯ ಸಂಗತಿಯಾಗಿದೆ. ಕೆಳವರ್ಗಗಳು ಮತ್ತು ಬುಡಕಟ್ಟು ಜನರನ್ನು ಬೇಸಾಯಕ್ಕೆ ತೊಡಗಿಸುವ ಹಂತದಲ್ಲಿ ಸಿದ್ಧಪ್ಪಾಜಿಯನ್ನು ಹಲಗೂರಿನ ಪಾಂಚಾಳರ ಬಳಿಗೆ 'ಕಬ್ಬಿಣ ಭಿಕ್ಷಾ' ತರಲು ಕಳುಹಿಸುತ್ತಾನೆ. ತನ್ನ

ವಚನ ಚಳುವಳಿಯ ಕಾಯಕತತ್ವವನ್ನು, ಸಮಾನತೆಯ ಆಶಯವನ್ನು ಎತ್ತಿಹಿಡಿದ ಮಂಟೇಸ್ವಾಮಿ ಕಾಯವನ್ನು ಕಾಯಕಕ್ಕೆ ಬಳಸುವ ಮತ್ತು ಉತ್ತಮ ಆರೋಗ್ಯಕ್ಕಾಗಿ 'ಕಾಯಸಿದ್ಧಿ'ಗಳಿಸಿಕೊಳ್ಳುವ ಕಾಯ-ಕಾಯಕದ ಪ್ರಯೋಗಕ್ಕೆ ತನ್ನ ಶಿಷ್ಯರನ್ನು ಬಳಸಿಕೊಂಡಿದ್ದಾನೆ. ಸ್ವತಃ ಮಂಟೇಸ್ವಾಮಿ ದಕ್ಷಿಣದಿಂದ ಉತ್ತರಕ್ಕೆ ಪ್ರಯಾಣಿಸಿದ್ದು ಕಾಯಸಿದ್ಧಿಗಾಗಿ. ಹನ್ನೆರಡು ವರ್ಷಕಾಲ ಕಾಳಿಂಗನ ಕಲ್ಲುಗವಿಯೊಳಗಿದ್ದ ಕೆಂಪಾಚಾರಿಯು ಕಾಯಸಿದ್ಧಿ ಹೊಂದಿ ಸಿದ್ಧಪ್ಪಾಜಿಯಾಗುತ್ತಾನೆ.

ಪೂರ್ವಾಶ್ರಮದ ಪಾಂಚಾಳರನ್ನು ಗೆದ್ದು ಸಿದ್ಧಪ್ಪಾಜಿ ಅವರಿಂದ 'ಕಬ್ಬಿಣಭಿಕ್ಷಾ' ಪಡೆದು ಅದನ್ನು ಕುಲೇಳು ಹದಿನೆಂಟು ಜಾತಿಯ ನೆಲಜೀವಿಗಳಿಗೂ ಶ್ರಮಿಕ ಕುಳವಾಡಿಗಳಿಗೂ ಹಂಚುತ್ತಾನೆ ಹೀಗೆ ಪಾಂಚಾಳ ಕುಲದವರ ಆರ್ಥಿಕ ಚಟುವಟಿಕೆಗಳ ಮೇಲೆ ಪಾಂಚಾಳಕುಲದ ಶಿಷ್ಯನನ್ನೇ ದಂಗೆ ಏಳುವಂತೆ ಮಾಡುವ ಮಂಟೇಸ್ವಾಮಿ ಶೋಷಕವರ್ಗದೊಳಗಿಂದಲೇ ಸುಧಾರಕನನ್ನು ಉತ್ಪತ್ತಿ ಮಾಡುವುದು ಪ್ರಶಂಸನೀಯವಾದ ಸೃಷ್ಟಿಕಾರ್ಯವೇ ಸರಿ.

ಈಗಾಗಲೇ ಶೋಷಣೆಗೊಳಗಾಗಿರುವ ಶೂದಾತಿ ಶೂದ್ರಾರು, ದಲಿತರು ಅಲ್ಪಸಂಖ್ಯಾತರನ್ನು ಮತ್ತಷ್ಟು ಶೋಷಣೆಗೀಡುಮಾಡಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಶೋಷಿತ ಸಮುದಾಯದೊಳಗಿಂದಲೇ ಆಯುಧಗಳನ್ನು ತಯಾರಿಸಿ ಪ್ರಯೋಗಿಸುವ ಆರ್‌ಎಸ್‌ಎಸ್. ಭಜರಂಗದಳ ಮುಂತಾದ ಹಿಂದೂ ಸಾಮ್ರಾಜ್ಯ ಶಕ್ತಿಗಳಿಗಿಂತಲೂ ಜೀವಪರ ಆಶಯಕ್ಕಾಗಿ ತನ್ನ ಸಿಸುಮಕ್ಕಳನ್ನು ಪ್ರಯೋಗಿಸುವ ಮಂಟೇಸ್ವಾಮಿಯ ಈ

ಈಗಾಗಲೇ ಶೋಷಣೆಗೊಳಗಾಗಿರುವ ಶೂದಾತಿ ಶೂದ್ರಾರು, ದಲಿತರು ಅಲ್ಪ ಸಂಖ್ಯಾತರನ್ನು ಮತ್ತಷ್ಟು ಶೋಷಣೆಗೀಡು ಮಾಡಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಶೋಷಿತ ಸಮುದಾಯದೊಳಗಿಂದಲೇ ಆಯುಧಗಳನ್ನು ತಯಾರಿಸಿ ಪ್ರಯೋಗಿಸುವ ಆರ್‌ಎಸ್‌ಎಸ್. ಭಜರಂಗದಳ ಮುಂತಾದ ಹಿಂದೂ ಸಾಮ್ರಾಜ್ಯ ಶಕ್ತಿಗಳಿಗಿಂತಲೂ ಜೀವಪರ ಆಶಯಕ್ಕಾಗಿ ತನ್ನ ಸಿಸುಮಕ್ಕಳನ್ನು ಪ್ರಯೋಗಿಸುವ ಮಂಟೇಸ್ವಾಮಿಯ ಈ ಪ್ರತಿತಂತ್ರದ ಮಾದರಿಯನ್ನು ಇವೊತ್ತಿನ ಎಡಪಂಥೀಯ ಗುಂಪುಗಳು ಅನುಸರಿಸುವ ಅಗತ್ಯವಿದೆ ಅನ್ನಿಸುತ್ತದೆ.

ಪ್ರತಿತಂತ್ರದ ಮಾದರಿಯನ್ನು ಇವೊತ್ತಿನ ಎಡಪಂಥೀಯ ಗುಂಪುಗಳು ಅನುಸರಿಸುವ ಅಗತ್ಯವಿದೆ ಅನ್ನಿಸುತ್ತದೆ.

ನೀಲಗಾರರು ಮತ್ತು ದೇವರಗುಡ್ಡರು ಹಾಡುವ ಮಲೆಮಾದೇಶ್ವರಕಾವ್ಯ ಹಾಗೂ ಮಂಟೇಸ್ವಾಮಿ ಕಾವ್ಯಗಳಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರಗಳು 'ಕತ್ತಲರಾಜ್ಯ'ದ ಪ್ರದೇಶಗಳೆಂಬ ಉಲ್ಲೇಖವಿದೆ. 'ಕತ್ತಲರಾಜ್ಯ' ಎಂಬ ಗುಣವಾಚಕವೇ ಒಂದು ಕಾಲಕ್ಕೆ ಆ ಸೀಮೆಯಲ್ಲಿ ವಾಸಿಸುತ್ತಿದ್ದ ಜನರ ಬದುಕಿನ ಒಳಮರ್ಮವನ್ನು ತೋರಿಸುವಂತಿದೆ. ದಟ್ಟಡವಿಯ ಕತ್ತಲೆಯಲ್ಲಿ ಬದುಕುತ್ತಿದ್ದ ಬುಡಕಟ್ಟು ಸಮುದಾಯಗಳು, ದಲಿತರು ಮುಂತಾದ ಶ್ರಮಜೀವಿಗಳು ವ್ಯವಸಾಯ ಮಾರ್ಗವನ್ನರಿಯದೆ ಅವರ ಬದುಕು ಬರ್ಬರವಾಗಿತ್ತು.

ವ್ಯವಸಾಯಕ್ಕೆ ಅಗತ್ಯವಾಗಿದ್ದ ಕಬ್ಬಿಣದ ಉತ್ಪಾದನೆಯ ಮೇಲೆ ಹಿಡಿತ ಸಾಧಿಸಿದ್ದ ಪಾಂಚಾಳರು ಸಹಜವಾಗಿ ಆರ್ಥಿಕತೆಯನ್ನು ನಿಗ್ರಹಿಸುವವರಾಗಿದ್ದರು. ಜಮೀನ್ದಾರಿಕೆಯ ಕ್ರೌರ್ಯ, ದರ್ಪ, ದೌರ್ಜನ್ಯ ದಬ್ಬಾಳಿಕೆಗಳನ್ನು ಮೈಗೂಡಿಸಿಕೊಂಡಿದ್ದ ಆಳುವವರ್ಗಗಳ ಆರ್ಥಿಕ ರಚನೆಗಳನ್ನು ಛಿದ್ರೀಕರಿಸುವ ಹಾಗೂ ಸಾಮಾಜಿಕ ಸಮಾನತೆಗೆ ಅರ್ಥಪೂರ್ಣ ಆರ್ಥಿಕ ತಳಹದಿಯನ್ನು ಹಾಕುವ ನಿಟ್ಟಿನಲ್ಲಿ ಕಬ್ಬಿಣವನ್ನು ಪಡೆಯುವ ಸಲುವಾಗಿ ಮಂಟೇಸ್ವಾಮಿ ಪಾಂಚಾಳರ ಮೇಲೆ ಯುದ್ಧ ಸಾರುತ್ತಾನೆ. ಪಾಂಚಾಳ ಕುಲದವನೇ ಆದ ತನ್ನ ಸಿಸುಮಗನಾದ ಸಿದ್ಧಪ್ಪಾಜಿಯ ಮೂಲಕ ಪಾಂಚಳರನ್ನು ಗೆದ್ದು ಕಬ್ಬಿಣ ಪಡೆದು ಕಾಡು ಜನರಿಗೆ ಕೃಷಿ ಮಾರ್ಗಗಳನ್ನು ಹೇಳಿ ಕೊಡುತ್ತಾನೆ. ಕಾಡಿನ ಕತ್ತಲೆಯಲ್ಲಿದ್ದ ಜನರು ನಾಗರಿಕತೆಯ ಬೆಳಕಿಗೆ ತೆರೆದುಕೊಳ್ಳುತ್ತಾರೆ. ಹೀಗೆ ಕಬ್ಬಿಣದಿಂದ ಆಯುಧಗಳನ್ನು ಮತ್ತು ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಮಾರುತ್ತ ಕಬ್ಬಿಣದ ಉತ್ಪಾದನೆಯ ಮೇಲೆ ಹಿಡಿತ ಸಾಧಿಸಿದ್ದ ಪಾಂಚಾಳರ ಆರ್ಥಿಕ ರಚನೆಗಳನ್ನು ಮುರಿದು, ಕೇಂದ್ರೀಕರಣಕ್ಕೊಳಪಟ್ಟಿದ್ದ ಸಂಪತ್ತು ಮತ್ತು ಉತ್ಪಾದನಾ ಜ್ಞಾನಗಳನ್ನು ವಿಕೇಂದ್ರೀಕರಿಸಿದ ಮಂಟೇಸ್ವಾಮಿ ಸಾಮಾಜಿಕ-ಆರ್ಥಿಕ ಸಮಾನತೆ ಸಾಧಿಸುವ ಹಾಗೂ ನೆಲಜೀವಿಗಳನ್ನು ಸಂಸ್ಕೃತಿಯ ಪ್ರಧಾನಧಾರೆಗೆ ತರುವ ಬಹುದೊಡ್ಡ ಕ್ರಾಂತಿಕಾರ್ಯವನ್ನು ಸಾಧಿಸುತ್ತಾನೆ.

ಎಲ್ಲಕ್ಕಿಂತ ಮಿಗಿಲಾಗಿ ಅವಮಾನವೀಯ ಜಾತಿ ವ್ಯವಸ್ಥೆ, ಉಳಿಗಮಾನ್ಯ ಶಕ್ತಿಗಳ ಕ್ರೌರ್ಯ, ಮುಂತಾದ ಸಾಮಾಜಿಕ ಅಸಮಾನತೆಗಳ ವಿರುದ್ಧ ಆಧ್ಯಾತ್ಮಿಕ ದಂಗೆ ಎದ್ದ ಸ್ವರೂಪವನ್ನು ವಿವರಿಸುವ ಮಂಟೇಸ್ವಾಮಿ ಕಾವ್ಯ ಮಧ್ಯಕಾಲೀನ ಕರ್ನಾಟಕದ ಚರಿತ್ರೆಯ ಕಥನವಾಗಿ ಮಾತ್ರ ಉಳಿಯದೆ, ಸಶಕ್ತವಾಗಿಯೂ ನಿರ್ಲಿಪ್ತವಾಗಿರುವ ಇಂದಿನ ದ.ಸಂ.ಸ-ರೈತ-ಮಹಿಳೆ ಹಾಗೂ ಪರಿಸರ ಚಳುವಳಿ ಮುಂತಾದ ಜನಪರ ಚಳುವಳಿಗಳ ಸ್ವರೂಪವನ್ನೂ ಪರಿಶೀಲನೆಗೊಳಪಡಿಸುತ್ತದೆ. ಆದುದರಿಂದ ಜಾಗತೀಕರಣ, ವಿಶ್ವ ಆರ್ಥಿಕತೆ, ಕೋಮುವಾದ, ಜಾತಿ ಸಂಘರ್ಷ, ಮತೀಯ ದ್ವೇಷ ಮುಂತಾದ ರಣಗಾಯಗಳಿಂದ ನರಳುತ್ತಿರುವ ನಮ್ಮ ಸಮಾಜಕ್ಕೆ 'ಹಿಂಸೆ'ಯಿಂದ ಹೊರತಾದ 'ಆಧ್ಯಾತ್ಮಕತೆ'ಯ ಮುಲಾಮು ಹಚ್ಚಲು ಮಂಟೇಸ್ವಾಮಿಯ ನೀಲಗಾರರ ಪರಂಪರೆಯ ತತ್ವಗಳನ್ನು ಧಾರಣೆ ಮಾಡಿಕೊಳ್ಳುವ ಹಂಬಲ ಮತ್ತು ದಾಹಗಳನ್ನು ನಾವು ಗಾಢವಾಗಿ ಉದ್ದೀಪಿಸಿಕೊಳ್ಳಬೇಕಾಗಿದೆ.

(ಮುಂದಿನ ಸಂಚಿಕೆಗೆ)

ದಾಖಲೆಗಾಗಿ, ಜಾತಿಯನ್ನು ಆಚರಿಸುತ್ತಿರುವ ಅಥವಾ ಬಿಎಸ್‌ಪಿಯನ್ನು ವಿರೋಧಿಸುವ ಈ ಸಮೀಕ್ಷಾಕಾರರನ್ನು ಅಥವಾ ಸುದ್ದಿ ಚಾನಲ್‌ಗಳನ್ನು ದೂರುತ್ತಿಲ್ಲ. ಬದಲು ಅದು ಏನೆಂದರೆ ಜಾತಿಗಳು ಹೇಗೆ ಕ್ರಿಯಾಶೀಲವಾಗುತ್ತವೆ ಅಥವಾ ಒಂದೆರೆಡು ಜಾತಿಗಳು ಒಂದುಗೂಡುವುದರಿಂದ ಏನಾಗುತ್ತದೆ ಎಂಬುದರ ಬಗ್ಗೆ ಒಳನೋಟಗಳಿಲ್ಲದಿರುವುದು ದುರಂತವೆಂದೇ ಹೇಳಬೇಕು. ಬಿಎಸ್‌ಪಿಯ ದಲಿತ-ಬ್ರಾಹ್ಮಣ ಸಿದ್ಧಾಂತ ಅದಕ್ಕೊಂದು ಸ್ಪಷ್ಟ ನಿದರ್ಶನವೆಂದೇ ಹೇಳಬೇಕು. ಈ ಸಿದ್ಧಾಂತವು ವಾಸ್ತವದಲ್ಲಿ ದಲಿತ-ಬ್ರಾಹ್ಮಣ ಹೊಂದಾಣಿಕೆಯಾಗಿ ಕಾಣಿಸಿಕೊಂಡು ಬಿಎಸ್‌ಪಿಯು ೮೬ ಕ್ಷೇತ್ರಗಳಲ್ಲಿ ಬ್ರಾಹ್ಮಣ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿತು. ಹೀಗೆಂದಾಕ್ಷಣ ಬ್ರಾಹ್ಮಣರೆಲ್ಲರೂ ಸಹ ಬಿಎಸ್‌ಪಿ ಬ್ರಾಹ್ಮಣ ಅಭ್ಯರ್ಥಿಗಳಿಗೆ ಮತಹಾಕುತ್ತಾರೆಂದೇನು ಅಲ್ಲ. ಎಲ್ಲಿ ಬಿಎಸ್‌ಪಿಯ ಬ್ರಾಹ್ಮಣೇತರ ಅಭ್ಯರ್ಥಿಗಳು ನಿಂತಿದ್ದಾರೋ ಅಲ್ಲಿ ಬಹು ಮಂದಿ ಬ್ರಾಹ್ಮಣರ ಮತಗಳೇನು ಅವರಿಗೆ ದೊರೆಯುವುದಿಲ್ಲ.

ಅನು: ಡೊಮಿನಿಕ್. ಡಿ

ಪಂಡಿತರ ತಪ್ಪು ಲೆಕ್ಕಾಚಾರ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಮಾರ್ಚ್ ೨೭, ೨೦೦೭ ರಂದು ಸಿಎಸ್‌ಡಿಎಸ್/ಸಿಎನ್‌ಎನ್-ಐಬಿಎನ್ ನಡೆಸಿದ ಚುನಾವಣಾ ಪೂರ್ವ ಸಮೀಕ್ಷೆಯಲ್ಲಿ ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಗೆ ೧೩೫ ಕ್ಷೇತ್ರಗಳಲ್ಲಿ ಗೆಲುವು, ಎಸ್‌ಪಿಗೆ ೧೫೫ ಎಂದು ವರದಿಮಾಡಲಾಗಿತ್ತು. ಈ ವರದಿ ತಪ್ಪಾಗಲಿದೆ ಎಂದು ಬೇಗನೆ ಗೊತ್ತಾಗುತ್ತದೆ. ಹಾಗಾದರೆ ಸಿಎಸ್‌ಡಿಎಸ್ ಇಂಥ ತಪ್ಪು ಲೆಕ್ಕ ಮಾಡಿ ಸಿಎನ್‌ಎನ್-ಐಬಿಎನ್‌ನ ಮುಖಕ್ಕೆ ರಾಡಿ ಎರಚಿಕೊಳ್ಳುವಂತೆ ರಾಜ್‌ದೀಪ್ ಸರ್‌ದೇಸಾಯಿ ಏಕೆ ಬಿಟ್ಟಿದ್ದಾರೆ?

ಎನ್‌ಡಿಟಿವಿ ಪ್ರಕಾರ ಬಿಎಸ್‌ಪಿಗೆ ೧೨೫-೧೩೫ ಸಿಕ್ಕರೆ, ಎಸ್‌ಪಿಗೆ ೧೨೦-೧೩೦ ಎಂದು ಹೇಳಿತ್ತು. ಈ ಲೆಕ್ಕಾಚಾರವೂ ಸಹ ತಪ್ಪಾಗುತ್ತದೆ. ಪ್ರಣಯ್‌ರಾಯ್ ಇಂಥ ತಪ್ಪನ್ನೇಕೆ ಮಾಡುತ್ತಿದ್ದಾರೆ?

ಚುನಾವಣಾ ಪೂರ್ವದ ಈ ಸಮೀಕ್ಷೆಗಳ ಫಲಿತಾಂಶಗಳೆಲ್ಲವೂ ಬಿಎಸ್‌ಪಿಗೆ ನಕಾರಾತ್ಮಕವಾಗಿಯೇ ಇರುತ್ತವೆ. ಅನೇಕ ಸಲ ಈ ತಪ್ಪು ಲೆಕ್ಕಾಚಾರಗಳೆಲ್ಲವೂ ಪ್ರಬಲ ಜಾತಿಗಳ ಪರವಾಗಿದ್ದು, ಬಿಎಸ್‌ಪಿಗೆ ವಿರುದ್ಧವಾಗಿಯೇ ಇರುತ್ತವೆ. ನನ್ನ ಲೆಕ್ಕಾಚಾರದ ಪ್ರಕಾರ ಉತ್ತರ ಪ್ರದೇಶದ ಚುನಾವಣೆಯಲ್ಲಿ ಬಿಎಸ್‌ಪಿಯು ೧೫೦-೧೭೫+ (ಪ್ಲಸ್) ಕ್ಷೇತ್ರಗಳಲ್ಲಿ ಜಯಭೇರಿ ಹೊಡೆಯುತ್ತದೆ ಎಂದು ಹೇಳಿದರೆ ಹೇಗೆ?

ಉತ್ತರಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿದ್ದುಕೊಂಡು ಈ ಅಂಕಣವನ್ನು ಬರೆಯುತ್ತಿದ್ದೇನೆ. ಎನ್‌ಡಿಟಿವಿ ಅಥವಾ ಐಬಿಎನ್‌ಗಳಂತೆ ನಾನು ಚುನಾವಣಾಪೂರ್ವ ಸಮೀಕ್ಷೆ ಮಾಡಲು ಒಂದು ಏಜನ್ಸಿಯನ್ನು ಅಥವಾ ಸಂಪನ್ಮೂಲಗಳನ್ನು ಬಳಸಿಕೊಂಡಿಲ್ಲ. ನನಗೊಬ್ಬ ಸಹಾಯಕನೂ ಸಹ ಇರಲಿಲ್ಲ. ಆದ್ದರಿಂದ ನನ್ನ ಈ ಪೂರ್ವಸೂಚನೆ ದೊಡ್ಡ ತಪ್ಪಾಗಬೇಕಾಗುತ್ತದೆ. ಆದರೆ ನನ್ನ ತಪ್ಪು ಮಾತ್ರ ಬಿಎಸ್‌ಪಿಯ ಪರವಾಗಿರುತ್ತದೆ.

ಮೇ ೧೧, ೨೦೦೭ರಂದು ಚುನಾವಣಾ ಫಲಿತಾಂಶಗಳು ಹೊರಬೀಳಲಿದ್ದು ನನ್ನ ತಪ್ಪು ಏನೆಂದು ಎಲ್ಲರಿಗೂ ತಿಳಿಯುತ್ತದೆ. ನನ್ನ ದಲಿತಪರವಾದ ನಿಲುವನ್ನು ವಿನಯದಿಂದಲೇ ಒಪ್ಪಿಕೊಳ್ಳುತ್ತೇನೆ. ಹೀಗಿರುವಲ್ಲಿ ಪ್ರಬಲ ಜಾತಿಗಳ ಪರವಾಗಿರುವ ಉಳಿದೆಲ್ಲಾ ಚುನಾವಣಾಪೂರ್ವ ಸಮೀಕ್ಷಾ ಪಂಡಿತರು ತಮ್ಮ ನಿಲುವನ್ನು ಒಪ್ಪಿಕೊಳ್ಳುವರೇ?

ಹಾಗಾದರೆ ಇಲ್ಲಿಯವರೆಗಿನ ಮುನ್ಸೂಚನೆಯಾದರೂ ಏನು? ಬಿಎಸ್‌ಪಿಯ ಬಗ್ಗೆ ಈ ಪಂಡಿತ ಭವಿಷ್ಯವಾದಿಗಳು ಯಾವಾಗ ತಪ್ಪು ಲೆಕ್ಕ ಮಾಡುತ್ತಾರೋ ಆಗ ಅವರು ದೂಷಿಸುವುದಾದರೂ ಯಾರನ್ನು? ಅವರು ತಮ್ಮ ವಿಧಾನದ ಬಗ್ಗೆಯಾಗಲೀ, ತಮ್ಮ ಒಳನೋಟಗಳ ಬಗ್ಗೆಯಾಗಲೀ ಅಥವಾ ಪಕ್ಕಾ ನಿಲುವುಗಳಿಲ್ಲದಿರುವುದರ ಬಗ್ಗೆಯಾಗಲೀ ಅಥವಾ ತಮ್ಮ ಸಾಮಾಜಿಕ ಹಿನ್ನಲೆಯನ್ನಾಗಲೀ ದೂರುತ್ತಾರೆಯೇ? ಇಲ್ಲ. ಅದನ್ನವರು ಮಾಡುವುದಿಲ್ಲ. ಬದಲು ಅವರು ಮತದಾರರನ್ನು ಬಯ್ಯುತ್ತಾರೆ. ನಗುಬರುತ್ತದೆಯಲ್ಲವೇ.

ಬಿಎಸ್‌ಪಿ ಮತದಾರರು ತಾವು ಯಾರಿಗೆ ಮತಚಲಾಯಿಸುತ್ತಾರೆನ್ನುವುದರ ಬಗ್ಗೆ ಬಹಿರಂಗವಾಗಿ ಘೋಷಿಸಲಾರರು. ಅವರ್‍ಯಾರೂ ಸಹ ತಮ್ಮ ಉದ್ದೇಶವೇನೆಂದು ಹೇಳುವುದಿಲ್ಲ. ಈ ಸಮೀಕ್ಷ ಪ್ರತಿನಿಧಿಗಳಿಗೆ ಅವರು ಒಂದನ್ನು ಹೇಳಿದರೆ ಅವರು ಮತಪೆಟ್ಟಿಗೆಯ ಹತ್ತಿರ ಬಂದಾಗ ಮಾಡುವುದು ಮತ್ತೊಂದನ್ನು.

ದಾಖಲೆಗಾಗಿ, ಜಾತಿಯನ್ನು ಆಚರಿಸುತ್ತಿರುವ ಅಥವಾ ಬಿಎಸ್‌ಪಿಯನ್ನು ವಿರೋಧಿಸುವ ಈ ಸಮೀಕ್ಷಾಕಾರರನ್ನು ಅಥವಾ ಸುದ್ದಿ ಚಾನಲ್‌ಗಳನ್ನು ದೂರುತ್ತಿಲ್ಲ. ಬದಲು ಅದು ಏನೆಂದರೆ ಜಾತಿಗಳು ಹೇಗೆ ಕ್ರಿಯಾಶೀಲವಾಗುತ್ತವೆ ಅಥವಾ ಒಂದೆರೆಡು ಜಾತಿಗಳು ಒಂದುಗೂಡುವುದರಿಂದ ಏನಾಗುತ್ತದೆ ಎಂಬುದರ ಬಗ್ಗೆ ಒಳನೋಟಗಳಿಲ್ಲದಿರುವುದು ದುರಂತವೆಂದೇ ಹೇಳಬೇಕು. ಬಿಎಸ್‌ಪಿಯ ದಲಿತ-ಬ್ರಾಹ್ಮಣ ಸಿದ್ಧಾಂತ ಅದಕ್ಕೊಂದು ಸ್ಪಷ್ಟ ನಿದರ್ಶನವೆಂದೇ ಹೇಳಬೇಕು. ಈ ಸಿದ್ಧಾಂತವು ವಾಸ್ತವದಲ್ಲಿ ದಲಿತ-ಬ್ರಾಹ್ಮಣ ಹೊಂದಾಣಿಕೆಯಾಗಿ ಕಾಣಿಸಿಕೊಂಡು ಬಿಎಸ್‌ಪಿಯು ೮೬ ಕ್ಷೇತ್ರಗಳಲ್ಲಿ ಬ್ರಾಹ್ಮಣ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿತು. ಹೀಗೆಂದಾಕ್ಷಣ ಬ್ರಾಹ್ಮಣರೆಲ್ಲರೂ ಸಹ ಬಿಎಸ್‌ಪಿ ಬ್ರಾಹ್ಮಣ ಅಭ್ಯರ್ಥಿಗಳಿಗೆ ಮತಹಾಕುತ್ತಾರೆಂದೇನು ಅಲ್ಲ. ಎಲ್ಲಿ ಬಿಎಸ್‌ಪಿಯ ಬ್ರಾಹ್ಮಣೇತರ ಅಭ್ಯರ್ಥಿಗಳು ನಿಂತಿದ್ದಾರೋ ಅಲ್ಲಿ ಬಹು ಮಂದಿ ಬ್ರಾಹ್ಮಣರ ಮತಗಳೇನು ಅವರಿಗೆ ದೊರೆಯುವುದಿಲ್ಲ.

ಹೀಗಿದ್ದರೂ, ದಲಿತ-ಬ್ರಾಹ್ಮಣ ಸಿದ್ಧಾಂತವನ್ನು ನಾನು ಕಂಡಂತೆ ಅದು ಉತ್ತರ ಪ್ರದೇಶದ ಎಲ್ಲಾ ಭಾಗಗಳಲ್ಲೂ ಕ್ರಿಯಾಶೀಲವಾಗಿದೆ. ಈ ದಲಿತ-ಬ್ರಾಹ್ಮಣ ಸಿದ್ಧಾಂತದ ಪರಿಣಾಮವನ್ನು ಅರಿಯಬೇಕಾದರೆ ಅದಕ್ಕೇನು ದೊಡ್ಡ ಸಮಾಜಶಾಸ್ತ್ರಜ್ಞ ಅಥವಾ ರಾಜ್ಯಶಾಸ್ತ್ರ ಓದಿಕೊಂಡಿರಬೇಕಾಗಿಯೂ ಇಲ್ಲ. ಅದು ಬಹಳ ಸರಳವಾಗಿದೆ: ಗ್ರಾಮೀಣ ಪ್ರದೇಶದ ಸಣ್ಣ ಪಟ್ಟಣದಲ್ಲಿರುವ ದಲಿತ ಕುಟುಂಬವೊಂದು ಬ್ರಾಹ್ಮಣ ಅಥವಾ ರಾಜಪೂತ್ ತಮ್ಮ ಮನೆಗೆ ಆಹ್ವಾನಿಸತ್ತದೆ. ಅವರಿಬ್ಬರೂ ಸಹ ಸಾರ್ವಜನಿಕವಾಗಿಯೇ ಊಟ ಮಾಡುತ್ತಾರೆ. ಸಾಮಾಜಿಕವಾಗಿ ಕೆಳಗಿನ ಹಂತದಲ್ಲಿರುವ ಯಾದವರು ಅಥವಾ ಜಾಟರು ಅಂಥ ಆಹ್ವಾನ ಬಂದಾಗ ತಿರಸ್ಕರಿಸದೆ ಒಪ್ಪಿಕೊಳ್ಳುತ್ತಾರೆ. ಇದರಿಂದ ಒಂದು ಸಮಾಚಾರ ಬಹಿರಂಗವಾಗುತ್ತದೆ- "ದಲಿತ ಕುಟುಂಬದಲ್ಲಿ ಬ್ರಾಹ್ಮಣರು ಊಟಮಾಡುತ್ತಾರಾದರೆ ನಾವೇಕೆ ಅವರ ಮನೆಯಲ್ಲಿ ಊಟಮಾಡಬಾರದು?"

ಆದ್ದರಿಂದ, ಬಿಎಸ್‌ಪಿಯ ೮೬ ಬ್ರಾಹ್ಮಣ ಉಮೇದುವಾರರು ನಿಂತಿರುವ ಮತ ಕ್ಷೇತ್ರಗಳಲ್ಲಿ ಶೇ.೪೦ರಷ್ಟು ಬ್ರಾಹ್ಮಣರು ಅವರ ಪರವಾಗಿ ಮತಚಲಾಯಿಸುತ್ತಾರಾದರೆ, ಅತ್ಯಂತ ಹಿಂದುಳಿದ ಜಾತಿಗಳವರು ಮತ್ತೊಂದು ಶೇ.೩೦ ರಷ್ಟು ಮತಗಳನ್ನು ಆನೆಗುರುತಿನ ಪರವಾಗಿ ಚಲಾಯಿಸಬಹುದಲ್ಲವೇ.

ಅದೇ ರೀತಿ ಬಿಎಸ್‌ಪಿಯ ಬ್ರಾಹ್ಮಣೇತರ ಅಭ್ಯರ್ಥಿಗಳ ಪರವಾಗಿ ಶೇ. ೧೦ರಷ್ಟು ಬ್ರಾಹ್ಮಣ ಮತಗಳನ್ನು ಪಡೆಯುತ್ತಾರಾದರೆ, ಇತರೆ ಹಿಂದುಳಿದ ಜಾತಿಗಳು ಅಥವಾ ಮುಸ್ಲಿಮರ ಶೇ.೩೦ರಷ್ಟು ಮತಗಳು ಅವರ ಪರವಾಗಿ ಚಲಾಯಿಸುತ್ತಾರೆ. ಕೆಲವೇ ಮಂದಿ ಬ್ರಾಹ್ಮಣ ಕಾರ್ಯಕರ್ತರು ಬಿಎಸ್‌ಪಿ ಬಾವುಟ ಹಿಡಿದು ಮತ ಪೆಟ್ಟಿಗೆಗಳ ಹತ್ತಿರ ಸುತ್ತಾಡುವಾಗ ಬ್ರಾಹ್ಮಣೇತರರನ್ನು ಸುಲಭವಾಗಿ ಬಿಎಸ್‌ಪಿ ಪರ ಮತ ಚಲಾಯಿಸುವಂತೆ ಆಕರ್ಷಿಸುತ್ತಾರೆ.

ಈ ಅದ್ಭುತವಾದ ಸಾಮಾಜಿಕ ಹೊಂದಾಣಿಕೆಯ ಪರಿಣಾಮ ಮತದಾರರ ಮೇಲೆ ಹೇಗಾಗುತ್ತದೆ ಎನ್ನು

ವುದನ್ನು ಯಾವುದೇ ಪ್ರಶ್ನಾವಳಿಯೂ ಸಹ ಗುರುತಿಸಬಹುದು.

ತಪ್ಪುಗಳನ್ನು ಎಲ್ಲರು ಮಾಡುತ್ತಾರೆ. ಆದರೆ ಪ್ರಬಲ ಜಾತಿಗಳಿಂದ ಆಗುವ ತಪ್ಪುಗಳು ಮಾತ್ರ ಸಾಮಾಜಿಕವಾಗಿ ತುಳಿತಕ್ಕೊಳಗಾದವರ ವಿರುದ್ಧವಾಗಿ ನಿಲ್ಲುತ್ತವೆ ಏಕೆ?

ಆದ್ದರಿಂದ ನಾವು ಮೇ೧೧ರ ಮಧ್ಯಾಹ್ನದ ತನಕ ಕಾದಲ್ಲಿ ಮೇಲಿನ ತರ್ಕದ ಫಲಿತಾಂಶ ನಮಗೇ ಗೊತ್ತಾಗುತ್ತದೆಯಲ್ಲವೇ? ನನ್ನ ಅಭಿಪ್ರಾಯದಲ್ಲಿ ಬಿಎಸ್‌ಪಿಯು ಈ ಪ್ರಬಲಜಾತಿಗಳ ಎಲ್ಲಾ ಲೆಕ್ಕಾಚಾರವನ್ನು ತಲೆಕೆಳಗಾಗುತ್ತದೆ.

"ಮಾಯಾವತಿಯವರು ನಮಗೊಂದು ಘನತೆಯನ್ನು ತಂದುಕೊಟ್ಟಿದ್ದಾರೆ " ಎಂದು ಉತ್ತರಪ್ರದೇಶದ ಎಲ್ಲಾ ಚುನಾವಣೆಯ ಪ್ರಚಾರ ಸಭೆಗಳಲ್ಲಿ ಬಿಎಸ್‌ಪಿಯ ಬ್ರಾಹ್ಮಣ ಮುಖವಾಡವಾಗಿರುವ ಸತೀಶ್ ಚಂದ್ರ ಮಿಶ್ರರವರು ಹೇಳುತ್ತಾರೆ.

ಈ ಒಂದು ಸಾಲು ದಲಿತ-ಬ್ರಾಹ್ಮಣ ಮೈತ್ರಿಯ ಸಿದ್ಧಾಂತವನ್ನು ಖಚಿತಪಡಿಸುತ್ತದೆ. ಚಾರಿತ್ರಿಕವಾಗಿ ಯಾವುದೇ ರೀತಿಯ ಬ್ರಾಹ್ಮಣರ ವಿಧಿವತ್ತಾದ ಸಮ್ಮತಿ ಇಲ್ಲದಿದ್ದಲ್ಲಿ ಯಾವುದೇ ರೀತಿಯ ಸಾಮಾಜಿಕ ಘನತೆ ವ್ಯಕ್ತವಾಗುತ್ತಿರಲಿಲ್ಲ. ಆದರೆ ಈಗ ಉತ್ತರ ಪ್ರದೇಶದ ಚರಿತ್ರೆ ಭಾರತಕ್ಕೆ ಹೊಸ ಮಾರ್ಗವೊಂದನ್ನು ತೋರಿಸುತ್ತಿದೆ. ಚಾರಿತ್ರಿಕವಾಗಿ ಬ್ರಾಹ್ಮಣರಿಂದ ಬಹಿಷ್ಕೃತರಾದ ಮತ್ತು ಅವಮಾನಿತರಾದ ದಲಿತರೇ ಈಗ ಭಾರತಕ್ಕಾಗಿ ಹೊಸ ಸಾಮಾಜಿಕ ಒಪ್ಪಂದವನ್ನು ಮುಂದಿಟ್ಟಿದ್ದಾರೆ. ಈಗ ಬ್ರಾಹ್ಮಣರಿಗೆ ಗೌರವದ ಜಾಗ ದೊರೆಯಬೇಕಾದರೆ ದಲಿತರ ಅಗತ್ಯ ಬಹುವಾಗಿದೆ.

ನೀವು ಇಷ್ಟಪಡಿ ಅಥವಾ ದೂರಿ, ಇಂದು ದಲಿತ-ಬ್ರಾಹ್ಮಣ (ಮೈತ್ರಿಯ) ಸಿದ್ಧಾಂತ ಎನ್ನುವುದು ವಾಸ್ತವವಾಗಿದೆ. ಸಮಕಾಲೀನ ಭಾರತದ ಈ ತೀವ್ರವಾದ ಸಾಮಾಜಿಕ ಆಶೋತ್ತರಕ್ಕೆ ಮಾಯವತಿಯವರು ಒಂದು ಮೂರ್ತ ರೂಪವನ್ನು ನೀಡಿದ್ದಾರಲ್ಲದೆ, ಉ.ಪ್ರ.ದಲ್ಲಿ ಬಿಎಸ್‌ಪಿಯು ಚುನಾವಣೆಯಲ್ಲಿ ಶ್ರೇಷ್ಟವಾದ ಗೆಲುವನ್ನು ಪಡೆಯುಂತೆ ಮಾಡಿದ್ದಾರೆ. ಹೀಗಾಗಿ ಶೇ. ೫ರಷ್ಟು ಬ್ರಾಹ್ಮಣರು ಬಿಎಸ್‌ಪಿಯ ಬ್ರಾಹ್ಮಣೇತರ ಅಭ್ಯರ್ಥಿಗಳಿಗೆ ತಮ್ಮ ಮತಹಾಕಿದರೂ ಸಹ, ಭಾರತವು ಆ ಹೊಸಯುಗದ ಸಾಮಾಜಿಕ ಹೊಂದಾಣಿಕೆಯನ್ನು ಪ್ರತಿಪಾದಿಸುವತ್ತ ಮುನ್ನುಗ್ಗುತ್ತದೆ. ಭಾರತದ ಮುಂದಿನ ಚರಿತ್ರೆಯು ಇಲ್ಲಿಯವರೆಗೆ ಅಮಾನಿತರಾದ ದಲಿತರೇ ನಿರ್ಧರಿಸಲಿದ್ದಾರೆ ಎನ್ನುವುದು ಒಪ್ಪತಕ್ಕ ಸಂಗತಿಯೇ ಆಗಿದೆ.

ಭಾರತಕ್ಕೆ ಈ ಹೊಸ ಸಾಮಾಜಿಕ ಒಪ್ಪಂದ ಅಗತ್ಯವಾಗಿದೆ. ಬ್ರಾಹ್ಮಣ ಬರೆದು ಅಸ್ತಿವಾರ ಹಾಕಿದ್ದ ಸಾಮಾಜಿಕ ಒಪ್ಪಂದವು ಏಕರೂಪಿ ಮತ್ತು ಏಕಮುಖವಾಗಿದ್ದು ಜಾತಿಯಾಚೆಗಿದ್ದ ಸಮುದಾಯಗಳ ಮೇಲೆ ಆಕ್ರಮಣಕಾರಿಯಾಗಿ ಹೇರಲಾದದ್ದು. ಆದರೆ ದಲಿತರು ನಿರೂಪಿಸಲಿರುವ ಈ ಸಾಮಾಜಿಕ ಒಪ್ಪಂದದಲ್ಲಿ ಸರ್ವರ ಸಹಮತದಿಂದ ಕೂಡಿದ್ದು ಮತ್ತಷ್ಟು ವ್ಯಾಪ್ತಿಯನ್ನು ಹೊಂದುವಂಥದ್ದು. ಗ್ರಾಮೀಣ ಪಟ್ಟಣಗಳಲ್ಲಿರುವ ಬ್ರಾಹ್ಮಣರು ದಲಿತರ ನಾಯಕತ್ವದಲ್ಲಿ ನಡೆಯಲು ಸಿದ್ಧರಾಗಿದ್ದಾರೆ. ಇದು ಅನೇಕ ಚಾರಿತ್ರಿಕ ಹೆಣಿಗೆಗಳಿಂದ ಕೂಡಿದ್ದು, ಇಲ್ಲಿ ಬ್ರಾಹ್ಮಣರು ನಾಯಕತ್ವವನ್ನು ವಹಿಸುವುದಿಲ್ಲ. ಈಗ ಅವರೆಲ್ಲಾ ನ್ಯಾಯಕ್ಕಾಗಿ ಘೋಷಣೆಗಳನ್ನು ಕೂಗುತ್ತಿದ್ದಾರೆ.

ಹೊಸ ಸಾಮಾಜಿಕ ಒಪ್ಪಂದ

ಮಾಯಾವತಿಯವರೊಂದಿಗೆ ಬ್ರಾಹ್ಮಣ ಸಮುದಾಯವನ್ನು ಕರೆತಂದ ಸತೀಶ್ ಚಂದ್ರ ಮಿಶ್ರ

ಇದು ಆದದ್ದು ಹೇಗೆ? ದಾಖಲೆಗೆಂಬಂತೆ, ಉ.ಪ್ರ ರಾಜಧಾನಿಯಾದ ಲಕ್ನೋದಿಂದ ೬೦ ಕಿ.ಮೀ ದೂರದಲ್ಲಿರುವ ರಸ್ತೆ ಬದಿ ಬ್ರಾಹ್ಮಣರ ಒಡೆತನದಲ್ಲೊಂದು ಡಾಬಾ ಇದೆ. ಅಲ್ಲಿನ ಎಲ್ಲಾ ಕಾರ್ಯಗಳನ್ನು ಬ್ರಾಹ್ಮಣರೇ ನೋಡಿಕೊಳ್ಳುತ್ತಾರೆ. "ಅದೇಕೆ ಸಾಧ್ಯವಿಲ್ಲ. ಕಾಲ ಬದಲಾಗಿದೆ" ಎಂದು ಹಿರಿಯಬ್ರಾಹ್ಮಣನೊರ್ವ ಪ್ಲೇಟ್ ತೊಳೆಯುತ್ತಾ ಹೇಳಿದ. ನಾನು ಅವನಲ್ಲಿ ಕೇಳಿದ ಪ್ರಶ್ನೆಯೆಂದರೆ ಆತನಿಗೆ ಗೊತ್ತಿರುವ ದಲಿತನೋರ್ವ ಅತಿಥಿಯಾಗಿ ಬಂದಲ್ಲಿ ಏನಾಗುತ್ತದೆ ಎಂದಿತ್ತು. ನಾನು ಅವನಿಗೆ ೧೦/- ರೂ ಟಿಪ್ಸ್ ನೀಡಿದಾಗ ಆತ ಬಹುವಾಗಿ ಖುಶಿ ಪಟ್ಟಿದ್ದ. ಮಾರನೇ ದಿನ ನಾನು ಮತ್ತೊಮ್ಮೆ ಅದೇ ಡಾಬಾದಲ್ಲಿ ಮಧ್ಯಾಹ್ನದ ಊಟಮುಗಿಸಿ, ಮತ್ತೆ ೧೦/-ರೂ ಟಿಪ್ಸ್ ನೀಡಿ ಮಾತನಾಡತೊಡಗಿದೆ. ನಾನೊಬ್ಬ ದಲಿತನೆಂದೆ. ಮತ್ತೊಮ್ಮೆ ನನ್ನನ್ನು ನೋಡಿದ ಆತ ಮೊದಲಿಗೆ ಒಪ್ಪಿಕ್ಕೊಳ್ಳಲು ನಿರಾಕರಿಸಿದನಾದರೂ ಬೇರೆ ದಾರಿಇದ್ದಂತೆ ಕಾಣಲಿಲ್ಲ. ಆತ ದಲಿತನೊಬ್ಬನಿಗೆ ಸೇವೆ ಮಾಡುತ್ತಿದ್ದಾನೆಂಬುದರ ಬಗ್ಗೆ ಹೇಳುತ್ತಾ, ಕ್ಷಮೆಕೋರಿದ್ದ, ಆದರೆ ಅಂಥ ತಪ್ಪೇನೂ ನಡೆಯಲಿಲ್ಲವೆಂಬಂತೆ ಮಾತನಾಡತೊಡಗಿದ. ಇಲ್ಲಿನ ಸ್ಥಳೀಯ ಅನೇಕ ದಲಿತರು ಈ ಡಾಬಾಕ್ಕೆ ಸಾರಾಯಿಯೊಡನೆ ಬರುತ್ತಾರಂತೆ. ಆಗ ಆತ ಅವರಿಗೆಲ್ಲಾ ಪೆಗ್ ಹಾಕಿಕೊಡುತ್ತಾ ಅಗತ್ಯವಾದುದ್ದನ್ನು ನೀಡುತ್ತಾನಂತೆ. ಆ ಡಾಬಾದಲ್ಲಿನ ೭ ಮಂದಿಯೂ ಸಹ ಬ್ರಾಹ್ಮಣರೇ ಆಗಿದ್ದಾರೆ.

ನಾನು ಮೂರನೇ ಬಾರಿ ಅಲ್ಲಿಗೆ ಭೇಟಿ ನೀಡಿದಾಗ ಬಡಬ್ರಾಹ್ಮಣರು ಹೇಗೆ ಬದುಕುತ್ತಿದ್ದಾರೆನ್ನುವುದರ ಬಗ್ಗೆ ಆತ ನನ್ನಲ್ಲಿ ಹೇಳುತ್ತಿದ್ದ. ನಾನು ಆತನನ್ನು ನಂಬುವುದಾರೆ ೧/೪ರಷ್ಟು ಬ್ರಾಹ್ಮಣರು ದಲಿತರಿಗಿಂತ ಬಡವರಂತೆ.

ಹೀಗಿರುವಲ್ಲಿ ಅವರನ್ನು ಹೇಗೆ ಚಿತ್ರಿಸಲಾಗಿದೆ? ಪ್ರಬಲರು, ಅನುಕೂಲಸ್ಥರು, ಶೋಷಕರು, ಕುತಂತ್ರಿಗಳು ಮುಂತಾಗಿ ಅವರನ್ನು ಚಿತ್ರಿಸಲಾಗಿದೆ. ನಿಜ, ಚಾರಿತ್ರಿಕವಾಗಿ ಅವರೆಲ್ಲಾ ಹಾಗೆಯೇ ಇದ್ದವರು. ಇವತ್ತಿಗೂ ಸಹ ಅನೇಕ ಅನುಕೂಲಸ್ಥ ಬ್ರಾಹ್ಮಣರು ಹಾಗೆಯೇ ಶೋಷಕರು, ಕುತಂತ್ರಿಗಳು ಮತ್ತು ಸಂಪ್ರದಾಯಸ್ಥರು ಆಗಿದ್ದಾರೆ. ಅಧಿಕಾರದಲ್ಲಿರುವ ಒಬ್ಬ ಬ್ರಾಹ್ಮಣನನ್ನು ನಿದರ್ಶನಕ್ಕೆ ತೆಗೆದುಕೊಳ್ಳೋಣ - ಆತ ತನ್ನ ಕೆಳಗಿರುವ ಕಿರಿಯ ದಲಿತ ಅಧಿಕಾರಿಯ ವಿರುದ್ಧ ನಕಾರಾತ್ಮಕ ಎಸಿಆರ್‌ನ್ನು ಬರೆಯುತ್ತಾನೆ. ಅಲ್ಲದೆ ಬ್ರಾಹ್ಮಣ ಪತ್ರಿಕಾ ಸಂಪಾದಕರು, ಟಿವಿ ಕಾರ್ಯಕ್ರಮ ನಿರೂಪಕರು, ಸಿನಿಮಾ ತಯಾರಕರು, ಅಕಾಡೆಮಿಕ್ ವ್ಯಕ್ತಿಗಳನ್ನು ತೆಗೆದುಕೊಳ್ಳಿ. ದಲಿತರಿಗೆ ಅಲ್ಲಿ ಜಾಗ ನೀಡುವುದನ್ನು ನಿರಾಕರಿಸುವುದೆಂದರೆ ಇವರಿಗೆಲ್ಲಾ ಬಹು ಪ್ರೀತಿಯವಾದುದು. ಆದ್ದರಿಂದಲೇ ಇಂಥ ಅನುಕೂಲಸಿಂಧು ಬ್ರಾಹ್ಮಣರು ತಮ್ಮ ರಾಜಕೀಯ ಒತ್ತಡಗಳನ್ನು ಹೊರತು ಪಡಿಸಿಯೂ ಸಹ ಸತೀಶ್ ಚಂದ್ರ ಮಿಶ್ರರವರನ್ನು ಎಸ್‌ಸಿ ಮಿಶ್ರನೆಂದೇ ವಿವರಿಸಿಬಿಡುತ್ತಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಈ ಅನುಕೂಲಸಿಂಧು ಬ್ರಾಹ್ಮಣರಿಗೆ ಎಸ್‌ಸಿ ಮಿಶ್ರ ಒಬ್ಬ ದಲಿತನೇ ಆಗಿದ್ದು, ಬ್ರಾಹ್ಮಣರನ್ನು ಬಿಎಸ್‌ಪಿಯತ್ತ ಸೆಳೆಯುತ್ತಿದ್ದಾನಂತೆ!

ಆದರೆ ಸಣ್ಣ ಪಟ್ಟಣಗಳಲ್ಲಿರುವ ದಲಿತರು ವಾಸ್ತವ ಬದುಕನ್ನು ಅರಿತವರಾಗಿದ್ದಾರೆ. ಅವರೆಲ್ಲಾ ಮಂಡಲ್ ಪರಿಣಾಮವನ್ನು ನೋಡಿದ್ದಾರಲ್ಲದೆ, ಅದರನಂತರದ ರಾಜಕೀಯವನ್ನು ಸಹ ಗಮನಿಸುತ್ತಿದ್ದಾರೆ. ಅವರೆಲ್ಲಾ ಹೇಗೆ

ಮೇಲ್‌ಸ್ತರದ ಒಬಿಸಿಗಳು ಆಳುವ ವರ್ಗವಾಗಿ ಮೇಲೆದ್ದಿದ್ದಾರೆಂದು ಗಮನಿಸುತ್ತಿದ್ದಾರೆ. ಕಲ್ಯಾಣ್‌ಸಿಂಗ್ ಒಬ್ಬ ಹಿಂದೂ ನಾಯಕನೆನ್ನುವುದಕ್ಕಿಂತಲೂ ಆತನೊಬ್ಬ ಒಬಿಸಿ ಎಂದು ಅವರಿಗೆ ಗೊತ್ತಾಗಿದೆ. ಹಾಗೆಯೇ ಮುಲಾಯಂ ಸಿಂಗ್ ಸಹ ಪ್ರಧಾನವಾಗಿ ಒಬ್ಬ ಒಬಿಸಿ ಬಣದವನೇ ಆಗಿದ್ದಾನೆಯೇ ಹೊರತು ಸಮಾಜವಾದಿಯೇನೂ ಅಲ್ಲ. ಯಾರಿಗೂ ಅವರ್ಯಾರು ಬೇಕಾಗಿಲ್ಲ. ಕೇವಲ ಶೇ.೧೦ ರಷ್ಟಿರುವ ಬ್ರಾಹ್ಮಣರು ಯಾರಿಗೂ ಬೇಡದವರಾಗಿ, ರಾಜಕೀಯವಾಗಿ ಅವರೆಲ್ಲಾ ಅವಮಾನಿತರಾಗಿದ್ದಾರೆ.

ಉ.ಪ್ರದಲ್ಲಿ ಮಾಯಾವತಿಯವರು ಜಯಭೇರಿ ಬಾರಿಸುವ ಮೂಲಕ ಗಂಗಾಬಯಲು ಪ್ರದೇಶದಲ್ಲಿ ಮೇಲಿನ ಹೊಸ ಸಾಮಾಜಿಕ ಒಪ್ಪಂದಕ್ಕೆ ರಣಕಹಳೆ ಹಾಡಲಿದ್ದಾರೆ. ಇಂಥ ಹೊಸ ಸಾಮಾಜಿಕ ಒಪ್ಪಂದದ ಪ್ರತಿಯೊಂದು ಆಯಾಮಗಳನ್ನು ದಲಿತರೇ ನಿರ್ಧರಿಸಲಿದ್ದಾರೆ.

ತಮಾಷೆಯೆಂದರೆ, ಅನುಕೂಲಸ್ಥರಾಗಿರುವ ದಲಿತರಾಗಲೀ ಅಥವಾ ಅನುಕೂಲಸಿಂಧುಗಳಾಗಿರುವ ಬ್ರಾಹ್ಮಣಗಳಾಗಲೀ ಭಾರತದ ಈ ಹೊಸ ಸಾಮಾಜಿಕ ವಿದ್ಯಮಾನವನ್ನು ಗ್ರಹಿಸಲಾಗುತ್ತಿಲ್ಲ.

ಉ.ಪ್ರದ ೨೦೦೨ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯು ಶೇ.೨೩.೦೬ರಷ್ಟು ಜನಪ್ರಿಯ ಮತಗಳನ್ನು ಪಡೆದು ೯೮ ಕ್ಷೇತ್ರಗಳನ್ನು ಗೆದ್ದುಕೊಂಡಿತು. ೧೯೯೬ರ ಅಸೆಂಬ್ಲಿ ಚುನಾವಣೇಯಲ್ಲಿ ಶೇ.೧೯.೬೪ರಷ್ಟು ಮತಗಳ ಮೂಲಕ ೬೭ ಬಿಎಸ್‌ಪಿಯ ೬೭ ಅಭ್ಯರ್ಥಿಗಳು ಗೆದ್ದುಬಂದಿದ್ದರು. ೨೦೦೪ರ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಶೇ.೨೪.೬೭ರಷ್ಟು ಮತಗಳೊಂದಿಗೆ ೧೯ ಎಂಪಿಗಳನ್ನು ಬಿಎಸ್‌ಪಿ ಗೆಲ್ಲಿಸಿತ್ತು. ಹಾಗೆಯೇ ೧೯೯೯ರ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಶೇ.೨೨.೦೮ ಮತಗಳೊಂದಿಗೆ ೧೪ ಸೀಟುಗಳನ್ನು ಬಿಎಸ್‌ಪಿಯು ಪಡೆದಿತ್ತು.

೧೯೯೬-೨೦೦೪ರ ನಡುವೆ ನಡೆದ ನಾಲ್ಕು ಚುನಾವಣೆಗಳಲ್ಲಿ ಬಿಎಸ್‌ಪಿಯು ಸ್ಪರ್ಧಿಸಿ ಶೇ.೨೨.೩೬ ಸರಾಸರಿಯಲ್ಲಿ ಮತಗಳನ್ನು ಪಡೆದಿತ್ತು. ಈ ಎಲ್ಲಾ ಚುನಾವಣೆಗಳಲ್ಲಿ ಬಿಎಸ್‌ಪಿಯು ಶೇ.೨೧ರಷ್ಟು ದಲಿತ ಮತದಾರರ ಖಾಯಂ ಬೆಂಬಲವನ್ನು ತನ್ನೆಡೆ ಸೆಳೆದುಕೊಂಡಿತ್ತು.

ಅಂದರೆ ಶೇ. ೩೦ರಷ್ಟು ಮತಗಳನ್ನು ಪಡೆಯದಿದ್ದರೆ ಬಿಎಸ್‌ಪಿ ಪಕ್ಷವು ಉ.ಪ್ರದಲ್ಲಿ ಮುನ್ನಡೆಯನ್ನು ಸಾಧಿಸಲಾರದು ಎಂದು ಖಚಿತವಾಗಿತ್ತು. ದಲಿತರು-ಒಬಿಸಿಗಳು-ಮುಸ್ಲಿಮರ ಬಹುಜನ ಸಿದ್ಧಾಂತವು ಪದೇಪದೇ ಸೋಲನ್ನು ಅನುಭವಿಸುತ್ತಾ ಬರಲಾರಂಭಿಸಿತ್ತು. ಕೃತಕವಾಗಿ ಸಂಘಟಿಸಲಾದ ಬಹುಜನರ ಸಾಮಾಜಿಕ ಹೊಂದಾಣಿಕೆಯು ಅಂತಿಮವಾಗಿ ಬಿಎಸ್‌ಪಿಯನ್ನು ನುಂಗಿಬಿಡುತ್ತದೆ ಎಂಬ ವಾಸ್ತವ ಸಂಗತಿಯನ್ನು ಅರಿಯಬೇಕಿತ್ತು. ಪ್ರಬಲ ಜಾತಿಗಳಿಂದ ಕೂಡಿದ್ದ ಒಬಿಸಿಗಳ ಆಕ್ರಮಣದಿಂದ ಆಘಾತವನ್ನು ಅನುಭವಿಸಿದ ದಲಿತರು ಮತ್ತು ಬ್ರಾಹ್ಮಣರು ಒಬಿಸಿಗಳ ದೌರ್ಜನ್ಯದಿಂದ ತಪ್ಪಿಸಿಕೊಳ್ಳಲು ಸಾಮಾನ್ಯವಾದ ವೇದಿಕೆಯೊಂದನ್ನು ಹುಡುಕುತ್ತಿದ್ದರು. ಮಾಯಾವತಿಯವರು ಈ ಸಾಮಾಜಿಕ ನಾಡಿಬಡಿತವನ್ನು ಸೂಕ್ಷ್ಮವಾಗಿ ಗ್ರಹಿಸಿ, ದಲಿತ-ಬ್ರಾಹ್ಮಣ ಹೊಂದಾಣಿಕೆಗಾಗಿ ಕರೆಯಿತ್ತರು. ಈ ಹೊಸ ಸಿದ್ಧಾಂತವು ಈಗ ಕ್ರಿಯಾಶೀಲವಾಗಿದ್ದು ಮುಂಬರಲಿರುವ ಚುನಾವಣೆಗಳಲ್ಲಿ ಬಿಎಸ್‌ಪಿಯು ಖಂಡಿತವಾಗಿಯೂ ಶೇ.೩೦ ಮತಗಳನ್ನು ಪಡೆಯುವ ಗುರಿಯನ್ನು ಮುಟ್ಟುತ್ತದೆ. ಸಾಧಾರಣ ದಲಿತವ್ಯಕ್ತಿ ಹಾಗೂ ಬ್ರಾಹಣ ವ್ಯಕ್ತಿ ಈ ಹೊಂದಾಣಿಕೆಯನ್ನು ಖುಶಿಯಿಂದ ಆಚರಿಸುತ್ತಿದ್ದಾನೆ. ಆದರೆ ದಲಿತ ಎಲೀಟರು ಮತ್ತು ಬ್ರಾಹ್ಮಣ ಎಲೀಟರು ಸ್ಥಿತಿ ಏನು?

> **ಬೆರಳೆಣಿಕೆಯಷ್ಟಿರುವ ದಲಿತ ಎಲೀಟರು ೫೦ರ ದಶಕದಲ್ಲಿ ಗ್ರಾಮಗಳಿಂದಲೇ ಬಂದವರಾಗಿದ್ದಾರೆ. ಆಗ ಬ್ರಾಹ್ಮಣರು ಹೇಗೆ ತಂತ್ರ ಹೂಡುತ್ತಿದ್ದರು ಎಂಬುದನ್ನು ನೋಡಿರುವುದಲ್ಲದೆ, ಒಬಿಸಿಗಳು ಆಗ ಬ್ರಾಹ್ಮಣರ ವಿರುದ್ಧ ಸಾಮಾಜಿಕ ಪೋಲೀಸರಂತೆ ವರ್ತಿಸಿದ್ದರು. ಹೀಗೆ ಈ ಬೆರಳೆಣಿಕೆಯಷ್ಟಿರುವ ದಲಿತ ಎಲೀಟರು ಮೌನವಾಗಿ ತಮ್ಮ ಕಷ್ಟವನ್ನು ನುಂಗಿಕೊಂಡಿದ್ದರು. ಆದರೆ ಅವರಿಗೆಲ್ಲಾ ಯಾವಾಗ ಮಾತಾನಾಡುವ ಅವಕಾಶ ದೊರೆಯುತ್ತಿತ್ತೊ ಆಗ ಅವರು ಬ್ರಾಹ್ಮಣರನ್ನು ಇನ್ನೂ ಹಳ್ಳಿ ಗಳಲ್ಲೇ ಮರುಸ್ಥಾಪಿಸಿಸುತ್ತಿದ್ದರಲ್ಲದೆ, ಅವರೆಲ್ಲಾ ತಮ್ಮ ವರ್ತಮಾನದ ನಗರ ಬದುಕಿನ ಅನುಭವಗಳಿಗೆ ತೆಕ್ಕೆ ಹೊಯ್ಯುತ್ತಿದ್ದರು. ಈ ಎರಡು ಸನ್ನಿವೇಶಗಳಾದ ಗ್ರಾಮ-ನಗರ ಅನುಭವಗಳು ಹಾಗೂ ಭೂತ ವರ್ತಮಾನದೊಳಗೆ ನುಸುಳಿಕೊಂಡು ಬ್ರಾಹ್ಮಣರು ನಿರಂತರವಾಗಿ ಹಿಂಸಕರೆಂಬಂತೆ ತೋರಿಸಲಾಗುತ್ತಿತ್ತು.**

ದಾಖಲೆಗಳೆಂಬಂತೆ ಒಂದು ಸಾಮಾಜಿಕ ವರ್ಗವಾಗಿ ಬೆರಳೆಣಿಕೆಯಷ್ಟು ದಲಿತ ಎಲೀಟರು ಇರಬಹುದಷ್ಟೆ. ದಲಿತ ಮಾನದಂಡದಲ್ಲಿ ಹೇಳುವುದಾದರೆ ಸರ್ಕಾರಿ ನೌಕರರು, ಪ್ರೊಫೆಸರ್‌ಗಳು, ವೃತ್ತಿಪರರು ಹಾಗೂ ಸ್ವತಂತ್ರ ಉದ್ಯಮಿಗಳು - ಇವರನ್ನು ಒಂದು ಸಾಮಾಜಿಕ ಎಲೀಟ್ ವರ್ಗವೆಂದು ಕರೆಯಬಹುದಷ್ಟೆ

ಹೀಗಿರುವಲ್ಲಿ ಈ ಸಾಮಾಜಿಕ ವರ್ಗವಾಗಿರುವ ೧೦೦ ಮಂದಿ ದಲಿತ ಎಲೀಟರ ಸಮೀಕ್ಷೆಯೊಂದನ್ನು ನಡೆಸೋಣ. ಅವರಲ್ಲಿ ಶೇ.೯೫ರಷ್ಟು ಮಂದಿ ಮಾಯಾವತಿಯವರ ದಲಿತ-ಬ್ರಾಹ್ಮಣ ಸಿದ್ಧಾಂತದ ಹೊಂದಾಣಿಕೆಯನ್ನು ತಿರಸ್ಕರಿಸಿಬಿಡುತ್ತಾರೆ. ಹಾಗಾದರೆ ಬೆರಳೆಣಿಕೆಯಷ್ಟು ಇರುವ ಈ ದಲಿತ ಎಲೀಟರೇ ಸಹಜವಾದ ಮಾರ್ಗದೊಂದಿಗೆ ಸಂಘರ್ಷಕ್ಕೆ ಇಳಿಯುತ್ತಾರೆ?

ದಲಿತ, ಬ್ರಾಹ್ಮಣ ಎಲೀಟರು

ಈ ಬೆರಳೆಣಿಕೆಯಷ್ಟಿರುವ ದಲಿತ ಎಲೀಟರು ೫೦ರ ದಶಕದಲ್ಲಿ ಗ್ರಾಮಗಳಿಂದಲೇ ಬಂದವರಾಗಿದ್ದಾರೆ. ಆಗ ಬ್ರಾಹ್ಮಣರು ಹೇಗೆ ತಂತ್ರ ಹೂಡುತ್ತಿದ್ದರು ಎಂಬುದನ್ನು ನೋಡಿರುವುದಲ್ಲದೆ, ಒಬಿಸಿಗಳು ಆಗ ಬ್ರಾಹ್ಮಣರ ವಿರುದ್ಧ ಸಾಮಾಜಿಕ ಪೋಲೀಸರಂತೆ ವರ್ತಿಸಿದ್ದರು. ಹೀಗೆ ಈ ಬೆರಳೆಣಿಕೆಯಷ್ಟಿರುವ ದಲಿತ ಎಲೀಟರು ಮೌನವಾಗಿ ತಮ್ಮ ಕಷ್ಟವನ್ನು ನುಂಗಿಕೊಂಡಿದ್ದರು. ಆದರೆ ಅವರಿಗೆಲ್ಲಾ ಯಾವಾಗ ಮಾತಾನಾಡುವ ಅವಕಾಶ ದೊರೆಯುತ್ತಿತ್ತೊ ಆಗ ಅವರು ಬ್ರಾಹ್ಮಣರನ್ನು ಇನ್ನೂ ಹಳ್ಳಿಗಳಲ್ಲೇ ಮರುಸ್ಥಾಪಿಸಿಸುತ್ತಿದ್ದರಲ್ಲದೆ, ಅವರೆಲ್ಲಾ ತಮ್ಮ ವರ್ತಮಾನದ ನಗರ ಬದುಕಿನ ಅನುಭವಗಳಿಗೆ ತೆಕ್ಕೆ ಹೊಯ್ಯುತ್ತಿದ್ದರು. ಈ ಎರಡು ಸನ್ನಿವೇಶಗಳಾದ ಗ್ರಾಮ-ನಗರ ಅನುಭವಗಳು ಹಾಗೂ ಭೂತ ವರ್ತಮಾನದೊಳಗೆ ನುಸುಳಿಕೊಂಡು ಬ್ರಾಹ್ಮಣರು ನಿರಂತರವಾಗಿ ಹಿಂಸಕರೆಂಬಂತೆ ತೋರಿಸಲಾಗುತ್ತಿತ್ತು.

ಆದ್ದರಿಂದ ಈ ಬೆರಳೆಣಿಕೆಯಷ್ಟಿರುವ ದಲಿತ ಎಲೀಟರಿಗೆ ಬ್ರಾಹ್ಮಣರ ಮೇಲಿನ ಸೇಡು ನಿರಂತರವಾಗಿ ಸಾಗುತ್ತಿರಲೇಬೇಕು. ಆದರೆ ಸಾಮಾನ್ಯ ದಲಿತರಿಗೆ ಒಬಿಸಿಗಳ ದೌರ್ಜನ್ಯ ಎನ್ನುವುದು ಅವರ ಬದುಕಿನ ಭಾಗವಾಗಿಬಿಟ್ಟಿದೆ. ಹಿಂದೆ ಒಬಿಸಿಗಳು ದಲಿತರ ಪರವಾಗಿ ಬ್ರಾಹ್ಮಣರನ್ನು ಹೊಡೆಯುತ್ತಿದ್ದರು. ಆದರಿಂದು ಈ ಒಬಿಸಿಗಳು ದಲಿತರನ್ನೇ ನೇರವಾಗಿ ಚಚ್ಚಿ ತಮ್ಮ ಪ್ರಾಬಲ್ಯವನ್ನು ನಿರೂಪಿಸುತ್ತಿದ್ದಾರೆ.

ಈ ಸನ್ನಿವೇಶದಲ್ಲಿ ಎರಡೂಕಡೆಗಳಿಂದ ಸ್ಯಾಂಡ್‌ವಿಚ್ ಆಗಿರುವ ಈ ದಲಿತ ಎಲೀಟರು ಭೂತದೊಡನೆ ಯುದ್ಧಮಾಡುತ್ತಿದ್ದಾರೆ. ಆದರೆ ಒಳ್ಳೆ ಭವಿಷ್ಯವನ್ನು ಕಾಣಲಿಚ್ಛಿಸುವ ದಲಿತ ಸಾಮಾನ್ಯನು ವರ್ತಮಾನದೊಡನೆ ಯುದ್ಧ ಮಾಡುತ್ತಿದ್ದಾನೆ. ಆದ್ದರಿಂದ ದಲಿತ ಎಲೀಟರು ಬದಾಲಾಗುತ್ತಿರುವ ಸಾಮಾಜಿಕ ದ್ವಂದ್ವಗಳನ್ನು ಗ್ರಹಿಸುವಲ್ಲಿ ಸೋಲುತ್ತಿದ್ದಾರೆ. ದುರಂತವೆಂದರೆ ಈ ದಲಿತ ಎಲೀಟರು, ಸಾಮಾನ್ಯ ದಲಿತರ ಮೇಲೆ ಸವಾರಿ ಮಾಡುತ್ತಿದ್ದಾರೆ.

ಆದರೆ ಬ್ರಾಹ್ಮಣ ಎಲೀಟರೇಕೆ ದಲಿತರನ್ನು ಇನ್ನೂ ಅವಮಾನಕ್ಕೊಳಪಡಿಸುತ್ತಿದ್ದಾರೆ? ನಿದರ್ಶನಕ್ಕೆ ಈ ೧೦೦ ಮಂದಿ ಬ್ರಾಹ್ಮಣ ಎಲೀಟರ ಸಮೀಕ್ಷೆ ಮಾಡಿದಲ್ಲಿ ಶೇ.೯೫ರಷ್ಟು ಮಂದಿ ಮಾಯವತಿಯವರ ದಲಿತ-ಬ್ರಾಹ್ಮಣ ಹೊಂದಾಣಿಕೆಯನ್ನು ತಿರಸ್ಕರಿಸಿಬಿಡುತ್ತಾರೆ.

ಭೂತದಲ್ಲೇ ನರಳುತ್ತಿರುವ ಈ ಬ್ರಾಹ್ಮಣ ಎಲೀಟರು ತಮ್ಮನ್ನೇ ಎರಡು ರೀತಿಯಲ್ಲಿ ಹಳಿದುಕೊಳ್ಳುತ್ತಿದ್ದಾರೆ. ಬ್ರಾಹ್ಮಣ ಪ್ರಜ್ಞೆಯ ಮೂಲಭೂತ ಲಕ್ಷಣವೆಂದರೆ ದುರಹಂಕಾರ. ಆದ್ದರಿಂದ ದಲಿತರ ಎದುರು ತಮ್ಮ ಅಧೀನತೆಯನ್ನು ಒಪ್ಪಿಕೊಳ್ಳಲಾರರು. ಒಬ್ಬ ಅಕಾಡೆಮಿಕ್ ಬ್ರಾಹ್ಮಣ ಅಕಾಡೆಮಿಕ್ ಜಗತ್ತಿಗೆ ಪ್ರವೇಶಮಾಡುವ ದಲಿತನನ್ನು ದೂರವಿಡಲು ಪ್ರಯತ್ನಿಸುತ್ತಾನೆ. ಕಾರಣ ಬ್ರಾಹ್ಮಣ ನಿರೂಪಿತ ಚರಿತ್ರೆ, ಆರ್ಥಿಕ ಸಿದ್ಧಾಂತಗಳು ಮತ್ತು ಬದಲಾವಣೆಯ ಬಗ್ಗೆ ಅವರೇ ಕಟ್ಟಿರುವ ತತ್ವಗಳೆಲ್ಲಾ ಮರುವಿಶ್ಲೇಷಣೆಗೆ ಒಳಗಾಗುತ್ತವೆ ಎನ್ನುವುದು. ಬ್ರಾಹ್ಮಣ ಸಿಇಒಗೆ ದಲಿತರು ತನ್ನ ಪ್ರಾಬಲ್ಯವನ್ನು ಕಸಿದುಕೊಂಡಾರೆಂದು ಅವರನ್ನು ದೂರವಿಡಲು ಪ್ರಯತ್ನಿಸುತ್ತಲೇ ಇರುತ್ತಾನೆ.

ಮತ್ತೊಂದು ರಿತಿಯಲ್ಲಿ ಹೇಳುವುದಾದರೆ ಈ

ಒಬಿಸಿಗಳ ಬಹಿಷ್ಕಾರದ ಯುಗ

ಬ್ರಾಹ್ಮಣ ಸಂಪನ್ಮೂಲಗಳ ಮೇಲಿನ ಪ್ರಾಬಲ್ಯವನ್ನಷ್ಟೇ ಇಚ್ಛಿಸುತ್ತಾನಲ್ಲದೆ ಮತ್ತೇನೂ ಅಲ್ಲ. ಸಾಮಾನ್ಯ ಬ್ರಾಹ್ಮಣ ಬಹುವಾಗಿ ಸಂಪ್ರದಾಯಸ್ಥನಾದರೂ ದಲಿತರ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾನೆ ಆದರೆ ಪಗತೀಪರ ಬ್ರಾಹ್ಮಣನನ್ನು ಅಲ್ಲ.

ದುರಂತವೆಂದರೆ, ಮಾಯವತಿಯ ನಾಯಕತ್ವದಲ್ಲಿ ಭಾರತೀಯ ಪ್ರಜಾಪ್ರಭುತ್ವ ಗೌರವವನ್ನು ಪಡೆಯುತ್ತದೆಯೆಂಬುದನ್ನು ಎಲೀಟ್ ದಲಿತ ಮತ್ತು ಬ್ರಾಹ್ಮಣ ಇವರಿಬ್ಬರೂ ಸಹ ಅರಿತುಕೊಳ್ಳಲು ತಯಾರಿಲ್ಲ. ಇರಲಿಬಿಡಿ, ಭಾರತದ ೩೦ ರಾಜ್ಯಗಳ ಪೈಕಿ ಒಂದರಲ್ಲಾದರೂ ದಲಿತ ಆಳ್ವಿಕೆ ಬೇಡವೇ?

ಭಾರತೀಯ ರಾಜಕೀಯದ ನಕಾಶೆಯಿಂದ ಒಬಿಸಿಗಳನ್ನು ಹೊರಹಾಕಬೇಕೆಂದು ನಾನೇನು ಬಯಸುತ್ತಿಲ್ಲ. ಆದರೆ ಉ.ಪ್ರ.ದಲ್ಲಿ ಮೂರು ವಾರಗಳ ಕಾಲ ಸಂಚಾರದಲ್ಲಿದ್ದಾಗ ನಾನು ಕಂಡ ಮತ್ತೊಂದು ಸಂಗತಿಯನ್ನು ನನಗೆ ಬೇಡವೆಂದರೂ ಹೇಳಲೇ ಬೇಕಾಗಿದೆ – ಭಾರತದ ಹಿಂದಿ ಹೃದಯಭಾಗ ಪ್ರದೇಶಗಳಲ್ಲಿ ಒಬಿಸಿಗಳು ರಾಜಕೀಯವಾಗಿ ಬಹಿಷ್ಕಾರಕ್ಕೊಳಗಾಗುವುದನ್ನು ಎದುರಿಸಲೇಬೇಕಾಗುತ್ತದೆ. ರಾಜಕೀಯ ವ್ಯವಸ್ಥೆಯಲ್ಲಿ ಅವರು ಇನ್ನು ಮುಂದೆ ಯಾವುದೇ ರೀತಿಯ ನಾಯಕತ್ವ ವಹಿಸುವ ಅವಕಾಶಗಳು ದೊರೆಯುವುದಿಲ್ಲ. ಆದರೂ ಅವರ ಸಂಖ್ಯೆ ಹೆಚ್ಚಿರುವುದರಿಂದ ಒಬಿಸಿಗಳೇತರ ಸಾಮಾಜಿಕ ವಿಭಾಗಗಳಿಗೆ ಅವರ ಅಗತ್ಯವಿರುತ್ತದೆ. ರಾಜಕೀಯ ವ್ಯವಸ್ಥೆಯಲ್ಲಿ ಅವರೇನಾದರೂ ಉಳಿದುಕೊಳ್ಳಬೇಕಾದರೆ ಅಧಿಕಾರ ಹಿಡಿಯುವ ಯಾವುದೇ ಸಾಮಾಜಿಕ ವಿಭಾಗಕ್ಕಾದರೂ ಸರಿ ಅವರು ಶರಣಾಗುತ್ತಾರೆಂದೇ ಹೇಳಬೇಕಾಗುತ್ತದೆ.

ಇದೊಂದು ವಿಚಿತ್ರವೆಂದೇ ಹೇಳಿ – ಒಬಿಸಿಗಳು ಮಂಡಲ್ ಎಂದು ಬೀಗಿದರೂ ಸರಿ ಅಥವಾ ಸಾಮಾಜಿಕ ನ್ಯಾಯ ಎಂದು ಕೂಗಿದರೂ ಸಹ ಅವರು ಇನ್ನು ಮುಂದೆ ಬೇಕಾಗಿಲ್ಲ. ಮಂಡಲ್ ಎಂದು ಅರಚುವ ಯಾವುದೇ ಪಕ್ಷವಾದರೂ ಸಹ ಪ್ರತ್ಯೇಕಕ್ಕೆ ಒಳಗಾಗುತ್ತದೆ. ಕಾಂಗ್ರೆಸ್ ಇದನ್ನು ಗಮನಿಸಲೇಬೇಕಾಗುತ್ತದೆ.

ಹೀಗೇಕೆ ಆಗುತ್ತಿದೆ? ಮಂಡಲೋತ್ತರವಾಗಿ ಹೇಳುವುದಾದರೆ, ಬಹುಸಂಖ್ಯಾತ ಒಬಿಸಿಗಳು ಮತ್ತು ದಲಿತರು ಖುಷಿಯಿಂದಲೇ ಒಬಿಸಿಗಳ ನಾಯಕತ್ವವನ್ನು ಒಪ್ಪಿಕೊಂಡಿದ್ದರು. ಹಾಗೆಯೇ ಭಾರತದಲ್ಲಿ ಒಬಿಸಿಗಳ ಆಳ್ವಿಕೆಯನ್ನು ದ್ವಿಜರಲ್ಲಿ ಅನೇಕರು ಬಯಸಿದ್ದರು. ಆದರೆ ಕೇವಲ ಎರಡು ದಶಕಗಳಲ್ಲೇ ಒಬಿಸಿಗಳು ತಮಗಿದ್ದ ಸಾಮಾಜಿಕ ಸಮ್ಮತಿಯನ್ನು ಕಳೆದುಕೊಂಡಿದ್ದಾರಲ್ಲದೆ ಈಗ ಅವರು ರಾಜಕೀಯವಾಗಿ ಪ್ರತ್ಯೇಕಿಸಲ್ಪಡುವ ವಿಭಾಗವಾಗುತ್ತಾರೆ. ಇದಕ್ಕೆ ಯಾರನ್ನು ದೂರುವುದು! ಬೇರ್‍ಯಾರನ್ನು ಅಲ್ಲ, ಒಬಿಸಿಗಳನ್ನೇ ದೂರಬೇಕಿದೆ. ಈ ಒಬಿಸಿಗಳನ್ನು ಅತಿ ಹಿಂದುಳಿದ ಜಾತಿಗಳೂ (ಎಂಬಿಸಿಗಳು) ಸಹ ಒಬಿಸಿಗಳ ನಾಯಕತ್ವವನ್ನು ತ್ಯಜಿಸುತ್ತಿದ್ದಾರೆ.

ಈ ಕೆಳಗಿನ ಕಾರಣಗಳನ್ನು ಪರಿಶೀಲಿಸೋಣ:

–ರಾಜಕೀಯ ಪರಂಪರೆಯಲ್ಲಿ ಈ ಒಬಿಸಿಗಳ ಪರಿಭಾಷೆ ರಾಷ್ಟ್ರೀಯವಾಗಿದ್ದು (ದೇಶ ಭಕ್ತರಂತೆ) ಇಂಗ್ಲೀಷನ್ನು ಕಲಿಯುವ ಮಾಧ್ಯಮವನ್ನಾಗಿ ಒಪ್ಪಿಕೊಳ್ಳುವುದಿಲ್ಲ. ಆದರೆ ಅವರಿಗೆ ಎಲ್ಲಾ ರಂಗಗಳಲ್ಲೂ ಮೀಸಲಾತಿ ಬೇಕಾಗಿದೆ. ಇಂಗ್ಲೀಷನ್ನು ದ್ವೇಷಿಸುತ್ತಾ ಜ್ಞಾನದ ಆಧುನಿಕ ಕೇಂದ್ರಗಳನ್ನು ಬಯಸುವುದಾದರೂ ಹೇಗೆ? ಇಂಗ್ಲೀಷ್ ಮತ್ತು ಮೀಸಲಾತಿ ಇವೆರಡರ ಬಗ್ಗೆ ಕರುಣಾನಿಧಿ, ಲಾಲು, ಮುಲಾಯಂ ಸಿಂಗ್, ಪ್ರೊ.ಯೋಗೇಂದ್ರ ಯಾದವ್ ಅಥವಾ ಸಾಧನೆ ಮಾಡಿರುವ ಯಾವುದೇ ಒಬಿಸಿಯನ್ನಾದರೂ ಸರಿ ಕೇಳಿ. ಅವರ ರೆಡಿ ಉತ್ತರ ಹೇಗಿರುತ್ತದೆಯೆಂದರೆ, "ಮೀಸಲಾತಿ ಹೌದು ಇಂಗ್ಲೀಷ್ ಬೇಡ". ಈ ಅತಾರ್ಕಿಕತೆಯನ್ನು ಯಾರಾದರೂ ಗಮನಿಸಬಹುದಾಗಿದೆಯಲ್ಲವೇ?

– ರಾಜಕೀಯ ಪರಂಪರೆಯಲ್ಲಿ, ಉದ್ಯೋಗದಲ್ಲಿ ಮೀಸಲಾತಿಯಂತೆ ದಲಿತರನ್ನು ಈ ಒಬಿಸಿಗಳು ಬಯಸುತ್ತಾರೆ. ಆದರೆ ಶಿಕ್ಷಣದಲ್ಲಿ ದಲಿತರು ಅನುಭವಿಸಿದ ಸಾಮಾಜಿಕ ಬಹಿಷ್ಕಾರವನ್ನು ಮಾತ್ರ ಅನುಭವಿಸಲು ತಯಾರಿಲ್ಲ. ಈ ಒಬಿಸಿಗಳನ್ನು ಕೇಳಿ – ದಲಿತರು ಮತ್ತು ಒಬಿಸಿಗಳು ಒಂದೇ ರೀತಿಯಾಗಿ ಸಂಕಟ ಪಟ್ಟಿದ್ದಾರೆನ್ನುತ್ತಾರೆ. ಆದರೆ ಇಲ್ಲಿರುವ ಅತಾರ್ಕಿಕತೆಯನ್ನು ಯಾರೂ ಸಹ ಕಾಣಬಹುದಲ್ಲವೇ?

– ರಾಜಕೀಯ ಪರಂಪರೆಯಲ್ಲಿ, ಒಬಿಸಿಗಳು ಬ್ರಾಹ್ಮಣರ ಪ್ರಾಬಲ್ಯವನ್ನು ಪಲ್ಲಟಗೊಳಿಸಬೇಕೆನ್ನುತ್ತಾರೆ. ಆದರೆ, ಅದೇ ಪ್ರಾಬಲ್ಯವನ್ನು ಇವರೇ ಸ್ಥಾಪಿಸುತ್ತಾರೆ. ಆದರೆ ಸಾಮಾಜಿಕ ನ್ಯಾಯಕ್ಕಾಗಿ ಈ ಪ್ರಾಬಲ್ಯದ ರಾಜಕೀಯ ಹೇಗೆ ಬೆಂಬಲ ನೀಡುತ್ತದೆ ಎಂಬುದನ್ನು ಈ ಒಬಿಸಿ ನಾಯಕರ ಕಣ್ಣನ್ನು ನೋಡುತ್ತಾ ಕೇಳಿ – ಅವರು ನಿಮ್ಮನ್ನು ಸಂಪೂರ್ಣವಾಗಿ ನುಂಗಿಬಿಡುತ್ತಾರೆ. ಇದು ಯಾರಿಗೂ ಗೊತ್ತಾಗುವುದಿಲ್ಲವೇ?

– ರಾಜಕೀಯ ಪರಂಪರೆಯಲ್ಲಿ, ಒಬಿಸಿಗಳು ಸಾಮಾಜಿಕ ನ್ಯಾಯಕ್ಕಾಗಿ ವಾದಿಸುತ್ತಾರೆ. ಅಲ್ಲದೆ ದ್ವಿಜರು ಹೇಗೆ ದಬ್ಬಾಳಿಕೆ ಮಾಡುತ್ತಿದ್ದಾರೆನ್ನುವುದನ್ನು ಅವರು ಮಾತನಾಡುತ್ತಾರೆ. ಹೀಗಿರುವಲ್ಲಿ ಸಶಕ್ತರಾಗಿರುವ ಒಬಿಸಿಗಳು ಇಂದಿಗೂ ಸಂಘರ್ಷ ಎದುರಾದಾಗ ಹಿಂಸೆಯನ್ನೇ ಪ್ರಧಾನ ಮಾನದಂಡವಾಗಿ ಬಳಸುತ್ತಾರಲ್ಲಾ. ಏಕೆ ಎಂದು ಕೇಳಿ – ನಿಮ್ಮನ್ನು ಸಂಹರಿಸುವಂತೆ ಮಾಡುತ್ತಾರೆ. ಈ ಅತಾರ್ಕಿಕತೆಯನ್ನು ಸಮಾಜ ನೋಡುವುದಿಲ್ಲವೇ?

> **ರಾಜಕೀಯ ಪರಂಪರೆಯಲ್ಲಿ, ಒಬಿಸಿಗಳು ಬ್ರಾಹ್ಮಣರ ಪ್ರಾಬಲ್ಯವನ್ನು ಪಲ್ಲಟಗೊಳಿಸಬೇಕೆನ್ನುತ್ತಾರೆ. ಆದರೆ, ಅದೇ ಪ್ರಾಬಲ್ಯವನ್ನು ಇವರೇ ಸ್ಥಾಪಿಸುತ್ತಾರೆ. ಆದರೆ ಸಾಮಾಜಿಕ ನ್ಯಾಯಕ್ಕಾಗಿ ಈ ಪ್ರಾಬಲ್ಯದ ರಾಜಕೀಯ ಹೇಗೆ ಬೆಂಬಲ ನೀಡುತ್ತದೆ ಎಂಬುದನ್ನು ಈ ಒಬಿಸಿ ನಾಯಕರ ಕಣ್ಣನ್ನು ನೋಡುತ್ತಾ ಕೇಳಿ–ಅವರು ನಿಮ್ಮನ್ನು ಸಂಪೂರ್ಣವಾಗಿ ನುಂಗಿಬಿಡುತ್ತಾರೆ. ಇದು ಯಾರಿಗೂ ಗೊತ್ತಾಗುವುದಿಲ್ಲವೇ? ರಾಜಕೀಯ ಪರಂಪರೆಯಲ್ಲಿ, ಒಬಿಸಿಗಳು ಸಾಮಾಜಿಕ ನ್ಯಾಯಕ್ಕಾಗಿ ವಾದಿಸುತ್ತಾರೆ.**

– ರಾಜಕೀಯ ಪರಂಪರೆಯಲ್ಲಿ, ಈ ಒಬಿಸಿಗಳು ಬಂಡವಾಳಶಾಹಿ ಮತ್ತು ನಗರೀಕರಣದ ವಿರುದ್ಧ ವಿರುದ್ಧ ವಾದಿಸುತ್ತಾರೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿರುವ ಭಾರತ ನಗರೀಕರಣ ಮತ್ತು ಬಂಡವಾಳಶಾಹಿ ಇಲ್ಲದೆ ಮತ್ತೇನಾಗುತ್ತದೆ ಎಂದು ಆ ಒಬಿಸಿ ನಾಯಕತ್ವವನ್ನು ಕೇಳಿ – ಆಗ ಅಲ್ಲೊಂದು ಹಿಂಸಾತ್ಮಕ ಪ್ರತಿಭಟನೆ ಶುರುವಾಗಬಹುದು. ಈ ಅತಾರ್ಕಿಕತೆಯನ್ನು ಸಮಾಜ ಗಮನಿಸುವುದಿಲ್ಲವೇ?

ನಾನು ಈ ಐದು ಮುಖ್ಯ ಸಂಗತಿಗಳ ಬಗ್ಗೆಯಷ್ಟೆ ನಿಮ್ಮ ಗಮನಸೆಳೆಯಲು ಪ್ರಯತ್ನಿಸುತ್ತೇನೆ. ಸಾರ್ವಜನಿಕ ಬದುಕಿನಲ್ಲಿರುವ ೧೦೦ ನಕಾರಾತ್ಮಕ ಸಂಗತಿಗಳ ಬಗ್ಗೆ ಯಾರಾದರೂ ಒಂದು ಪಟ್ಟಿ ತಯಾರಿಸುತ್ತಾರಾದರೆ, ಆ ಪಟ್ಟಿಯಲ್ಲಿ ಈ ಒಬಿಸಿಗಳ ನಕಾರಾತ್ಮಕ ಮುಖವೇ ಅಲ್ಲಿ ಪವಡಿಸಿರುವುದನ್ನು ಕಾಣಬೇಕಾಗುತ್ತದೆ. ಈ ಅತಾರ್ಕಿಕತೆಯನ್ನು ಯಾರೂ ಗಮನಿಸುವುದಿಲ್ಲವೇ? ಎರಡು ಸಾವಿರ ವರ್ಷಗಳ ಮೋಸಗಾರಿಕೆ ಮತ್ತು ಸಾಮಾಜಿಕ ಕ್ಷೀಣತೆಯಲ್ಲಿರಿಸಿದ ಆ ದ್ವಿಜರು ತಮ್ಮ ಬಗ್ಗೆ ದೂಷಣೆಯ ಜಾಗವನ್ನು ಪಡೆದುಕೊಂಡಿದ್ದಾರೆ. ಆದರೆ ಆ ದ್ವಿಜರ ಸ್ಥಾನವನ್ನು ಅಲಂಕರಿಸಲು ಈ ಒಬಿಸಿಗಳಿಗೆ ಕೇವಲ ಎರಡೇ ದಶಕಗಳು ಸಾಕಾಗಿದೆ. ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಹಿಂಸಿಸಿರುವ ಈ ಒಬಿಸಿಗಳು ಸಾಮಾಜಿಕ ನ್ಯಾಯದ ನಾಡಿ ಹಿಡಿದು ಅದುಮುತ್ತಾ ಅದನ್ನು ಅಣಕಮಾಡಿಬಿಟ್ಟಿದ್ದಾರೆ.

ಈ ವರ್ತಮಾನದ ಇಂಥ ಪರಿಸ್ಥಿತಿಗೆ ಈ ಒಬಿಸಿಗಳೇ ಕಾರಣವೇ ಹೊರತು ಬೇರ್‍ಯಾರು ಅಲ್ಲ. ಅವರೇ ತಮ್ಮ ಸಾಮಾಜಿಕ ಮತ್ತು ರಾಜಕೀಯ ವರಸೆಗೆ ಕಾರಣೀಭೂತರಾಗಿದ್ದಾರೆ. ಮತ್ತೂ ದುರಂತವೆಂದರೆ ಈ ಒಬಿಸಿಗಳ ಸಾಮಾಜಿಕ ವರ್ತನೆಯೇ ಸಾಮಾಜಿಕ ನ್ಯಾಯವನ್ನು ಮಣ್ಣುಪಾಲು ಮಾಡಿದೆ.

ಹಾಗಾದರೆ, ನನ್ನನ್ನು ಯಾರೂ ಕೇಳದಿದ್ದರೂ ಸಹ ಒಬಿಸಿಗಳಿಗೆ ನನ್ನ ಸೂಚನೆ ಎಂದರೆ ತಮ್ಮೊಳಗೇ ರ್‍ಯಾಡಿಕಲ್ ಆಗಿ ಸುಧಾರಣೆಯನ್ನು ತರಬೇಕಿದೆ. ಒಬಿಸಿಗಳ ಸಮುದಾಯಗಳಲ್ಲಿ ಪ್ರಜಾಪ್ರಭುತ್ವ ಮತ್ತು ಅಹಿಂಸೆಯ ಘೋಷಣೆಗಳನ್ನು ಮೊಳಗಿಸಬೇಕಾಗಿದೆ. ಕೃಷಿಕ ಸಮುದಾಯವೆಂಬ ಹಣೆಪಟ್ಟಿಯಿಂದ ಅವರನ್ನು ಹೊರಗೆಳೆಯಬೇಕಾಗಿದೆ. ತಮ್ಮೊಳಗೇ ಸಾಂಸ್ಕೃತಿಕ ಶ್ರೇಷ್ಠತೆಯನ್ನು ಹುಟ್ಟುಹಾಕಬೇಕಾಗಿದೆ. ಇಲ್ಲವಾದಲ್ಲಿ ರಾಜಕೀಯ ಬಹಿಷ್ಕಾರವನ್ನು ಎದುರಿಸಲು ಸಿದ್ಧರಾಗಿ. ☐

ದುಡಿಮೆಯಿಂದಲೇ ವಿಮೋಚನೆ



ಬುದ್ಧಾಯಣ

೨೨

'ಗೆಳೆಯಾ. ಸಂತೋಷ. ನೆಮ್ಮದಿ ಹಾಗೂ ಸುಖ ನಿದ್ರೆ. ಈ ರೀತಿಯ ಸಂಪಾದನೆಯಿಂದ ತಂದೆ ತಾಯಿಯರನ್ನು ಸಂತೋಷ ಪಡಿಸುತ್ತಾನೆ. ಅದೇ ರೀತಿ ಅವನ ಹೆಂಡತಿ ಮಕ್ಕಳು. ಗುಲಾಮರು, ಕೆಲಸಗಾರರು ಸಂತೋಷ ಪಡುತ್ತಾರೆ. ಇದು ಮೊದಲ ಕಾರಣ. ತನ್ನ ಸ್ನೇಹಿತರನ್ನು ಜೊತೆಗಾರರನ್ನು ಸಂತೋಷ ಪಡಿಸುತ್ತಾನೆ. ಇದು ಎರಡನೇ ಕಾರಣ. ಅವನಿಗೆ ಬೆಂಕಿ, ನೀರು, ಬಿರುಗಾಳಿ, ಕಳ್ಳರು ಮತ್ತು ದಾಯಾದಿಗಳಿಂದ ಒದಗಬಹುದಾದ ದುರಾದೃಷ್ಟ ದೂರವಾಗಿ ಅವನ ಆಸ್ತಿಯ ಸುರಕ್ಷಿತವಾಗಿರುತ್ತವೆ. ಇದು ಮೂರನೆಯ ಕಾರಣ.....

ಸಿ. ಎಚ್. ರಾಜಶೇಖರ್

ಬುದ್ಧ ತನ್ನ ಬದುಕು ಪೂರ ಬಡವರ ಪರ, ದುರ್ಬಲರ ಪರ ಮತ್ತು ಶೋಷಿತರ ಪರ ಹೋರಾಡಿದ. ಅದೇ ಅವನ ಹಿರಿಮೆ. ಹಾಗಾಗಿ ಅವನನ್ನು ನಾಯಕ, ಕ್ರಾಂತಿಕಾರಿ. ಬಂಡಾಯಗಾರ, ಸಮಾಜ ಸುಧಾರಕ ಮತ್ತು ಪರಿವರ್ತಕ ಎಂದೆಲ್ಲ ಕರೆಯುತ್ತಾರೆ. ಆದರೆ ಬುದ್ಧ ಎಂದಿಗೂ ಬಡತನದ ಪರವಾಗಿ ಇರಲಿಲ್ಲ. ಬಡತನವನ್ನು ದ್ವೇಷಿಸುತ್ತಿದ್ದ. ಬಡತನ ಬದುಕಿನ ಸಹಜ ಸ್ಥಿತಿ ಎಂದಾಗಲಿ. ಆದರ್ಶಸ್ಥಿತಿ ಎಂದಾಗಲಿ. ಉದಾತ್ತೀಕರಿಸಲಿಲ್ಲ.

ಬಡತನ ಪೂರ್ವ ಜನ್ಮದ ಕರ್ಮವೆಂದಾಗಲಿ. ನಿಮ್ಮ ಹಣೆ ಬರಹ ಎಂದಾಗಲಿ. ನೀವು ಪಡೆದ ಪುಣ್ಯ ಅಷ್ಟೇ ಎಂದಾಗಲಿ. ಇರುವ ಭೂಮಿ ಮತ್ತು ಕುಲ ಕಸುಬಿನಲ್ಲಿ ಇದ್ದಷ್ಟರಲ್ಲಿಯೇ ಸಂತೃಪ್ತಿ ಪಡೆಯಿರಿ ಎಂದೆನ್ನಲಿಲ್ಲ. ಅದರ ಬದಲು ಸಂಪತ್ತನ್ನು ಸ್ವಾಗತಿಸಿದ ಆದರೆ ಸಂಪತ್ತಿನ ಗಳಿಕೆಯು ವಿನಯದ ನಿಯಮಕ್ಕೊಳಪಟ್ಟಿರಬೇಕು ಎಂದಷ್ಟೇ ಅವನು ವಿಧಿಸಿದ.

ಒಮ್ಮೆ ತಥಾಗತನು ಶ್ರಾವಸ್ತಿಯ ಚೇತನ ವನದಲ್ಲಿ ಬೀಡುಬಿಟ್ಟಿದ್ದ. ಬುದ್ಧನನ್ನು ಕಾಣುವ ಸಲುವಾಗಿ ದೊರೆ ಅನಾಥಪಿಂಡಿಕ ಉದ್ಯಾಯಕ್ಕೆ ಬಂದನು. ಬುದ್ಧನಿಗೆ ವಂದಿಸಿ ಸಮೀಪದಲ್ಲಿ ಕುಳಿತು;

'ಗುರುವೇ ಬಡವರನ್ನು ಸಂತೈಸುವ ತಾವು ಬಡತನವನ್ನು ದ್ವೇಷಿಸುತ್ತೀರಿ ಕಾರಣವೇನು?' ಎನ್ನಲು

'ಗೆಳೆಯಾ, ಕರ್ಮ ಸಿದ್ಧಾಂತ ಮತ್ತು ವಿಧಿಯಿಂದ ಬಿಡಿಸಲಿಕ್ಕಾಗಿ! ಮೈಗಳ್ಳತನ. ಪರಾವಲಂಬಿತವನ್ನು ಖಂಡಿಸಲಿಕ್ಕಾಗಿ! ಅಜ್ಞಾನದಿಂದ ಹೊರ ಬಂದು ಹೊಸ ಚೈತನ್ಯ ಪಡೆಯಲಿಕ್ಕಾಗಿ! ತನ್ನ ವಿಧಿಯನ್ನು ತಾನೇ ಬರೆದುಕೊಳ್ಳುವುದಕ್ಕಾಗಿ! ಸಂಪತ್ತನ್ನು ಸಂಪಾದಿಸಬೇಕು!'

'ಗುರುವೆ, ಸಂಪತ್ತನ್ನು ಹೇಗೆ ಸಂಪಾದಿಸಬೇಕು?'

'ಗೆಳೆಯಾ. ಅನ್ಯಾಯ. ಅಕ್ರಮ. ಪರಪೀಡನೆಯಿಂದ ಮುಕ್ತವಾಗಿ. ಉತ್ಸಾಹದಿಂದ ಕೆಲಸ ಮಾಡಿ. ತನ್ನ ಶ್ರಮದಿಂದ ಬೆವರು ಸುರಿಸಿ ನ್ಯಾಯಯುತವಾಗಿ ಸಂಪಾದಿಸಬೇಕು'

'ಗುರುವೆ, ಇದರಿಂದ ಲಾಭವೇನು ಉಪಯೋಗವೇನು?'

'ಗೆಳೆಯಾ. ಸಂತೋಷ. ನೆಮ್ಮದಿ ಹಾಗೂ ಸುಖನಿದ್ರೆ, ಈ ರೀತಿಯ ಸಂಪಾದನೆಯಿಂದ ತಂದೆ ತಾಯಿಯರನ್ನು ಸಂತೋಷ ಪಡಿಸುತ್ತಾನೆ. ಅದೇ ರೀತಿ ಅವನ ಹೆಂಡತಿ ಮಕ್ಕಳು. ಗುಲಾಮರು, ಕೆಲಸಗಾರರು ಸಂತೋಷ ಪಡುತ್ತಾರೆ. ಇದು ಮೊದಲ ಕಾರಣ. ತನ್ನ ಸ್ನೇಹಿತರನ್ನು ಜೊತೆಗಾರರನ್ನು ಸಂತೋಷ ಪಡಿಸುತ್ತಾನೆ. ಇದು ಎರಡನೇ ಕಾರಣ. ಅವನಿಗೆ ಬೆಂಕಿ, ನೀರು, ಬಿರುಗಾಳಿ, ಕಳ್ಳರು ಮತ್ತು ದಾಯಾದಿಗಳಿಂದ ಒದಗಬಹುದಾದ ದುರಾದೃಷ್ಟ ದೂರವಾಗಿ ಅವನ ಆಸ್ತಿಯ ಸುರಕ್ಷಿತವಾಗಿರುತ್ತವೆ. ಇದು ಮೂರನೆಯ ಕಾರಣ. ಮತ್ತೆ ಆ ರೀತಿ ಸಂಪಾದಿಸಿದ ಸಂಪತ್ತನ್ನು ಐದು ಬಗೆಯ ಧರ್ಮ ಕಾರ್ಯಗಳಿಗಾಗಿ ಬಳಸುತ್ತಾನೆ. ಅತಿಥಿಗಳಿಗೆ, ಪಿತೃಗಳಿಗೆ, ರಾಜರಿಗೆ, ಕುಲ ಬಾಂಧವರಿಗೆ ಮತ್ತು ಮಹತ್ಮರಿಗೆ ಅರ್ಪಿಸಲು, ಇದು ನಾಲ್ಕನೆಯ ಕಾರಣ. ಹೀಗೆ ಸಂಪಾದಿಸಿದ ಸಂಪತ್ತು ಆ ಗೃಹಸ್ಥನ ಅಹಂಕಾರ ಮತ್ತು ಮೈಗಳ್ಳತನವನ್ನು ತ್ಯಜಿಸುತ್ತದೆ. ಪ್ರತಿಯೊಂದು ವಿಚಾರವನ್ನು ತಾಳ್ಮೆ ಮತ್ತು ವಿನಯದಿಂದ ಎದುರಿಸುವ. ಆತ್ಮ ನಿಯಂತ್ರಣ ಹಾಗೂ ಆತ್ಮ ಶಾಂತಿಯನ್ನು ಒದಗಿಸುತ್ತದೆ. ಪರಿಪೂರ್ಣತೆಯನ್ನು ಹೊಂದಿರುವ ಶ್ರಮಣರು ಮತ್ತು ಯೋಗ್ಯ ವ್ಯಕ್ತಿಗಳಿಗೆ ದಾನ ನೀಡಲು ಬಳಸುತ್ತಾನೆ. ಇದು ದಾರಿದ್ರ್ಯವನ್ನು ಹೊಡೆದೋಡಿಸಲು ಮತ್ತು ಸಂಪತ್ತು ಗಳಿಸಲು ಐದನೆಯ ಕಾರಣ'

'ಹೌದು ಗುರುದೇವ... ನೀನು ಬರಿಯ ಬಡವರ ರಕ್ಷಕನಷ್ಟೇ ಅಲ್ಲ... ಬಡವರ ಮಾರ್ಗದರ್ಶಕ...!!' ಎಂದ ಮತ್ತೊಮ್ಮೆ ವಂದಿಸಿದ.

□



'ಅವಿಚಾರವನ್ನೆ ವಿಚಾರವೆಂದು ಸಾರುವ ವೈದಿಕ ಧರ್ಮದ ರೂಢಿಗತ ಬದುಕಿಗೆ ಒಗ್ಗಿಸಿಕೊಂಡು ಹೊಂದಿಸಿಕೊಂಡಿರುವ ನಮಗೆ ಬುದ್ಧನ ಪ್ರಕಾರ ವೈಚಾರಿಕತೆ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಗಹನವಾದ ವಿಚಾರಗಳಿಗೆ ಎಷ್ಟು ಒತ್ತು ಕೊಡುತ್ತಿದ್ದನೋ ಅಷ್ಟೇ ಒತ್ತನ್ನು ಸಣ್ಣಪುಟ್ಟ ವಿಷಯಕ್ಕೂ ಕೊಡುತ್ತಿದ್ದ. ಇದೇ ಅವನ ಸರಳತೆಯ ಮೂಲ. ಆ ಸರಳತೆಯ ಹಿಂದಿನ ಸತ್ಯವನ್ನು ಕಾಣೋಣ.

ಒಮ್ಮೆ ತಥಾಗತನು ಕುರುಗಳ ನಾಡಾದ ಕಮ್ಮಾಸದಮ್ಮ ಎಂಬ ನಗರದಲ್ಲಿ ತಂಗಿದ್ದ. ಬುದ್ಧನನ್ನು ಕಾಣುವ ಸಲುವಾಗಿ ಬಂದ ಆನಂದನು ಬುದ್ಧನಿಗೆ ನಮಿಸಿ ಸಮೀಪದಲ್ಲಿ ಕುಳಿತು ತನ್ನ ಸಂಶಯದ ಬಗ್ಗೆ ಹೀಗೆ ಪ್ರಶ್ನಿಸಿದ;

'ಗುರುವೇ, ಸಮಯ ಸಿಕ್ಕಾಗಲೆಲ್ಲ ತಾವು ಗಳಿಸಿಡುವ ಪ್ರವೃತ್ತಿಯನ್ನು ಬಹು ಕಠಿಣವಾಗಿ ವಿರೋಧಿಸುವಿರಲ್ಲ ಕಾರಣವೇನು?' ಎಂದ. ಅದಕ್ಕೆ ಬುದ್ಧನು;

'ಎಲೈ ಆನಂದನೇ, ಗಳಿಸಿಡುವ ಪ್ರವೃತ್ತಿ ಆಸೆಗಿಂತ ಕೇಡಿನಿಂದ ಕೂಡಿದೆ. ಇದರಿಂದ ಬದುಕು ಕಲುಷಿತಗೊಳ್ಳುತ್ತದೆ. ಸಾಮಾನ್ಯ ಜನಗಳಿಗೆ ಎಲ್ಲ ಕಾಲಕ್ಕೂ ಉತ್ತಮ ವರ್ಗದವರೇ ಮಾರ್ಗದರ್ಶಕರು. ಹಾಗಿರುವಾಗ ಮಾರ್ಗದರ್ಶಕರೇ ಅಡ್ಡದಾರಿ ಹಿಡಿದರೆ ಏನಾಗುತ್ತದೆ. ಮತ್ತೂ ಕೇಡು ಸಂಭವಿಸುತ್ತದೆ ಅಲ್ಲವೆ!'

'ಗುರುವೆ, ಆ ಕೇಡಿನ ಸ್ವರೂಪ ಎಂಥಹದು...?'

'ಎಲೈ ಆನಂದ, ಇಂದೊಂದು ವಿಷಕಾರಿ ಸರಪಳಿಯಂತೆ. ದುರಾಸೆಯೇ ಲೋಭಕ್ಕೆ ಕಾರಣ ಎಂದು ನಾನು ಮೊದಲೇ ಹೇಳಿದ್ದೆ. ಎಲ್ಲಿ ಯಾವ ಬಗೆಯ ದುರಾಸೆಯೂ ಇರುವುದಿಲ್ಲವೋ ಅಲ್ಲಿ ಲೋಭ ಹೇಗೆ ಸಾಧ್ಯ?'

'ಖಂಡಿತಾ ಸಾಧ್ಯವಿಲ್ಲ ಗುರುವೆ'

'ಎಲೈ ಆನಂದ, ದುರಾಸೆಯು ಲಾಭದ ಹುಡುಕಾಟಕ್ಕೆ ಕಾರಣವಾಗುತ್ತದೆ. ಅಲ್ಲವೆ?'

'ಖಂಡಿತಾ, ಹೌದು ಗುರುವೆ'

'ಎಲೈ ಆನಂದ. ಲಾಭದ ಹುಡುಕಾಟ ಆಸೆ ಮತ್ತು ಭಾವೋದ್ರೇಕಕ್ಕೆ ಕಾರಣವಾಗುತ್ತದೆ ಅಲ್ಲವೆ?'

'ಖಂಡಿತಾ, ಹೌದು ಗುರುವೆ'

'ಎಲೈ ಆನಂದ. ಆಸೆ ಮತ್ತು ಭಾವೋದ್ರಕವು ಹಠಮಾರಿತನಕ್ಕೆ ಕಾರಣವಾಗುತ್ತದೆ ಅಲ್ಲವೆ?'

'ಖಂಡಿತಾ. ಹೌದು ಗುರುವೆ'

'ಎಲೈ ಆನಂದ. ಖಾಸಗಿ ಆಸ್ತಿಗೆ ಮತ್ತು ಹೆಚ್ಚೆಚ್ಚು ಆಸ್ತಿ ಮಾಡಿಕೊಳ್ಳುವ ಆಸೆಗಾಗಿ ನಾಂದಿಯಾಗುತ್ತದೆ ಅಲ್ಲವೆ?'

'ಖಂಡಿತಾ, ಹೌದು ಗುರುವೆ'

'ಎಲೈ ಆನಂದ. ಈ ಆಸ್ತಿಯನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವ ಮತ್ತು ಒಡೆತನವನ್ನು ಉಳಿಸಿಕೊಳ್ಳುವ ಮನಸ್ಸನ್ನು ಹುಟ್ಟು ಹಾಕುತ್ತದೆ ಅಲ್ಲವೆ?'



'ಖಂಡಿತಾ. ಹೌದು ಗುರುವೆ'

'ಎಲೈ ಆನಂದ. ಈ ಆಸ್ತಿಯನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವ ಮತ್ತು ಒಡತನವನ್ನು ಉಳಿಸಿಕೊಳ್ಳುವ ಮನಸ್ಸನ್ನು ಹುಟ್ಟು ಹಾಕುತ್ತದೆ ಅಲ್ಲವೆ?'

'ಖಂಡಿತಾ. ಹೌದು ಗುರುವೆ'

'ಎಲೈ ಆನಂದ. ಈ ಆಸ್ತಿಯನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವ ಮತ್ತು ಒಡೆತನವನ್ನು ಉಳಿಸಿಕೊಳ್ಳುವ ಪ್ರಯತ್ನವು ಹಲವಾರು ಕೆಟ್ಟ ಕೃತ್ಯಗಳಿಗೆ ದಾರಿ ಮಾಡಿಕೊಡುತ್ತದೆ. ಅಲ್ಲವೆ?' ಅವುಗಳೆಂದರೆ ಹೊಡೆದಾಟ. ಬಡಿದಾಟ. ಚಾರಿತ್ರ್ಯವಧೆ. ಜಗಳ, ಸುಳ್ಳು ಮತ್ತು ಗಲಭೆಗಳಿಗೆ ಪ್ರೇರೇಪಿಸುತ್ತದೆ. ಅಲ್ಲವೆ?'

'ಖಂಡಿತಾ, ಹೌದು ಗುರುವೆ'

'ಎಲೈ ಆನಂದ, ಲೋಭವಿಲ್ಲದಿದ್ದರೆ ಲಾಭದ ಹುಡುಕಾಟ ಹುಟ್ಟಿಕೊಳ್ಳುತ್ತಿತ್ತೇ? ಲಾಭದ ಹುಡುಕಾಟವಿಲ್ಲದಿದ್ದಲ್ಲಿ ಭಾಮೋದ್ರೇಕವಾಗುತ್ತಿತ್ತೇ? ಭಾಮೋದ್ರೇಕವಿಲ್ಲದಿದ್ದಲ್ಲಿ ಹಠವೂ ಹುಟ್ಟುತ್ತಿತ್ತೇ? ಹಠವಿಲ್ಲದಿದ್ದಲ್ಲಿ ಖಾಸಗಿ ಆಸ್ತಿಯ ಬಯಕೆ ಉಂಟಾಗುತ್ತಿತ್ತೇ? ಆಸ್ತಿಯೇ ಇಲ್ಲದಿದ್ದಲ್ಲಿ ದುರಾಸೆ ಮತ್ತು ಹೆಚ್ಚಿನ ಆಸ್ತಿಯ ಆಸೆಯಾದರು ಹೇಗೆ ಹುಟ್ಟುತ್ತಿತ್ತು?'

'ಖಂಡಿತಾ. ಹುಟ್ಟುತ್ತಿರಲಿಲ್ಲ ಗುರುವೆ'

'ಎಲೈ ಆನಂದ. ಖಾಸಗಿ ಆಸ್ತಿಯ ವ್ಯಾಮೋಹವಿಲ್ಲದಿದ್ದರೆ ಶಾಂತಿ ಇರುತಿರಲಿಲ್ಲವೇ?'

'ಖಂಡಿತಾ, ಇರುತ್ತಿತ್ತು ಗುರುವೆ'

'ಎಲೈ ಆನಂದ. ನಾನು ವಸ್ತುವನ್ನು ವಸ್ತುವನ್ನಾಗಿಯೇ ಗುರುತಿಸುತ್ತೇನೆ. ಭೂಮಿ ಮತ್ತು ಪ್ರಕೃತಿಯನ್ನು ಭೂಮಿ ಮತ್ತು ಪ್ರಕೃತಿಯಾಗಿಯೇ ಗುರುತಿಸುತ್ತೇನೆ. ಏಕೆಂದರೆ ಅದು ನನ್ನ ನಿನ್ನ ಅವರ ಮತ್ತು ಇವರುಗಳ ಪ್ರತ್ಯೇಕ ಸ್ವತ್ತಲ್ಲ. ಇದು ಎಲ್ಲರ ಸ್ವತ್ತು. ಎಲ್ಲರಿಗಾಗಿ! ಹಾಗಾಗಿ ಪ್ರತ್ಯೇಕಿಸುವುದನ್ನು. ಬೇಲಿ ಕಟ್ಟುವುದನ್ನು ಖಂಡಿಸುತ್ತೇನೆ. ಆ ಕಾರಣಕ್ಕಾಗಿ ಪಡೆಯಬೇಕೆಂಬ ಲೋಭ ನನಗಿಲ್ಲ. ಆದ್ದರಿಂದ ನಾವೆಲ್ಲರೂ ಎಲ್ಲಾ ಬಗೆಯ ಲೋಭಗಳನ್ನು ಸಂಪೂರ್ಣವಾಗಿ ಬೇರು ಸಹಿತ ಕಿತ್ತು ಹಾಕಿ ಅವುಗಳಿಗಾಗಿ ದುರಾಸೆ ಪಡುವ ಬದಲು ಅವುಗಳನ್ನು ನಾಶಮಾಡಿ. ತೊರೆದು. ತ್ಯಜಿಸಿ ನಾವುಗಳು ಪರಿನಿಬ್ಬಾಣವನ್ನು ಹೊಂದಬೇಕು. ಇದೇ ಸಮಾನತೆಯ ಸೂತ್ರ. ಇದೇ ಪರಿನಿಬ್ಬಾಣದ ನಿಜ ಅರ್ಥ. ಇದನ್ನೆ ನಾನು "ಮುಕ್ತಿ" ಎಂದು ಕರೆಯುವುದು'

'ಎಲೈ ಸಹೋದರರೇ. ಲೋಭದಿಂದ ಮೋಹ ಹುಟ್ಟುತ್ತದೆ. ಮೋಹದಿಂದ ನಾವು ಈ ಮನಸ್ಸಿನ ಗುಲಾಮರಾಗುತ್ತೇವೆ. ಈ ಮಾನಸಿಕ ಗುಲಾಮಿತನದಿಂದ ನೀವುಗಳು ಹೊರ ಬರಬೇಕಾದರೆ ಹಂಚಿಕೊಳ್ಳಿ! ಹಂಚಿಕೊಳ್ಳುವ ಸಮಾನತೆಯನ್ನು. ಸಮಗ್ರತೆಯನ್ನು ಅರ್ಥಮಾಡಿಕೊಳ್ಳಿ! ಐಹಿಕ ಸಾಮಾಗ್ರಿಗಳನ್ನು ಹಂಚಿಕೊಳ್ಳುವ ಮೊದಲು ನನ್ನ ಸಿದ್ಧಾಂತವನ್ನು ಹಂಚಿಕೊಳ್ಳಿ! ಧರ್ಮವನ್ನು ಹಂಚಿಕೊಳ್ಳಿ! ಪ್ರಜ್ಞೆಯನ್ನು ಹಂಚಿಕೊಳ್ಳಿ! ಆಗ ಮಾತ್ರ ನೀವು ಗಳಿಸಿಡುವ ಪ್ರವೃತ್ತಿಯಿಂದ ಮುಕ್ತರಾಗಬಲ್ಲಿರಿ!' ಎಂದ. ಆಗ ಬುದ್ಧನನ್ನು ಉದ್ದೇಶಿಸಿದ ಆನಂದ.

'ಹೌದು ಗುರುದೇವಾ. ನೀವು ಸಮಾನತೆಯ ಹರಿಕಾರನೇ ಹೌದು...? ಯುಗ ಪರಿವರ್ತಕನೆ ಹೌದು...!! ನೀನು ವಸ್ತುನಿಷ್ಠತೆಗೆ ಮತ್ತೊಂದು ರೂಪ...!!!' ಎಂದು ವಂದಿಸಿದ. □

ಪ್ರಜ್ಞೆಯ ಹಂಚಿಕೊಳ್ಳಿ

'SAMVADA' Kannada Monthly, June 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಗ್ರಾಮಾಭಿವೃದ್ಧಿಯಿಂದಲೇ ಕ್ಷೇಮಾಭ್ಯುದಯ

ಗ್ರಾಮ ಸುರಾಜ್ಯವೇ ಕರ್ನಾಟಕ ಸರ್ಕಾರದ ಮೂಲಧ್ಯೇಯ. ಸ್ಥಿರ ಮತ್ತು ಸಂಪದ್ಭರಿತ ಸಮಾಜಕ್ಕೆ ಆಧಾರ ಸುಭದ್ರ ಗ್ರಾಮೀಣ ವಲಯ. ಗ್ರಾಮೀಣ ಜನತೆಯ ಮೂಲ ಆಶಯಗಳಾದ ಕೃಷಿ, ವಿದ್ಯುತ್, ನೀರು, ಆರೋಗ್ಯ ಮತ್ತು ಶಿಕ್ಷಣ ವಲಯಗಳಲ್ಲಿ ಸರ್ಕಾರದ ವಿಶೇಷ ಆಸ್ಥೆ, ವಸ್ತುನಿಷ್ಠ ಒತ್ತಾಸೆ. ಅವರು ಈ ಕ್ಷೇತ್ರಗಳಲ್ಲಿನ ಆಧುನಿಕ ಸೌಲಭ್ಯಗಳ ಫಲಾನುಭವಿಗಳಾಗಲು ಸರ್ಕಾರ ತನ್ನೆಲ್ಲ ಗಮನವನ್ನು ಕೇಂದ್ರೀಕರಿಸಿದೆ. ಸ್ಫೂರ್ತಿದಾಯಕ ಹೆಜ್ಜೆಗಳನ್ನಿಟ್ಟಿದೆ.

1. ಬರಗಾಲ ಸಮಸ್ಯೆಗೆ ದೀರ್ಘಾವಧಿ ಪರಿಹಾರ "ಸುಜಲ" ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ.
2. ಕೃಷಿ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಲೋಕನಾಯಕ ಜಯಪ್ರಕಾಶ್ ನಾರಾಯಣ ನಿಧಿಯ ಬಳಕೆ.
3. ಅಂತರ್ಜಲ ವೃದ್ಧಿಗಾಗಿ ಕೆರೆ ಅಂಗಳಗಳ ಅಭಿವೃದ್ಧಿ ಮತ್ತು ಕೆರೆಗಳ ಸಂರಕ್ಷಣೆ.
4. ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಅಕ್ಷರ ದಾಸೋಹದೊಂದಿಗೆ ಸಂಪೂರ್ಣ ಸಾಕ್ಷರತೆಯತ್ತ ದಾಪುಗಾಲು.

ಸಮೃದ್ಧ ಕರ್ನಾಟಕ–ಸ್ವಾವಲಂಬಿ ಕರ್ನಾಟಕ

ಕರ್ನಾಟಕ ವಾರ್ತೆ
Karnataka Information